೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ-ಗಂಗಾವತಿ, ಕೊಪ್ಪಳ ಜಿಲ್ಲೆ



ಬ್ರಿಟೀಷರ ಆಡಳಿತ ಮತ್ತು
ರಾಣಿ ಕಿತ್ತೂರ ಚೆನ್ನಮ್ಮ

ಡಾ. ಮಲ್ಲಿಕಾರ್ಜುನ ಆಯ್‌ಮಿಂಚ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ, ಬೆಂಗಳೂರು-೫೬೦೦೧೮

೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗಂಗಾವತಿ, ಕೊಪ್ಪಳ ಜಿಲ್ಲೆ

ಬ್ರಿಟೀಷರ ಆಡಳಿತ ಮತ್ತು ರಾಣಿ ಕಿತ್ತೂರ ಚೆನ್ನಮ್ಮ

ಡಾ. ಮಲ್ಲಿಕಾರ್ಜುನ ಆಯ್ ಮಿಂಚ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

BRITISHARA AADALITA MATTU RANI KITTURA CHENNAMMA
by : **Dr. Mallikarjuna I. Mincha**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : 100 + v   Price : Rs. **40=00** ; **2011**

ಮೊದಲನೇ ಮುದ್ರಣ : ೨೦೧೧
ಪ್ರತಿಗಳು : ೧೦೦೦
ಬೆಲೆ : ನಲವತ್ತು ರೂಪಾಯಿಗಳು

ಮುಖಪುಟ ವಿನ್ಯಾಸ : ಶ್ರೀ ಮುರಳೀಧರ ವಿ. ರಾಠೋಡ್

ಮುದ್ರಣ : ಶ್ರೀರಂಗ ಪ್ರಿಂಟರ್ಸ್, ನಂ.೩೪, ೨೪ನೇ ಕ್ರಾಸ್, ೯ನೇ ಮೇನ್,
ಬನಶಂಕರಿ ಇಂಡಸ್ಟ್ರಿಯಲ್ ಏರಿಯಾ, ಬನಶಂಕರಿ,
ಬೆಂಗಳೂರು - ೫೬೦ ೦೭೦.

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನ ಮೂರು ವರ್ಷಗಳ ಆಡಳಿತಾವಧಿಯಲ್ಲಿ ನಾಲ್ಕು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ನಡೆಸುವ ಅದೃಷ್ಟ ಕೆಲವು ಅಧ್ಯಕ್ಷರಿಗೆ ಮಾತ್ರ ಬರುತ್ತದೆ. ಅಂಥ ಸುಯೋಗ ನನ್ನ ಪಾಲಿಗೆ ಬಂದಿರುವುದರಿಂದ ಚಿತ್ರದುರ್ಗ, ಗದಗ, ಬೆಂಗಳೂರುಗಳ ನಂತರ ಇದೀಗ ೨೦೧೧ರ ಡಿಸೆಂಬರ್ ೯ ರಿಂದ ೧೧ರವರೆಗೆ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆಯಲಿರುವ ಅಖಿಲ ಭಾರತ ೭೮ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಭರದ ಸಿದ್ಧತೆಗಳು ನಡೆಯುವ ಕ್ಷಣಗಣನೆ ಆರಂಭವಾಗಿದೆ. ಎಂದಿನಂತೆ ಈ ಸಮ್ಮೇಳನದ ಹೊತ್ತಿಗೂ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಸಾಹಿತ್ಯ ಪರಿಷತ್ತಿನ ಪ್ರಕಟಣಾ ಘನತೆಗೆ ಯೋಗ್ಯವೆಂದು ಪ್ರಕಟಣ ಸಮಿತಿ ಆಯ್ಕೆ ಮಾಡಿರುವ ಕೃತಿಗಳನ್ನು ಹೊರತರಲಾಗುತ್ತಿದೆ.

ನಾನು ಅಧ್ಯಕ್ಷನಾಗಿ ಕನ್ನಡ ಸಾಹಿತ್ಯ ಪರಿಷತ್ತನ್ನು ಪ್ರವೇಶ ಮಾಡಿದಾಗಿನಿಂದ ಸಾಹಿತ್ಯ ಪರಿಷತ್ತಿನಲ್ಲಿ ಹಲವು ಸಕಾಲಿಕವೆನಿಸುವಂಥ ಸುಧಾರಣೆಗಳನ್ನು ಮಾಡುತ್ತಾ ಬಂದಿದ್ದೇನೆ. ಇವುಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುವ ಪುಸ್ತಕಗಳು ಒಳಗೆ ಮೌಲಿಕವಾಗಿರುವಂತೆ ಹೊರಗೆ ಆಕರ್ಷಕವಾಗಿರಬೇಕೆನ್ನುವುದೂ ಒಂದು. ಪುಸ್ತಕಗಳ ಮೂಲಕ ಓದುಗ ವರ್ಗದಲ್ಲಿ ಸದಭಿರುಚಿಯನ್ನು ನಿರ್ಮಾಣ ಮಾಡುವುದರಲ್ಲಿ ಪರಿಷತ್ತಿಗೆ ಒಂದು ವಿಶೇಷ ಜವಾಬ್ದಾರಿಯಿದೆ ಎಂಬುದನ್ನು ನಾನು ಮನಗಂಡೇ ಇಂಥ ಸುಧಾರಣೆಗೆ ಕೈ ಹಚ್ಚಿದ್ದೇನೆ. ಪರಿಷತ್ತಿನ ಪುಸ್ತಕಗಳು ಆತ್ಮಾಭಿಮಾನದಿಂದ ತಲೆಯೆತ್ತಿ ನಿಲ್ಲುವುದಕ್ಕೆ ಏನೇನು ಸಾಧ್ಯವಿತ್ತೋ ಆ ಎಲ್ಲ ಪ್ರಯೋಗಗಳನ್ನು ಮಾಡಲಾಗಿ ಇವತ್ತು ನಮ್ಮ ಪ್ರಕಟಣೆಗಳು ಯಾರಿಗೂ ಕಡಿಮೆಯಿಲ್ಲದಂತೆ ಭರಾಟೆಯಿಂದ ಖರ್ಚಾಗುತ್ತಿವೆ. ಹೊಸ ಬಣ್ಣಗಳಲ್ಲಿ, ಹೊಸ ವಿನ್ಯಾಸಗಳಲ್ಲಿ ಕಂಗೊಳಿಸುತ್ತಿವೆ. ಓದುಗರ ಮೆಚ್ಚುಗೆಗೆ ಪಾತ್ರವಾಗುತ್ತಿವೆ. ಬಹುಬೇಗ ಖರ್ಚಾಗುತ್ತಿವೆ, ಮರುಮುದ್ರಣಗೊಳ್ಳುತ್ತಿವೆ. ಈ ಬಾರಿಯ ಅಕ್ಷರಜಾತ್ರೆಯಲ್ಲಿ ಅರ್ಥಪೂರ್ಣ ಪುಸ್ತಕಗಳು ಇರಬೇಕೆನ್ನುವ ಎಚ್ಚರದೊಂದಿಗೆ ಈ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ೨೦೧೧ ಡಿಸೆಂಬರ್ ೯ ರಿಂದ ೧೧ರವರೆಗೆ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆಯಲಿರುವ ೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಲೋಕಾರ್ಪಣೆಗೊಳ್ಳಲಿರುವ ಈ ಪುಸ್ತಕಗಳು ಸಹೃದಯರ ಜ್ಞಾನಭಂಡಾರವನ್ನು ವಿಸ್ತರಿಸಿ, ಅವರು ಬಯಸುವ ಸಂತೋಷವನ್ನು ಕೊಡಲೆಂದು ಆಶಿಸುತ್ತೇವೆ. ಓದುಗರ ರಚನಾತ್ಮಕ ಸಲಹೆ ಮತ್ತು ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇನೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ಲೇಖಕರ ನುಡಿ

ಒಂದು ಪುಸ್ತಕ ಬರಹದ ಪ್ರಕ್ರಿಯೆಯಲ್ಲಿ ಅನೇಕರ ಸಹಾಯ ಸಹಕಾರ ಇರುತ್ತದೆ. ಈ ದಿಶೆಯಲ್ಲಿ ಅಂತೆಯೇ ಈ ನನ್ನ "ಬ್ರಿಟೀಷರ ವಿರುದ್ಧ ರಾಣಿ ಕಿತ್ತೂರ ಚನ್ನಮ್ಮನ ಹೋರಾಟ" ಪುಸ್ತಕದಲ್ಲಿ ಅನೇಕರ ಸಹಾಯ ಪಡೆದಿದ್ದೇನೆ. ಈ ದಿಶೆಯಲ್ಲಿ ಮೊದಲನೆಯದಾಗಿ ನಾನು ನನ್ನ ಮಾರ್ಗದರ್ಶಕರು ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರವಾಚಕರು ಆದ ಡಾ. ಜಿ. ಬಿ. ನಂದನ ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅವರು ನನಗೆ ಪ್ರೋತ್ಸಾಹ, ಸಹಾಯ ಹಾಗೂ ಮಾರ್ಗದರ್ಶನವನ್ನು ನೀಡದೆ ಹೋಗಿದ್ದರೆ ನನ್ನ ಈ ಪಿಎಚ್.ಡಿ. ಅಧ್ಯಯನದ ಕೆಲಸ ಪೂರ್ಣವಾಗುತ್ತಿರಲಿಲ್ಲ.

ಅದರಂತೆ ರಾಜ್ಯಶಾಸ್ತ್ರದ ವಿಭಾಗದ ಶಿಕ್ಷಕ ಸಿಬ್ಬಂದಿಗಳು ನನಗೆ ತಮ್ಮ ಅಮೂಲ್ಯವಾದ ಸಲಹೆಗಳನ್ನು ನೀಡಿದ್ದಾರೆ. ನಿವೃತ್ತರಾದ ಡಾ. ಆರ್. ಟಿ. ಜಂಗಮ, ಡಾ. ಎನ್.ಎ. ಪಾಟೀಲ ಮತ್ತು ಡಾ. ಕೆ. ರಾಘವೇಂದ್ರರಾವ ಅಲ್ಲದೆ ಡಾ. ಎಸ್.ವೈ. ಗುಬ್ಬಣ್ಣವರ್, ಡಾ. ಎಸ್.ಎಸ್. ಪಟಗುಂದಿ, ಡಾ. ಎ.ಟಿ. ಕಿತ್ತೂರ, ಬೇರೆ ವಿಭಾಗದವರಾದ ಡಾ. ಕರಿಕಲ್ ಹಾಗೂ ಡಾ. ಮಲ್ಲಿಕಾರ್ಜುನ ಪಾಟೀಲ ಇವರೆಲ್ಲಾ ನನಗೆ ಅಪಾರವಾದ ಸಹಾಯ, ಸಲಹೆಗಳನ್ನು ನೀಡಿದ್ದಾರೆ. ಆದ್ದರಿಂದ ನಾನು ಅವರಿಗೆಲ್ಲ ಆಭಾರಿಯಾಗಿದ್ದೇನೆ. ನನ್ನ ಅಧ್ಯಯನದಲ್ಲಿ ಸಹಾಯ ಮಾಡಿದ ಶಿಕ್ಷಣ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ವಿ.ಜಿ. ಮಾರಿಹಾಳರು ನನ್ನ ಗೌರವಕ್ಕೆ ಪಾತ್ರರು.

ನನ್ನ ಈ ಪಿಎಚ್.ಡಿ. ಅಧ್ಯಯನಕ್ಕೆ ಹಣಕಾಸಿನ ನೆರವು ಬೇಕಿತ್ತು. ಈ ದಿಶೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎ. ಎಂ. ಪಠಾಣರು ಹಾಗೂ ಕುಲ ಸಚಿವರಾದ ಡಾ. ಎಸ್. ರಾಜಶೇಖರರು ನನಗೆ ಸಹಾಯ ಮಾಡಿದರು. ಈ ಮಹನೀಯರಿಗೆಲ್ಲ ನನ್ನ ಕೃತಜ್ಞತೆಗಳು.

ಕರ್ನಾಟಕ ವಿಶ್ವವಿದ್ಯಾಲಯದ ಹಿಂದಿನ ಇಬ್ಬರು ಗ್ರಂಥಪಾಲಕರುಗಾಗಿದ್ದ ಆರ್.ಸಿ.ಪಾಟೀಲ ಹಾಗೂ ಡಾ. ಎಸ್.ಸಿ.ಕೆಂಡದಮಠರನ್ನು ಅವರು ನೀಡಿದ ಸಹಾಯಕ್ಕಾಗಿ ಸ್ಮರಿಸುವೆ. ನನ್ನ ಅಧ್ಯಯನದ ಕಾಲಕ್ಕೆ ಮುಂಬೈಯ ಇತಿಹಾಸ ಹಾಗೂ ಪ್ರಾಚ್ಯಶಾಸ್ತ್ರ ವಿಭಾಗದ ಅಧಿಕಾರಿಗಳ ಸಹಾಯ ಪಡೆದಿರುವೆ. ಈ ದಿಶೆಯಲ್ಲಿ ಹೈದರಾಬಾದಿನ ಬ್ರಿಟೀಷ ಕೌನ್ಸಿಲ್‌ನವರು ಸಹಾಯ ಮಾಡಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು. ಕೊನೆಗೆ ಕಿತ್ತೂರ ಮನೆತನದ ತಾತ್ಯಾ ಸಾಹೇಬ ದೇಸಾಯಿ ಮತ್ತಿತರರು ಸಂದರ್ಶನ ಕಾಲದಲ್ಲಿ ನೀಡಿದ ಸಹಾಯಕ್ಕಾಗಿ ನಾನು ಅವರಿಗೆ ಋಣಿಯಾಗಿದ್ದೆನೆ. ಅಂತೆಯೇ ಈ ಸಂಶೋಧನಾ ಗ್ರಂಥವನ್ನು ಬರೆಯುವಲ್ಲಿ ಸಹಾಯ ಮಾಡಿದ ಇಂಗ್ಲೀಷ ಬರಹಗಾರ ಡಾ. ಮಲ್ಲಿಕಾರ್ಜುನ ಪಾಟೀಲರಿಗೆ ಹಾಗೂ ಇದನ್ನು ಪ್ರಕಟಿಸಿದವರಿಗೆ ಹಾಗೂ ಮುದ್ರಿಸಿದವರಿಗೆ ನನ್ನ ಅನಂತ ಕೃತಜ್ಞತೆಗಳು.

ಡಾ. ಮಲ್ಲಿಕಾರ್ಜುನ ಆಯ್. ಮಿಂಚ

ಪರಿವಿಡಿ

ಅಧ್ಯಾಯ-೧

ಪೀಠಿಕೆ

ಭಾರತ ಸ್ವಾತಂತ್ರ್ಯ ಸಂಗ್ರಾಮವು ಭಕ್ತಿ, ಏಕಾಗ್ರತೆ ಹಾಗೂ ಸತತ ಪ್ರಯತ್ನಗಳಿಂದ ಮುಂದುವರೆಯಿತು. ಸ್ವಾತಂತ್ರ್ಯ ಹೋರಾಟದ ವೀರಪುರುಷರು ಸಮಾಜದ, ದೇಶದ ಎಲ್ಲ ಸಮುದಾಯಗಳಿಂದ ಬಂದವರು. ಅವರು ಒಂದೇ ಭಾಷೆಗೆ, ಒಂದೇ ಧರ್ಮಕ್ಕೆ, ಒಂದೇ ಭಾಗಕ್ಕೆ ಸೇರಿದವರಾಗಿರಲಿಲ್ಲ. ಲಿಂಗ, ಭಾಷೆ, ಭೌಗೋಳಿಕತೆ ಮುಂತಾದ ಸೀಮೆಗಳನ್ನು ಮೀರಿ ಅವರು ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಿದರು, ಸ್ವಾತಂತ್ರ್ಯವನ್ನು ಪಡೆಯಬೇಕೆನ್ನುವುದು ಮಾತ್ರ ಅವರ ಧ್ಯೇಯವಾಗಿತ್ತು ಹಾಗೂ ಅವರು ಅದಕ್ಕಾಗಿ ಹೋರಾಡಿದರು. ನಮ್ಮ ಸ್ವಾತಂತ್ರ್ಯವು ಅಂತಹ ಲಕ್ಷಾಂತರ ವೀರಯೋಧರ ತ್ಯಾಗ-ಬಲಿದಾನದ ಫಲವಾಗಿದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮವು ಕೇವಲ ಭಾರತದಿಂದ ಇಂಗ್ಲೀಷರನ್ನು ಹೊರ ಹಾಕುವುದಕ್ಕಾಗಿ ನಡೆಯಿತು ಎನ್ನಲಾಗದು. ಅದು ನಮ್ಮ ದೇಶ ಮುಂದುವರೆದ ದೇಶಗಳಂತೆ ಸ್ವತಂತ್ರವಾಗಿ ಬೆಳೆಯಬೇಕು ಎನ್ನುವಂತಿತ್ತು. "ಭಾರತೀಯರು ಭಾರತದ ನಾಗರಿಕರು" ಎಂಬುದು ಅದರ ಮಂತ್ರವಾಗಿತ್ತು. ಅದರಂತೆ ಭಾರತೀಯನು ಜಗತ್ತಿನ ನಾಗರಿಕನು ಎನ್ನಬೇಕು. ಸ್ವಾತಂತ್ರ್ಯ ಎನ್ನುವುದು ಮಾನವನ ಸರ್ವಾಂಗೀಣ ಪ್ರಗತಿಗೆ ಸಂಬಂಧಪಟ್ಟಿದ್ದು, ಅದರಲ್ಲಿ ಆತನ ಆರ್ಥಿಕ, ಸಾಮಾಜಿ ಪ್ರಗತಿಗಳು ಸೇರಿವೆ. ಮಹಾತ್ಮಾ ಗಾಂಧೀಜಿ ಸ್ವರಾಜ್ಯದ ಕನಸನ್ನು ಕಂಡಿದ್ದು ಇದೆ. ಅವರ ಪ್ರಕಾರ ನಮ್ಮ ದೇಶ ಬ್ರಿಟೀಷರಿಂದಾಗಿ ಬಡವಾಗಿದೆ, ಭಾರತೀಯರು ಬಡವರಾಗಿದ್ದಾರೆ. ನಾವು ನಮ್ಮನ್ನು ಸುಧಾರಿಸಿಕೊಳ್ಳಬೇಕು. ಈ ದೇಶ ಸಂಪನ್ಮೂಲಗಳ ದೃಷ್ಟಿಯಿಂದ ಶ್ರೀಮಂತವಾಗಿದ್ದರೂ ನಮ್ಮಲ್ಲಿ ಅದರ ಸದ್ಬಳಕೆ ಕಂಡು ಬರುತ್ತಿಲ್ಲ. ಇದರಿಂದಾಗಿ ನಾವು ಬ್ರಿಟೀಷರನ್ನು ಈ ದೇಶದಿಂದ ಹೊರಹಾಕದ ಹೊರತು ವಿಶ್ರಾಂತಿ ಪಡೆಯುವಂತಿಲ್ಲ. ಬ್ರಿಟೀಷರು ತೊಲಗಿದ ನಂತರವೇ ನಾವು ಸ್ವತಂತ್ರರು. ಅದಕ್ಕಾಗಿ ನಾವು ಹೋರಾಡಬೇಕು. ಸ್ವಾತಂತ್ರ್ಯ ಎನ್ನುವುದು ನಮ್ಮ ಜೀವನ ವಿಧಾನವಾಗಿದೆ. ಈ ದೃಷ್ಟಿಯಲ್ಲಿ ಹಕ್ಕುಗಳು ಮತ್ತು ಜವಾಬ್ದಾರಿಗಳು ಪರಸ್ಪರ ಪೂರಕವಾದವುಗಳು. ಇದನ್ನು ಹಲವಾರು ರಾಷ್ಟ್ರೀಯ ನಾಯಕರು ವಿಶ್ಲೇಷಿಸಿದ್ದಾರೆ.

ಮಹಾತ್ಮಾ ಗಾಂಧೀಜಿಯವರು ಹೀಗೆ ಬರೆಯುತ್ತಾರೆ "ನಾವು ಭಾರತೀಯತೆಯನ್ನು ನಂಬಿದ್ದೇವೆ. ನನ್ನ ಅಭಿಪ್ರಾಯದಲ್ಲಿ ಭಾರತವು ಜಗತ್ತಿಗೆ ತನ್ನದೇ ಆದುದನ್ನು ಕೊಡುವಷ್ಟು ಶಕ್ತವಾದ ದೇಶ".

ಭಾರತದ ಹಲವಾರು ವೀರ ಯೋಧರು ಸ್ವಾತಂತ್ರ್ಯಕ್ಕಾಗಿ ದುಡಿದಿದ್ದಾರೆ, ತಮ್ಮ ಜೀವನವನ್ನೇ ತ್ಯಾಗ ಮಾಡಿದ್ದಾರೆ. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಪೇಶ್ವೆ ನಾನಾ ಸಾಹೇಬ ಮತ್ತು ಝಾನ್ಸಿ ರಾಣಿ ಲಕ್ಷ್ಮೀಬಾಯಿ.

ಇತಿಹಾಸದ ಪುಟಗಳನ್ನು ತಿರುವಿದ ಯಾರೇ ಆಗಲಿ ಸ್ವಾತಂತ್ರ್ಯ ಸಂಗ್ರಾಮದ ಕಥೆಯನ್ನು ಅರಿಯದೆ ಇರಲಾರರು. ಆ ಸಂಘರ್ಷ, ಸಂಗ್ರಾಮ, ಸಾವು-ನೋವಿನ ಸಂದರ್ಭಗಳಲ್ಲಿ ಕೇವಲ ಪುರುಷರಷ್ಟೇ ಭಾಗಿಯಾಗಿರಲಿಲ್ಲ. ಅಲ್ಲಿ ಹಲವಾರು ವೀರವನಿತೆಯರು ಇದ್ದರು. ಪುರುಷರಂತೆ ಅವರು ತ್ಯಾಗ-ಬಲಿದಾನ ಮಾಡಿದರು. ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಾರಥ್ಯವನ್ನು ವಹಿಸಿದ್ದ ಮಹಾತ್ಮಾ ಗಾಂಧೀಜಿಯವರು ಕೂಡ ವೀರ ವನಿತೆಯರ ಶೌರ್ಯ-ಸಾಹಸವನ್ನು ಪ್ರಶಂಶಿಸಿದ್ದಾರೆ.

ಅನೇಕ ದಶಕಗಳವರೆಗೆ ನಡೆದ ಭಾರತದ ಸ್ವಾತಂತ್ರ್ಯ ಸಂಗ್ರಾಮವು ಇಡೀ ಜಗತ್ತಿನ ಗಮನ ಸೆಳೆಯಿತು. ಅದೊಂದು ಲಕ್ಷಾಂತರ ಜನ ಎಲ್ಲವನ್ನು ಮರೆತು ಸ್ವಾತಂತ್ರ್ಯಕ್ಕಾಗಿ ದುಡಿದ ಕಥೆಯಾಗಿದೆ. "ಈ ಹೋರಾಟವು ಬ್ರಿಟೀಷ ಆಡಳಿತವು ದೇಶಿಯರನ್ನು ಅಮಾನವೀಯತೆಯಿಂದ ನಡೆಸಿಕೊಂಡುದರ ಫಲವಾಗಿ ಆರಂಭವಾಯಿತೆನ್ನಬೇಕು". ಈ ಹೋರಾಟವು ಇತ್ತೀಚಿನದ್ದೇನಲ್ಲ. ಅದು ಬಹು ಹಿಂದೆಯೇ ಆರಂಭವಾಯಿತು. ೧೮೫೭ರ ಸಿಪಾಯಿ ದಂಗೆಗಿಂತಲೂ ಪೂರ್ವದಲ್ಲಿ ಅದು ನಡೆದಿತ್ತು. ಅದರಲ್ಲಿ ಪುರುಷರಂತೆ ಮಹಿಳೆಯರು ಭಾಗಿಯಾಗಿದ್ದರು. ಅವರು ಪುರುಷರಂತೆ ವಿಚಾರವಾದಿಗಳಾಗಿ ಕಾಯಕಯೋಗಿಗಳಾಗಿ ಜವಾಬ್ದಾರಿತನದಿಂದ ಪುರುಷರ ಸಹಭಾಗಿಯಾಗಿ ಬ್ರಿಟೀಷರ ವಿರುದ್ಧ ಹೋರಾಡಿದರು ಎಂಬುದು ಗಮನಾರ್ಹವಾಗಿದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ವಿಷಯವಾಗಿ ವೀರವನಿತೆಯರ ಬಗ್ಗೆ ಹೇಳುವಾಗ ಬೆಳಗಾವಿ ಜಿಲ್ಲೆಗೆ ಹೆಚ್ಚಿನ ಪ್ರಾಶಸ್ತ್ಯ ದೊರೆಯುತ್ತದೆ. ಆ ಜಿಲ್ಲೆಯ ಹಲವಾರು ವೀರ ವನಿತೆಯರು ಬ್ರಿಟೀಷರ ವಿರುದ್ಧ ಹೋರಾಡಿದ್ದಾರೆ. ನಮಗೆಲ್ಲಾ ಗೊತ್ತಿರುವಂತೆ ಉತ್ತರದಲ್ಲಿ ಝಾನ್ಸಿರಾಣಿ ಲಕ್ಷ್ಮೀಬಾಯಿ ಬ್ರಿಟೀಷರ ವಿರುದ್ಧ ಖಡ್ಗವನ್ನು ಎತ್ತುವುದಕ್ಕಿಂತ ೩೩ ವರ್ಷ ಪೂರ್ವದಲ್ಲಿ ದಕ್ಷಿಣ ಭಾರತದ ಬೆಳಗಾವಿ ಜಿಲ್ಲೆಯ ಕಿತ್ತೂರಿನ ವೀರ ರಾಣಿ ಚನ್ನಮ್ಮ ನಾಗರೀಕ ಹಕ್ಕುಗಳ ಸಂರಕ್ಷಣೆಗಾಗಿ ಮತ್ತು ಸಂಸ್ಥಾನದ ರಕ್ಷಣೆಗಾಗಿ ಬ್ರಿಟೀಷರ ವಿರುದ್ಧ ಯುದ್ಧ ಮಾಡಿದಳು. ಅಂದು ಬ್ರಿಟೀಷರು ತಮ್ಮ ಸ್ವಾರ್ಥ ಸಾಧನೆಗಾಗಿ ಒಡೆದು ಆಳುವ ನೀತಿಯನ್ನು ಅನುಸರಿಸಿದರು. ಆದರೆ ಬೆಳಗಾವಿಯಲ್ಲಿ ಜನ ಅದನ್ನು ತಮ್ಮ ರಾಣಿಯ ನೇತೃತ್ವದಲ್ಲಿ ವಿರೋಧಿಸಿದರು. ಇದರಿಂದಾಗಿ ರಾಣಿಗೆ "ಸ್ವಾತಂತ್ರ್ಯದ ಹರಿಕಾರ್ತಿ" ಎಂಬ ಗೌರವ ಸಂದಿದೆ.

"ಬಿಳಿಯರು ಬಂದರು ಭಾರತ ದೇಶಕ್ಕೆ ಮೊಗಲರ ಕಾಲದಲ್ಲಿ ತಕ್ಕಡಿ ಹಿಡಿದು" ಎನ್ನುವಂತೆ, ಬ್ರಿಟೀಷರು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದವರು, ಅಂದು ಈ ದೇಶ ನೂರಾರು ರಾಜ-ಮಹಾರಾಜರಿಂದಾಗಿ ಚೂರು-ಚೂರಾಗಿತ್ತು. ಆ ರಾಜರಲ್ಲಿ ಹೊಂದಾಣಿಕೆ ಎಂಬುದೇ ಇರಲಿಲ್ಲ. ಇಂತಹ ನ್ಯೂನ್ಯತೆಯನ್ನು ಬ್ರಿಟೀಷರು ದುರುಪಯೋಗ

ಪಡಿಸಿಕೊಂಡದ್ದು ನಮ್ಮ ದುರ್ದೈವ. ೧೮೫೭ರ ವರೆಗೆ ಈ ಸಣ್ಣ ಪುಟ್ಟ ರಾಜರು ದೇಶದ ಸ್ವಾತಂತ್ರ್ಯಕ್ಕಾಗಿ ತವಕಿಸದೆ, ತಮ್ಮ ರಾಜ್ಯಾಡಳಿತದಲ್ಲಿ ಲೀನರಾಗಿದ್ದರು. ಆದರೆ ೧೮೫೭ರ ಸುಮಾರಿಗೆ ದೇಶಕ್ಕಾಗಿ ಹೋರಾಡಬೇಕೆಂಬಂತಹ ಭಾವನೆಗಳು ಅವರಲ್ಲಿ ಉದಯವಾಗಿ ಅವರು "ಸಿಪಾಯಿ ದಂಗೆ" ಯನ್ನು ಮಾಡಿದರು. ೧೭೫೭ ರಿಂದ ೧೮೫೭ರ ವರೆಗೆ ರಾಜಕೀಯವು ಭಾರತೀಯರ ಕೈಯಲ್ಲಿತ್ತು. ೧೭೫೭ರ ಕಾನೂನು ಆಡಳಿತ ಹಿಂದಿನಂತಿತ್ತು. ಆದರೆ ೧೭೫೭ರ ಪ್ಲಾಸಿ ಕಾಳಗದಲ್ಲಿ ಬ್ರಿಟೀಷರು ಜಯಶಾಲಿಗಳಾದರು. ಈ ಯುದ್ಧದಲ್ಲಿ ಜಯಶಾಲಿಗಳಾದ ಅವರು ತಮ್ಮ ರಾಜ್ಯ ಕಟ್ಟುವ ಯೋಜನೆಯಲ್ಲಿ ತೊಡಗಿದರು.

೧೮೨೪ರಲ್ಲಿ ಡೆಕ್ಕನ್ ಪ್ರಾಂತದ ಕಮೀಷನರ್ ವಿಲಿಯಂ ಚಾಪ್ಲೇನರಿಗೆ ಬರೆದ ತನ್ನ ಒಂದು ಪತ್ರದಲ್ಲಿ ಕಿತ್ತೂರಿನ ರಾಣಿ ಚನ್ನಮ್ಮ ಹೀಗೆ ಹೇಳುತ್ತಾಳೆ "ನಾವು ನಿಮ್ಮ ಈಸ್ಟ ಇಂಡಿಯಾ ಕಂಪನಿಯ ಸರಕಾರದೊಂದಿಗೆ ಸಂಘರ್ಷಕ್ಕೆ ಇಳಿಯಲು ಬಯಸಿಲ್ಲ" ಆದಾಗ್ಯೂ ಇಂಗ್ಲೀಷ ಸರಕಾರವು ಕಿತ್ತೂರಿನೊಂದಿಗೆ ಕದನಕ್ಕೆ ಇಳಿಯತೊಡಗಿದಾಗ ರಾಣಿ ಚನ್ನಮ್ಮ ಇಂಗ್ಲೀಷರೊಂದಿಗೆ ಹೋರಾಡಲು ಪಣ ತೊಡಬೇಕಾಯಿತು.

ಐತಿಹಾಸಿಕವಾಗಿ ಬ್ರಿಟೀಷರ ವಿರುದ್ಧ ಸಿಡಿದೆದ್ದ ಭಾರತೀಯ ರಾಜರಲ್ಲಿ ಕಿತ್ತೂರಿನ ರಾಣಿ ಚನ್ನಮ್ಮ ಪ್ರಪ್ರಥಮಳು. ಸಂಸ್ಥಾನದ ದೊರೆ ಶಿವಲಿಂಗರುದ್ರಸರ್ಜ ದೇಸಾಯಿಯು ಲಿಂಗೈಕ್ಯನಾದ ನಂತರ ಚನ್ನಮ್ಮ ದತ್ತು ಪುತ್ರನನ್ನು ತೆಗೆದುಕೊಂಡಾಗ ಇಂಗ್ಲೀಷರು ಅದನ್ನು ಅನುಮೋದಿಸಲಿಲ್ಲ. ಇದು ರಾಣಿ ಚನ್ನಮ್ಮ ಬ್ರಿಟೀಷರ ದಮನಕ್ಕಾಗಿ ಯುದ್ಧ ಮಾಡುವಂತೆ ಪ್ರಚೋದಿಸಲು ಕಾರಣವಾಯಿತು. ಆ ಯುದ್ಧದಲ್ಲಿ ಹಲವಾರು ಜನರು ಮರಣವನ್ನಪ್ಪಿದರು.

ಬ್ರಿಟೀಷರ ವಿರುದ್ಧದ ಕಿತ್ತೂರು ಯುದ್ಧದಲ್ಲಿ ಸುಮಾರು ಐದು ಸಾವಿರ ಸೈನಿಕರು ಕೋಟೆಯಲ್ಲಿ ಅಡಗಿಕೊಂಡು, ಇಂಗ್ಲೀಷರು ಕಿತ್ತೂರಿನ ಸ್ವಾತಂತ್ರ್ಯವನ್ನು ಗೌರವಿಸಬೇಕೆಂದು ಕೋರಿದರು. ಆದರೆ ತದನಂತರ ಅವರು ಇಂಗ್ಲೀಷರಿಗೆ ಶರಣಾಗಬೇಕಾಯಿತು. ಕಿತ್ತೂರ ಆಡಳಿತದಲ್ಲಿ ಮಲ್ಲಸರ್ಜ ಬಹು ಪ್ರಬಲವಾದ ದೊರೆಯಾಗಿದ್ದರೂ ನಂತರದಲ್ಲಿ ಶ್ರೀರಂಗ ಪಟ್ಟಣದ ಟಿಪ್ಪು ಸುಲ್ತಾನನು ಮಲ್ಲಸರ್ಜನನ್ನು ಸೋಲಿಸಿ ಆತನನ್ನು ಪಿರಿಯಾ ಪಟ್ಟಣದ ಕಲ್ಪದುರ್ಗದಲ್ಲಿ ಬಂಧಿಸಿದನು. ಆದರೆ ಶೂರ ದೊರೆ ಮಲ್ಲಸರ್ಜ ಅಲ್ಲಿಂದ ಪಾರಾಗಿ ಮರಾಠರನ್ನು ಬೆಂಬಲಿಸಿದನು. ಆದರೆ ಮರಾಠರಾಗಲಿ, ಟಿಪ್ಪು ಸುಲ್ತಾನನಾಗಲಿ ಕಿತ್ತೂರ ಸಂಸ್ಥಾನದ ಬಗ್ಗೆ ಕಳಕಳಿಯನ್ನು ಹೊಂದಿರಲಿಲ್ಲ. ಮರಾಠಾ ಪೇಶ್ವೆಯರು ಮಲ್ಲಸರ್ಜನನ್ನು ಮೋಸದಿಂದ ಮೂರು ವರ್ಷ ಪೂಣೆಯ ಸೆರೆಮನೆಯಲ್ಲಿ ಇಟ್ಟಿದ್ದರು, ನಂತರ ಅವರು ಆತನನ್ನು ೧೮೧೬ರಲ್ಲಿ ಬಿಡುಗಡೆಗೊಳಿಸಿದರು. ಆದರೆ ಅಲ್ಲಿಂದ ಕಿತ್ತೂರಿಗೆ ತೆರಳುವಾಗ ಮಲ್ಲಸರ್ಜ ತೀರಿಕೊಂಡನು.

ಶಿವಲಿಂಗ ರುದ್ರಸರ್ಜಾ ದಿವಂಗತ ಅರಸ ಮಲ್ಲಸರ್ಜನ ಹಿರಿಯ ಮಗನಾಗಿದ್ದನು. ಬಹು ಜನಾನುರಾಗಿಯಾಗಿದ್ದ ಆತನಿಗೆ "ಬಾಪು ಸಾಹೇಬ" ಎಂದು ಕರೆಯಲಾಗುತ್ತಿತ್ತು.

ಆತ ಮರಾಠರ ವಿರುದ್ಧ ಹೋರಾಡುತ್ತಿದ್ದ ಬ್ರಿಟೀಷರಿಗೆ ಸಹಾಯವನ್ನು ಮಾಡಿದನು. ಆದ್ದರಿಂದ ಸಂತೃಪ್ತರಾದ ಇಂಗ್ಲೀಷರು ಶಿವಲಿಂಗ ರುದ್ರ ಸರ್ಜನಿಗೆ ಸಂಸ್ಥಾನವನ್ನು ಸ್ವತಂತ್ರವಾಗಿ ಆಳಲು ಸೈನ್ಯವೊಂದರ ಮೂಲಕ ಅನುಮತಿ ನೀಡಿದ್ದರು. ಆದರೆ ಅನಾರೋಗ್ಯದಿಂದಾಗಿ ಸಂತಾನವಿಲ್ಲದ ಅರಸ ಶಿವಲಿಂಗ ರುದ್ರ ಸರ್ಜನು ೧೮೨೪ ರ ಸಪ್ಟೆಂಬರ್ ೧೧ರಂದು ದೈವಾಧೀನನಾದನು.

ಈ ಇತಿಹಾಸ ಕೆಲವು ಕಾರಣಗಳಿಂದಾಗಿ ಮಹತ್ವಪಡೆದಿದೆ. ಮೊದಲನೆಯದಾಗಿ ಕಿತ್ತೂರ ರಾಣಿ ಚನ್ನಮ್ಮ ತನ್ನ ಸಂಸ್ಥಾನದ ಉಳಿವಿಗಾಗಿ ಮತ್ತು ಬ್ರಿಟೀಷರ ತಪ್ಪು ಸಂಹಿತೆಗಳ ವಿರುದ್ಧವಾಗಿ ಯುದ್ಧ ಮಾಡಿದಳು. ಎರಡನೆಯದಾಗಿ ಅವಳು ಏಕಾಂಗಿಯಾಗಿ ತನ್ನ ಗಂಡ ನಡೆಸಿದ್ದ ಹೋರಾಟವನ್ನು ಮುಂದುವರೆಸಿದಳು. ನೆನಪಿರಲಿ ಈ ವಿಷಯವಾಗಿ ಅವಳಿಗೆ ಯಾವ ಹೊರಗಿನ ಸಹಾಯ ಸಹಕಾರ ಸಿಕ್ಕಲಿಲ್ಲ. ಅಲ್ಲದೇ ಅವಳು ಧಾರವಾಡದ ಜಿಲ್ಲಾಧಿಕಾರಿ ಥ್ಯಾಕರೆಯನ್ನು ಧಿಕ್ಕರಿಸಿ ಆತನನ್ನು ವಧಿಸಿ, ಕಿತ್ತೂರಿನಲ್ಲಿ ಸ್ವಾತಂತ್ರ್ಯ ಧ್ವಜವನ್ನು ಹಾರಿಸಿದಳು. ಮೂರನೆಯದಾಗಿ ಹಾಗೂ ಮುಖ್ಯವಾಗಿ ರಾಣಿ ಚನ್ನಮ್ಮ ಬ್ರಿಟೀಷರ ವಿರುದ್ಧದ ಕದನವು ಇಡೀ ನಾಡಿನ ಜನತೆಗೆ ಮಾದರಿಯಾಗಿತ್ತು. ಇದು ಈ ದೇಶದಲ್ಲಿ ಬ್ರಿಟೀಷರ ವಿರುದ್ಧ ಸಮರಕ್ಕೆ ಸ್ಫೂರ್ತಿಯಾಯಿತು. ಭಾರತದ ಪಿತಾಮಹ ಮಹಾತ್ಮಾಗಾಂಧಿಯವರೂ ಇದೇ ಅಭಿಪ್ರಾಯದವರು. ೧೯೨೪ರ ಬೆಳಗಾಂವದಲ್ಲಿ ಜರುಗಿದ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನದ ನಾಯಕತ್ವದಲ್ಲಿ ಮಾತನಾಡುವಾಗ ಗಾಂಧಿ ಈ ಮಾತನ್ನು ಹೇಳಿದ್ದಾರೆ.

ನಾಲ್ಕನೆಯದಾಗಿ, ಚನ್ನಮ್ಮ ಸೆರೆವಾಸದಲ್ಲಿದ್ದರೂ ಬ್ರಿಟೀಷರ ವಿರುದ್ಧ ತನ್ನ ವೀರ ಸೇನಾನಿ ಸಂಗೊಳ್ಳಿ ರಾಯಣ್ಣ ಯುದ್ಧ ಮುಂದುವರೆಸಿದಾಗ ರಾಣಿ ಆತನಲ್ಲಿ ನಂಬಿಕೆಯನ್ನು ಇರಿಸಿಕೊಂಡಿದ್ದಳು. ರಾಯಣ್ಣ ರಾಣಿಯ ಅಪ್ಪಣೆಯಂತೆ ಶಿವಲಿಂಗಪ್ಪನನ್ನು ಅರಸನನ್ನಾಗಿ ಮಾಡಲು ತನ್ನ ಸಂಗ್ರಾಮವನ್ನು ಮುಂದುವರೆಸಿದ. ಐದನೆಯದಾಗಿ ತಾನೊಬ್ಬ ಕೆಳ ವರ್ಗದವನಾದರೂ ರಾಯಣ್ಣ ತನ್ನ ಸಂಸ್ಥಾನ ಮತ್ತು ಜನತೆಯ ಪರವಾಗಿ ಹೋರಾಟವನ್ನು ನಡೆಸಿದ. ಆತ ರಾಣಿ ಚನ್ನಮ್ಮಳನ್ನು ತಾಯಿಯಂತೆ ಪ್ರೀತಿ ಗೌರವದಿಂದ ಕಂಡವನೆಂದು ಹೇಳಬೇಕು.

"ಬ್ರಿಟೀಷರ ಆಡಳಿತ ಮತ್ತು ರಾಣಿ ಕಿತ್ತೂರ ಚನ್ನಮ್ಮಳ ಹೋರಾಟ" ಎಂಬ ವಿಷಯದ ಕುರಿತು ಬರೆಯಲು ಕಾರಣವೇನೆಂದರೆ ಇಲ್ಲಿಯವರೆಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಿತ್ತೂರ ಸಂಸ್ಥಾನ ನಿರ್ವಹಿಸಿದ ಪಾತ್ರದ ಬಗ್ಗೆ ಯಾರೂ ಸಂಪೂರ್ಣ ಅಧ್ಯಯನವನ್ನು ಕೈಗೊಂಡಿಲ್ಲ. ಈ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಿತ್ತೂರ ರಾಣಿಯ ಹೋರಾಟವು ಮೊಟ್ಟಮೊದಲನೆಯದು ಎಂಬುದು ಗಮನಾರ್ಹ. ಅಂದರೆ ಸ್ವಾತಂತ್ರ್ಯ ಹೋರಾಟದ ವಿಷಯದಲ್ಲಿ ಬೆಳಗಾಂವ ಜಿಲ್ಲೆಯ ಅದರಲ್ಲೂ ಕಿತ್ತೂರ ಸಂಸ್ಥಾನದ ಪಾತ್ರ ಅತ್ಯಂತ ಹಿರಿದು. ಕಿತ್ತೂರ ಸಂಸ್ಥಾನದ ಧೀರೋದಾತ್ತತೆ ಹಾಗೂ ಅದು ಈ ದೇಶದ ಇತಿಹಾಸದಲ್ಲಿ ಮಾಡಿದ ಬ್ರಿಟೀಷರ ವಿರುದ್ಧದ ಮೊದಲ ಕದನದ ಚರಿತ್ರೆಯೇ ಈ ಪುಸ್ತಕದ ಕಥಾ ವಸ್ತುವಾಗಿದೆ.

ಕಿತ್ತೂರ ಸಂಸ್ಥಾನದ ಇತಿಹಾಸದ ಸಂಶೋಧಕ ಸಂಶೋಧನೆಯ ಸಾಫಲ್ಯಕ್ಕಾಗಿ ಹಲವಾರು ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕಾಯಿತು. ಈ ದಿಶೆಯಲ್ಲಿ ಪ್ರಕಟಿತ, ಅಪ್ರಕಟಿತ ಪುಸ್ತಕಗಳು, ಲೇಖನಗಳು, ದಿನಪತ್ರಿಕೆಗಳು, ವಾರಪತ್ರಿಕೆಗಳು, ನಿಯತಕಾಲಿಕೆಗಳು, ಗೆಜೆಟೀಯರುಗಳು, ಪತ್ರಗಳು ಇತ್ಯಾದಿ ಮೂಲಗಳನ್ನು ಕೂಲಂಕಷವಾಗಿ ಅಭ್ಯಸಿಸಬೇಕಾಯಿತು. ಕ್ಷೇತ್ರ ಕಾರ್ಯದಲ್ಲಿದ್ದಾಗ ಬೆಳಗಾವಿ ಜಿಲ್ಲೆಯ ಹಲವಾರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರನ್ನು ಸಂದರ್ಶಿಸಲಾಗಿದೆ. ಈ ದಿಶೆಯಲ್ಲಿ ಮಾಹಿತಿಯನ್ನು ಪಡೆಯುವಾಗ ಹಲವಾರು ತೊಂದರೆಗಳು ಎದುರಾದವು. ಬೆಳಗಾವಿ ಜಿಲ್ಲೆಯಲ್ಲಿ ಕನ್ನಡದೊಂದಿಗೆ ಮರಾಠಿ ಮತ್ತು ಕೊಂಕಣಿ ಭಾಷೆಗಳು ಬಳಕೆಯಲ್ಲಿವೆ. ಅಂತಹ ಪರಭಾಷಾ ಬಾಂಧವರಿಂದ ಮಾಹಿತಿಯನ್ನು ಪಡೆಯುವುದು ಕಷ್ಟವಾಯಿತು. ಈ ಕಾರ್ಯಕ್ಕಾಗಿ ಐತಿಹಾಸಿಕ, ವಿಶ್ಲೇಷಣಾತ್ಮಕ ಹಾಗು ತೌಲನಿಕ ಪದ್ಧತಿಗಳನ್ನು ಅಳವಡಿಸಿಕೊಂಡಿದೆ. ಸಂಶೋಧನೆಯ ಕಾಲಕ್ಕೆ ಬಾಂಬೆ (ಮುಂಬೈ) ಮತ್ತಿತರ ಕಡೆಗಳಲ್ಲಿ ದಾಖಲೆಗಳ ಹಾಳಾಗದಂತೆ ಅವುಗಳ ಮೇಲೆ ಗಟ್ಟಿಯಾದ ರಸಾಯನಗಳನ್ನು ಹಾಕಿದ್ದರು. ಅಂತಹ ಮಾಹಿತಿಗಳನ್ನು ಕಷ್ಟದಿಂದ ಕ್ರೋಢೀಕರಿಸಲಾಗಿದೆ.

ಕಿತ್ತೂರ ಸಂಸ್ಥಾನದ ಬಗ್ಗೆ ಇರುವ ಮುಂಬೈ ಗೆಜೆಟೀಯರ್‌ಗಳಲ್ಲಿ ಅತ್ಯಮೂಲ್ಯವಾದ ವಿವರಗಳು ದೊರೆತವು. ಆಧುನಿಕ ಭಾರತದ ಚರಿತ್ರೆಯಲ್ಲಿ ರಾಣಿ ಚನ್ನಮ್ಮ ಉತ್ತರದ ಝಾನ್ಸಿಯ ರಾಣಿ ಲಕ್ಷ್ಮೀಬಾಯಿಯೊಂದಿಗೆ ತೌಲನಿಕವಾಗಿ ನೋಡುವುದಿದೆ. ರಾಣಿ ಚನ್ನಮ್ಮಳ ಸಂಸ್ಥಾನದ ಅಧ್ಯಯನವನ್ನು ಪ್ರತ್ಯೇಕವಾಗಿ ಕೈಗೊಂಡು ಅದರ ವಿವರಗಳನ್ನು ದೇಶದ ಇತರ ವೀರರಾಣಿಯರೊಂದಿಗೆ ಹೋಲಿಸಿ, ಎಣಿಕೆ ಮಾಡಿ, ವಿವರಗಳನ್ನು ದಾಖಲಿಸಿಕೊಳ್ಳಲಾಗಿದೆ.

ಅಧ್ಯಯನದ ಸಂದರ್ಭದಲ್ಲಿ ಸಂಶೋಧಕರು ಕರ್ನಾಟಕ ಸರಕಾರ ಪ್ರತೀ ವರ್ಷ ಕಿತ್ತೂರಿನಲ್ಲಿ ನಡೆಸುವ ಕಿತ್ತೂರ ಉತ್ಸವದಲ್ಲಿ ಭಾಗಿಯಾಗಿದ್ದರು. ಈ ಉತ್ಸವವನ್ನು ಸರಕಾರವು ಬೆಳಗಾವಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಮುಖಾಂತರ ನಡೆಸುತ್ತದೆ. ಉತ್ಸವದ ಕಾಲಕ್ಕೆ ಚನ್ನಮ್ಮ ರಾಣಿಯ ಸಾವಿನ ಸ್ಥಳವಾದ ಬೈಲಹೊಂಗಲದಿಂದ ಕಿತ್ತೂರಿನವರೆಗೆ ಮೆರವಣಿಗೆಯನ್ನು ನಡೆಸುತ್ತಾರೆ. ಉತ್ಸವದಲ್ಲಿ ಚನ್ನಮ್ಮ ರಾಣಿಯ ಯುದ್ಧವನ್ನು ಶೌರ್ಯವನ್ನು ಸಾಹಸವನ್ನು ನೆನಪಿಸುವಂತಹ ಯುದ್ಧದ ಸನ್ನಿವೇಶವನ್ನು ಸೃಷ್ಟಿಸಿರುತ್ತಾರೆ. ಆ ಕಾಲದ ವೇಷ ಭೂಷಣಗಳು, ಜನ–ಜೀವನ ಮತ್ತು ಕಲೆಗಳ ಸ್ಮರಣೋತ್ಸವ ಜರುಗುತ್ತದೆ. ದುರ್ದೈವವೆಂದರೆ ನಮ್ಮ ಸರಕಾರ ಕಿತ್ತೂರ ಉತ್ಸವವನ್ನು ನಿರ್ದಿಷ್ಟ ದಿನಗಳಂದು ಮಾಡದೆ ತನಗೆ ಅನುಕೂಲವಾದಾಗ ಮಾಡುತ್ತಿದೆ.

* * *

ಅಧ್ಯಾಯ–೨

ಐತಿಹಾಸಿಕ ಹಿನ್ನೆಲೆ

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಸ್ತ್ರೀಯರು ವಹಿಸಿದ ಪಾತ್ರ ಅವಿಸ್ಮರಣೀಯ. ಮಹಾತ್ಮಾ ಗಾಂಧಿಜಿಯವರು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕುವ ಪೂರ್ವದಲ್ಲೂ ಹಾಗೂ ನಂತರದಲ್ಲೂ ಅನೇಕ ವೀರ ವನಿತೆಯರು, ಭೂಮಿತಾಯಿಯ ಸ್ವಾತಂತ್ರ್ಯಕ್ಕಾಗಿ ವೀರಮರಣವನ್ನಪ್ಪಿದ್ದಾರೆ. ಗಾಂಧಿ ಪೂರ್ವ ಯುಗದಲ್ಲಿ ರಾಣಿವಾಸದ ಸ್ತ್ರೀಯರನೇಕರು ತಮ್ಮ ರಾಜ ಸಂಸ್ಥಾನಗಳ ಅಳಿವು ಉಳಿವಿಗಾಗಿ ಕೆಚ್ಚೆದೆಯಿಂದ ದುಡಿದಿದ್ದಾರೆ ಮತ್ತು ಹೋರಾಡಿದ್ದಾರೆ. ಅಂತವರಲ್ಲಿ ಸ್ವಾದಿ ಮನೆತನದ ಬೆಳವಡಿ ಮಲ್ಲಮ್ಮ, ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ರಾಜ ಮನೆತನದ ಅಬ್ಬಕ್ಕದೇವಿ, ಕೆಳದಿಯ ರಾಣಿ ಚೆನ್ನಮ್ಮಾಜಿ ಮತ್ತು ಕಿತ್ತೂರಿನ ರಾಣಿ ಚನ್ನಮ್ಮ ಹಾಗೂ ರಾಣಿ ವೀರಮ್ಮ ಪ್ರಮುಖರು. ಅತಿ ಹೆಮ್ಮೆಯ ರಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕಹಳೆಯನ್ನೂದಿದ ಪ್ರಪ್ರಥಮ ಮಹಿಳೆ ಕಿತ್ತೂರ ಚನ್ನಮ್ಮ ಕೆಲವರು ಹೇಳುವಂತೆ ಕಿತ್ತೂರ ಚನ್ನಮ್ಮ ಕೇವಲ ಕರ್ನಾಟಕದ ಶ್ರೇಷ್ಠ ವೀರ ವನಿತೆಯಷ್ಟೇ ಆಗಿರದೆ ಇಡೀ ದೇಶದ, ಇಡೀ ಜಗತ್ತಿನ ವೀರವನಿತೆಯಾಗಿದ್ದಾಳೆ. ದಾಸ್ಯದ ವಿರುದ್ಧ ಹೋರಾಡುವ ಕ್ರಾಂತಿಕಾರಿ ಪರಂಪರೆಯನ್ನು ಹಾಕಿಕೊಟ್ಟಳು.

ಬ್ರಿಟೀಷರ ವಿರುದ್ಧದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮೊದಲ ದಶಕಗಳಲ್ಲಿ ಇಂದಿನ ಕರ್ನಾಟಕವು ಐದು ಬೃಹತ್ ಹಾಗು ಹದಿನಾಲ್ಕು ಚಿಕ್ಕ–ಪುಟ್ಟ ರಾಜ್ಯಗಳಲ್ಲಿ ವಿಂಗಡಣೆಯಾಗಿತ್ತು. ಅಂದು ಕರ್ನಾಟಕವನ್ನು ಹಂಚಿಕೊಂಡಿದ್ದ ಐದು ಪ್ರಾಂತಗಳೆಂದರೆ – ಮುಂಬೈ, ಮದ್ರಾಸ, ಮೈಸೂರ, ನಿಜಾಮ ರಾಜ್ಯ ಮತ್ತು ಕೊಡಗುಗಳಾಗಿದ್ದವು. ಇಂತಹ ಒಂದು ವಿಷಯ ವಿಂಗಡಣೆ ಮತ್ತು ರಾಜಕೀಯ ವೈಪರಿತ್ಯಗಳಲ್ಲೂ ಕನ್ನಡದ ಜನತೆ ಅಂದಿನ ರಾಜಕೀಯ ತಿಳುವಳಿಕೆಯನ್ನು ಹೊಂದಿದ್ದು, ಅವರು ಅಂದು ಆರಂಭವಾಗತೊಡಗಿದ್ದ ಸ್ವಾತಂತ್ರ್ಯ ಚಳುವಳಿಯ ಕರೆಗೆ ಓಗೊಟ್ಟರು. ಉತ್ತರ ಕರ್ನಾಟಕದ ಬೆಂಗಾವಿ, ಧಾರವಾಡ, ಕಾರವಾರ ಮತ್ತು ಬಿಜಾಪುರ ಜಿಲ್ಲೆಗಳು ಮುಂಬೈ ಪ್ರಾಂತ್ಯದ ದಕ್ಷಿಣದ ಭಾಗಗಳಾಗಿದ್ದವು. ಆ ಪ್ರಾಂತದ ಭಾಗಗಳಾಗಿ, ಅಲ್ಲಿ ಅಂದು ಅವು ಆ ಭಾಗದ ಬ್ರಿಟೀಷರ ಆಳ್ವಿಕೆಯ ಪ್ರಭಾವಕ್ಕೆ ಒಳಗಾಗಿದ್ದವು. ದಕ್ಷಿಣದ ಮೈಸೂರ ರಾಜ್ಯವು ತನ್ನದೆಯಾದ ಸ್ಥಾನ–ಮಾನವನ್ನು ಹೊಂದಿದ್ದು, ಅದು ಕೂಡ ರಾಷ್ಟ್ರದ ಕರೆಗೆ ಓಗೊಟ್ಟಿತು. "ಈ ದಿಸೆಯಲ್ಲಿ ಕಿತ್ತೂರ ರಾಣಿ ಚನ್ನಮ್ಮನ ಹೆಸರು ಅವರಿಗೆಲ್ಲ ಸ್ಫೂರ್ತಿಯ ಸಂಕೇತವಾಗಿತ್ತು". ಅವಳು ಬ್ರಿಟೀಷರೊಂದಿಗೆ ಕಾದಾಡಿದ ಭಾರತದ ಮೊದಲ ಮಹಿಳೆಯಾಗಿದ್ದಳು. ಉತ್ತರದ ಕಲಬುರ್ಗಿ, ರಾಯಚೂರು, ಬೀದರ ಜಿಲ್ಲೆಗಳು ನಿಜಾಮ ರಾಜ್ಯದ ಭಾಗಗಳಾಗಿದ್ದವು. ವಿಚಿತ್ರವೆಂದರೆ ೧೯೪೦ ರ ವರೆಗೆ ನಿಜಾಮ ಆಡಳಿತದ ವಿರುದ್ಧ ಏನನ್ನು ಮಾಡಲಿಕ್ಕಾಗಲಿಲ್ಲ.

ಸ್ವಾತಂತ್ರ್ಯಾನಂತರದಲ್ಲಿ ಪೋಲಿಸ್ ಕಾರ್ಯಾಚರಣೆಯಿಂದಾಗಿ ಆ ಪ್ರದೇಶವನ್ನು ಭಾರತದಲ್ಲಿ ವಿಲೀನಗೊಳಿಸಲಾಯಿತು. ಕರಾವಳಿಯ ದಕ್ಷಿಣ ಕನ್ನಡ ಮತ್ತು ಒಳನಾಡಿನ ಬಳ್ಳಾರಿ ಜಿಲ್ಲೆಗಳು ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದವು. ಆದರೂ ಈ ಎರಡೂ ಜಿಲ್ಲೆಗಳಲ್ಲಿ ಪರಸ್ಪರ ಸಂಬಂಧವಿರಲಿಲ್ಲ. ಕೂರ್ಗವು ಮೈಸೂರಿನೊಂದಿಗೆ ತನ್ನದೇ ಆದ ಕರುಳಬಳ್ಳಿಯ ಸಂಬಂಧ ಹೊಂದಿದ್ದರೂ ಅದೂ ಕೂಡ ದೂರವಿತ್ತು. ಅಂದಿನ ರಾಜ್ಯಾಡಳಿತದ ದೃಷ್ಟಿಯಿಂದ ಹೇಳಬೇಕೆಂದರೆ ಭಾರತ ಸರಕಾರದ ಆಯುಕ್ತರೊಬ್ಬರು ಅದರ ಆಡಳಿತ ನಿರ್ವಹಿಸುತ್ತಿದ್ದರು. ಕಾಂಗ್ರೆಸ್ ಚಳುವಳಿಯಾಗಲಿ ರಾಷ್ಟ್ರೀಯವಾದದ ಸತ್ವವಾಗಲಿ ಬ್ರಿಟೀಷರ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳಲ್ಲಿ, ಹೆಚ್ಚಿನ ಅಭಿವ್ಯಕ್ತಿ ಹಾಗೂ ಪ್ರತಿಭಟನೆಯನ್ನು ಪಡೆಯುತ್ತಿದ್ದವು. ಆದರೆ ಕರ್ನಾಟಕದ ಅರ್ಧಕ್ಕಿಂತಲೂ ಹೆಚ್ಚಿನ ಪ್ರದೇಶವು ಅಂದು ದೇಶೀ ರಾಜರ ಕೈಯಲ್ಲಿತ್ತು. ಈ ಹಿಂದೆ ಹೇಳಿದಂತೆ ನಿಜಾಮ ರಾಜ್ಯದ ಕೆಲವು ಕನ್ನಡ ಜಿಲ್ಲೆಗಳು ಹಾಗೂ ಮೈಸೂರು ಪ್ರಾಂತವನ್ನು ಹೊರತುಪಡಿಸಿ ಅಂದು ಈ ರಾಜ್ಯದಲ್ಲಿ ಸೊಂಡೂರು, ಸವಣೂರು, ರಾಮದುರ್ಗ, ಜಮಖಂಡಿ, ಮುಧೋಳ ಮತ್ತು ಅಕ್ಕಲಕೋಟಗಳೆಂಬ ಸುಮಾರು ಒಂದು ಡಜನ್ ಸಣ್ಣ ಪುಟ್ಟ ಪ್ರಾಂತ್ಯಗಳಿದ್ದವು.

ಈ ಚಿಕ್ಕ-ಪುಟ್ಟ ರಾಜ್ಯಗಳೆಲ್ಲ ಬ್ರಿಟೀಷ ಭಾರತೀಯ ಪ್ರಾಂತ್ಯಗಳಿಂದ ಆವೃತವಾಗಿದ್ದವು ಎಂಬುದನ್ನು ಮರೆಯಬಾರದು. ಸ್ವತಂತ್ರ್ಯ ಪ್ರಾಂತ್ಯಗಳಲ್ಲಿ ನಡೆಯುವ ಪ್ರತಿಭಟನೆಗಳು, ಚಳುವಳಿಗಳು ಈ ಬ್ರಿಟೀಷ ಪ್ರದೇಶಗಳಲ್ಲೂ ಹಬ್ಬಿದವು. ಇಂತಹ ಬ್ರಿಟೀಷ ಪ್ರಾಂತ್ಯಗಳ ಜನತೆ ಬ್ರಿಟೀಷ ಆಳ್ವಿಕೆಯ ಆಧೀನದಲ್ಲಿರುವ ಜನರ ಸ್ವಾತಂತ್ರ್ಯಕ್ಕಾಗಿ ಪ್ರಜಾಸತ್ತಾತ್ಮಕ ಅಭಿವೃದ್ಧಿಗಾಗಿ ಶುಭ ಹಾರೈಸಿದ್ದು ಸಹಜವೆ, ಅಂತೆಯೇ ಈ ಚಳುವಳಿ ಸ್ವತಂತ್ರ ಪ್ರಾಂತ್ಯಗಳ ಜನರ ಮೇಲೂ ಪ್ರಭಾವ ಬೀರಿತು.

೧೮೫೭ರಲ್ಲಿ ನಡೆದ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇಂತಹ ಹಲವಾರು ಸಣ್ಣ ರಾಜ್ಯಗಳ ದೊರೆಗಳು ಭಾಗವಹಿಸಿದ್ದರೆಂಬುದು ಗಮನಾರ್ಹ. ಇದಕ್ಕಿಂತಲೂ ಪೂರ್ವದಲ್ಲಿ, ೧೮೨೪ರಲ್ಲಿ ಕಿತ್ತೂರಿನ ರಾಣಿ ಚನ್ನಮ್ಮ ಬ್ರಿಟೀಷರ "ದತ್ತು ಮಕ್ಕಳಿಗೆ ಹಕ್ಕಿಲ್ಲ" ಎಂಬ ತತ್ವದ ವಿರುದ್ಧವಾಗಿ ಸೆಣಸಾಡಿದ್ದು, ನಂತರ ಜನತೆಗೆಲ್ಲಾ ಹೆಜ್ಜೆ-ಹೆಜ್ಜೆಗೂ ತಿಳಿದಿತ್ತು. ಚನ್ನಮ್ಮನ ಹೋರಾಟದ ಕರೆ ಎಲ್ಲೆಡೆಗೆ ಹಬ್ಬಿತು. ಅಂದು ಆರಂಭವಾದ ಹಲವಾರು ರಾಷ್ಟ್ರೀಯ ಶಾಲೆಗಳು ಇಂತಹ ರಾಷ್ಟ್ರೀಯ ಚಳುವಳಿಯ ಸತ್ವವನ್ನು ಸಾಕಾರಗೊಳಿಸಿದವು. ಅಂದಿನ ಧಾರವಾಡದಲ್ಲಿ ಆಲೂರು ವೆಂಕಟರಾಯರು "ನೂತನ ವಿದ್ಯಾಲಯ" ಎಂಬ ಶೈಕ್ಷಣಿಕ ಸಂಸ್ಥೆಯನ್ನು ತೆರೆದರು. ಆ ಶಾಲೆಯಲ್ಲಿ ಕಲೆ ಮತ್ತು ಕರಕುಶಲ ವಿಷಯಗಳ ಬಗ್ಗೆ ಪಾಠ ನಡೆಯುತ್ತಿತ್ತು. ದೊಂಡೊಪಂತ ಸಹಸ್ರ ಬುದ್ದೆಯವರ ಸಮಗ್ರ ಪರಿಶ್ರಮದಿಂದಾಗಿ ಅಂತಹ ಇನ್ನೊಂದು ಶಾಲೆ ನವಲಗುಂದದಲ್ಲಿ ಆರಂಭವಾಯಿತು. ಬೆಳಗಾಂವದಲ್ಲಿ ಕಾಕಾ ಕಾಲೇಲ್ಕರರು ಗಣೇಶ ಮಹಾವಿದ್ಯಾಲಯವನ್ನು ಆರಂಭಿಸಿದರು. ಇಂತಹ ಇನ್ನೊಂದು ಮಹಾವಿದ್ಯಾಲಯವನ್ನು ಬಾಗಲಕೋಟೆಯಲ್ಲಿ ಜಯರಾವ ನರಗುಂದರು ತೆರೆದರು. ಅಂತಹ ಶಾಲೆಗಳು ಹಾನಗಲ್, ಅಗಡಿ ಮತ್ತಿತರ ಕಡೆಗೂ ಶುರುವಾದವು. ಕರ್ನಾಟಕದ ಅಂದಿನ ನಾಯಕರು ರಾಷ್ಟ್ರೀಯ ಭಾವನೆಗಳ

ಪೋಷಕರು, ಹರಿಕಾರರೂ ಆಗಿದ್ದರು. ಇದೇ ವೇಳೆಗೆ ಸ್ವದೇಶಿ ಚಳುವಳಿಯ ಬೀಜಗಳನ್ನು ಬಿತ್ತಲಾಯಿತು.

ಈ ಚರ್ಚೆಯು ಗಾಂಧೀಯುಗದ ಪೂರ್ವದ್ದಾಗಿದೆ. ಆ ವೇಳೆಯಲ್ಲಿ "ಸ್ವದೇಶಿ" ಮಂತ್ರದ ಹಿನ್ನೆಲೆಯಲ್ಲಿ ಹೆಬ್ಬಾಳದ ವಿಠ್ಠಲರಾವ್ ದೇಶಪಾಂಡೆಯವರು ಕಿತ್ತೂರಿನಲ್ಲಿ ನೇಯ್ಗೆಯ ಕಾರ್ಖಾನೆಯೊಂದನ್ನು ಆರಂಭಿಸಿದರು. ಇವೆಲ್ಲ ಅಂದಿನ ಕರ್ನಾಟಕದಲ್ಲಿ ಸ್ವಾತಂತ್ರ್ಯದ ಬಗ್ಗೆ ಮೂಡಿದ ಅರಿವಿನ ಬಗ್ಗೆ ಸೂಚಿಸುತ್ತದೆ. ಶತಮಾನಗಳ ಹಿಂದೆ ಇಂಗ್ಲೀಷ ಆಡಳಿತದ ಸಾಮ್ರಾಜ್ಯಶಾಹಿ ಧೋರಣೆಯ ಕುರಿತು ವಿರೋಧ ವ್ಯಕ್ತಪಡಿಸಿದ ಕೀರ್ತಿ ಕಿತ್ತೂರಿನ ಜನತೆಗೆ ಸಲ್ಲುತ್ತದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕ ರಾಜ್ಯದ ಕೊಡುಗೆ ಅಪಾರವಾಗಿದೆ. ಕನ್ನಡಿಗರು ಧೈರ್ಯ ಸಾಹಸಗಳಿಗೆ ಹೆಸರಾದವರು. ಸ್ವಾತಂತ್ರ್ಯವು ಜೀವನಕ್ಕಿಂತಲೂ ದೊಡ್ಡದೆಂದು ನಂಬಿದವರರು ಕನ್ನಡಿಗರು. ಸ್ವಾತಂತ್ರ್ಯದ ಬಗ್ಗೆ ಮಾತನಾಡುವಾಗ ನಾವು ಈ ರಾಜ್ಯದ ಬನವಾಸಿಯ ಕದಂಬರನ್ನು, ಹಳೆಬೀಡಿನ ಹೊಯ್ಸಳರನ್ನು, ಬಾದಾಮಿಯ ಚಾಲುಕ್ಯರನ್ನು, ವಿಜಯ ನಗರದ ಅರಸರನ್ನು ಅವರ ದೇಶಪ್ರೇಮ ಮತ್ತು ಅವರ ಭಕ್ತಿಯನ್ನು ಸ್ಮರಿಸದೇ ಇರಲಾಗದು. ಇತಿಹಾಸಕಾರ ಡಾ॥ ಡಿ.ಸಿ.ಸರ್ಕಾರರ ಪ್ರಕಾರ "೬ನೆಯ ಶತಮಾನದಲ್ಲಿ ಆರಂಭವಾದ ಬಾದಾಮಿ ಚಾಲುಕ್ಯರ ಕಾಲದಿಂದಲೂ ಕನ್ನಡಿಗರು ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಧಾನ ಪಾತ್ರ ವಹಿಸಿದ್ದಾರೆ". ಕರ್ನಾಟಕದ ರಾಜರು ಉತ್ತರದ ಬಂಗಾಲ, ಬಿಹಾರ ಮತ್ತಿತರ ಕಡೆಗಳಲ್ಲಿ ಆಳಿದ ಬಗ್ಗೆ ದಾಖಲೆಗಳಿವೆ. ಕನ್ನಡಿಗರ ವೀರವನಿತೆಯರು ಮಾಡಿದ ತ್ಯಾಗ-ಬಲಿದಾನಗಳು ವಿಶೇಷವಾಗಿವೆ. ೧೦ನೆಯ ಶತಮಾನದ ಅತ್ತಿಮಬ್ಬೆ, ೧೨ನೆಯ ಶತಮಾನದ ಅಕ್ಕಮಹಾದೇವಿ, ವಿಜಯನಗರದ ಗಂಗಾಂಬಿಕೆ, ಚಿತ್ರದುರ್ಗದ ಒನಕೆ ಓಬವ್ವ, ಕಿತ್ತೂರಿನ ರಾಣಿ ಚನ್ನಮ್ಮ ಹಾಗೂ ಬೆಳವಡಿ ಮಲ್ಲಮ್ಮ ಮುಂತಾದವರ ಶೌರ್ಯದ ಕಥೆಗಳು ಓದುವಂತಹವು. ಬ್ರಿಟೀಷರ ವಿರುದ್ಧ ಕತ್ತಿ ಮಸೆದ ಪ್ರಥಮ ಮಹಿಳೆ ಕಿತ್ತೂರ ಚನ್ನಮ್ಮ. ಅವಳು ಕರ್ನಾಟಕದವಳು. ೧೭ನೆಯ ಶತಮಾನದ ಈ ನಾಡಿನ ಗಣ್ಯ ಕವಿ ಸರ್ವಜ್ಞನು ಈ ನಾಡಿನ ಸಂಸ್ಕೃತಿಯ ಹಿರಿಮೆಯನ್ನು ತನ್ನ ತ್ರಿಪದಿಗಳಲ್ಲಿ ಕೊಂಡಾಡಿದ್ದಾನೆ. ಆತ ಕನ್ನಡಿಗರ ಸಂಸ್ಕೃತಿಯನ್ನು ತನ್ನ ತ್ರಿಪದಿಗಳಲ್ಲಿ ಸೆರೆಹಿಡಿದಿದ್ದಾನೆ. ಆತನ ಪ್ರಕಾರ ಮನುಷ್ಯ ಜೀವನಕ್ಕೆ ಸ್ವಾತಂತ್ರ್ಯವು ಬಹು ಅಗತ್ಯವಾಗಿದ್ದರಿಂದ ಜನತೆ ಗುಲಾಮಗಿರಿಯಲ್ಲಿ ಬದುಕಬಾರದು. ಆತನು ಹೇಳುವುದೇನೆಂದರೆ, ನಾವು ನಮ್ಮ ದೇಶದ ಸ್ವಾತಂತ್ರ್ಯದ ವಿಚಾರದಲ್ಲಿ ಒಪ್ಪಂದ ಮಾಡಿಕೊಳ್ಳಬಾರದು ಎಂಬುದು ಆತನ ಈ ಕೆಳಗಿನ ತ್ರಿಪದಿ ಇದನ್ನು ಪುಷ್ಟೀಕರಿಸುತ್ತದೆ.

"ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ,
ಅಧಿಗಸ್ವಮೇಧ ಫಲ,
ಸ್ವಾಮಿ ಕಾರ್ಯಕ್ಕೆ ಮಡಿಯಲೇಬೇಕು ಸರ್ವಜ್ಞ".

ಹಲವಾರು ಶತಮಾನಗಳಿಂದ ಕರ್ನಾಟಕವು ವೀರ ಭೂಮಿಯೆಂದು ಕರೆಯಲ್ಪಡುತ್ತದೆ. ಬ್ರಿಟೀಷರು ಭಾರತವನ್ನೆಲ್ಲಾ ಆಕ್ರಮಿಸಿದ ನಂತರ ಕನ್ನಡದ ಜನತೆ ಅವರ ಆಳ್ವಿಕೆಯನ್ನು ಉಪೇಕ್ಷಿಸತೊಡಗಿದರು. ಬ್ರಿಟೀಷರ ಕಂಪನಿ ಸರಕಾರದ ವಿರುದ್ಧ ಇಲ್ಲಿಯ ಜನತೆ ಸಿಡಿದೆದ್ದರು. ಅಂತಹವರಲ್ಲಿ ಮೈಸೂರಿನ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್, ಕಿತ್ತೂರಿನ ರಾಣಿ ಚನ್ನಮ್ಮ, ಸಂಗೊಳ್ಳಿರಾಯಣ್ಣ ಮತ್ತು ಮುಂಡರಗಿಯ ಭೀಮರಾವ್ ಪ್ರಮುಖರು. ಅಂದರೆ ಕರ್ನಾಟಕವು ಸ್ವಾತಂತ್ರ್ಯ ಚಳುವಳಿಯಲ್ಲಿ ತನ್ನದೇ ಆದ ಪಾತ್ರವಹಿಸಿತು ಎಂದಾಯಿತು.

ಈ ನಾಡಿನ ಬೇಡರು ಮತ್ತು ಕೊಡವರು ತಮ್ಮ ಯುದ್ಧರಂಗದ ಶೌರ್ಯ ಸಾಮರ್ಥ್ಯಗಳಿಂದ ಈ ನಾಡಿನ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡುವಲ್ಲಿ ಹೆಸರುವಾಸಿಯಾಗಿದ್ದಾರೆ. ಬಾಲಾಜಿ ನಿಂಬಾಳಕರರ ನೇತೃತ್ವದಲ್ಲಿ ಹಲಗಲಿಯ ಬೇಡರು ಬ್ರಿಟೀಷರ ವಿರುದ್ಧ ಹೋರಾಡಿದ್ದು, ಎಲ್ಲರಿಗೂ ತಿಳಿದ ವಿಷಯ. ಮುರುಗೋಡಿನ ಚಿದಂಬರ ದೀಕ್ಷಿತರ ಮಗ ದಿವಾಕರ ದೀಕ್ಷಿತರು ಅವರಿಗೆ ಸ್ಫೂರ್ತಿಯಾಗಿದ್ದರು. ಆದರೆ ಬ್ರಿಟೀಷರ ವಿರುದ್ಧದ ಸೆಣಸಾಟದಲ್ಲಿ ನಿಂಬಾಳಕರ ಸಾವನ್ನಪ್ಪಿದರು. ಬೇಡರ ಧೈರ್ಯ ಸಾಹಸವನ್ನು ಬಣ್ಣಿಸುವ ಒಂದು ಜನಪ್ರೀಯ ಕನ್ನಡ ಜಾನಪದ ಗೀತೆಯಲ್ಲಿ ಅಂದಿನ ಬ್ರಿಟೀಷ ಕಂಪನಿ ಸರಕಾರಕ್ಕೆ ತಮ್ಮ ಆಯುದ್ಧಗಳನ್ನು ಸಲ್ಲಿಸದ ಹಲಗಲಿಯ ಬೇಡರ ಭಾವನೆಗಳು ವರ್ಣರಂಜಿತವಾಗಿ ಅಭಿವ್ಯಕ್ತವಾಗಿವೆ. ಕರ್ನಾಟಕದ ಇತಿಹಾಸವು ಕನ್ನಡ ಜನತೆಯ ಸಾಹಸ ಗಾಥೆಯನ್ನು ಒಳಗೊಂಡಿದೆ. ಅಂತಹ ಸಾಹಸ ಎಲ್ಲ ಕ್ಷೇತ್ರಗಳಲ್ಲೂ ಇದೆ. ಜೀವನದ ವಿವಿಧ ರಂಗಗಳಾದ ರಾಜಕೀಯ, ಸಂಸ್ಥೆಗಳು, ಆಡಳಿತ, ರಾಜ್ಯ ರಚನೆ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಟುವಟಿಕೆಗಳು, ಕಲೆ ಮತ್ತು ಶಿಲ್ಪ-ಸಾಹಿತ್ಯ ಮತ್ತಿತರ ಸಾಂಸ್ಕೃತಿಕ ಏಕತೆ, ಸಮಗ್ರತೆಗಳಿಗೆ ಕನ್ನಡ ನಾಡು ಭಾರತದ ಇತಿಹಾಸದಲ್ಲಿ ತನ್ನದೇ ಆದ ವಿಶೇಷ ಸ್ಥಾನ-ಮಾನವನ್ನು ಹೊಂದಿದೆ ಎನ್ನಬೇಕು. ಅದು ಭಾರತದ ಸಮಗ್ರತೆಗೆ, ಐಕ್ಯತೆಗೆ, ಸಂಸ್ಕೃತಿ ಮತ್ತು ನಾಗರಿಕತೆಯ ಬೆಳವಣಿಗೆಗೆ ತನ್ನದೇ ಆದ ಕಾಣಿಕೆಯನ್ನು ನೀಡಿದೆ.

ಬ್ರಿಟೀಷರ ಮೂಲ ಉದ್ದೇಶ ಭಾರತದಲ್ಲಿ ತಮ್ಮ ವ್ಯಾಪಾರ-ವಹಿವಾಟನ್ನು ಕುದುರಿಸಿಕೊಳ್ಳುವದಾಗಿತ್ತು. ಅವರು ತಮ್ಮ ಕಾರ್ಖಾನೆಗಳನ್ನು ಮತ್ತು ವ್ಯಾಪಾರ ಮಳಿಗೆಗಳನ್ನು ಸಂರಕ್ಷಿಸಿಕೊಳ್ಳಲು ತಮ್ಮದೇ ಆದ ಸೈನ್ಯವನ್ನು ಇಟ್ಟುಕೊಂಡಿದ್ದರು. ಇದರ ಮಧ್ಯೆ ಸ್ಥಳೀಯ ರಾಜರುಗಳು ತಮ್ಮ ಸ್ವಾರ್ಥಕ್ಕಾಗಿ ಇಂಗ್ಲೀಷ ಕಂಪನಿಯನ್ನು ಸಂಪರ್ಕಿಸಲಾರಂಭಿಸಿದರು. ಇದರಿಂದ ಬ್ರಿಟೀಷರಿಗೆ ಭಾರತದ ರಾಜಕೀಯ ಚಟುವಟಿಕೆಗಳಲ್ಲಿ ತೊಡಗುವಂತೆ ಪ್ರೋತ್ಸಾಹಿಸಿದಂತಾಯಿತು. ಕಾಲಕ್ರಮೇಣ ಬಲವಾದ ಸೈನ್ಯವನ್ನು ಕಟ್ಟಿದ ಧೂರ್ತ ಬ್ರಿಟೀಷರು ಇಲ್ಲಿ ತಮ್ಮ ರಾಜ್ಯ ನಿರ್ಮಾಣ ಮತ್ತು ವಿಸ್ತರಣಾ ಕಾರ್ಯವನ್ನು ಆರಂಭಿಸಿದರು. ಆದರೆ ಅವರು ರಾಜ್ಯ ಕಟ್ಟುವ ಕೆಲಸ ಇಲ್ಲಿಯ ಪ್ರತಿಯೊಂದು ರಾಜ್ಯಗಳ ಸನ್ನಿವೇಶಗಳನ್ನು ಆಧರಿಸಿತ್ತು. ಹಾಗೆಯೇ ಆಕ್ರಮಿಸಿಕೊಂಡ ಪ್ರಾಂತಗಳ ಆಡಳಿತಕ್ಕಾಗಿ ಅವರು ಆಡಳಿತ ಯಂತ್ರವನ್ನು ನಿರ್ಮಿಸಿಕೊಂಡರು. ಇದೇ ಹಿನ್ನೆಲೆಯಲ್ಲಿ ಅವರ ಪ್ರಾಂತೀಯ ಆಡಳಿತವನ್ನು ಅಭ್ಯಸಿಸಬೇಕಾಗುತ್ತದೆ.

ಇಂತಹ ಬ್ರಿಟೀಷ ಆಡಳಿತದ ಸಂದರ್ಭದಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳು ಬೇರೆ–ಬೇರೆ ಪ್ರಾಂತಗಳಲ್ಲಿ ಹಂಚಿಹೋದವು. ಉದಾಹರಣೆಗೆ ಮರಾಠಿ ಭಾಷೆಯ ಮುಂಬೈ ಪ್ರಾಂತದಲ್ಲಿ, ಉತ್ತರ ಕರ್ನಾಟಕದ ಕನ್ನಡ ಭಾಷೆಯ ಬೆಳಗಾಂವ, ಬಿಜಾಪುರ, ಕಾರವಾರ ಮತ್ತು ಧಾರವಾಡಗಳನ್ನು ಸೇರ್ಪಡೆ ಮಾಡಿದ್ದರು. ತಮಿಳು ಭಾಷೆ ಇರುವ ಮದ್ರಾಸ್ ಪ್ರಾಂತದಲ್ಲಿ ಕನ್ನಡ ಭಾಷೆಯ ಮತ್ತು ಇಂದಿನ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸೇರಿಸಿದ್ದು ಒಂದು ವೈಚಿತ್ರವೇ ಆಗಿದೆ. ಬೀದರ, ಗುಲಬರ್ಗಾ ಮತ್ತು ರಾಯಚೂರುಗಳು ತೆಲುಗು ಭಾಷಿಕ ನಿಜಾಂ ಆಡಳಿತದಲ್ಲಿದ್ದವು. ಕೊಡಗು ತನ್ನದೇ ಆದ ಸ್ವಾತಂತ್ರ್ಯವನ್ನು ಮೆರೆಯಿತು. ಮೈಸೂರು ರಾಜ್ಯ ಒಡೆಯರ ಮನೆತನದ ಆಳ್ವಿಕೆಯಲ್ಲಿತ್ತು.

ಹೀಗೆ ನಾಲ್ಕಾರು ದಿಕ್ಕುಗಳಲ್ಲಿ ಹರಿದು ಹಂಚಿಹೋದ ಕನ್ನಡ ನಾಡನ್ನು ಒಗ್ಗೂಡಿಸುವ ಪ್ರಯತ್ನ ಹುಟ್ಟಿಕೊಂಡದ್ದು ಮೊದಲು ಉತ್ತರ ಕರ್ನಾಟಕದಲ್ಲಿ. ೧೮೯೦ ರಲ್ಲಿ ಧಾರವಾಡದಲ್ಲಿ ಸ್ಥಾಪಿತವಾದ ಕರ್ನಾಟಕ ವಿದ್ಯಾವರ್ಧಕ ಸಂಘ ಈ ಕಾರ್ಯವನ್ನು ಆರಂಭಿಸಿತು. ಅದು ಬೇರೆ–ಬೇರೆ ಭಾಗಗಳಲ್ಲಿ ಒಡೆದು ಹೋದ ಕನ್ನಡಿಗರನ್ನು ಒಗ್ಗೂಡಿಸಲು ತನ್ನದೇ ಆದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಗಣ್ಯ ನಾಯಕರಾದ ಆಲೂರು ವೆಂಟಕರಾವ್, ಮುದವೀಡು ಕೃಷ್ಣರಾವ್, ಗದಿಗಯ್ಯ ಹೊನ್ನಾಪುರಮಠ ಮತ್ತು ಕಡಪಾ ರಾಘವೇಂದ್ರರಾಯರು ಕರ್ನಾಟಕದ ಏಕೀಕರಣಕ್ಕಾಗಿ ಆಂದೋಲನವನ್ನು ಆರಂಭಿಸಿದರು. ಅವರ ಚಳುವಳಿಯಲ್ಲಿ ಸಹಕರಿಸಿದ ಸಂಘಟನೆಗಳಲ್ಲಿ ಹುಬ್ಬಳ್ಳಿಯ ಕರ್ನಾಟಕ ಏಕೀಕರಣ ಸಮೀತಿ, ಬಾಗಲಕೋಟೆಯ ವ್ಯಾಪಾರ ಮಂಡಳಿ, ಸೊಲ್ಲಾಪುರ ಮತ್ತು ಕೊಲ್ಲಾಪುರದ ಕರ್ನಾಟಕ ಸಂಘ, ಮುಂಬೈಯ ಅಖಿಲ ಭಾರತ ಸೇವಾ ಸಮಿತಿ, ಮೊಗವೀರ ವ್ಯವಸ್ಥಾಪಕ ಮಂಡಳಿಗಳು ಪ್ರಮುಖವಾಗಿವೆ. ಕನ್ನಡ ಮಾತನಾಡುವ ಬೀದರ, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಯ ಜನ ತಮ್ಮದೇ ಆದ ರೀತಿಯಲ್ಲಿ ಕರ್ನಾಟಕದ ಏಕೀಕರಣಕ್ಕಾಗಿ ಶ್ರಮಿಸಿದ್ದಾರೆ.

ಆಶ್ಚರ್ಯವೆಂದರೆ ಅಂದಿನ ಕಾಲದಲ್ಲಿ ಉತ್ತರದ ನಾಲ್ಕು ಕನ್ನಡದ ಜಿಲ್ಲೆಗಳಾದ ಬಿಜಾಪುರ, ಬೆಳಗಾಂವ, ಧಾರವಾಡ ಮತ್ತು ಕಾರವಾರಗಳಿಗೆ ಅಥವಾ ಆ ಪ್ರದೇಶಕ್ಕೆ ದಕ್ಷಿಣದ ಮರಾಠಾ ಪ್ರದೇಶ ಎಂಬ ತಪ್ಪು ಹೆಸರು ಪ್ರಾಪ್ತವಾಗಿತ್ತು. ಇದು ಬ್ರಿಟೀಷರ ಅಜ್ಞಾನದಿಂದಾಗಿ ಅಲ್ಲದೇ ಮಹಾರಾಷ್ಟ್ರದ ಪೇಶ್ವೆಗಳ ಆಡಳಿತದಿಂದಾಗಿ ಉಂಟಾದ ಸನ್ನಿವೇಶವಾಗಿತ್ತು.

ಬಿಜಾಪುರ, ಬೆಳಗಾಂವ, ಧಾರವಾಡ ಮತ್ತು ಕಾರವಾರ ಜಿಲ್ಲೆಗಳು ಮುಂಬೈ ಪ್ರಾಂತದಲ್ಲಿದ್ದವು. ಆಡಳಿತದ ಅನುಕೂಲಕ್ಕಾಗಿ ಈ ಪ್ರಾಂತದಲ್ಲಿ ಹಲವಾರು ವಿಭಾಗಗಳನ್ನು ಮಾಡಿ ಪ್ರತಿಯೊಂದಕ್ಕೆ ಓರ್ವ ಆಯುಕ್ತರನ್ನು ನೇಮಿಸಿದ್ದರು. ಅಂತಹ ಪ್ರತಿಯೊಂದು ವಿಭಾಗದಲ್ಲಿ ಹಲವಾರು ಜಿಲ್ಲೆಗಳಿರುತ್ತಿದ್ದವು. ಆ ಆಯುಕ್ತರು ಜಿಲ್ಲೆ ಮತ್ತು ಸರಕಾರದ ನಡುವಿನ ಆಡಳಿತದ ಕೊಂಡಿಯಂತಿದ್ದರು. ಅಂತಹದರಲ್ಲಿ ಬಿಜಾಪುರ ೧೧, ಬೆಳಗಾಂವ ೧೦, ಧಾರವಾಡ ೧೬ ಮತ್ತು ಕಾರವಾರ ೧೧ ತಾಲೂಕುಗಳನ್ನು ಹೊಂದಿದ್ದವು.

ವೀರ ರಾಣಿ ಕಿತ್ತೂರ ಚನ್ನಮ್ಮ ಹಚ್ಚಿದ ಸ್ವಾತಂತ್ರ್ಯ ಚಳುವಳಿಯ ಬೆಂಕಿ ಅಷ್ಟು ಬೇಗ ಆರಿಹೋಗುವಂತಹು ದಾಗಿರಲಿಲ್ಲ. ಅವಳ ಸೈನಿಕ ಸಂಗೊಳ್ಳಿ ರಾಯಣ್ಣ ೧೮೨೯ ರಲ್ಲಿ ಒಂದು ಬಂಡಾಯವನ್ನು ಎಸಗಿದ. ಆತ ದತ್ತು ಪುತ್ರ ಶಿವಲಿಂಗಪ್ಪನನ್ನು ಕಿತ್ತೂರು ಸಂಸ್ಥಾನದ ರಾಜನನ್ನಾಗಿಸಲು ಹೋರಾಡುತ್ತಿದ್ದ. ಈ ದಿಸೆಯಲ್ಲಿ ರಾಯಣ್ಣನು ಸುರಪುರದ ನಾಯಕರ ಸಹಾಯ ಪಡೆಯಲು ಪ್ರಯತ್ನಿಸಿದನೆಂದು ಹೇಳಲಾಗಿದೆ. ಆತ ತನ್ನ ಉದ್ದೇಶ ಸಾಧನೆಗಾಗಿ ಗೆರಿಲ್ಲಾ ಯುದ್ಧ ನಡೆಸಿ ಒಮ್ಮೆ ಬೀಡಿಯ ಮಾಮಲೆದಾರನ ಕಚೇರಿಯನ್ನು ಸುಟ್ಟು ಹಾಕಿದನು. ತದನಂತರ ಆತನ ಕೆಲವು ಗೆಳೆಯರು ಆತನನ್ನು ಬ್ರಿಟೀಷರಿಗೆ ಹಿಡಿದು ಕೊಟ್ಟದ್ದು ಬೇರೆ ವಿಷಯ. ಆತನನ್ನು ನಂದಗಡದಲ್ಲಿ ೧೮೩೦ ಡಿಸೆಂಬರ ೨೮ನೇ ತಾರೀಖಿನಂದು ಗಲ್ಲಿಗೇರಿಸಲಾಯಿತು. ಅಷ್ಟೇ ಏಕೆ ಬ್ರಿಟೀಷರು ಶಿವಲಿಂಗಪ್ಪನನ್ನು ೧೮೩೩ರಲ್ಲಿ ಬಂಧಿಸಿ ದೊಡವಾಡದ ಸೆರೆಯಲ್ಲಿಟ್ಟರು. ಆಮೇಲೆ ನಡೆದ ಶಂಕ್ರಣ್ಣನ ಪ್ರತಿಭಟನೆ ವ್ಯರ್ಥವಾಯಿತು. ೧೮೩೯ರಲ್ಲಿ ನಾಗಪ್ಪ, ಗಜಪತಿ ಶೈವಶೆಟ್ಟಿ ಮತ್ತು ರುದ್ರಪ್ಪ ಕೊಟಗಿಯವರು ಬಂಡಾಯ ಎದ್ದರು. ೧೮೩೭ ರಲ್ಲಿ ರಾಯಣ್ಣನಿಗೆ ಮೋಸ ಮಾಡಿದ ಕೋದನಪುರ ಲಿಂಗನಗೌಡನನ್ನು ಕೊಂದುಹಾಕಿದ ಜನ ಮತ್ತೆ ಪ್ರತಿಭಟನೆಯನ್ನು ಮಾಡತೊಡಗಿದರು. ಇವೆಲ್ಲ ಕಿತ್ತೂರ ಜನತೆ ಸ್ವಾತಂತ್ರ್ಯಕ್ಕಾಗಿ ಮಾಡಿದ ಹೋರಾಟವಾಗಿದೆ. ೧೯೪೭ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿಯೂ ಕಿತ್ತೂರಿನ ಜನತೆ ಸಕ್ರಿಯವಾಗಿ ಪಾಲ್ಗೊಂಡು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವಿಷಯ ತಿಳಿದುಬರುತ್ತದೆ.

ಕಿತ್ತೂರಿನ ಚರಿತ್ರೆಯ ಬಗ್ಗೆ ಹಲವಾರು ಕಥೆಗಳಿವೆ. ಈ ಪದ ಕಿಟ್ಟು + ಊರು=ಕಿತ್ತೂರು ಎಂಬುದಾಗಿದೆ. ಬ್ರಿಟೀಷರು ಇದನ್ನು ಕಿಟ್ಟೂರು ಎಂಬು ಕರೆಯುತ್ತಿದ್ದರು. ಆದರೆ ಕಿತ್ತೂರು ಎಂಬುದೇ ಸರಿಯಾದ ಪದ, ಈ ಪದದ ಅರ್ಥ ಸಣ್ಣ ಹಳ್ಳಿ ಎಂದು ತಿಳಿಯಲಾಗಿತ್ತು. ಆದರೆ ಕಿತ್ತೂರು ಹಂತ–ಹಂತವಾಗಿ ಬೆಳೆಯಿತು. ಕಿತ್ತೂರಿನ ಬೆಳವಣಿಗೆಗೆ ಕಾರಣೀಭೂತವಾದ ಅಂಶಗಳೆಂದರೆ ಕಲ್ಮೇಶ್ವರ ದೇವಸ್ಥಾನ, ಹೊಂಡದಹಳ್ಳಿ ಹಾಗೂ ಅಲ್ಲಿಯ ಆಲದ ಮರವಾಗಿದೆ ಎಂದು ಇತಿಹಾಸದಿಂದ ಗೊತ್ತಾಗುತ್ತದೆ.

ಕೆಲವು ಕಾಲ ಕಿತ್ತೂರನ್ನು "ಗೀಜಗನ ಹಳ್ಳಿ" ಎಂದು ಕರೆಯುತ್ತಿದ್ದರು. ಶ್ರೀ ಕಲ್ಮೇಶ್ವರ ದೇವಸ್ಥಾನದಲ್ಲಿ ಶಿವಶಕ್ತಿಯರು ಪೂಜೆಗೊಳ್ಳುತ್ತಿದ್ದರು. ಕೆಲವು ಕಾಲ ಈ ಊರಿಗೆ ಆಲನಕೊಳ್ಳದ ಭೂಮಿ ಎಂದು ಕರೆದಿದ್ದಾರೆ. ಆಲೂರು ದೇವಸ್ಥಾನದ ಹತ್ತಿರ ಒಂದು ಆಲದ ಮರವಿದ್ದು ಅಲ್ಲಿ ಇಬ್ಬರು ಆಚಾರಿಗಳು ಇದ್ದರೆಂದು ಹೇಳುತ್ತಾರೆ. ಅವರು ಇಲ್ಲಿ ಕೃಷಿಯನ್ನು ಮಾಡುತ್ತಿದ್ದರು. ವರ್ಷದ ಹಲವಾರು ಸಂದರ್ಭಗಳಲ್ಲಿ ಜನರು ತಮ್ಮ ಪೂರ್ವಿಕರ ಹೆಸರಿನಲ್ಲಿ ಇಲ್ಲವೇ ಸ್ಮರಣೆಗಾಗಿ ಜಾತ್ರೆಗಳನ್ನು ನಡೆಸುತ್ತಿದ್ದರು. ಅವೆಲ್ಲ ಹಿಂದೂ ಆಚರಣೆಯಾಗಿತ್ತು. ಭಕ್ತರು ಆಚಾರ್ಯರ ಉಪದೇಶಗಳನ್ನು ಪಾಲಿಸುತ್ತಿದ್ದರು. ೧೧೪೭ರಲ್ಲಿ ಬರೆಯಿಸಲ್ಪಟ್ಟ ಒಂದು ಕದಂಬರ ಶಿಲಾಶಾಸನದಲ್ಲಿ ಕಿತ್ತೂರಿನ ಹೆಸರು ನಮೂದಿತವಾಗಿದೆ. ಒಂದು ಕಾಲದಲ್ಲಿ ರಾಜಕೀಯ ಕಾರ್ಯಸ್ಥಾನದ ಕೇಂದ್ರವಾಗಿದ್ದ ಬೈಲಹೊಂಗಲದಿಂದ ಕಿತ್ತೂರ ೨೬ ಕಿ.ಮೀ. ದೂರದಲ್ಲಿದೆ. ಕಿತ್ತೂರ

ದೇಸಾಯಿಯವರು ಆ ಪ್ರದೇಶವನ್ನು ಆಳಿದವರು. ೧೧೮೮ರಲ್ಲಿ ಬನವಾಸಿಯ ಕದಂಬರು ಬರೆಯಿಸಿದ ಶಿಲಾಶಾಸನವೊಂದು ಸ್ಥಳೀಯ ಬಸವಣ್ಣನ ದೇವಸ್ಥಾನದಲ್ಲಿದ್ದು ಅದರಲ್ಲಿ ಕಿತ್ತೂರಿಗೆ ಮತ್ತು ಗೋವೆಯ ಕದಂಬರಿಗೆ ಅನುದಾನ ನೀಡಿದ್ದನ್ನು ಹಾಗೂ ಆ ಕಾಲಕ್ಕೆ ಹತ್ತಿರದ ಹಳ್ಳಿ ದೇಗಾಂವ ಒಂದು ಅಗ್ರಹಾರವಾಗಿದ್ದನ್ನು ನಮೂದಿಸಲಾಗಿದೆ. ಆಗ ಈ ಹಳ್ಳಿಗೆ ಗೀಜಗನ ಹಳ್ಳಿ ಎಂದು ಹೆಸರಿತ್ತು. ನಿಜ ಹೇಳಬೇಕೆಂದರೆ ಕಿತ್ತೂರಿನ ವೈಭವವು ಮಲ್ಲಸರ್ಜ ದೇಸಾಯಿ ಕಾಲದಲ್ಲಿ ಉತ್ತುಂಗ ಶಿಖರಕ್ಕೇರಿತ್ತು. ನಂತರ ೧೭೭೯ರಲ್ಲಿ ಪರಶುರಾಮ ಭಾವು ಮಲ್ಲಸರ್ಜನನ್ನು ಬಂಧಿಸಿದನು. ೧೭೮೫ರಲ್ಲಿ ಟಿಪ್ಪು ಕೂಡ ಈ ಸಂಸ್ಥಾನವನ್ನು ಆಕ್ರಮಿಸಿದ. ಕಿತ್ತೂರಿನ ಮುಖ್ಯ ಆಕರ್ಷಣೆ ಎಂದರೆ ಅಲ್ಲಿನ ಕೋಟೆ ಎಂದೇ ಹೇಳಬೇಕು. ಅಲ್ಲಿ ಕೋಟೆಯಲ್ಲದೆ ಮಾರುತಿ ದೇವಾಲಯ, ನಾಥಪಂಥಿ ಮಠ, ಕಲ್ಮೇಶ್ವರ ಮಠ, ದ್ಯಾಮವ್ವ ಮತ್ತು ಬಸವಣ್ಣನ ಗುಡಿಗಳಿವೆ. ಬಸವಣ್ಣನ ಗುಡಿಯಲ್ಲೊಂದು ಶಿಲಾಶಾಸನವಿದೆ. ಈ ಊರಲ್ಲಿ ವೀರಶೈವ ಧರ್ಮದ ಇನ್ನೂ ಹಲವಾರು ಮಠಗಳಿವೆ. ಪೀರ್‌ಮಸ್ತಾನ ಸಾಹೇಬ ದರ್ಗಾ ಮತ್ತು ಮಸೀದಿಗಳು ಅಲ್ಲಿವೆ. ಈ ಊರಿನ ಖ್ಯಾತ ಶರಣರೆಂದರೆ, ಗರಗದ ಮಡಿವಾಳಪ್ಪ ಮತ್ತು ಮಾಧ್ವ ತತ್ವದ ವಿದ್ವಾಂಸ ಹುಚ್ಚಾಚಾರ್ಯರು. ಕರ್ನಾಟಕ ರಾಜ್ಯದ ಪ್ರಾಚ್ಯ ಮತ್ತು ಐತಿಹಾಸಿಕ ವಸ್ತು ಸಂಗ್ರಹಾಲಯ ವಿಭಾಗವು ಕಿತ್ತೂರಿನ ಐತಿಹಾಸಿಕ ಸಂಗ್ರಹಾಲಯವನ್ನು ನೋಡಿಕೊಳ್ಳುತ್ತದೆ. ಅಲ್ಲಿ ಕಿತ್ತೂರ ಸಂಸ್ಥಾನದ ಆಯುಧಗಳು, ಕಬ್ಬಿಣದ ಅಂಗಿ ಗುರಾಣಿಗಳು, ಕಟ್ಟಿಗೆಯ ಕೆತ್ತನೆಯ ಬಾಗಿಲು, ಕಿಟಕಿಗಳು, ಶಿಲಾಶಾಸನಗಳು, ವೀರಗಲ್ಲುಗಳು, ಕದ್ರೊಳ್ಳಿಯ ಸೂರ್ಯದೇವರು, ಶೀಗೇಹಳ್ಳಿಯ ವಿಷ್ಣು, ಮನೋಳಿಯ ಸುಬ್ರಮ್ಮಣ್ಯ, ಹೀರೆಬಾಗೆವಾಡಿಯ ದುರ್ಗಾ ಮತ್ತಿತರ ಶಿಲಾ ಮೂರ್ತಿಗಳಿವೆ. ಅಲ್ಲಿ ಆಧುನಿಕ ಕಾಲದ ಕೆಲವು ಚಿತ್ರಗಳೂ ಇವೆ. ಪ್ರವಾಸಿಗರು ಕಿತ್ತೂರ ಚನ್ನಮ್ಮ ವಸತಿ ಶಾಲೆಯನ್ನು, ಸಮೀಪದ ಐತಿಹಾಸಿಕ ಸ್ಥಳಗಳಾದ ಅವರ್ಧಿ, ದೇಗಾಂವ ಮತ್ತು ದೇಗಾಲೊಳ್ಳಿಗಳಿಗೆ ಭೇಟಿ ನೀಡಬಹುದು. ಧಾರವಾಡದ ಹತ್ತಿರದ ಅಮ್ಮಿನಬಾವಿಯ ಹಿರೇಮಠದಲ್ಲಿ ಕಿತ್ತೂರ ಅರಮನೆಯ ಕೆಲವು ಕಟ್ಟಿಗೆಯ ಬಾಗಿಲುಗಳಿವೆ. ಕಿತ್ತೂರ ರಾಣಿ ಚನ್ನಮ್ಮನ ಜನ್ಮ ಸ್ಥಳ ಪುಣೆ-ಬೆಂಗಳೂರು ಹೆದ್ದಾರಿ ಮೇಲಿನ ಕಾಕತಿ ಎಂಬ ಹಳ್ಳಿ. ೧೨೫೦ ರ ಗೋಕಾಕ ತಾಲೂಕಿನ ಮಮದಾಪುರದ ಯಾದವ ಕನ್ನರ ದೇವನ ದಾಖಲೆಯೊಂದರಲ್ಲಿ ಈ ಸ್ಥಳಕ್ಕೆ ಕಾಕತಿಯಬಾದ ಎಂಬ ಹೆಸರಿದೆ. ವಾರಂಗಲ್ಲಿನ ಕಾಕತಿಯರು ಈ ಸ್ಥಳದಿಂದ ಹೋಗಿದ್ದಾರೆಂಬ ಅಭಿಪ್ರಾಯವಿದೆ. ಕಾಕತಿಯಲ್ಲಿ ಇತ್ತೀಚಿಗೆ ಕಟ್ಟಿದ ಮಸೀದಿ ಇದೆ. ಅಲ್ಲಿ ಸಿದ್ಧೇಶ್ವರ, ಕಲ್ಮೇಶ್ವರ, ಲಕ್ಷ್ಮೀ ಮತ್ತು ಮಾರುತಿ ದೇವಸ್ಥಾನಗಳ ಪುನರುಜ್ಜೀವನ ಮಾಡಲಾಗಿದೆ. ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಗುಡ್ಡದ ಮೇಲೊಂದು ದುರ್ಗವಿದ್ದು ಅಲ್ಲಿಯ ವೀಕ್ಷಣಾ ಗೋಪುರವನ್ನು ಯಾರಾದರೂ ನೋಡಬಹುದು.

ಕಿತ್ತೂರು ಕರ್ನಾಟದ ಒಂದು ಪಟ್ಟಣ ಅದೊಂದು ಫಲವತ್ತಾದ ಭೂ ಪ್ರದೇಶವಾಗಿದೆ. ಕಾಲದಿಂದ ಕಾಲಕ್ಕೆ ಸಂಸ್ಥಾನದ ಗಡಿ ರೇಖೆಗಳು ಬದಲಾಗುತ್ತಿದ್ದು ೧೮೧೬ರ ವೇಳೆಗೆ ಅದು ಬೆಳಗಾಂವ, ಧಾರವಾಡ ಮತ್ತು ಕಾರವಾರ ಭೂ ಪ್ರದೇಶವನ್ನು ಒಳಗೊಂಡಿತ್ತು. ಅದರಲ್ಲಿ ಆಡಳಿತಕ್ಕೆ ಅನುಕೂಲವಾಗುವಂತೆ ೧೪ ವಿಭಾಗಗಳಿದ್ದವು. ಕಿತ್ತೂರಿನ ಪಶ್ಚಿಮ

ಭಾಗವು ಗುಡ್ಡಗಾಡು ಪ್ರದೇಶ ಮತ್ತು ದಟ್ಟವಾದ ಅರಣ್ಯದಿಂದಾವೃತವಾಗಿದೆ. ಖಾನಾಪುರದ ಹತ್ತಿರ ಕೆಲವು ಬೆಟ್ಟ ಪ್ರದೇಶಗಳು ಬಹು ಕಡಿದಾದುದಾಗಿದೆ. ಅಂದಿನ ಕಿತ್ತೂರಿನ ಉತ್ತರದ ಗಡಿಯು ಬೆಳಗಾಂವದಿಂದ ಸುಮಾರು ೧೨ ಮೈಲುಗಳ ಅಂತರದಲ್ಲಿದ್ದರೆ, ಪೂರ್ವದ ಹಾಗೂ ದಕ್ಷಿಣದ ಗಡಿಗಳು ಮುಕ್ತ ಹಳ್ಳಿಗಾಡಾಗಿದ್ದು ಸಹ್ಯಾದ್ರಿ ಪರ್ವತ ಪ್ರದೇಶದಿಂದ ಸುಮಾರು ೪೦ ಮೈಲುಗಳಾಚೆಗಿವೆ.

೧೮೧೬ ರ ವೇಳಗೆ ಕಿತ್ತೂರಿಂದ ಐದು ಮುಖ್ಯ ರಸ್ತೆಗಳು ನಿರ್ಮಾಣಗೊಂಡಿದ್ದವು. ಅದರಲ್ಲಿಯ ಎರಡು ರಸ್ತೆಗಳು ಉತ್ತರದ ಪುಣೆಯ ದಿಕ್ಕಿನಲ್ಲಿರುವ ಒಂದು ಈಶಾನ್ಯ ದಿಕ್ಕಿನ ಕಡೆಗೆ ಸೋಲಾಪುರ ದಿಕ್ಕಿನಲ್ಲಿತ್ತು. ಒಂದು ಆಗ್ನೇಯ ದಿಕ್ಕಿನ ಧಾರವಾಡದ ಕಡೆಗೆ ಹರಡಿತ್ತು ಹಾಗು ಒಂದು ರಸ್ತೆ ಗೋವೆಯ ಕಡೆಗಿತ್ತು. ಅಂದು ಸಂಪರ್ಕ ವ್ಯವಸ್ಥೆ ಕೆಟ್ಟದಾಗಿದ್ದರೂ ಕಿತ್ತೂರ ಸಂಸ್ಥಾನದ ವ್ಯಾಪಾರ ಉದ್ದಿಮೆಗಳು ಪ್ರಗತಿಯಲ್ಲಿದ್ದವು. ಪಶ್ಚಿಮ ಘಟ್ಟದ ಪಟ್ಟಣಗಳೊಂದಿಗೆ ಜನರು ಕೃಷಿ ಉತ್ಪನ್ನಗಳ ವ್ಯಾಪಾರ ವಹಿವಾಟನ್ನು ಹೊಂದಿದ್ದು ಕಿತ್ತೂರ ಸಮೃದ್ಧಿಯ ಸಂಕೇತವಾಗಿತ್ತು.

೧೭೯೩ರ ವೇಳೆಗೆ ೨೮೫ ಹಳ್ಳಿಗಳನ್ನು ಹೊಂದಿದ ಕಿತ್ತೂರ ಸಂಸ್ಥಾನವು ಅದರಲ್ಲಿಯ ೯೧ ಹಳ್ಳಿಗಳಿಗೆ ಇನಾಮುಗಳನ್ನು ೧೯೪ ಹಳ್ಳಿಗಳಿಗೆ "ಖಾಲ್ಸಾ" ಭೂಮಿಗಳನ್ನು ನೀಡಿತ್ತು. ಅದರ ಅಂದಿನ ಒಟ್ಟು ವರಮಾನ ೪,೧೦,೭೮೬ ರೂಪಾಯಿಯಾಗಿತ್ತು. ೧೭೯೩ರಲ್ಲಿ ಅದರ ೧೮.೧ ಪ್ರತಿಶತ ಆದಾಯವು ಕಂದಾಯದ ಮೂಲಕ ಬರುತ್ತಿತ್ತೆಂಬುದು ಗಮನಾರ್ಹ. ಉಳಿದ ೧೮.೯ ಪ್ರತಿಶತ ಆದಾಯವು ಇತರ ಮೂಲಗಳಿಂದ ಬರುತ್ತಿತ್ತು. ಕೆಲವು ಸಲ ಹೆಚ್ಚಿನ ಸುಂಕವನ್ನು ಸಂಗ್ರಹಿಸಲಾಗುತ್ತಿತ್ತು. ಅಂದರೆ ಭೂ-ಕಂದಾಯವೇ ಆ ರಾಜ್ಯದ ಮುಖ್ಯ ವರಮಾನವಾಗಿತ್ತು. ಆ ಸಂಸ್ಥಾನದ ಭೂಮಿ ಫಲವತ್ತಾಗಿದ್ದು ಅಲ್ಲಿ ಮಳೆ-ಬೆಳೆ ಚೆನ್ನಾಗಿತ್ತು. ಆದರೂ ಆಗಾಗ ಕ್ಷಾಮ ಪರಿಸ್ಥಿತಿ ಉಂಟಾಗುತ್ತಿತ್ತು. ೧೭೮೭ರ ಅಗಸ್ಟ ತಿಂಗಳಲ್ಲಿ ಉಂಟಾದ ಬರಗಾಲ ಬಹಳ ಘೋರವಾಗಿತ್ತು. ಜೀವನಾವಶ್ಯಕವಾದ ಜೋಳವು ಒಂದು ರೂಪಾಯಿಗೆ ೮-೯ ಸೇರಿನಂತೆ ಮಾರಾಟವಾಗಿತ್ತು. ಅನೇಕ ಬಡವರು ಸಾಯುವ ಸ್ಥಿತಿಯಲ್ಲಿದ್ದರು.

ಕಿತ್ತೂರ ಹಲವಾರು ಮಹತ್ವದ ನಗರ ಪಟ್ಟಣಗಳೊಂದಿಗೆ ಸಂಪರ್ಕ ಹೊಂದಿತ್ತು. ಅಂದು ೬,೬೧೮ ರೂ.ಸುಂಕವನ್ನು ಆಮದು ಮತ್ತು ರಫ್ತಿನಿಂದ ಪಡೆಯುತ್ತಿದ್ದರೆಂದರೆ, ಆ ಸಂಸ್ಥಾನದ ವಹಿವಾಟು ಚನ್ನಾಗಿತ್ತೆಂದು ತಿಳಿಯಬೇಕು. ಆ ಪ್ರದೇಶದಲ್ಲಿ ಎರಡು ಸಲ ಸುಂಕ ವಸೂಲಾತಿ ಮಾಡುವ ವ್ಯವಸ್ಥೆ ಇತ್ತೆಂಬುದು ಈ ಮೂಲಕ ತಿಳಿದುಬರುತ್ತದೆ.

ಒಂದು ದೃಷ್ಟಿಯಿಂದ ಕರ್ನಾಟಕವು ಬಹಳ ಹಿಂದಿನ ಕಾಲದಿಂದಲೂ ಸ್ವಾತಂತ್ರ್ಯ ಹೋರಾಟಗಾರರ ಜನ್ಮ ಭೂಮಿಯಾಗಿತ್ತು. ೧೮ನೆಯ ಶತಮಾನದ ಉತ್ತರಾರ್ಧದಲ್ಲಿ ಬ್ರಿಟೀಷ ಸಾಮ್ರಾಜ್ಯ ಭಾರತವನ್ನು ಆಕ್ರಮಿಸಿದಾಗ ಈ ಭಾಗದ ಜನರು ಪರಕೀಯರಾದ ಇಂಗ್ಲೀಷರ ಆಳ್ವಿಕೆಯನ್ನು ಮೆಚ್ಚುತ್ತಿರಲಿಲ್ಲ. ಅವರು ಬ್ರಿಟೀಷರ ವಿರುದ್ಧ ಬಂಡೇಳಲು ನಿರ್ಧರಿಸಿದರು. ಅಂದು ಅಂತಹ ಒಂದು "ಆಯುಧಗಳ ಬಂಡಾಯ" ನಡೆಯಿತು.

ಅಂತಹವರಲ್ಲಿ ಕಿತ್ತೂರ ಚನ್ನಮ್ಮ, ಕೆಳದಿಯ ಚನ್ನಮ್ಮ, ಸುರಪುರದ ವೆಂಕಪ್ಪ ನಾಯಕ, ಮುಂಡರಗಿಯ ಭೀಮರಾವ, ನರಗುಂದದ ಬಾಬಾ ಸಾಹೇಬರು ಪ್ರಮುಖರಾಗಿದ್ದು ಬ್ರಿಟೀಷರ ವಿರುದ್ಧ ತಮ್ಮ ಜೀವಮಾನದುದ್ದಕ್ಕೂ ಹೋರಾಡಿದರು.

೧೮ನೆಯ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲೀಷರು ಮೊಗಲ ಬಾದಷಹ ಔರಂಗಜೇಬನ ಮಾಂಡಲೀಕರೆಂಬಂತೆ ಭಾರತದ ತುಂಬೆಲ್ಲಾ ವ್ಯಾಪಿಸಿದರು. ದುರ್ದೈವವೆಂದರೆ ಸ್ಥಳೀಯ ಅರಸರು ಅವರ ಗುಪ್ತ ನೀತಿಗಳನ್ನಾಗಲಿ ಶ್ರೇಷ್ಠ ಮಟ್ಟದ ಯುದ್ಧ ಕಥೆಗಳನ್ನಾಗಲಿ ಧೂರ್ತ ರಾಜಕೀಯದ ದುಷ್ಪರಿಣಾಮಗಳನ್ನಾಗಲೀ ಅರಿಯಲಿಲ್ಲ. ಆದರೆ ಹೈದರಲಿ ಹಾಗು ಟಿಪ್ಪೂವಿನ ಶೌರ್ಯದ ಪ್ರತಿಭಟನೆ ಮೈಸೂರು ಸಂಸ್ಥಾನವನ್ನು ಮಾತ್ರ ಸಂರಕ್ಷಿಸಿತು.

ಮೈಸೂರು ಅರಸರಿಗೆ ಮೋಷಮಾಡಿ ಅವರನ್ನು ಹೈದರಲಿ ಜಯಸಿದನಾದರೂ ಆತ ಬ್ರಿಟೀಷರ ವಿರುದ್ಧ ಬಹಳ ಕಾಲ ಹೋರಾಟ ಮಾಡಲಿಲ್ಲ. ಒಂದು ಕಾಲಕ್ಕೆ ಆತ ಅವರೊಂದಿಗೆ ಗೆಳೆತನವನ್ನು ಸಾಧಿಸಿದ್ದನೇನೊ ಸರಿ, ಭಾರತದಲ್ಲಿ ಇಂಗ್ಲೀಷರ ಸಾಮ್ರಾಜ್ಯ ಶಾಹಿ ಧೋರಣೆಗಳು ಆತನಿಗೆ ತಿಳಿದದ್ದು ನಂತರವೆ. ಅವರ ದುಷ್ಟ ಸಾಮ್ರಾಜ್ಯಶಾಹಿ ಯೋಜನೆಗಳನ್ನು ನಿರ್ನಾಮ ಮಾಡಲು ಹವಣಿಸಿದ ಆತ ಹೈದರಾಬಾದಿನ ನಿಜಾಮನೊಂದಿಗೆ, ಮರಾಠರ ಪೇಶ್ವೆಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ನಿರ್ಧರಿಸಿದನು. ಆದರೆ ಬ್ರಿಟೀಷರು ಆಗಲೇ ಆ ಎರಡೂ ಶಕ್ತಿಗಳನ್ನು ತಮ್ಮೆಡೆಗೆ ಬರಮಾಡಿಕೊಂಡಿದ್ದರು. ಹೈದರಲಿಯೂ ಕೂಡ ಬಹುಬೇಗ ಕಾಲವಾದನು. ನಂತರ ಆತನ ಮಗ ಟಿಪ್ಪು ಸುಲ್ತಾನನು ಬ್ರಿಟೀಷರ ವಿರುದ್ಧದ ಯುದ್ಧವನ್ನು ಮುಂದುವರೆಸಿದನು. ೧೭೯೨ರಲ್ಲಿ ಆತ ಬ್ರಿಟೀಷರನ್ನು ಹೊರಹಾಕುವ ನಿರ್ಧಾರದಿಂದ ಕದನಕ್ಕೆ ಎಳೆದ. ಆದರೆ ಯುದ್ಧದಲ್ಲಿ ಸೋತು ತೊಂದರೆಗೊಳಗಾದ. ೧೭೯೯ರಲ್ಲಿ ಜರುಗಿದ ೪ನೆಯ ಮೈಸೂರು ಯುದ್ಧದಲ್ಲಿ ಆತ ವೀರ ಮರಣವನ್ನಪ್ಪಿದ. ಹೀಗೆ ತಂದೆ-ಮಕ್ಕಳಿಬ್ಬರೂ ಬ್ರಿಟೀಷರ ವಿರುದ್ಧ ಹೋರಾಡಿ ಮಡಿದರು.

ಕೇವಲ ಮೈಸೂರಿನಲ್ಲಿ ಮಾತ್ರವಲ್ಲ ಕರ್ನಾಟಕದ ಇತರೆಡೆಗಳಲ್ಲೂ ಬ್ರಿಟೀಷರ ವಿರುದ್ಧ ಪ್ರತಿಭಟನೆಗಳು ವ್ಯಕ್ತವಾಗುತ್ತಿದ್ದವು. ಶಿವಮೊಗ್ಗ ಜಿಲ್ಲೆಯ ಚನ್ನಗಿರಿಯ ಮರಾಠರ ಹುಲಿ ಎಂಬ ಗೌರವಕ್ಕೆ ಪಾತ್ರನಾದ ಧೋಂಡೋಜಿ ವಾಘನು ಓರ್ವ ಕ್ರಾಂತಿಕಾರಿಯಾಗಿದ್ದನು. ಆತ ಮಿರಜದ ಸಂಸ್ಥಾನಿಕ ಪಟವರ್ಧನ, ಕೊಲ್ಲಾಪುರದ ಚತ್ರಪತಿ ಹಾಗೂ ಶ್ರೀರಂಗ ಪಟ್ಟಣದ ಟಿಪ್ಪುವಿನ ಕೈಯಲ್ಲಿ ಪಳಗಿದವನು. ಟಿಪ್ಪುವಿನ ಮರಣದ ನಂತರ ಆತ ಬಿದನೂರ ಮತ್ತು ಶಿಕಾರಿಪುರದ ಸೇನಾದಳವನ್ನು ಹಿಡಿದುಕೊಂಡು ಬ್ರಿಟೀಷರ ವಿರುದ್ಧದ ತನ್ನ ಕದನವನ್ನು ಮುಂದುವರೆಸಿದ. ಆತ ತಮಿಳುನಾಡಿನ ಗೋಪಾಲ ನಾಯಕ, ಮಲಬಾರಿನ ಕೇರಳ ವರ್ಮಾ ಹಾಗೂ ಮಾಹೆಯ ಫ್ರೆಂಚರ ಸಹಾಯ ಪಡೆದನು. ಆದರೆ ಬ್ರಿಟೀಷರು ಲೊಂಡಾದಲ್ಲಿ ಜರುಗಿದ ಒಂದು ಕದನದಲ್ಲಿ ವಾಘನು ಗೋಖಲೆಯನ್ನು ಕೊಂದುಹಾಕಿದನು. ಕೊನೆಗೆ ಬ್ರಿಟೀಷ ನಾಯಕ ಲಾರ್ಡ ವೆಲ್ಲೆಸ್ಲಿಯು ಡೊಣಗಲನಲ್ಲಿ ಬಹು ದೊಡ್ಡ ಸೈನ್ಯದ ಸಹಾಯದಿಂದ ವಾಘನನನ್ನ ಮಟ್ಟ

ಹಾಕಿದನು. ಇದೇ ವೇಳೆಗೆ ವೆಲ್ಲೆಸ್ಲಿಯು ಶಿವಮೊಗ್ಗೆಯ ಪಾಳೆಗಾರ ವೆಂಕಟಾದ್ರಿಯನ್ನು ತೊಂದರೆಗೆ ಸಿಲಿಕಿಸಿದ. ಭಾರತೀಯ ಅರಸರು ಕ್ರೂರವಾಗಿ ಆಳುವಂತೆ ಮಾಡಿದರು. ಇದರಿಂದಾಗಿ ಜಮೀನುದಾರರು ತೊಂದರೆಗೊಳಗಾದರು.

೧೮೨೦ರಲ್ಲಿ ಶಿವಲಿಂಗಪ್ಪ ತಿರುಮಲರಾವ್ ಹಾಗೂ ಮೇಘಾರಾಮರು ಬೀದರದಲ್ಲಿ ಬ್ರಿಟೀಷರ ವಿರುದ್ಧ ದಂಗೆ ಎದ್ದರು. ೧೮೫೭ರಲ್ಲಾದ ೨ನೇ ದಂಗೆಯಲ್ಲಿ ದಂಗೆಕೋರರು ಬ್ರಿಟೀಷರ ಹಲವಾರು ಕಚೇರಿಗಳನ್ನು ವಶಪಡಿಸಿಕೊಂಡರು. ಆದರೆ ಕೊನೆಗೆ ಬ್ರಿಟೀಷರು ಆ ದಂಗೆಯನ್ನು ಅಡಗಿಸಿದರು.

೧೮೧೯ರಲ್ಲಿ ಕೊಪ್ಪಳದ ವೀರಪ್ಪನು ಸಿಡಿದೆದ್ದನು. ಬಿಜಾಪೂರ ಜಿಲ್ಲೆಯ ಸಿಂದಗಿಯಲ್ಲಿ ಕೂಡ ನಾಯಕರಾದ ದಿವಾಕರ ದೀಕ್ಷಿತ, ರಾವಜಿ ರಾಸ್ತೆ, ಬಾಳಾಜಿ ದೇಶಪಾಂಡೆ ಹಾಗೂ ಸೆಟ್ಟಿಯಪ್ಪ ಟುಕ್ಕಾಲಿಯವರ ನೇತೃತ್ವದಲ್ಲಿ ಬ್ರಿಟೀಷರ ವಿರುದ್ಧ ಪ್ರತಿಭಟನೆಯನ್ನು ಆರಂಭಿಸಿದರು. ಅವರು ಬ್ರಿಟೀಷರಿಗೆ ಸುಂಕವನ್ನು ಕೊಡದೆ ಅದನ್ನು ತಾವೇ ಇಟ್ಟುಕೊಂಡರು. ಆದರೆ ೧೮೨೪ರಲ್ಲಿ ಅಲ್ಲಿಯ ಕಲೆಕ್ಟರ್ ಸ್ಟಿವನ್‌ಸನ್‌ನು ಆ ಹರತಾಳನ್ನು ಕೊನೆಗೊಳಿಸಿದನು.

೧೮೫೭ರ ಸಿಪಾಯಿ ದಂಗೆಗಿಂತಲೂ ಪೂರ್ವದಲ್ಲಿ ಕಿತ್ತೂರ ರಾಣಿ ಚನ್ನಮ್ಮ ಸ್ವತಂತ್ರ ರಾಷ್ಟ್ರದ ಧ್ವಜವನ್ನು ಹಾರಿಸಿದಳು. ಕಿತ್ತೂರ ಸಂಸ್ಥಾನದ ಧೈರ್ಯಶಾಲಿಗಳಾದ ಸರ್ದಾರ ಗುರುಸಿದ್ಧಪ್ಪ, ಬಾಳಪ್ಪ, ಸಂಗೊಳ್ಳಿ ರಾಯಣ್ಣ, ಬಿಚ್ಚುಗತ್ತಿ ಚನ್ನಬಸಪ್ಪ, ಗಜವೀರ ಮತ್ತಿತರರು ರಾಣಿಯನ್ನು ಬೆಂಬಲಿಸಿದರು. ಅಂತಹ ವೀರರ ಕೆಲವು ಮಾತುಗಳನ್ನು ಇಲ್ಲಿ ಕೊಡಲಾಗಿದೆ.

"ಬ್ರಿಟೀಷ ದಳಪತಿಗಳು ಸಾಯುವವರೆಗೆ ನಾವು ಹೋರಾಡುತ್ತೇವೆ". ಈ ಮಾತು ಕಿತ್ತೂರ ಸೈನಿಕರ ಸಾಹಸವನ್ನು ಎತ್ತಿ ತೋರಿಸುತ್ತದೆ. ಕರ್ನಾಟಕ ರಾಜ್ಯದ ಒಂದು ಸಣ್ಣ ಸಂಸ್ಥಾನ ಕಿತ್ತೂರ ಆದರೆ ಬ್ರಿಟೀಷರ ವಿರುದ್ಧ ಅದು ಮಾಡಿದ ಸಾಹಸ ಬಹು ದೊಡ್ಡದು, ಶ್ಲಾಘನೀಯವಾದುದು.

ಕಿತ್ತೂರ ಜನತೆ ಬ್ರಿಟೀಷರ ದಮನಕಾರಿ ನೀತಿಯನ್ನು ಅವರ ಅವಹೇಳನ ಕಾರಿಯಾದ ಮಾತುಗಳನ್ನು ಹಾಗೂ ಅವರ ಧೂರ್ತ ಯುದ್ಧ ಕಲೆಯನ್ನು ಸಹಿಸಿಕೊಳ್ಳದೆ ಅವರನ್ನು ಸದೆ ಬಡೆಯಲು ಹೋರಾಡಿತು.

ಅಂದಿನ ಧಾರವಾಡದ ಕಲೆಕ್ಟರ್ ಥ್ಯಾಕರೆಯು ಕಿತ್ತೂರಿನ ಇಬ್ಬರು ಮೋಸಗಾರರಾದ ಮಲ್ಲಪ್ಪ ಶೆಟ್ಟಿ ಹಾಗೂ ವೆಂಕಟರಾವ ಸಹಾಯದಿಂದ ಈ ದುರಂತಕರ ಯುದ್ಧವನ್ನು ಮಾಡಿದ. ವಿಧವೆ ರಾಣಿ ಚನ್ನಮ್ಮ ತನ್ನ ದತ್ತ ಪುತ್ರ ಶಿವಲಿಂಗಪ್ಪನನ್ನು ಉತ್ತರಾಧಿಕಾರಿಯನ್ನಾಗಿ ಮಾಡಲು, ಈ ಯುದ್ಧವನ್ನು ತಪ್ಪಿಸಲು ಮಾಡಿದ ಪ್ರಯತ್ನ ವ್ಯರ್ಥವಾಯಿತು. ಆ ಯುದ್ಧದಲ್ಲಿ ಥ್ಯಾಕರೆಯೇನೋ ಮರಣ ಹೊಂದಿದ. ಆದರೆ ರಾಣಿ ಚನ್ನಮ್ಮನ ಸಂಸ್ಥಾನವೂ ನುಚ್ಚು ನೂರಾಯಿತು. ದಿನಾಂಕ ೩ ನೇ ಡಿಸೆಂಬರ್ ೧೮೨೪ ರಂದು ಬ್ರಿಟೀಷರು ಮೈಸೂರು, ಸೊಲ್ಲಾಪುರ, ಬಾಂಬೆ ಮತ್ತು ಮದ್ರಾಸಿನಿಂದ

ತಮ್ಮ ಸೇನೆಯನ್ನು ತಂದು ಕಿತ್ತೂರನ್ನು ಸೋಲಿಸಿ ರಾಣಿ ಚನ್ನಮ್ಮ ಮತ್ತು ಅವಳ ಸಹಾಯಕಿಯಾದ ಜಾನಕಿಬಾಯಿ, ವೀರವ್ವ ಇವರೆಲ್ಲರನ್ನು ಬೈಲಹೊಂಗಲದ ಜೈಲಿನಲ್ಲಿ ಸೆರೆಯಲ್ಲಿಟ್ಟಿತು. ಕಿತ್ತೂರಿನ ಹೋರಾಟ ಅದು ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿಯಾಗಿದೆ ಎಂದು ಹೇಳಬಹುದು. ಜನಪ್ರೀಯ ಲಾವಣಿಯಲ್ಲಿ ಅಡಗಿದ ಕಿತ್ತೂರಿನ ಸ್ವಾತಂತ್ರ್ಯ ಗಾಥೆಯನ್ನು ನೋಡಬಹುದು.

"ಬ್ರಿಟೀಷರು ರಾಣಿ ಚನ್ನಮ್ಮನ ಕಿತ್ತೂರು ಸಂಸ್ಥಾನದ ಮೇಲೆ ಯುದ್ಧವನ್ನು ಘೋಷಿಸಿದ್ದು ಚನ್ನಮ್ಮಳಿಗೆ ನೋವನ್ನುಂಟು ಮಾಡಿತು. ಆ ಯುದ್ಧದಲ್ಲಿ ಚನ್ನಮ್ಮ ರಣಚಂಡಿಯಾಗಿ ಹೋರಾಡಿದಳು ಕೆಲವರು ಹೇಳುವಂತೆ ಅವಳು ಸುಮಾರು ೫೦೦ ಗುಂಡು ಹಾರಿಸಿದ್ದು ಶಿವನು ಬೆಂಕಿಯ ಮಳೆಗರೆದಂತಿತ್ತು. ಅಂದಿನ ಆ ಕಿತ್ತೂರ ಯುದ್ಧದಲ್ಲಿ ಬೀದಿಗಳೆಲ್ಲ ರಕ್ತ-ಸಿಕ್ತವಾದವು. ಹೀಗೆ ರಾಣಿ ಚನ್ನಮ್ಮ ಬ್ರಿಟೀಷರ ವಿರುದ್ಧ ಕಾದಾಡಿದಳು.

ಕಿತ್ತೂರ ಸಂಸ್ಥಾನದ ಇತಿಹಾಸ ಭಾರತೀಯ ಪರಂಪರೆಯಲ್ಲಿ ವಿಶಿಷ್ಠ ಸ್ಥಾನವನ್ನು ಪಡೆದಿದೆ. ಅದು ತಮ್ಮ ನಾಡಿನ ಸ್ವಾತಂತ್ರ್ಯದ ವಿಷಯವಾಗಿ ಅಭಿಮಾನ ಹೊಂದಿರುವ ಜನರನ್ನು ಪುಳಕಿತರನ್ನಾಗಿಸುವಂತಿತ್ತು.

೧೭೪೬ರಲ್ಲಿ ಸವಣೂರು ನವಾಬನು ತನ್ನ ಇತರೆ ಜಿಲ್ಲೆಗಳೊಂದಿಗೆ ಕಿತ್ತೂರನ್ನು ಮರಾಠರಿಗೆ ಒಪ್ಪಿಸಬೇಕಾಯಿತು. ೧೭೭೮ರಲ್ಲಿ ಬೆಳಗಾಂವ ಜಿಲ್ಲೆಯಲ್ಲಿ ಮಲಪ್ರಭೆಯ ದಕ್ಷಿಣದ ಭಾಗವಾಗಿ ಹಾಗೂ ಬಿಜಾಪುರ ಜಿಲ್ಲೆಯಲ್ಲಿಯ ಕೃಷ್ಣಾ ನದಿಯ ದಕ್ಷಿಣ ಭಾಗವನ್ನೆಲ್ಲಾ ಗೆದ್ದುಕೊಂಡು ದಕ್ಷಿಣದ ಹೈದರಾಲಿಯು ಕಿತ್ತೂರಿನ ದೇಸಾಯಿಯಿಂದ ವಾರ್ಷಿಕ ಕಪ್ಪವನ್ನು ಪಡೆಯುವ ಒಪ್ಪಂದಕ್ಕೆ ಸಹಿ ಹಾಕಿದನು. ಈ ದಿಸೆಯಲ್ಲಿ ೧೭೫೬ರಿಂದ ತಮ್ಮ ಅಧೀನದಲ್ಲಿದ್ದ ಗೋಕಾಕ, ಪರಸಗಡ ಮತ್ತು ಬೀಡಿ ಪ್ರದೇಶಗಳನ್ನು ಕಿತ್ತೂರ ದೇಸಾಯಿ ಆಕ್ರಮಿಸಿಕೊಂಡನು.. "ಗಡದಿಮರ್ಡಿ ಮತ್ತು ಅಲ್ಲಿಯ ಮುಖ್ಯ ಕೋಟೆಯು ಕಿತ್ತೂರ ಅರಸರ ಯುದ್ಧಗಳಲ್ಲಿ ಸಹಾಯಕವಾದವು". ಅಂದರೆ ಇದೇ ಪ್ರಾಂತದಲ್ಲಿ ಕಿತ್ತೂರ ಸಂಸ್ಥಾನದವರ ಯುದ್ಧಗಳು ಜರುಗುತ್ತಿದ್ದವು. ಹೈದರಲಿಯ ೧೭೭೮ರ ಯುದ್ಧ, ಪರಸುರಾಮ ಭಾವೂ ೧೭೭೯ರ ಯುದ್ಧ, ಟಿಪ್ಪು ಸುಲ್ತಾನನ ೧೭೮೫ ಮತ್ತು ೧೭೮೭ರ ಯುದ್ಧಗಳು, ಕಿತ್ತೂರ ಸಂಸ್ಥಾನದ ವಿರುದ್ಧ ಮರಾಠರು, ಟಿಪ್ಪು ಮತ್ತು ಬ್ರಿಟೀಷರು ಕೈಗೊಂಡ ೧೭೮೭ರ ಯುದ್ಧ, ೧೮೦೦ರಲ್ಲಿ ದೊಂಡಿವಾಘನು ಮಾಡಿದ ದಾಳಿ ಮತ್ತು ೧೮೨೪ರಲ್ಲಿ ಥ್ಯಾಕರೆಯ ನೇತೃತ್ವದಲ್ಲಿ ಬ್ರಿಟೀಷರ ಕಿತ್ತೂರ ಆಕ್ರಮಣಗಳು ಇಡೀ ಪ್ರದೇಶದಲ್ಲಿ ಕೇಂದ್ರೀಕೃತವಾಗಿದ್ದವು. ಅಂದರೆ ಕಿತ್ತೂರ ಸಂಸ್ಥಾನದ ವೈರಿ ಅರಸರೆಲ್ಲರ ಯುದ್ಧ ಭೂಮಿ ಆಗಿತ್ತು. ಅದಕ್ಕೆ ಕಾರಣ ಆ ಸಂಸ್ಥಾನದ ಶ್ರೀಮಂತಿಕೆ ಮತ್ತು ಸ್ವಾಭಾವಿಕ ಸಂಪನ್ಮೂಲಗಳು.

೧೭೭೯ರಲ್ಲಿ ಪರಶುರಾಮ ಭಾವೂ ಕಿತ್ತೂರ ಸಂಸ್ಥಾನದ.ಗೋಕಾಕ ಪ್ರಾಂತವನ್ನು ವಶಪಡಿಸಿಕೊಂಡು ಆ ಸಂಸ್ಥಾನದ ಅರಸ ದೇಸಾಯಿಯವರನ್ನು ಸೆರೆಮನೆಯಲ್ಲಿಟ್ಟನು.

೧೭೮೫ರಲ್ಲಿ ಟಿಪ್ಪು ಸುಲ್ತಾನನು ಆ ಸಂಸ್ಥಾನದ ಕಿತ್ತೂರ, ನರಗುಂದ ಮತ್ತು ರಾಮದುರ್ಗಗಳಿಗೆ ಮುತ್ತಿಗೆ ಹಾಕಿ ಆ ದೊರೆಗಳನ್ನು ಹೆದರಿಸಿದನು. ನಂತರ ಟಿಪ್ಪುಸುಲ್ತಾನನನ್ನು ಸೋಲಿಸುವಾಗ ಮರಾಠರು ಹೈದರಾಬಾದದ ನಿಜಾಮನೊಂದಿಗೆ ಒಗ್ಗೂಡಿ ಬಿಜಾಪೂರ ಜಿಲ್ಲೆಯ ಬಾದಾಮಿ ಹಾಗೂ ಧಾರವಾಡದಲ್ಲಿ ತುಕ್ಕೋಜಿ ಹೋಳ್ಕರ ಮತ್ತು ಗಣೇಶ ಪಂತ ಬೆಹೆರೆಯವರ ನೇತೃತ್ವದಲ್ಲಿ ೨೫,೦೦೦ ಅಶ್ವ ದಳದೊಂದಿಗೆ ಇಡೀ ಕಿತ್ತೂರ ಪ್ರಾಂತದಲ್ಲಿ ಬಹರಾಬುದ್ದಿನ್ ನೇತೃತ್ವದಲ್ಲಿದ್ದ ಟಿಪ್ಪುನ ಸೇನಾದಳವನ್ನು ಎದುರಿಸಿದರು. ಹೋಳ್ಕರ ನೇತೃತ್ವದಲ್ಲಿಯ ಮರಾಠಿ ಸೇನೆಯು ಟಿಪ್ಪು ಸುಲ್ತಾನನ ವಿರುದ್ಧ ಕೆಲವು ಶೂನ್ಯ ಫಲಿತಾಂಶವನ್ನು ಹೊಂದಿದ ಆಕ್ರಮಣವನ್ನು ಹೊರತುಪಡಿಸಿ, ಆತನು ಕಿತ್ತೂರ ಸಂಸ್ಥಾನದ ಹಲವೆಡೆ ಆಕ್ರಮಿಸಿದ್ದನ್ನು ತೆರವುಗೊಳಿಸಿದನು. ಆ ಆಕ್ರಮಣದ ವಿಜಯಿ ಟಿಪ್ಪುಸುಲ್ತಾನನೇ ಆಗುವವನಾಗಿದ್ದರೂ, ಬ್ರಿಟೀಷರು ಆತನ ಮೇಲೆ ಯುದ್ಧಕ್ಕೆ ಸನ್ನದ್ಧರಾಗುತ್ತಿದ್ದರಿಂದ ೧೭೮೭ರಲ್ಲಿ ಆತ ಕಿತ್ತೂರ ಸುತ್ತಲಿನ ಪ್ರಾಂತಗಳನ್ನು ಮರಾಠರಿಗೆ ಒಪ್ಪಿಸಿದ. ೧೭೮೭ರಲ್ಲಿ ಕೊನೆಗೊಂಡ ಈ ಮುತ್ತಿಗೆಯ ಅವಧಿಯಲ್ಲಿ ಟಿಪ್ಪು ಸುಲ್ತಾನನ ಸೇನಾಧಿಪತಿ ಬದ್ರುಲ್ ಜಮ್ಮಿಕಾನ್‌ನು ಕಿತ್ತೂರ ಸಂಸ್ಥಾನವನ್ನು ತಾನೇ ನಿರ್ವಹಿಸಿದ. ಆತ ಅಲ್ಲಿಯ ದೇಸಾಯಿಯನ್ನು ಬೆಂಬಲಿಸಲು ಒಂದು ಮೊತ್ತವನ್ನು ಕೇಳಿದ. ೧೭೯೨ರಲ್ಲಿ ಶ್ರೀರಂಗ ಪಟ್ಟಣದ ಒಪ್ಪಂದದ ಪ್ರಕಾರ ಟಿಪ್ಪು ಸುಲ್ತಾನನು ಮರಾಠರು ಕನ್ನಡನಾಡಿನ ತುಂಗಭದ್ರಾ ನದಿಯವರೆಗೆ ದೋಚಿದ ಎಲ್ಲ ಪ್ರಾಂತಗಳನ್ನು ಅವರಿಗೆ ನೀಡಿದನಲ್ಲದೇ, ಕಿತ್ತೂರ ಪ್ರಾಂತವನ್ನು ಕಳೆದುಕೊಂಡು, ಕಳೆದ ಒಂದು ಯುದ್ಧದಲ್ಲಿ ಪಟವರ್ಧನನು ಅನುಮೋದಿಸಿದಕ್ಕಿಂತಲೂ ಹೆಚ್ಚಿನ ಸೇನೆಯನ್ನು ಕಟ್ಟಿಕೊಂಡಿದ್ದ ಪರಶುರಾಮ ಭಾವೂಗೆ ಈ ಪ್ರಾಂತಗಳನ್ನು ಒಪ್ಪಿಸಿದನು. ಹೊಸ ಆಡಳಿತಗಾರ ಕಿತ್ತೂರಿನಲ್ಲಿ ಒಬ್ಬ ಮಾಮಲೇದಾರನನ್ನು ನೇಮಿಸಿ ಆ ಪ್ರಾಂತವನ್ನು ಧಾರವಾಡದ ಅಧೀನಕ್ಕೆ ಒಳಪಡಿಸಿದನು ಹಾಗೂ ಆತ ಕಿತ್ತೂರಿನ ದೇಸಾಯಿಗೆ ಮೊಬಲಗನ್ನು ನೀಡತೊಡಗಿದನು. ಈ ಇತಿಹಾಸವು ಕಿತ್ತೂರ ಸಂಸ್ಥಾನದ ಬಗ್ಗೆ ಕ್ರೂರ ಬ್ರಿಟೀಷರಿಂದಾಗಿ ಉತ್ತಮ ಅಂಶಗಳನ್ನು ಒದಗಿಸಿದರೂ, ಈ ಚರಿತ್ರೆಯ ಕಿತ್ತೂರ ಸಂಸ್ಥಾನದ ಜನತೆಯ ಸಮರ್ಪಣಾ ಬುದ್ಧಿಯನ್ನು ಶೌರ್ಯ ಸಾಹಸವನ್ನು ಹಾಗೂ ಅವರ ಸ್ವಾತಂತ್ರ್ಯ ಪ್ರಿಯತೆಯನ್ನು ಎತ್ತಿ ತೋರಿಸುತ್ತದೆ.

ಆದಾಗ್ಯೂ ಬ್ರಿಟೀಷರನ್ನು ಹೊರತುಪಡಿಸಿ ಕಿತ್ತೂರ ಕೋಟೆಯನ್ನು ಯಾರೂ ಆಕ್ರಮಿಸಲಾಗಲಿಲ್ಲ. ವೈರಿಗಳಲ್ಲಿದ್ದ ಅತ್ಯಾಧುನಿಕ ಯುದ್ಧ ಸಾಮಗ್ರಿಗಳು ಕಿತ್ತೂರ ಜನರನ್ನು ಸದೆಬಡಿಯಲಾಗಲಿಲ್ಲ. ಅವರು ಆ ಪ್ರಾಂತದ ಶ್ರೀಮಂತಿಕೆಯನ್ನು ದೋಚಲಾಗಲಿಲ್ಲ. ಆದರೆ ಬ್ರಿಟೀಷರು ಕಿತ್ತೂರಿನ ವೈಭವವನ್ನು ನಾಶಪಡಿಸಿದರು. ಅಲ್ಲಿಯ ಅಳಿದುಳಿದ ಸಂಪತ್ತನ್ನು ದೋಚಿದರು. ಆದರೆ ಅದಕ್ಕಾಗಿ ಅವರು ಬಹಳಷ್ಟು ಪಶ್ಚಾತ್ತಾಪ ಪಟ್ಟರು.

ಐತಿಹಾಸಿಕವಾಗಿ ಕಿತ್ತೂರ ಸಂಸ್ಥಾನವು ಬಿಜಾಪುರ ಅರಸರ ಅಧೀನದಲ್ಲಿತ್ತು. ೧೫೮೫ ರಿಂದ ಕಿತ್ತೂರ ಇತಿಹಾಸ ಆರಂಭವಾಗಿ ಶತಮಾನಗಳ ನಂತರ ಅದು ಬ್ರಿಟೀಷ ಈಸ್ಟ ಇಂಡಿಯಾ ಕಂಪನಿಯಲ್ಲಿ ಪರ್ಯಾವಸಾನಗೊಂಡಿತು.

ಈ ಸಂಸ್ಥಾನವು ಕೆಲವು ಕಾಲ ಉತ್ತರದ ಮೊಗಲರ ಆಳಿಕೆಗೆ ಒಳಪಟ್ಟಿತ್ತು. ಆ ವೇಳೆಗೆ ಮೊಗಲ ದೊರೆ ಔರಂಗಜೇಬನು ದಕ್ಷಿಣದ ಬಿಜಾಪುರ ಪ್ರಾಂತವನ್ನು ಸೋಲಿಸುವಲ್ಲಿ ಯಶಸ್ವಿಯಾಗಿದ್ದನು. ಈ ಪೇಶ್ವೆಯ ನಂತರ ಒಂದನೇಯ ಬಾಜಿರಾಯ ಈ ಪ್ರಾಂತವನ್ನು ವಶಪಡಿಸಿಕೊಳ್ಳುವವರೆಗೆ ಅಲ್ಲಿ ಅಶಾಂತಿ ನೆಲೆಸಿತ್ತಾದರೂ, ಅಲ್ಲಿಯ ಅರಸರೇ ಅಲ್ಲಿಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಪೇಶ್ವೆ ಬಾಜಿರಾಯನ ಅಧಿಪತ್ಯ ೧೮೧೮ರ ವರೆಗೆ ಮುಂದುವರೆಯಿತು. ಆದರೆ ೧೮೧೮ರಲ್ಲಿ ಉಂಟಾದ ಒಂದು ಸನದಿನ ಪ್ರಕಾರ ಕಿತ್ತೂರ ಸಂಸ್ಥಾನವು ಈಸ್ಟ ಇಂಡಿಯಾ ಕಂಪನಿಯ ಅಧೀನಕ್ಕೆ ಒಳಪಟ್ಟಿತು.

ಈಗ ಕಿತ್ತೂರ ಎನ್ನುವುದು ಬೆಳಗಾಂವ ಜಿಲ್ಲೆಯ ಒಂದು ಚಿಕ್ಕ ಪಟ್ಟಣವಾಗಿದೆ. ಅದು ಮುಂಬೈ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಪಟ್ಟಣಗಳಾದ ಬೆಳಗಾಂವ-ಧಾರವಾಡಗಳ ಮಧ್ಯದಲ್ಲಿದೆ. ಈಗ ಆ ಪಟ್ಟಣ ನಗರವಾಗಿ ಪರಿವರ್ತನೆಗೊಂಡು ಈ ಹೆದ್ದಾರಿಯ ಅಕ್ಕ-ಪಕ್ಕದಲ್ಲಿ ಬೆಳೆಯುತ್ತಿದೆ. ಇಂದು ಅಲ್ಲಿಯ ಹಳೆಯ ಕೋಟೆ ಹಾಳಾಗಿದ್ದು, ಪ್ರವಾಸಿಗರು ಆ ಕೋಟೆಯನ್ನು ಹಾಗೂ ಸುತ್ತಲಿನ ಐತಿಹಾಸಿಕ ಸ್ಮಾರಕಗಳನ್ನು ನೋಡಲು ಬರುತ್ತಾರೆ. ಸುತ್ತಲಿನ ಪ್ರದೇಶದಲ್ಲೆಲ್ಲಾ ಕಿತ್ತೂರಿನ ಪ್ರಭಾವ ಬಹಳಷ್ಟಿದೆ. ಅಲ್ಲಿಯ ಹಲವಾರು ಸಂಘ - ಸಂಸ್ಥೆಗಳಿಗೆ ಕಿತ್ತೂರ ಅರಸರ ಮತ್ತು ರಾಣಿಯರ ಐತಿಹಾಸಿಕ ಸ್ಥಳಗಳ ಹೆಸರುಗಳನ್ನು ನೀಡಿದ್ದಾರೆ. ಕಿತ್ತೂರಿನಲ್ಲೊಂದು ಉನ್ನತ ದರ್ಜೆಯ ಇಂಗ್ಲೀಷ ಮಾಧ್ಯಮದ ಪ್ರೌಢ ಶಾಲೆಯಿದೆ. ಕೊಲ್ಹಾಪುರ ಹೆದ್ದಾರಿಯ ಕಾಕತಿ ಗ್ರಾಮದ ಹತ್ತಿರ ಇರುವ ವಿಶಾಲವಾದ ವೃಂದಾವನಕ್ಕೆ ಚನ್ನಮ್ಮ ಎಂಬ ಹೆಸರನ್ನು ಇಟ್ಟಿದ್ದಾರೆ. ಬೆಳಗಾಂವ ಮತ್ತು ಹುಬ್ಬಳ್ಳಿ ನಗರಗಳ ಮಹತ್ವದ ರಸ್ತೆಯ ವೃತ್ತದಲ್ಲಿ ಚನ್ನಮ್ಮ ರಾಣಿಯ ಸುಂದರವಾದ ಭವ್ಯ ಮೂರ್ತಿಯನ್ನು ನಿಲ್ಲಿಸಿದ್ದಾರೆ. ಧಾರವಾಡದಲ್ಲಿ ಒಂದು ವಿಶಾಲವಾದ ಪಾರ್ಕ ಇದ್ದು, ಅದರ ಮಧ್ಯದಲ್ಲಿ ಥ್ಯಾಕರೆ ಸಾಹೇಬನ ಸಮಾಧಿ ಇದೆ. ಈ ಥ್ಯಾಕರೆ ಸಾಹೇಬನು ಧಾರವಾಡ ಜಿಲ್ಲೆಯ ಕಲೆಕ್ಟರ ಆಗಿದ್ದನು. ಆತನೇ ದತ್ತಕ ವಿಷಯದ ಮೇಲೆ ಸಂಬಂಧ ಹೊಂದಿದ ಸಣ್ಣ ಪುಟ್ಟ ಸಂಸ್ಥಾನಗಳ ಅವನತಿಗೆ ಕಾರಣೀಭೂತನಾಗಿ, ಆ ವಿಷಯವಾಗಿ ಹೋರಾಡಿ ಸತ್ತುಹೋದ. ಕಿತ್ತೂರ ಇಂತಹುದೇ ಒಂದು ರಾಜ್ಯವಾಗಿದ್ದು, ಆ ರಾಜ್ಯದ ಸಂರಕ್ಷಣೆಗಾಗಿ ಹಾಗೂ ಸಂವರ್ಧನೆಗಾಗಿ, ಚನ್ನಮ್ಮ ರಾಣಿ ತನ್ನ ಯೋಧ ವೀರ ಸಂಗೊಳ್ಳಿ ರಾಯಣ್ಣನೊಂದಿಗೆ ಧೀರೋದಾತ್ತವಾಗಿ ಹೋರಾಡಿದಳು.

ಕಿತ್ತೂರ ಸಂಸ್ಥಾನವು ರಾಣಿ ಚನ್ನಮ್ಮನ ದೇಸಾಯಿ ಮನೆತನಕ್ಕಿಂತಲೂ ಮುಂಚೆ ಹಲವಾರು ಅರಸರ ಆಳ್ವಿಕೆಯಲ್ಲಿತ್ತು. ೧೨ನೇ ಶತಮಾನದ ಶಾಸನವೊಂದರಲ್ಲಿ ಕಿತ್ತೂರಿನ ಉಲ್ಲೇಖವಿದೆ. ೧೫೩೫ರ ವೇಳೆಗೆ ಬೆಳಗಾವಿಯ ಅಸದ್ ಖಾನನ ನೇತೃತ್ವದಲ್ಲಿ ತುರ್ಕಿ ಸರದಾರನಾದ ಯುಸುಫ್ ಖಾನ್‌ನು ಕಿತ್ತೂರ ಪ್ರಾಂತದಲ್ಲಿ ಒಂದು ಸಂಸ್ಥಾನವನ್ನು ಕಟ್ಟಿಕೊಂಡನು. ೧೭ನೇ ಶತಮಾನದ ಆರಂಭದಲ್ಲಿ ಮುದಿಮಲ್ಲಪ್ಪನ ನೇತೃತ್ವದಲ್ಲಿ ಕರ್ನಾಟಕದ ದೇಸಾಯಿ ಮನೆತನದ ಪ್ರವರ್ಧಮಾನಕ್ಕೆ ಬಂದಿತು. ಈ ದೇಸಾಯಿ ಲಿಂಗಾಯತ ಸಮುದಾಯದವನಾಗಿದ್ದು ಆತ ಸಂಪಗಾಂವ ಮತ್ತು ಬಿಡಿ ಪ್ರದೇಶಗಳನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ.

ತದನಂತರ ೧೭೭೭ರಲ್ಲಿ ಪರಶುರಾಮ ಭಾವು ಈ ಪ್ರದೇಶದ ಮೇಲೆ ತನ್ನ ವಕ್ರ ದೃಷ್ಟಿಯನ್ನು ಹಾಯಿಸಿದ. ಆತ ಪೇಶ್ವೆ ಮನೆತನದ ಅಗ್ರಗಣ್ಯ ಸೈನಿಕನಾಗಿದ್ದನು. ಆತನ ರಾಜಧಾನಿಯು ಸಾಂಗ್ಲಿಯ ಹತ್ತಿರದ ತಾಸಗಾಂವ ಆಗಿತ್ತು. ಅಲ್ಲಿಂದ ಆತ ಕರ್ನಾಟಕದಲ್ಲಿ ಪೇಶ್ವೆಯರ ಪ್ರಾಬಲ್ಯವನ್ನು, ರಾಜಕೀಯವನ್ನು, ಆಡಳಿತವನ್ನು ಸಂವರ್ಧಿಸತೊಡಗಿದ. ೧೭೭೬ರಲ್ಲಿ ಆತ ಕಿತ್ತೂರನ್ನು ವಶಪಡಿಸಿಕೊಂಡು ಅಲ್ಲಿಯ ದೇಸಾಯಿಯನ್ನು ಸೆರೆಮನೆಯಲ್ಲಿರಿಸಿದ. ಆದರೆ ೧೭೮೫ರಲ್ಲಿ ಹೈದರಾಲಿಯ ಮಗ ಟಿಪ್ಪು ಸುಲ್ತಾನನು ಕಿತ್ತುರು, ನರಗುಂದ ಮತ್ತು ರಾಮದುರ್ಗಗಳನ್ನು ಆಕ್ರಮಿಸಿ ಅವುಗಳನ್ನು ತನ್ನ ಸೇನಾಡಳಿತದಲ್ಲಿರಿಸಿಕೊಂಡನೆಂದು ಇತಿಹಾಸ ಹೇಳುತ್ತದೆ. ದೇಸಾಯಿಯ ಕಿತ್ತೂರ ಸಂಸ್ಥಾನವೆಲ್ಲಾ ಟಿಪ್ಪುವಿನ ಕೈಸೇರಿದ್ದರಿಂದ ದೇಸಾಯಿಯ ಉಪ ಜೀವನಕ್ಕಾಗಿ ಟಿಪ್ಪು ಒಂದಿಷ್ಟು ಮೊಬಲಗನ್ನು ನೀಡುತ್ತಿದ್ದನು. ಈ ಸ್ಥಿತಿ ೧೮ನೇ ಶತಮಾನದ ಅಂತ್ಯದವರೆಗೆ ಮುಂದುವರೆಯಿತು.

ಈ ಅವಧಿಯಲ್ಲಿ ಕಿತ್ತೂರಿನ ಸುತ್ತ ಮೂರು ಅಧಿಪತ್ಯಗಳು ಶುಕ್ರದೆಸೆಯಲ್ಲಿದ್ದು ಅದರಲ್ಲಿಯ ಓರ್ವ ಸಾರ್ವಭೌಮನು ಕಿತ್ತೂರನ್ನು ತನ್ನ ಸ್ವತ್ತನ್ನಾಗಿ ಆಳತೊಡಗಿದ್ದು ಕಂಡು ಬರುತ್ತದೆ. ಈ ಮೂವರೆಂದರೆ, ಮರಾಠರು, ಹೈದರಲಿ ಹಾಗೂ ಟಿಪ್ಪು ಸುಲ್ತಾನ ಮತ್ತು ಇಂಗ್ಲೀಷರಾಗಿದ್ದರು. ೧೮೦೦ರ ವೇಳೆಯಲ್ಲಿ ಮರಾಠರ ದೊಂಡೊಪಂತ ಗೋಖಲೆಯು ಕಿತ್ತೂರ ಸಂಸ್ಥಾನವನ್ನು ತನ್ನ ಅಧೀನದಲ್ಲಿರಿಸಿಕೊಂಡಿದ್ದನು. ಆದರೆ ನಂತರ ಆತನ ಓರ್ವ ಪ್ರಬಲ ವೈರಿಯಾದ ದೊಂಡಿ ವಾಘನು ಕಿತ್ತೂರಿನ ಮೇಲಿನ ಗೋಖಲೆಯ ಸಾರ್ವಭೌಮತ್ವವನ್ನು ಪ್ರಶ್ನಿಸಿದಾಗ ಉಂಟಾದ ಘನ-ಘೋರ ಕದನದಲ್ಲಿ ಗೋಖಲೆ ಸಾವನ್ನಪ್ಪಿದನು. ಆಮೇಲೆ ಇಂಗ್ಲೀಷರ ಜನರಲ್ ವೆಲ್ಲೆಸ್ಲಿಯು ಕಿತ್ತೂರಿನ ಮೇಲೆ ಆಧಿಪತ್ಯವನ್ನು ಪಡೆಯಲು ಹವಣಿಸಿದನಾದರೂ ಆತನಿಗೆ ಅಲ್ಲಿಯ ಮಲಪ್ರಭಾ ನದಿಯನ್ನು ದಾಟಿ ಕಿತ್ತೂರ ಮೇಲೆ ಆಕ್ರಮಣ ಎಸಗುವದು ಕಷ್ಟವಾಯಿತೆಂದು ಹೇಳಬೇಕು. ಕಿತ್ತೂರಿನಲ್ಲಿ ಉಂಟಾದ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕೊಳ್ಳೆಹೊಡೆಯುವವರೆ ಅಧಿಕಾರ ಪಡೆಯತೊಡಗಿದರು. ಏನಿದ್ದರೂ ಇಂತಹ ಮಹತ್ವಾಕಾಂಕ್ಷೆಗಳಿಗೆ ಕಿತ್ತೂರಿನ ನಾಗರಿಕರು ಮಣಿಯಲಿಲ್ಲ. ೧೮೯೯ರ ಮರಾಠಾ ದಾಖಲೆಗಳು ಕಿತ್ತೂರಿನ ನಾಯಕರ ಸ್ವಭಾವವನ್ನು ಸೂಚಿಸುತ್ತವೆ. ಆ ದಾಖಲೆಗಳ ಪ್ರಕಾರ ಕಿತ್ತೂರ ಸಂಸ್ಥಾನದ ಒಡೆಯರು ಕರ್ನಾಟಕದ ಅಗ್ರಗಣ್ಯ ವೀರರಾಗಿದ್ದರು ಎಂದಿದೆ. ಪೇಶ್ವೆಯರು ೪೦ ವರ್ಷ ಈ ಸಂಸ್ಥಾನವನ್ನು ಮಣಿಸಲು ಮಾಡಿದ ಪ್ರಯತ್ನವೆಲ್ಲಾ ವಿಫಲವಾಯಿತೆಂದು ಹೇಳಬಹುದು. ಇದಕ್ಕೆ ಕಿತ್ತೂರಿನ ರಾಜರು ಮತ್ತು ಜನತೆ ವಿರೋಧ ವ್ಯಕ್ತಪಡಿಸಿದ್ದೆ ಮುಖ್ಯ ಕಾರಣ. ಅವರು ತಮ್ಮ ರಾಜ್ಯದ ಸ್ವಾತಂತ್ರ್ಯವನ್ನು ಶೌರ್ಯದಿಂದ ಹಿಂದೆ ಉಳಿಸಿಕೊಳ್ಳುತ್ತಿದ್ದರು.

೧೮೦೨ರ ವೇಳೆಗೆ ದೇಸಾಯಿ ಮಲ್ಲಸರ್ಜನು ಕಿತ್ತೂರ ಅರಸನಾಗಿದ್ದನು. ಅಲ್ಲಿಂದ ಆತನ ಮರಾಠರೊಂದಿಗಿನ ಮತ್ತು ಬ್ರಿಟೀಷರೊಂದಿಗಿನ ಸೆಣಸಾಟ ಆರಂಭವಾಯಿತು. ೧೮೦೯ರಲ್ಲಿ ಪೇಶ್ವೆಯವರು ಆತನನ್ನು ಪುಣೆಗೆ ಆಹ್ವಾನಿಸಿ ಆತನೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡರು. ಅದರ ಪ್ರಕಾರ ಮಲ್ಲಸರ್ಜನು ಪೇಶ್ವೆಯವರಿಗೆ

ವರ್ಷಕ್ಕೆ ೧ ಲಕ್ಷ ೭೫ ಸಾವಿರ ರೂಪಾಯಿ ಕಪ್ಪು ಕಾಣಿಕೆಯನ್ನು ನೀಡಿ ತನ್ನ ಸಂಸ್ಥಾನದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕು ಎಂದಾಯಿತು. ಇದರಿಂದಾಗಿ ಆತ ಅವರಿಂದ ಕೆಲವು ಅನುದಾನಗಳನ್ನು ಮತ್ತು "ಪ್ರತಾಪರಾವ್" ಎಂಬ ಬಿರುದನ್ನು ಪಡೆದನು. ಈ ಬಿರುದಿನ ಗೌರವಾರ್ಥವಾಗಿ ಮಲ್ಲಸರ್ಜನು ಕಿತ್ತೂರಿನ ಸಮೀಪದ ನಂದಗಡದಲ್ಲೊಂದು ಕೋಟೆಯನ್ನು ನಿರ್ಮಿಸಿಕೊಂಡನು. ಇದೇ ವೇಳೆಗೆ ಆತ ಬ್ರಿಟೀಷರೊಂದಿಗಿನ ತನ್ನ ಸಂಬಂಧವನ್ನು ಮುಂದುವರೆಸಿಕೊಂಡು ಹೋಗಬೇಕಾಯಿತು. ಕೊನೆಗೊಂದು ದಿನ ೧೮೧೮ರಲ್ಲಿ ಬ್ರಿಟೀಷರು ಮರಾಠರ ಕೊನೆಯ ಪೇಶ್ವೆಯನ್ನು ದಮನಮಾಡುವಾಗ ಅವರು ಮರಾಠರ ಬೆಳಗಾವಿಯ ಕೋಟೆಗೆ ಮುತ್ತಿಗೆ ಹಾಕಿದರು. ಆಗ ಮಲ್ಲಸರ್ಜ ಅವರಿಗೆ ಸಹಾಯ ಮಾಡದೆ ವಿಧಿ ಇರಲಿಲ್ಲ. ೧೮೧೮ರಲ್ಲಿ ಮರಾಠಾ ಪೇಶ್ವೆಯವರ ಆಡಳಿತದ ಪತನದ ನಂತರ ಕಿತ್ತೂರಿನ ಮಲ್ಲಸರ್ಜ ಬ್ರಿಟೀಷರೊಂದಿಗೆ ಒಂದು ದಶಕದವರೆಗೆ ಸಂಘರ್ಷಕ್ಕಿಳಿದನಲ್ಲದೇ, ಆತನ ಆಳ್ವಿಕೆಯು ಕೊನೆಗಾಲಕ್ಕೆ ಬಂದಿತು.

ಕ್ರಿ.ಶ.೧೬೦೦ರಲ್ಲಿ ಬ್ರಿಟೀಷರು ಈಸ್ಟ ಇಂಡಿಯಾ ಕಂಪನಿಯನ್ನು ಹುಟ್ಟುಹಾಕಿದರು ಪೂರ್ವದಲ್ಲಿ ಭಾರತದಲ್ಲಿ ವ್ಯಾಪಾರಮಾಡಲು ಬಂದವರು. ಈ ಉದ್ದೇಶದ ಸಾಫಲ್ಯಕ್ಕಾಗಿ ಅವರು ಭಾರತದಲ್ಲಿ ಹಲವಾರು ಕಾರ್ಖಾನೆಗಳನ್ನು ತೆರೆದರು. ಅವರ ಕಾರ್ಖಾನೆಗಳು ಮುಖ್ಯವಾಗಿ ಕರಾವಳಿಯಲ್ಲಿದ್ದದ್ದು ನಮಗೆ ತಿಳಿದುಬರುತ್ತದೆ. ಅಲ್ಲಿಂದ ಅವರು ರಾಜಕೀಯ ಅಧಿಪತ್ಯ ಪಡೆಯುವುದಕ್ಕಾಗಿ ಪ್ರಾಂತ-ಪ್ರದೇಶಗಳನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸಿದರು. ಅವರಿಗೆ ಅವರದೇ ಆದ ಸೇನೆ ಇತ್ತು. ಅವರು ಸ್ಥಳೀಯ ರಾಜರೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಂಡರು. ಅನುಕೂಲಕ್ಕನುಗುಣವಾಗಿ ಇಲ್ಲಿಯ ಕೆಲವು ರಾಜರ ವಿರುದ್ಧ ಇನ್ನುಳಿದ ರಾಜರನ್ನು ಬೆಂಬಲಿಸತೊಡಗಿದರು. ಹೀಗೆ ಅವರು ಕಾಲಕ್ರಮೇಣ ತಮ್ಮ ರಾಜ್ಯಾಡಳಿತವನ್ನು ಸ್ಥಾಪಿಸಿದರೆಂದು ಹೇಳಬಹುದು. ಅಲ್ಲದೇ ಅವರು ಸ್ಥಳೀಯ ರಾಜರ ಮೇಲೆ ಅಧಿಪತ್ಯ ಸ್ಥಾಪಿಸಲು ತಮ್ಮದೇ ಆದ ತಂತ್ರಗಳನ್ನು, ಗುರಿಗಳನ್ನು ಹೊಂದಿದ್ದರು. ಕೆಲವು ಸಲ ಕೆಲವು ರಾಜರನ್ನು ಮಣಿಸಿದರೆ ಇನ್ನು ಕೆಲವು ಸಲ ಪೂರ್ಣ ಸದೆಬಡಿಯುತ್ತಿದ್ದರು. ಅವರು ಸ್ಥಳೀಯ ಅರಸರುಗಳೊಂದಿಗೆ ಮಾಡಿಕೊಳ್ಳುತ್ತಿದ್ದ ಒಪ್ಪಂದ ಒಡಂಬಡಿಕೆಗಳು, ತಮ್ಮ ರಾಜಕೀಯ ಮಹತ್ವಾಕಾಂಕ್ಷೆಗಳಿಗಾಗಿ ಇದ್ದವೇ ಹೊರತು ಇಲ್ಲಿಯ ಆಳರಸರ ಹಾಗೂ ಜನತೆಯ ಕಲ್ಯಾಣಕ್ಕಾಗಿರಲಿಲ್ಲ ಎಂಬುದು ಮಹತ್ವದ ಸಂಗತಿ. ಸ್ಥಳೀಯ ರಾಜರನ್ನು ದಮನಗೊಳಿಸಲು ಇಲ್ಲವೇ ಅವರ ಆಳ್ವಿಕೆಯನ್ನು ಕೊನೆಗೊಳಿಸಲು ಅಂದರೆ ಅವರ ರಾಜ್ಯವನ್ನು ಬ್ರಿಟೀಷ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲು ಅವರು ಹೊಂದಿದ್ದ ನೀತಿಗಳಲ್ಲಿ "ದತ್ತು ಮಕ್ಕಳಿಗೆ ಹಕ್ಕಿಲ್ಲ" ಎಂಬುದೂ ಒಂದು. ಈ ನೀತಿಯು ಬಹು ಕಠೋರವು ತೊಂದರೆದಾಯಕವು ಆಗಿತ್ತು. ಈ ತತ್ವವನ್ನು ಆಚರಣೆಗೆ ತಂದವರು ಅಂದಿನ ಗವರ್ನರ್ ಜನರಲ್ ಲಾರ್ಡ ಡಾಲ್ ಹೌಸಿ. ಮುಂದೆ ೧೮೫೭ರಲ್ಲಿ ಜರುಗಿದ ಬ್ರಿಟೀಷರ ವಿರುದ್ಧದ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಿಭೂತವಾದ ಈ ನೀತಿ ಅನೇಕ ರಾಜಮಹಾರಾಜರನ್ನು ಅಳಿಸಿಹಾಕಿತು. ಕಿತ್ತೂರ ಸಂಸ್ಥಾನದ ಅವನತಿಯ ಅಧ್ಯಯನದಲ್ಲಿ ಈ ಕ್ರೂರ ಬ್ರಿಟೀಷ ನೀತಿಯೇ ಪ್ರಮುಖ ಪಾತ್ರವಹಿಸಿತೆಂಬುದು ಗಮನಾರ್ಹ.

ಕಿತ್ತೂರ ಸಂಸ್ಥಾನದ ರಾಜರ ಉತ್ತರಾಧಿಕಾರಿಗಳ ವಿಷಯ ಬಹು ಸೂಕ್ಷ್ಮವು ಮಹತ್ವದ್ದು ಆಗಿತ್ತು. ರಾಜ ಶಿವಲಿಂಗರುದ್ರ ಸರ್ಜನು ಕಾಯಿಲೆಯಿಂದ ಬಳಲುತ್ತಿದ್ದಾಗ, ಉತ್ತರಾಧಿಕಾರಿಯ ಪ್ರಶ್ನೆ ಉದ್ಭವಿಸಿತು. ಯೋಗ್ಯವಾದ ಉತ್ತರಾಧಿಕಾರಿಯನ್ನೇ ನೇಮಕಮಾಡಬೇಕಾಗಿತ್ತು. ಈ ವಿಷಯದಲ್ಲಿ ರಾಜನು ಸೂಕ್ತ ಘೋಷಣೆಯನ್ನು ಮಾಡಬೇಕಾಗಿತ್ತು, ಮತ್ತು ಪ್ರತಿಯೊಂದು ಹಂತದಲ್ಲಿ ಅದನ್ನು ಬ್ರಿಟೀಷರಿಗೆ ತಿಳಿಸಬೇಕಾಗಿತ್ತು. ಈ ವೇಳೆಗೆ ದಕ್ಷಿಣ ಭಾರತದ ವೈಷಮ್ಯಪೂರಿತ ರಾಜಕೀಯ ನಕ್ಷೆಯಲ್ಲಿ ಮರಾಠರಾಗಲಿ, ಪೇಶ್ವೆಗಳಾಗಲಿ, ಇಲ್ಲವೇ ದೂರದಲ್ಲಿದ್ದ ಹೈದರಾಲಿ, ಆತನ ಮಗ ಟಿಪ್ಪು ಸುಲ್ತಾನನಾಗಲಿ ಇರಲಿಲ್ಲ. ಅವರೆಲ್ಲ ಆಗಲೇ ಪರಸ್ಥಿತಿಯ ಕೈಗೊಂಬೆಗಳಾಗಿದ್ದರು. ಇಲ್ಲವೇ ಕ್ರೂರ ಆಳರಸರಾದ ಬ್ರಿಟೀಷರು ಅವರನ್ನು ನಿರ್ನಾಮಗೊಳಿಸಿದ್ದರು. ಅಂತಹ ಪರಿಸ್ಥಿತಿಯಲ್ಲಿ ಥ್ಯಾಕರೆ ಎಂಬ ಓರ್ವ ಇಂಗ್ಲೀಷ ಅಧಿಕಾರಿ ಅಂದಿನ ಧಾರವಾಡದ ಜಿಲ್ಲಾಧಿಕಾರಿಯಾಗಿದ್ದನು. ಅಂದು ಕಿತ್ತೂರಿನಲ್ಲಿ ನಡೆಯುವ ವಿದ್ಯಮಾನಗಳೆಲ್ಲ ಆತನಿಗೆ ತಿಳಿಯುತ್ತಿದ್ದವು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಅಂದು ನಡೆದ ರಾಜಕೀಯ ಬಲಾಬಲದ ಬೆಳವಣಿಗೆಗಳು ತಿಕ್ಕಾಟಕ್ಕೆ ತಿರುಗಿ ಇಡೀ ಕಿತ್ತೂರು ರಾಜ್ಯಕ್ಕೆ ಮತ್ತು ಜನತೆಗೆ ತೀವ್ರ ತೊಂದರೆಯನ್ನುಂಟು ಮಾಡಿದವು. ಈ ತಿಕ್ಕಾಟ ಅತಿಯಾಗಿ ಧ್ವಂಸಕ್ಕೆ ತಿರುಗಿ ದುರಂತದತ್ತ ಸಾಗಿ ಥ್ಯಾಕರೆಯ ಸಾವಿನೊಂದಿಗೆ ಕೊನೆಗೊಂಡಿತು. ಒಂದು ವೇಳೆ ಈ ಥ್ಯಾಕರೆಯು ಕಿತ್ತೂರ ಸಂಸ್ಥಾನದ ಬಗ್ಗೆ ತಲೆ ಕೆಡಿಸಿಕೊಳ್ಳದಿದ್ದರೆ ಒಳ್ಳೆಯದಾಗಿರುತ್ತಿತ್ತು. ಆಗ ಕಿತ್ತೂರಿನವರು ತಮಗೆ ಬೇಕಾದ ಉತ್ತರಾಧಿಕಾರಿಯನ್ನು ನೇಮಿಸಿಕೊಳ್ಳುತ್ತಿದ್ದರು. ಆದರೆ ಅದು ಹಾಗಾಗಲಿಲ್ಲ. ಸರ್ವಸನ್ನದ್ಧ ಜಿಲ್ಲಾಧಿಕಾರಿ ಥ್ಯಾಕರೆಯು ಕಿತ್ತೂರು ಸಂಸ್ಥಾನದ ವಿಷಯವಾಗಿ ತನ್ನದೇ ಆದ ಪೂರ್ವ ಗ್ರಹ ಪೀಡಿತ ವಿಚಾರಗಳನ್ನು ಹೊಂದಿ ಹೆಚ್ಚಿನ ಕಾರ್ಯಾಚರಣೆಯನ್ನೆಸಗಿ ಕಿತ್ತೂರ ಸಂಸ್ಥಾನವನ್ನು ಕೊನೆಗಾಣಿಸಿದನಲ್ಲದೇ, ತಾನು ನಿರ್ನಾಮವಾದದ್ದು ಒಂದು ದುರಂತವೆಂದು ಹೇಳಬಹುದು.

ಥ್ಯಾಕರೆಯ ಕಿತ್ತೂರ ಮೇಲಿನ ಸಕ್ರಿಯ ಕಾರ್ಯಾಚರಣೆ "ದತ್ತು ಮಕ್ಕಳಿಗೆ ಹಕ್ಕಿಲ್ಲ" ಎಂಬ ನೀತಿಯನ್ನು ಆಧರಿಸಿತ್ತು. ಕಿತ್ತೂರಿನ ಕೆಲವು ಜನ ಧಾರವಾಡಕ್ಕೆ ಹೋಗಿ ಕಿತ್ತೂರ ರಾಜಕಾರಣದ ಬಗ್ಗೆ ಹೇಳಿರಲೇಬೇಕು. ಇದನ್ನು ನಂಬಿದ ಥ್ಯಾಕರೆ ತಾನೆ ಅದರ ಸತ್ಯಾಸತ್ಯತೆಯನ್ನು ಅರಿಯಲು ಪ್ರಯತ್ನಿಸಿದ. ಆತ ಕಿತ್ತೂರಿನ ಓರ್ವ ವೈದ್ಯಾಧಿಕಾರಿಯನ್ನು ಕಳುಹಿಸಿ ದೊರೆಯ ಮರಣದ ಬಗ್ಗೆ ವಿಚಾರಿಸಿದನಲ್ಲದೆ, ಆತನ ಉತ್ತರಾಧಿಕಾರಿಯ ಕುರಿತಾದ ಸುದೀರ್ಘ ಪರಿಶೀಲನೆಯನ್ನು ಆರಂಭಿಸಿದ. ಇದರಿಂದಾಗಿ ಕಿತ್ತೂರಿನವರು ಆ ಮಗುವನ್ನು ದತ್ತು ತೆಗೆದುಕೊಳ್ಳುವಾಗ ಬ್ರಿಟೀಷರಿಂದ ಯಾವುದೇ ಪರವಾನಗಿಯನ್ನು ತೆಗೆದುಕೊಳ್ಳದ್ದು ಆತನ ಗಮನಕ್ಕೆ ಬಂದಿತು. ದಿವಂಗತ ಅರಸ ತನ್ನ ಪುತ್ರನ ಬಗ್ಗೆ ಧಾರವಾಡದ ಕಲೆಕ್ಟರರಿಗೆ ಬರೆದನೆನ್ನುವ ಪತ್ರ ಸುಳ್ಳು ಎಂದು ಖಚಿತವಾಯಿತು. ಆ ಪತ್ರದ ಹಸ್ತಾಕ್ಷರ ಕೂಡ ಫೋರ್ಜರಿ ಎಂಬಂತಿತ್ತು. ಅಲ್ಲಿ ಮಾಡಿದ "ಸಹಿ" ಯು ಮೂಲ ಸಹಿಯಾಗಿರಲಿಲ್ಲ. ಆ ಪತ್ರವನ್ನು ನೋಡಿದ ಆತನಿಗೆ ಸಾಯುವ ಅರಸನ ಕೈಯಿಂದ ಆ ಪತ್ರಕ್ಕೆ ಸಹಿ ಹಾಕಿಸಿದಂತಿತ್ತು. ಉತ್ತರಾಧಿಕಾರಿಯಾಗುವ ದತ್ತು ಪುತ್ರನ ದಿವಂಗತ ಅರಸನೊಂದಿಗೆ ಹೊಂದಿರುವ ಸಂಬಂಧವು ಆತನ ಅರ್ಹತೆಯನ್ನು

ಪ್ರಶ್ನಿಸುವಂತಿತ್ತು. ಕಿತ್ತೂರ ಸಂಸ್ಥಾನದ ಜನತೆಯಾಗಲಿ, ರಾಜಪರಿವಾರವಾಗಲೀ ಈ ಮೇಲಿನ ಮುಖ್ಯ ವಿಷಯಗಳ ಬಗ್ಗೆ ಒಮ್ಮತದ ಅಭಿಪ್ರಾಯ ಹೊಂದಿಲ್ಲದಿರುವುದು ಸಹಜವಾಗಿಯೇ ಸಂಶಯಕ್ಕೆ ಕಾರಣವಾಯಿತು. ಈ ವಿಷಯದ ಕುರಿತಾಗಿ ಥ್ಯಾಕರೆಯನ್ನು ಸಂಧಿಸಲಾಗಲಿ, ಇಲ್ಲವೇ ಅವನೊಂದಿಗೆ ಚರ್ಚಿಸಲು ಆ ರಾಜ ಮನೆತನದ ಸ್ತ್ರೀಯರು ಸಿದ್ಧರಿರಲಿಲ್ಲ. ಅದರಂತೆ ಥ್ಯಾಕರೆ ಕೂಡ ಈ ವಿಷಯದಲ್ಲಿ ತಾಳ್ಮೆ ಕಳೆದುಕೊಂಡನು. ಆದಾಗ್ಯೂ ಕಿತ್ತೂರಿನ ಕೆಲವು ಜನ ಈ ವಿಷಯವನ್ನು ಬ್ರಿಟೀಷ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಲು ಪ್ರಯತ್ನಿಸಿದರು.

ಇಂತಹ ವಿಷಮ ಸನ್ನಿವೇಶದಲ್ಲಿ ಧಾರವಾಡದ ಜಿಲ್ಲಾಧಿಕಾರಿ ಥ್ಯಾಕರೆಯು ಕಿತ್ತೂರ ಸಂಸ್ಥಾನದ ಪರಿಸ್ಥಿತಿಯನ್ನು ಬ್ರಿಟೀಷ ಆಳ್ವಿಕೆಯನ್ನು ಪರವಾಗಿ ನಿರ್ಣಯಿಸಲು ತಯಾರಾದನು. ಬ್ರಿಟೀಷರು ಮುಂಬೈ ಮತ್ತು ಮದ್ರಾಸ ಎಂಬ ನಗರಗಳ ಹೆಸರಿನಲ್ಲಿ ಭಾರತೀಯ ಯೋಧರ ಪಡೆಗಳನ್ನು ಹೊಂದಿದ್ದರು. ಈ ಸೈನ್ಯವು ಯಾವುದೇ ಪ್ರಾಂತದ ಇಲ್ಲವೆ ಸ್ಥಳೀಯ ರಾಜ್ಯಗಳಿಂದ ಉದಯಿಸಬಹುದಾದ ಸಮಸ್ಯೆಗಳನ್ನು ಯುದ್ಧದ ಮೂಲಕ ಬಗೆಹರಿಸಲು ಸದಾ ಸಿದ್ಧವಾಗಿರುತ್ತಿತ್ತು. ಥ್ಯಾಕರೆ ಸೈನ್ಯದ ಸಹಾಯದಿಂದ ಕಿತ್ತೂರ ಸಮಸ್ಯೆಯನ್ನು ಬಗೆಹರಿಸಲು ಸಿದ್ಧನಾದನು. ಆದರೆ ಸಮಸ್ಯೆ ಗಂಭೀರ ಸ್ವರೂಪದ್ದಾಗಿತ್ತು. ಥ್ಯಾಕರೆ ಬಳಸಿಕೊಂಡ ಸೇನಾ ತುಕಡಿಗಳು ಸಮಸ್ಯೆಗಳಿಗೆ ಸಿಲುಕಿದವು. ಸ್ಟಿವನ್‌ಸನ್ ಮತ್ತು ಎಲ್ಲಿಯಟ್‌ರ ನೇತೃತ್ವದಲ್ಲಿದ್ದ ಎರಡು ಸೇನಾ ತುಕಡಿಗಳು ಬಂಧನಕ್ಕೊಳಗಾದವು. ಥ್ಯಾಕರೆಗೂ ಒಂದು ಗುಂಡೇಟು ತಗುಲಿ ಅವನ ಪ್ರಜ್ಞೆ ತಪ್ಪಿತು. ನಂತರ ಚನ್ನಮ್ಮ ಖಡ್ಗದಿಂದ ಅವನ ರುಂಡ ತೆಗೆದಳು. ಹೀಗೆ ಥ್ಯಾಕರೆ ಮರಣವನ್ನಪ್ಪಿದ. ಉಳಿದೆಲ್ಲ ಸೈನ್ಯವನ್ನು ಕಿತ್ತೂರ ಸೈನಿಕರು ಸೋಲಿಸದರು. ಥ್ಯಾಕರೆ ತೊಂದರೆಯಲ್ಲಿದ್ದದ್ದನ್ನು ಕೇಳಿದ ಸೋಲ್ಲಾಪುರದ ಜಿಲ್ಲಾಧಿಕಾರಿ ಮನ್ರೊ ಅಲ್ಲಿಗೆ ಧಾವಿಸಿದನಾದರೂ ಅದರಿಂದ ಪ್ರಯೋಜನವಾಗಲಿಲ್ಲ. ಹೀಗೆ ಕಿತ್ತೂರ ಸಂಸ್ಥಾನ ಬ್ರಿಟೀಷರನ್ನು ಸೋಲಿಸಿ ವಿಜಯಶಾಲಿಯಾಯಿತು. ಆದರೆ ಬ್ರಿಟೀಷರು ತಮ್ಮ ಕಾರ್ಯಾಚರಣೆಯನ್ನು ಮುಂದುವರೆಸಿದರು. ಬೆಳಗಾವಿಯಲ್ಲಿರುವ ಅವರ "ದೋಅಬ್" ಸೇನಾದಳವು ಯುದ್ಧಕ್ಕೆ ಸನ್ನದ್ಧವಾಯಿತು. ಇದು ಕಿತ್ತೂರ ಸೈನ್ಯವನ್ನು ಸೋಲಿಸಿ ರಾಣಿ ಚನ್ನಮ್ಮನನ್ನು ಬೈಲಹೊಂಗಲದ ಸೆರೆಮನೆಯಲ್ಲಿಟ್ಟರು. ಆನಂತರ ಸಂಗೊಳ್ಳಿ ರಾಯಣ್ಣನಂತಹ ವೀರ ಯೋಧರ ಪಡೆಯೊಂದು ರಚಿತವಾಗಿ ಕಿತ್ತೂರು ಸುತ್ತ-ಮುತ್ತ ಬ್ರಿಟೀಷರ ವಿರುದ್ಧ ಕೆಲಸ ಮಾಡತೊಡಗಿತು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಬ್ರಿಟೀಷರು ಕಿತ್ತೂರಿನ ಕೆಲವು ಜನರೊಂದಿಗೆ ಸಂಪರ್ಕಕಲ್ಪಿಸಿಕೊಂಡು ಇಂತಹ ಪಡೆಗಳ ಬಗ್ಗೆ ಗುಪ್ತವಾಗಿ ಮಾಹಿತಿ ಪಡೆಯಲಾರಂಭಿಸಿದರು. ತದ ನಂತರ ಅವರಿಗೆ "ಬಕ್ಷೀಸು" (ಬಹುಮಾನ) ಕೊಡುತ್ತೇವೆ ಮತ್ತು ಅಪರಾಧಗಳನ್ನು ಕ್ಷಮಿಸುತ್ತೇವೆಂದು ಆಶ್ವಾಸನೆಯನ್ನು ನೀಡಿದ್ದರು. ಅಂತಹವರಲ್ಲಿ ಕಿತ್ತೂರ ಸೇನಾದಳದ ನಾಯಕ ಗುರುಸಿದ್ದಪ್ಪ ಪ್ರಮುಖನು. ಅದೇ ವೇಳೆಗೆ ಬ್ರಿಟೀಷರು ಉಳಿದ ನಾಯಕರನ್ನು ಬಲಹೀನಗೊಳಿಸಿ ಅವರನ್ನು ಒಡೆದು ಆಳತೊಡಗಿದರು. ಅವರು ಅಲ್ಲಿಯ ಜನರನ್ನು ಆಕರ್ಷಿಸಿ ಅವರನ್ನು ತಮ್ಮ ಪರವಾಗಿ ಬಳಸಿಕೊಂಡರು. ಅಂದು ಆಶ್ವಾಸನೆ ನೀಡುವುದು, ಮೋಸಮಾಡುವುದು ಬಹು ಸಾಮಾನ್ಯವಾಗಿತ್ತು.

ಕಿತ್ತೂರಿನಲ್ಲಿರುವ ಕಲಮಠವು ಕಿತ್ತೂರ ಅರಸರ ಗುರುಗಳ ಸ್ಥಾನವಾಗಿತ್ತು. ಕಲಮಠದ ಸ್ವಾಮಿಗಳು, ವಿದ್ಯಾವಂತರು, ನಿಷ್ಕಪಟಿಗಳು, ವಿಚಾರವಾದಿಗಳು ಆಗಿದ್ದರು. ಅವರ ಆಧ್ಯಾತ್ಮ ಹಾಗೂ ಬೌದ್ಧಿಕತೆಗಳಿಗೆ ಕಿತ್ತೂರ ಸಂಸ್ಥಾನದ ಅರಮನೆಯಲ್ಲಿ ತುಂಬು ಗೌರವವಿತ್ತು. ಕೆಲವು ಸಂದರ್ಭಗಳಲ್ಲಿ ಆ ಮಠದ ಸ್ವಾಮಿಗಳು ಈ ರಾಜಮನೆತನದ ರಾಜಕೀಯ ಸಲಹೆಗಾರರಾಗಿಯೂ ಕಾರ್ಯನಿರ್ವಹಿಸಿದರು. ಅವರು ಕಿತ್ತೂರ ಅರಮನೆಯಲ್ಲಿ ಜರುಗುವ ಮಂತ್ರಿ ಮಂಡಲದ ಅಧ್ಯಕ್ಷತೆಯನ್ನು ವಹಿಸುತ್ತಿದ್ದರಲ್ಲದೇ ಅನೇಕ ವಿಚಾರಗಳಲ್ಲಿ ಅವರಿಗೆ ಸಲಹೆ ನೀಡುತ್ತಿದ್ದರು. ತೊಂದರೆಗೀಡಾದ ಸಂದರ್ಭಗಳಲ್ಲಿ ರಾಜರು ಕಲಮಠಕ್ಕೆ ಹೋಗುವ ಪರಿಪಾಠವನ್ನಿಟ್ಟುಕೊಂಡಿದ್ದರು. ಅಂದರೆ ಯುದ್ಧ ಮತ್ತು ಶಾಂತಿಯ ಕಾಲಗಳಲ್ಲೆಲ್ಲ ರಾಜರು ತಮ್ಮ ರಾಜಕೀಯ ವಿದ್ಯಮಾನಗಳಿಗೆ ಅವರ ನೆರವನ್ನು ಪಡೆಯುತ್ತಿದ್ದರು. ಈ ಮಠದ ಸ್ವಾಮಿಗಳು ಮುಖ್ಯವಾಗಿ ಧಾರ್ಮಿಕರು, ಬೌದ್ಧಿಕರು, ತಾತ್ವಿಕರು ಆಗಿದ್ದರು. ಅವರು ರಾಜಕೀಯ ವಿದ್ಯಮಾನಗಳ ರಾಯಭಾರವನ್ನು ವಹಿಸುತ್ತಿದ್ದರು. ಹಾಗೂ ಅವರ ರಾಜಕೀಯ ಸಲಹೆಗಳು ಮೆಚ್ಚುವಂತಹವಾಗಿದ್ದವು. ಅವರು ರಾಜಸದರು ಒಳ್ಳೆಯ ಜೀವನ ನಡೆಸಲು ತಮ್ಮ ಪ್ರಭಾವ ಬೀರುತ್ತಿದ್ದರು. ಇದರಿಂದಾಗಿ ಕಿತ್ತೂರು ಸಂಸ್ಥಾನದ ಅರಸರು ಆ ಗುರುಗಳನ್ನು ಗೌರವಿಸುತ್ತಿದ್ದುದು ಇಲ್ಲಿಯ ಮುಖ್ಯ ಸಂಗತಿಯಾದರೆ, ಕಿತ್ತೂರಿನ ಅನೇಕ ಅರಸರ ಸಮಾಧಿಗಳು ಆ ಮಠದ ಆವರಣದಲ್ಲಿವೆ. ಇದರಿಂದಾಗಿ ಕಿತ್ತೂರು ಸಂಸ್ಥಾನದ ಸ್ಮಾರಕಗಳಿಗೆ ಭೇಟಿನೀಡುವವರು ಆ ಮಠಕ್ಕೆ ಹೋಗುವಂತಾಗಿದೆ. ಇಂದಿನ ಆಧುನಿಕ ಯುಗದಲ್ಲಿಯೂ ಆ ಮಠದ ಪ್ರಭಾವ ಕುಗ್ಗಿಲ್ಲವೆಂಬುದು ಸತ್ಯ ಸಂಗತಿಯಾಗಿದೆ.

ಕಲ್ಮಠಕ್ಕೆ ಸಂಬಂಧಿಸಿದಂತೆ ಕಿತ್ತೂರು ಪಟ್ಟಣದ ಹೊರಗಿರುವ ಧಾರ್ಮಿಕ ಚೌಕಿಮಠ. ಅಂದು ಈ ಮಠದಲ್ಲಿ ಅನೇಕ ಕೊಠಡಿಗಳಿದ್ದು, ಅಲ್ಲಿ ರಾಜಕೀಯ ಚರ್ಚೆಗಳು ನಡೆಯುತ್ತಿದ್ದವು. ರಾಜಕೀಯ ದಿನಗಳಲ್ಲಿ ಕಿತ್ತೂರಿನ ಅರಸರು ಆ ಕೊಠಡಿಗಳಲ್ಲಿ ಸ್ವಾಮಿಜಿ ಜೊತೆ ಯುದ್ಧ, ಶಾಂತಿ, ಆಂತರಿಕ ಸಂಸ್ಥಾನಿಕ ಆಡಳಿತ ಇತ್ಯಾದಿ ವಿಷಯಗಳ ಬಗ್ಗೆ ಗಹನವಾದ ಚರ್ಚೆ ಮಾಡುತ್ತಿದ್ದರು. ಇಂದು ಕಿತ್ತೂರಿನಲ್ಲಿ ನಾವು ಕೇವಲ ಕೋಟೆಯ ಅವಶೇಷಗಳನ್ನು ಕಾಣುತ್ತೇವೆ. ಕೋಟೆ ಕಡೆಗೆ ಹೋಗುತ್ತಿದ್ದಂತೆ ಅಲ್ಲಿ ಇರುವ ಒಂದು ಭೂ ಗುರುತು ಬಹದ್ದೂರ್ಗಡ ಕಟ್ಟಡವಾಗಿದೆ. ಈ ಬಹದ್ದೂರ್ಗಡವು ಅಂದಿನ ಕಾಲದ ವೀಕ್ಷಣಾ ಗೋಪುರವಾಗಿತ್ತು. ಅಲ್ಲಿಂದ ಕಿತ್ತೂರ ನಗರದ ಸುತ್ತಲಿರುವ ಭೂ ಪ್ರದೇಶವನ್ನು ವೀಕ್ಷಿಸಬಹುದಾಗಿದೆ. ಈ ಕೋಟೆಯ ಉತ್ತರಕ್ಕೆ "ರಣಗಟ್ಟಿ ಕೆರೆ" ಎಂಬ ಕೆರೆ ಇದ್ದು ಅಲ್ಲಿಯೇ ರಾಣಿ ಚನ್ನಮ್ಮ ಬ್ರಿಟೀಷರ ವಿರುದ್ಧ ಧೈರ್ಯ ಹಾಗೂ ಸಂಕಲ್ಪದಿಂದ ಯುದ್ಧ ಮಾಡಿದಳು.

ಕಿತ್ತೂರಿನ ವಿಶಾಲವಾದ ಕೋಟೆ ಎರಡು ಹೊರಗೋಡೆಗಳನ್ನು ಹೊಂದಿದೆ. ಈ ಎರಡು ಹೊರಗೋಡೆಗಳ ನಡುವೆ ಕಂದಕ ಎಂದರೆ, ತಗ್ಗು ಇದ್ದು ಅಲ್ಲಿ ಸದಾ ನೀರಿರುತ್ತಿತ್ತು. ಗೋಡೆಗಳು ವೃತ್ತಾಕರದಲ್ಲಿದ್ದು, ಅವುಗಳಲ್ಲಿ ಅನೇಕ ಬುರುಜುಗಳಿದ್ದವು. ಈ ಕೋಟೆಯ ಮೂಲ ಬಾಗಿಲು ಉತ್ತರಕ್ಕಿದ್ದು ಅಲ್ಲಿ "ಆನೆಗೊಂಡ" ಎಂಬ ನೀರಿನ ಪ್ರದೇಶವಿತ್ತು.

ಈ ವೃತ್ತಾಕಾರದ ಕೋಟೆಯ ಗೋಡೆಗಳಲ್ಲಿ ಸುರಕ್ಷಾ ದೃಷ್ಟಿಯಿಂದ ಅಷ್ಟೊಂದು ಪ್ರವೇಶದ್ವಾರಗಳಿರಲಿಲ್ಲ. ಜನರು ವಕ್ರದಾರಿ ಕ್ರಮಿಸಿಯೇ ಪ್ರವೇಶಮಾಡಬೇಕಾಗಿತ್ತು. ಕೋಟೆಯ ದಕ್ಷಿಣದ ಅಂಚಿನಲ್ಲಿ ಕುದುರೆಯ ಲಾಯಗಳು, ವಾಸಿಸುವ ಮನೆಗಳು ಇವೆ. ಪ್ರಾಯಶಃ ರಾಜಾಸ್ಥಾನದ ಅಧಿಕಾರಿಗಳು ಅಲ್ಲಿ ವಾಸಿಸುತ್ತಿದ್ದಿರಬೇಕು. ವಾಯವ್ಯ ದಿಕ್ಕಿನಲ್ಲೊಂದು ವೀಕ್ಷಣಾ ಗೋಪುರವಿದೆ.

ಕಿತ್ತೂರು ಕೋಟೆ ಹೆಬ್ಬಾಗಿಲ ಹತ್ತಿರ ಸೈನಿಕರಿಗಾಗಿ ಅಲ್ಲಲ್ಲಿ ಚಿಕ್ಕ-ಚಿಕ್ಕ ಕೊಠಡಿಗಳಿವೆ. ಅಲ್ಲಿ ಕುದರೆ ಸವಾರರು, ಸೈನಿಕರು ಇರುತ್ತಿದ್ದರು. ಅತ್ಯಾಕರ್ಷಕವಾದ ಎದುರಿಗಿನ "ಪೋರ್ಚವು ಸುಮಾರು ೧೦೦ ಅಡಿ ಅಗಲ, ೩೦ ಅಡಿ ಆಳವಾಗಿತ್ತು". ತುಂಬಾ ದೊಡ್ಡದಾದ ಕಲ್ಲುಗಳ ಮೇಲೆ ನಿಂತಿರುವ ಹೆಬ್ಬಾಗಿಲಿನ ಪರೆಡವು ಭವ್ಯವಾಗಿತ್ತು.

ಕಿತ್ತೂರು ಕೋಟೆಯು ಉತ್ತಮ ಯೋಜನೆಯ ಪ್ರತಿಫಲವಾಗಿತ್ತು. ಅಲ್ಲಿದ್ದ ರಾಜರ ಮನೆ, ಸಭಾಂಗಣ, ಅಡಿಗೆಮನೆ, ದೇವರಮನೆ, ಸ್ನಾನದ ಕೊಳ್ಳಗಳು, ಅಧಿಕಾರಿಗಳ ಕೊಠಡಿಗಳು, ಅತಿಥಿಗೃಹಗಳು, ಸಭಾಗೃಹಗಳು ಎಲ್ಲವೂ ವ್ಯವಸ್ಥಿತವಾಗಿದ್ದವು. ವಯೋವೃದ್ಧರಿಗೆ ಯಾವುದೇ ತೊಂದರೆಯಾಗುತ್ತಿರಲಿಲ್ಲ. ಅಲ್ಲಿಯ ಪ್ರತಿಯೊಂದು ಕೊಠಡಿಗೆ ಎರಡು ಪ್ರವೇಶದ್ವಾರಗಳಿದ್ದು, ಪ್ರತಿಯೊಂದು ಬೇರೆ-ಬೇರೆ ಕೊಠಡಿಗಳಿಗೆ ಸಂಬಂಧ ಕಲ್ಪಿಸುವಂತಿದ್ದವು. ಇದನ್ನೆಲ್ಲಾ ತಿಳಿದ ಮೇಲೆ ಅರಮನೆಯ ವರ್ಣನೆ ಅಗತ್ಯವೆನಿಸದು. ಅರಮನೆಯ ಮಹತ್ವದ ಸ್ಥಳವಾದ ಸಭಾಗೃಹವು ಉತ್ತಮವಾಗಿದ್ದು ಅಲ್ಲಿ ರಾಜಸದರು ಮಂತ್ರಿಮಂಡಲದ ಸಭೆ-ಸಮಾರಂಭಗಳನ್ನು ನಡೆಸುತ್ತಿದ್ದರು. ಹಾಗೂ ಅಲ್ಲಿಯ ರಾಜ್ಯ ಸರದಾರರು ಮತ್ತು ಉನ್ನತ ಅಧಿಕಾರಿಗಳೊಂದಿಗೆ ರಹಸ್ಯ ಸಭೆಗಳು ಜರುಗುತ್ತಿದ್ದವು. ಅಲ್ಲಿ ಸಭಾ ಸದಸ್ಯರಿಗೆ ಕುಳಿತುಕೊಳ್ಳಲು ಸರಿಯಾದ ಆಸನದ ವ್ಯವಸ್ಥೆ ಇತ್ತು. ಕೆಲವು ಸಲ ಇದೇ ಗೃಹದಲ್ಲಿ ಸಂಸ್ಥಾನದ ಪ್ರತಿನಿಧಿಗಳಿಗೆ ಮತ್ತು ಆಹ್ವಾನಿತರಿಗಾಗಿ ಊಟೋಪಚಾರದ ವ್ಯವಸ್ಥೆ ನಡೆಯುತ್ತಿತ್ತು. ಈ ಸಭಾ ಗೃಹದ ಎಡಗಡೆ ರಾಜ ಪರಿವಾರದವರಿಗಾಗಿ ಒಂದು ಈಜು ಕೊಳವಿತ್ತು. ಇನ್ನೊಂದು ಪಕ್ಕದಲ್ಲಿ ಶುಕ್ರ ಗ್ರಹವನ್ನು ವೀಕ್ಷಿಸಲು ಒಂದುವರೆ ಅಡಿಯ ನಳಿಕೆ ಇತ್ತು ಎನ್ನುತ್ತಾರೆ. ಅಲ್ಲೊಂದು ಕಟ್ಟೆಯು ಆಸನ ರೂಪವಾಗಿ ಪರಿಣಮಿಸಿತ್ತು. ಎಲ್ಲಕ್ಕಿಂತ ಆಶ್ಚರ್ಯವೆಂದರೆ ಅಲ್ಲಿಯ ನೀರುಸರಬರಾಜು ವ್ಯವಸ್ಥೆ ಎನ್ನಬೇಕು. ಅರಮನೆಯ ಹಿತ್ತಲಲ್ಲಿ ಒಂದು ಉತ್ತಮವಾದ ಬಾವಿ ಇತ್ತು. ಅಲ್ಲಿ ನೀರನ್ನು ಸಂಗ್ರಹಿಸಲು ಸುರಂಗ ಕಲ್ಲಿನ ನೀರು ಸಂಗ್ರಾಹಕಗಳಿದ್ದವು. ಅಲ್ಲಿಂದ ಸಂಗ್ರಹಿಸಿದ ನೀರು ಹಿತ್ತಾಳೆಯ ನಳಿಕೆಗಳ ಮೂಲಕ ಎಲ್ಲ ಕೊಠಡಿಗಳಿಗೆ ಸರಬರಾಜಾಗುತ್ತಿತ್ತು. ಕಲ್ಲಿನಿಂದ ಮಾಡಿದ ನೀರಿನ ಬೇಸನ್‌ಗಳು ಅಡಿಗೆ ಮನೆ ಮತ್ತು ಇತರ ಅನೇಕ ಕಡೆ ಇದ್ದವು.

ಕಿತ್ತೂರು ಅರಮನೆಯ ಇನ್ನೊಂದು ಮಹತ್ವದ ಅಂಶವೆಂದರೆ ಅಲ್ಲಿಯ ನೀರು ಬುಗ್ಗೆಗಳನ್ನು ಅಳವಡಿಸಿದ ಬೃಂದಾವನ. ಅಲ್ಲಿ ಬಳಸಲ್ಪಟ್ಟ ಇಟ್ಟಿಗೆಗಳಲ್ಲಿ ಹಲವಾರು ವಿಧಗಳು. ಹಲವಾರು ಆಕಾರಗಳಿದ್ದು ಉನ್ನತ ಗುಣಮಟ್ಟದ್ದಾಗಿದ್ದವು. ಇಂದಿಗೂ ನೋಡಬಹುದಾದ ಆ ಕೋಣೆಯ ಕೆಲವು ಗೋಡೆಗಳು ಕೇವಲ ಅರ್ಧ ಅಡಿ ದಪ್ಪವಾಗಿದ್ದರೂ

ಅವುಗಳ ಗುಣಮಟ್ಟ ವರ್ಣನಾತೀತ. ಇಡೀ ಅರಮನೆಯು ಉತ್ತಮ ವಾಸ್ತುಶಿಲ್ಪವಾಗಿದ್ದು ಅದರ ರಚನೆಯಲ್ಲಿ "ಹೆಮಟೈಟ್ ಕ್ವಾರ್ಟ್" ಮಣ್ಣು ಕಟ್ಟಿದ ಕಲ್ಲು ಹಾಗೂ ಗಚ್ಚನ್ನು ಬಳಸಲಾಗಿದೆ. ಅಲ್ಲಿಯ ಕಂಬಗಳನ್ನು ವೃತ್ತಾಕಾರದ ಡಿಸ್ಕ್‌ಗಳಲ್ಲಿ ರಚಿಸಿದೆ. ಕಂಬಗಳ ನಿರ್ಮಾಣಕ್ಕೆ ಕಲ್ಲು ಹಾಗೂ ಗಚ್ಚನ್ನು ಬಳಸಿದ್ದಾರೆ.

ಅಡಿಗೆ ಮನೆ, ಸ್ನಾನಗೃಹದ ಮಾಡಗಳು ಇತ್ಯಾದಿ ಕಡೆಗಳಲ್ಲೆಲ್ಲಾ ಪ್ಲಾಸ್ಟರ್ ಇದೆ. ಆ ಗೋಡೆಗಳಲ್ಲಿರುವ ಕಿಟಕಿ ಮತ್ತು ಮಾಡಗಳು ಎಷ್ಟು ಬುದ್ಧಿವಂತಿಯಿಂದ ಬಳಸಿಕೊಂಡಿದ್ದಾರೆಂದರೆ, ಅಲ್ಲಿ ಸ್ವಚ್ಛವಾದ ಗಾಳಿ ಬೆಳಕಿನ ವ್ಯವಸ್ಥೆ ಇದೆ. ಅಲ್ಲಿಯ ಕಮಾನಿನಾಕಾರದ ಕಿಡಕಿ ಮತ್ತು ಇತರ ವಿನ್ಯಾಸಗಳು ಇಸ್ಲಾಮಿಕ್ ಹಾಗೂ ಮರಾಠಾ ಶಿಲ್ಪವನ್ನು ಪ್ರತಿಬಿಂಬಿಸುತ್ತವೆ.

"ಕಿತ್ತೂರಿನಲ್ಲಿರುವ ಶಾಲೆ ಕಾಲೇಜುಗಳು" ತಮ್ಮದೆ ಆದ ಇತಿಹಾಸವನ್ನು ವಿವರಿಸುತ್ತವೆ. ಪ್ರಾರಂಭದಲ್ಲಿ ಸರಕಾರವು ಕೆಲವೊಂದು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಪ್ರಾರಂಭಿಸಿತು. ಅವುಗಳಲ್ಲಿ ಅತ್ಯಂತ ಹಳೆಯ ಶಾಲೆಗಳೆಂದರೆ ಸರಕಾರಿ ಕನ್ನಡ ಗಂಡು ಮಕ್ಕಳ ಶಾಲೆ ನಂ.೨ ಮತ್ತು ಸರಕಾರಿ ಉರ್ದು ಗಂಡು ಮಕ್ಕಳ ಮತ್ತು ಹೆಣ್ಣು ಮಕ್ಕಳ ಶಾಲೆಗಳು. ಅಂದು ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುತ್ತಿತ್ತು. ಈ ಶಾಲೆಗಳು ಇಂದು ಅನೇಕ ಜನ ಶಿಕ್ಷಕರನ್ನು ಮತ್ತು ವಿದ್ಯಾರ್ಥಿಗಳನ್ನು ಹೊಂದಿದೆ. ಸ್ವತಂತ್ರ್ಯದ ನಂತರ ಅನೇಕ ಶಾಲಾ ಕಾಲೇಜುಗಳು ಬೆಳಕಿಗೆ ಬಂದವು. ಅವುಗಳಲ್ಲಿ ಹೆಚ್ಚಿನವು ಕಿತ್ತೂರ ನಾಡ ವಿದ್ಯಾವರ್ಧಕ ಸಂಸ್ಥೆಯ ಶಾಲೆ ಕಾಲೇಜುಗಳಾಗಿವೆ. ಶಿಶುವಿಹಾರದ ಶಾಲೆಗಳಿಂದ ಹಿಡಿದು ಪದವಿ ಮಟ್ಟದ ಕಾಲೇಜುಗಳನ್ನು ಇಂದು ಕಿತ್ತೂರಿನಲ್ಲಿ ಕಾಣಬಹುದು. ಅನೇಕ ಶಿಕ್ಷಣ ಪ್ರೇಮಿಗಳು ಈ ಶಾಲಾ-ಕಾಲೇಜುಗಳನ್ನು ಬೆಳೆಸಿದ್ದಾರೆ.

ಕಿತ್ತೂರಿನ ಹಿಂದಿನ ಅರಸರು

ಕಿತ್ತೂರು ಸಂಸ್ಥಾನದ ಪೂರ್ವದ ಗಣ್ಯ ವ್ಯಕ್ತಿಗಳನ್ನು, ರಾಜರನ್ನು ಮತ್ತು ಅವರ ಆಳ್ವಿಕೆಯ ವೈಭವವನ್ನು ಪುನರ್ ಪರಿಶೀಲಿಸುವುದು ಅಗತ್ಯವೂ, ಅರ್ಥ ಪೂರ್ಣವೂ ಆಗಿದೆ. ಕಿತ್ತೂರಿನ ಮೊದಲ ಅರಸರಲ್ಲಿ ೧೬೬೦ ರಿಂದ ೧೬೯೧ ರ ವರೆಗೆ ಆಳಿದ ಅಲ್ಲಪ್ಪ ಗೌಡ ಸರದೇಸಾಯಿ ಬಹು ಪ್ರಮುಖನೆಂದು ಹೇಳಬೇಕು. ಆತ ಕಿತ್ತೂರ ಅರಸು ಮನೆತನದ ಶಿನೆಯ ಪ್ರಭುವಾಗಿದ್ದನು. ಹಿಂದೆ ಗೀಜಗನಹಳ್ಳಿ ಎಂಬಲ್ಲಿ ಇದ್ದ ರಾಜಧಾನಿಯನ್ನು ೧೬೮೨ರಲ್ಲಿ ಕಿತ್ತೂರಿಗೆ ಸ್ಥಳಾಂತರಿಸಿದವನೇ ಈ ದೊರೆ. ಆತನ ಕಾಲದಲ್ಲಿ ಕಿತ್ತೂರ ಸಂಸ್ಥಾನವು ಸಂಪಗಾಂವ ಮತ್ತು ಬೀಡಿ ಪ್ರಾಂತಗಳನ್ನು ಒಳಗೊಂಡಿತ್ತು. ಆತ ವೀರ ದೊರೆಯಾಗಿದ್ದ. ತನ್ನ ದೇಶವನ್ನುಳಿಸಿಕೊಳ್ಳುವ ಸಲುವಾಗಿ ಬಿಜಾಪುರದ ಅರಸರೊಂದಿಗೆ ಹೋರಾಡ ಬೇಕಾಯಿತು. ಕಿತ್ತೂರ ಸಂಸ್ಥಾನದ ಕೋಟೆಯನ್ನು ಈ ಅರಸನ ಕಾಲದಲ್ಲಿಯೇ ನಿರ್ಮಿಸಲಾಯಿತು.

ಇಂದು ಹಾಳಾಗಿ ನಿಂತಿರುವ ಅರಮನೆಯು ಹಿಂದಿನ ವೈಭವವನ್ನು ನೆನಪಿಸುವಂತಿದೆ. ಸುಸ್ಥಿತಿಯಲ್ಲಿದ್ದಾಗ ಆ ಅರಮನೆಯ ಮುಂಭಾಗದ ಪೋರ್ಚವು ಒಂದು ನೂರು ಅಡಿ

ಉದ್ದ, ಮೂವತ್ತು ಅಡಿ ಅಗಲವಿತ್ತು. ಬಲಿಷ್ಟವಾದ ಸಾಗವಾನಿ ಕಂಬಗಳು ಅದಕ್ಕೆ ಪೂರಕವಾಗಿದ್ದವು. ಮೇಲ್ಛಾವಣಿಯು ಕೂಡ ಸಾಗವಾನಿ ಕಟ್ಟಿಗೆಯಿಂದ ನಿರ್ಮಿತವಾಗಿತ್ತು. ಅದರ ಮೇಲೆ ನಕ್ಷೆಗಳಿದ್ದವು. ಅಂದಿನ ಅರಮನೆ ಮೂರು ಅಂತಸ್ತಿನದಾಗಿತ್ತು. ಅಲ್ಲಿ ಭೋಜನಾಲಯ, ಅಡಿಗೆ ಮನೆ ಮತ್ತು ಸ್ನಾನ ಗೃಹಗಳಿದ್ದವು. ಒಂದು ಸಲಕ್ಕೆ ಒಂದು ಸಾವಿರ ಜನ ಊಟಕ್ಕೆ ಕೂಡಬಹುದಾದಂತಹ ಬೃಹತ್ ಭೋಜನಾಲಯವಿತ್ತು. ಅಲ್ಲಿ ಉಗ್ರಾಣಗಳು, ಕುದುರೆ, ಒಂಟೆ, ಆನೆಗಳಿಗೆ ಆಶ್ರಯದ ಲಾಯಗಳಿದ್ದವು. ಅರಮನೆಯ ಮುಂಭಾಗದಲ್ಲಿ "ಸಾದರ ಕಟ್ಟೆ" ಎಂಬ ಸ್ಥಳವಿತ್ತು. ಅಲ್ಲಿ ಅರಸನನ್ನು ಕಾಣಲು ಬರುವ ಜನ ಕಾಯುತ್ತಿದ್ದರೆಂಬ ಪ್ರತೀತಿಯಿದೆ.

ಅಲ್ಲಪ್ಪ ಗೌಡ ಸರದೇಸಾಯಿಯ ನಂತರ ಮುದಿ ಮಲ್ಲಪ್ಪ ಗೌಡ ಸರದೇಸಾಯಿ ಪಟ್ಟಕ್ಕೆ ಬಂದನು. ೧೬೯೧ ರಿಂದ ೧೬೯೬ರ ವರೆಗೆ ಅಂದರೆ ಕೇವಲ ಐದು ವರ್ಷ ಆಳ್ವಿಕೆ ನಡೆಸಿದ ಮುದಿ ಮಲ್ಲಪ್ಪಗೌಡ ಸರದೇಸಾಯಿಯು ಕಿತ್ತೂರ ಸಂಸ್ಥಾನದ ಆರನೆಯ ದೊರೆಯಾಗಿದ್ದು, ಆತ ಶೂರನಾಗಿದ್ದನೆಂದು ತಿಳಿದುಬರುತ್ತದೆ. ಆತನು ಯುದ್ಧದಲ್ಲಿ ಬಿಜಾಪುರ ಆದಿಲ್ ಶಾಹಿ ಅರಸರಿಗೆ ಸಹಾಯ ಮಾಡಿದ್ದರಿಂದ ಅವರು ಆತನಿಗೆ "ಶಮಶೇರ್ ಜಂಗ್ ಬಹಾದ್ದೂರ" ಮತ್ತು "ದಿಲ್‌ದಾರ್ ಖಾನ್ ಬಹಾದ್ದೂರ್ ದಿಲ್‌ವರ್‌ಜಂಗ" ಎಂಬ ಗೌರವ ಬಿರುದನ್ನು ನೀಡಿದ್ದರು. ಈ ವೇಳೆಗೆ ಮೊಗಲ ಅರಸ ಔರಂಗಜೇಬನು ಆದಿಲ್‌ಶಾಹಿಗಳನ್ನು ಸೋಲಿಸಿ ಬಿಜಾಪುರನ್ನು ವಶಪಡಿಸಿಕೊಂಡಿದ್ದನು. ಔರಂಗಜೇಬನು ಕಿತ್ತೂರನ್ನು ಒಳಗೊಂಡ ಸವಣೂರನ್ನು ತನ್ನ ಕಡೆಯ "ರವುಫ್ ಖಾನ್" ಎಂಬ ನವಾಬನಿಗೆ ಒಪ್ಪಿಸಿದ್ದನು. ಹಾಗಾಗಿ ಮುದಿಮಲ್ಲಪ್ಪಗೌಡ ಸರದೇಸಾಯಿಯು ತನ್ನ ಆಡಳಿತದ ಮುಂದುವರಿಕೆಗಾಗಿ ಈ ಹೊಸ ನವಾಬನೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡನು.

ನಂತರ ಪಟ್ಟಕ್ಕೆ ಬಂದ ಚಿಕ್ಕಮಲ್ಲಪ್ಪ ಸರದೇಸಾಯಿಯು ಕಿತ್ತೂರನ್ನು ೧೬೯೬ ರಿಂದ ೧೭೧೭ರ ವರೆಗೆ ಆಳಿದನು. ಆತ ಕಿತ್ತೂರ ಸಂಸ್ಥಾನದ ಏಳನೆಯ ಅರಸನಾಗಿದ್ದನು. ಹಿಂದಿನ ಅರಸ ಮುದಿಮಲ್ಲಪ್ಪಗೌಡನು ಸವಣೂರ ನವಾಬನೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು ಕಿತ್ತೂರ ಸಂಸ್ಥಾನದ ಗಡಿಗಳನ್ನು ವಿಸ್ತರಿಸಿದ್ದನು. ಈ ಮೂಲಕ ರಾಜ್ಯದ ಜನತೆಯ ಸಾಮಾಜಿಕ, ಆರ್ಥಿಕ ಪ್ರಗತಿ ಸುಧಾರಿಸಿತ್ತು. ನಂತರ ಪಟ್ಟಕ್ಕೆ ಬಂದ ಅರಸ ಶಿವನಗೌಡ ಸರದೇಸಾಯಿಯು ೧೭೧೭ ರಿಂದ ೧೭೩೪ ರ ವರೆಗೆ ಆಳಿದನು. ಆತ ಔರಂಗಜೇಬನಿಂದ ಅನೇಕ ಬಿರುದುಗಳನ್ನು, ಸನದುಗಳನ್ನು ಪಡೆದನು. ಆತ ಜನಾನುರಾಗಿಯಾಗಿದ್ದನು.

ಶಿವನಗೌಡ ನಂತರ ಪಟ್ಟಕ್ಕೆ ಬಂದ ಮಲ್ಲಣ್ಣರುದ್ರಗೌಡನು ೧೭೩೪ ರಿಂದ ೧೭೪೯ರ ವರೆಗೆ ಅರಸನಾಗಿದ್ದನು. ಆತನ ಪಟ್ಟದ ರಾಣಿ ಮಲ್ಲಮ್ಮ ಬಹು ಪ್ರಬಲಳಾಗಿದ್ದು ರಾಜ್ಯದ ವಿದ್ಯಮಾನದಲ್ಲಿ ಪ್ರಮುಖಪಾತ್ರ ವಹಿಸಿದಳು. ಆದರೆ ರಾಜನು ಓರ್ವ ಮುಸ್ಲಿಂ ಮಹಿಳೆ "ನಿರಂಜನಿ" ಯಲ್ಲಿ ಅನುರಕ್ತನಾಗಿ, ಅವಳನ್ನು ವೀರಶೈವ ಧರ್ಮಕ್ಕೆ ಮತಾಂತರಿಸಿಕೊಂಡು ಮದುವೆಯಾದನು. ರಾಜನ ಈ ಪ್ರಣಯದ ಕಥೆಯನ್ನು

ಅನೇಕ ಜನಪದ ಕವಿಗಳು ತಮ್ಮ ಹಾಡು, ಲಾವಣಿಗಳಲ್ಲಿ ರಚಿಸಿ ಹಾಡಿದ್ದಾರೆ. ಈ ಮದುವೆಗೆ ಅರಸನ ಸಹೋದರ ಮಲ್ಲಪ್ಪನ ವಿರೋಧ ನಡೆಯಲಿಲ್ಲ. "ನಿರಂಜನಿ" ಯಲ್ಲಿ ಅನುರಕ್ತನಾದ ರಾಜ ಅವಳಿಗಾಗಿ ಕಿತ್ತೂರ ಸಂಸ್ಥಾನದ ಉತ್ತರದ ದೇಶನೂರದಲ್ಲಿ ಸುಂದರವಾದ ಒಂದು ಸೌಧವನ್ನು ನಿರ್ಮಿಸಿ ತನ್ನ ಹೆಚ್ಚಿನ ಸಮಯವನ್ನು ಅವಳ ಸನಿಹದಲ್ಲಿ ಕಳೆದನು. ಆ ದೇಶನೂರಿನ ಸೌಧಕ್ಕೆ "ನಿರಂಜನಿ ಮಹಲ್" ಎಂದು ಕರೆಯುತ್ತಾರೆ. ಇದರಿಂದಾಗಿ ರಾಣಿ ಮಲ್ಲಮ್ಮ ರಾಜ್ಯದ ಆಡಳಿತವನ್ನು ತಾನೆ ನೋಡಿಕೊಳ್ಳುತ್ತಿದ್ದಳು. ಮಲ್ಲಮ್ಮ ದಕ್ಷ ಆಡಳಿತಗಾರ್ತಿ ಎಂಬುದನ್ನು ತೋರಿಸಿಕೊಟ್ಟಳು. ಅರಸ ರುದ್ರಗೌಡನು ದೇಶನೂರಲ್ಲಿ ತನಗೊಂದು ಕೋಟೆಯನ್ನು ಕಟ್ಟಿಸಿಕೊಂಡನು. ಅದಕ್ಕೆ "ರುದ್ರಗಡ" ಎಂದು ಹೆಸರಿಡಲಾಯಿತು.

ರುದ್ರಗೌಡನ ನಂತರ ವೀರಪ್ಪಗೌಡ ಸರದೇಸಾಯಿಯು ೧೭೪೯ ರಿಂದ ೧೭೮೨ರ ವರೆಗೆ ರಾಜ್ಯವಾಳಿದನು. ಆತನದು ದೀರ್ಘವಾದ ಆಳ್ವಿಕೆಯಾಗಿದೆ. ೧೭೭೮ರಲ್ಲಾದ ಒಂದು ಒಪ್ಪಂದದ ಪ್ರಕಾರ ಬೆಳಗಾಂವ ಜಿಲ್ಲೆಯ ಮಲಪ್ರಭಾ ನದಿಯ ದಕ್ಷಿಣದ ಎಲ್ಲ ಪ್ರದೇಶವನ್ನು, ಬಿಜಾಪುರ ಜಿಲ್ಲೆಯ ಕೃಷ್ಣಾ ನದಿಯ ದಕ್ಷಿಣದ ಎಲ್ಲ ಪ್ರದೇಶಗಳನ್ನು ಗೆದ್ದುಕೊಂಡಿದ್ದ, ಮೈಸೂರಿನ ಹೈದರಾಲಿಯು ಕಿತ್ತೂರ ದೇಸಾಯಿಯವರಿಂದ ಅವರ ದೇಶಗತಿಯನ್ನು ಉಳಿಸಿಕೊಳ್ಳಲು ತನಗೆ ಸಲ್ಲಬೇಕಾದ "ನಜರಾನಾ" ನೀಡಬೇಕೆಂದು ಕೇಳಿಕೊಂಡನು. ಕಿತ್ತೂರಿನ ದೊರೆ ಇದಕ್ಕೆ ಸಮ್ಮತಿಸಿದನು. ವೀರಪ್ಪಗೌಡನು ಓರ್ವ ಮಹಾತ್ವಾಕಾಂಕ್ಷಿಯಾಗಿದ್ದು ೧೭೭೮ರಲ್ಲಿ ತಾಸಗಾಂವದ ಪಟವರ್ಧನನನ್ನು ಸೋಲಿಸಿ ಗೋಕಾಕ ಮತ್ತು ಸವದತ್ತಿಗಳನ್ನು ಆಕ್ರಮಿಸಿಕೊಂಡನು. ಆಗಲೇ ಪರಸಗಡ, ಬೀಡಿ ಮತ್ತು ಸಂಪಗಾಂವಗಳು ಆತನ ಅಧೀನದಲ್ಲಿದ್ದವು. ಈ ವೇಳೆಗೆ ಬಹು ಪ್ರಬಲರಾದ ಪೇಶ್ವೆಯವರು ಮತ್ತು ಹೈದರಾಲಿಯ ನಡುವೆ ಸತತವಾದ ಯುದ್ಧಗಳಾಗುತ್ತಿದ್ದು ಅವರ ಮಧ್ಯ ಮೈಸೂರಿನಂತಹ ಚಿಕ್ಕ ಸಂಸ್ಥಾನಗಳು ತೊಂದರೆಗೊಳಗಾದವು. ಮುಂದೆ ೧೭೭೯ರಲ್ಲಿ ಪರಶುರಾಮ ಭಾವು ಗೋಕಾಕನ್ನು ಮರಳಿ ವಶಪಡಿಸಿಕೊಂಡು ಕಿತ್ತೂರಿನ ಅರಸ ವೀರಪ್ಪಗೌಡನನ್ನು ಮಿರಜಿನ ಸೆರೆಮನೆಯಲ್ಲಿಟ್ಟನು. ಅರಸ ವೀರಪ್ಪಗೌಡ ೧೭೮೨ರಲ್ಲಿ ಸೆರೆಮನೆಯಲ್ಲಿಯೇ ಮರಣವನ್ನಪ್ಪಿದನು. ನಂತರ ಆತನ ಮೃತದೇಹವನ್ನು ಕಿತ್ತೂರಿಗೆ ತಂದು ಸಕಲ ಗೌರವಾದರಗಳೊಂದಿಗೆ ಕಲ್ಮಠದ ಆವರಣದಲ್ಲಿ ದಹನಗೊಳಿಸಲಾಯಿತು. ಆತನ ಸಮಾಧಿಯು ಸುರಕ್ಷಿತವಾಗಿದ್ದು ಪ್ರವಾಸಿತಾಣವಾಗಿದೆ.

ದೊರೆ ವೀರಪ್ಪಗೌಡ ಸರದೇಸಾಯಿಯ ಮರಣದ ನಂತರ ಕಿತ್ತೂರ ಸಂಸ್ಥಾನವು ಮಲ್ಲಸರ್ಜನನ್ನು ದತ್ತು ತೆಗೆದುಕೊಂಡಿತು. ಕಿತ್ತೂರಿನ ೧೨ ಜನ ಅರಸರಲ್ಲಿ ಮಲ್ಲಸರ್ಜ ದೊರೆಯು ಬಹು ಪ್ರಖ್ಯಾತನೆಂದು ಹೇಳಬಹುದು. ಈ ಪುಸ್ತಕದ ನಾಯಕಿ ರಾಣಿ ಚನ್ನಮ್ಮ ಆತನ ಎರಡನೆಯ ರಾಣಿಯಾಗಿದ್ದಳು. ಚನ್ನಮ್ಮನ ಒಟ್ಟಾರೆ ವ್ಯಕ್ತಿತ್ವವನ್ನು ಸಾಹಸ ಕಥೆಯನ್ನು ಅರಿಯತೊಡಗಿದಂತೆ ವಿಮರ್ಶಿಸಬಹುದು. ೧೮೧೬ರ ವರೆಗೆ ಆಳಿದ ಮಲ್ಲಸರ್ಜನ ರಾಜ್ಯಭಾರದ ಇತಿಹಾಸವನ್ನು ಅರಿಯುವುದು ಅಗತ್ಯವಾಗಿದೆ.

ಹೊಸ ದೊರೆ ಮಲ್ಲಸರ್ಜ ದೇಸಾಯಿಯು ಕಿತ್ತೂರನ್ನು ೧೭೮೨ ರಿಂದ ೧೮೧೬ರ ವರೆಗೆ ಆಳಿದ. ಕಿತ್ತೂರ ಇತಿಹಾಸದ ಸಾಹಿತ್ಯ, ಸಂಗೀತ, ಕಲೆಗಳಲ್ಲಿ ಅಭಿವ್ಯಕ್ತವಾಗಿರುವಂತೆ ಮಲ್ಲಸರ್ಜನ ಆಳ್ವಿಕೆಯು ವೈಭವೋಪೇತವಾಗಿತ್ತೆನ್ನುತ್ತಾರೆ. ಇವನ ಕಾಲದಲ್ಲಿ ವಿದೇಶಿ ಶಕ್ತಿಗಳಾದ ಬ್ರಿಟೀಷರು, ಫ್ರೆಂಚರು, ಪೋರ್ಚುಗೀಸರು ದೇಶಿಯ ಅರಸು ಮನೆತನಗಳ ಮೇಲೆ ಅಧಿಕಾರ ಸ್ಥಾಪಿಸುವ ಸನ್ನಾಹದಲ್ಲಿದ್ದರು. ಅವುಗಳಲ್ಲಿ ಮರಾಠರು, ಬಿಜಾಪುರದ ಸುಲ್ತಾನರು, ಹೈದರಾಬಾದಿನ ನಿಜಾಮರು, ಮೈಸೂರಿನ ಹೈದರಾಲಿ ಮತ್ತು ಆತನ ಮಗ ಟಿಪ್ಪು ಬಹು ಪ್ರಮುಖರು. ಇವರ ಸುತ್ತಲು ಸಣ್ಣ–ಪುಟ್ಟ ಮಾಂಡಲೀಕ ದೊರೆಗಳು, ನಾಯಕರು ಸಾಕಷ್ಟಿದ್ದು ಅವರೆಲ್ಲ ಕ್ಷುಲ್ಲಕ ಕಾರಣಗಳಿಗಾಗಿ ಸ್ವಾರ್ಥಕ್ಕಾಗಿ ಇತರರೊಂದಿಗೆ ಸದಾ ಜಗಳವಾಡುತ್ತಿದ್ದರು. ಯಾವ ಅರಸರಿಗೂ ತಮ್ಮ ದೇಶದ ಬಗ್ಗೆ ಗೌರವವಿರಲಿಲ್ಲ. ಇಂತಹ ಕಾಲಾವಧಿಯಲ್ಲಿ ಮಲ್ಲ ಸರ್ಜನು ಕಿತ್ತೂರಿನ ಅರಸನಾಗಿ ಪಟ್ಟಕ್ಕೆ ಬಂದನು.

ನಂತರ ಮೂರುವರ್ಷ ಅಂದರೆ, ೧೭೮೭ರ ವರೆಗೆ ಸಂಸ್ಥಾನವನ್ನು ತನ್ನ ಕಪಿಮುಷ್ಠಿಯಲ್ಲಿ ಇರಿಸಿಕೊಂಡ ಟಿಪ್ಪು ಸುಲ್ತಾನನ ಆಡಳಿತಾಧಿಕಾರಿ "ಬದ್ರುಲ್ ಜಮ್ಮಖಾನ"ನು ಮಲ್ಲಸರ್ಜನಿಗೆ ಬೆಂಬಲ ನೀಡಿದ್ದಕ್ಕಾಗಿ ಹಣ ಕೇಳಿದನು. ಮುಂದೆ ೧೭೯೨ರಲ್ಲಿ ಶ್ರೀರಂಗ ಪಟ್ಟಣದಲ್ಲಿ ಜರುಗಿದ ಒಂದು ಮಹತ್ವದ ಒಪ್ಪಂದದ ಪ್ರಕಾರ ಮರಾಠರು ಮತ್ತೆ ಕಿತ್ತೂರಿನ ಪ್ರಾಂತಗಳಾದ ಪರಸಗಡವನ್ನು ವಶಪಡಿಸಿಕೊಂಡರಲ್ಲದೇ ಕರ್ನಾಟಕದ ತುಂಗಭದ್ರೆಯವರೆಗಿನ ಪ್ರದೇಶಗಳ ಮೇಲೆ ತಮ್ಮ ಹಕ್ಕು ಸ್ಥಾಪಿಸಿದರು.

೧೮೦೦ರ ಜೂನ್ ತಿಂಗಳಲ್ಲಿ ಮರಾಠರ ಘಟಾನುಘಟಿ ವಿಧ್ವಂಸಕ ಬಂಡುಕೋರ ದೋಂಡಿಬಾಗನು ಕಿತ್ತೂರಿಗೆ ಬಂದನು. ಆತ ಮರಾಠರ ನಾಯಕ ದೊಂಡೊಪಂತ ಗೋಖಲೆಯನ್ನು ಕಿತ್ತೂರಿಗೆ ಯುದ್ಧಕ್ಕೆ ಕರೆದನು. ಈ ಯುದ್ಧದಲ್ಲಿ ಗೋಖಲೆಯನ್ನು ಕೊಂದನು. ದೋಂಡಿಬಾಗನು ತನ್ನ ಕೃತ್ಯದ ಪರಿಹಾರಕ್ಕಾಗಿ ಗೋಖಲೆಯ ರಕ್ತದಿಂದ ತನ್ನ ಮೀಸೆಯನ್ನು ತೊಳೆದುಕೊಂಡನೆಂದು ಹೇಳುತ್ತಾರೆ. ಈ ಬಂಡುಕೋರ ದೋಂಡಿಬಾಗನು ಧಾರವಾಡದ ವೆಲ್ಲೆಸ್ಲಿ ಬರುವವರೆಗೆ ಕಿತ್ತೂರಿನಲ್ಲಿಯೇ ಮೆರೆದನು.

೧೭೯೨ರಲ್ಲಾದ ಶ್ರೀರಂಗ ಪಟ್ಟಣದ ಒಡಂಬಡಿಕೆಯ ಪ್ರಕಾರ ಮರಾಠರು ಮತ್ತು ಬ್ರಿಟೀಷರು ಸುಮಾರು ೨೫ ವರ್ಷಗಳ ಕಾಲ ಸೌಹಾರ್ದಯುತವಾಗಿದ್ದರು. ಆ ಒಪ್ಪಂದದ ಪ್ರಕಾರ ಪೇಶ್ವೆಗಳು ಬ್ರಿಟೀಷ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದರೆಂದು ತಿಳಿದು ಬರುತ್ತದೆ. ಇದೇ ರೀತಿ ಕಿತ್ತೂರಿನ ದೇಸಾಯಿಯು ಬ್ರಿಟೀಷರ ಅಧಿಕಾರವನ್ನು ಒಪ್ಪಿಕೊಂಡಿದ್ದನು. ಈ ಒಪ್ಪಂದಕ್ಕನುಗುಣವಾಗಿ ಕಿತ್ತೂರ ದೇಸಾಯಿಯು ಬ್ರಿಟೀಷರಿಗೆ ಒಂದು ಸಾವಿರ ಕುದುರೆಗಳನ್ನು, ಒಂದು ನೂರು ಸೈನಿಕರನ್ನು ಒಪ್ಪಿಸಿದನು. ದೊರೆಯು ಬ್ರಿಟೀಷರಿಗೆ ನೆರವಾಗಲು ಸಂಗೊಳ್ಳಿಯ ಹತ್ತಿರ ಅವರಿಗೆ ಅನೇಕ ಸವಲತ್ತುಗಳನ್ನು ಕಲ್ಪಿಸಿಕೊಟ್ಟಿದ್ದನು. ಆದಾಗ್ಯೂ ಬ್ರಿಟೀಷರಿಗೆ ಕಿತ್ತೂರಿನ ಸೌಲಭ್ಯಗಳು ದೊಡ್ಡದೆನಿಸಲಿಲ್ಲ. ಅವರು ಆ ದೇಸಾಯಿ ದೊರೆಯಿಂದ ಸದಾ ಮುಂಗಡ ಹಣವನ್ನು ಕೇಳತೊಡಗಿದರು. ಬ್ರಿಟೀಷರು ಪೇಶ್ವೆಯನ್ನು ಬೆಂಬಲಿಸಲು ಪ್ರಯತ್ನಿಸುತ್ತಿದ್ದಾಗ ದೇಸಾಯಿ ಅವರಿಗೆ ಸಹಾಯ ನೀಡಿದ್ದಕ್ಕಾಗಿ ಅವರು ಆತನನ್ನು ಅಧಿಕಾರದಲ್ಲಿ ಉಳಿಯಲು ಬಿಟ್ಟಿದ್ದರು. ಆ ವೇಳೆಗೆ

ಕಿತ್ತೂರ ದೇಸಾಯಿಯ ವಶದಲ್ಲಿ ಹೇಳಿಕೊಳ್ಳುವಷ್ಟು ಭೂಭಾಗವೇನೂ ಇರಲಿಲ್ಲ. ಆತನ ಹತ್ತಿರ ಒಂದು ಸಾವಿರ ಅಶ್ವದಳ ಮತ್ತು ನಾಲ್ಕು ಸಾವಿರ ಸೈನಿಕರಿದ್ದರು. ಆತನ ವಾರ್ಷಿಕವರಮಾನ ಒಟ್ಟು ನಾಲ್ಕು ಲಕ್ಷ ರೂಪಾಯಿಯಾಗಿತ್ತು. ಆದರೆ, ಅದರಲ್ಲಿಯ ೭೦ ಸಾವಿರ ರೂಪಾಯಿಯನ್ನು ಆತ ಪೇಶ್ವೆಗಳಿಗೆ ನೀಡುತ್ತಿದ್ದನು. ಇಷ್ಟು ವರಮಾನದಲ್ಲಿಯೂ ಕಿತ್ತೂರಿನ ರಾಜ್ಯಭಾರ ಆಡಳಿತ ಹಾಗೂ ಆಂತರಿಕ ವ್ಯವಹಾರಗಳೆಲ್ಲ ಸರಿಯಾಗಿಯೇ ನಡೆದಿದ್ದವು.

ಈ ಹಿನ್ನೆಲೆಯಲ್ಲಿ ಮಲ್ಲಸರ್ಜನು ಕಿತ್ತೂರ ಸಂಸ್ಥಾನದ ವೈಭವೋಪೇತ ಅರಸನೆಂದು ಹೇಳಬಹುದು. ಆತನ ಆಳ್ವಿಕೆಯ ಕಾಲವು ಕೂಡ ಬಹು ತೊಂದರೆಗಳಿಂದ ಕೂಡಿದ ಕಾಲವಾಗಿತ್ತು. ಆತ ಕಿತ್ತೂರನ್ನು ಸುಮಾರು ೨೪ ವರ್ಷಗಳ ಕಾಲ ಆಳಿದನು. ಆತನನ್ನು ಕಿತ್ತೂರಿನ ಅಗ್ರಗಣ್ಯ ದೊರೆಯೆಂದು ಹೇಳಬಹುದು.

ಮಲ್ಲಸರ್ಜ ದೇಸಾಯಿಯ ಆಳ್ವಿಕೆಯಲ್ಲಿ ಕಿತ್ತೂರ ಸಂಸ್ಥಾನವು ಸಂಪಗಾಂವ, ಬೀಡಿ, ಕಿತ್ತೂರ, ಖಾನಾಪುರ, ಕಲಘಟಗಿ, ಮುನೊಳಿ ಮತ್ತು ನರಗುಂದಗಳನ್ನು ಒಳಗೊಂಡಿತ್ತು. ಈ ಪ್ರದೇಶಗಳಿಂದು ಬೆಳಗಾಂವ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಹರಿದು ಹಂಚಿಹೋಗಿವೆ. ಈ ಪ್ರದೇಶ ಸುಮಾರು ೨೮೬ ಹಳ್ಳಿಗಳನ್ನು ೭೨ ಹ್ಯಾಮಲೆಟ್‌ಗಳನ್ನು ಹೊಂದಿದ್ದು, ಅವೆಲ್ಲ ಆಡಳಿತದ ದೃಷ್ಟಿಯಿಂದ ಹೆಸರು ಪಡೆದಿದ್ದವು. ನಮಗೆ ಗೊತ್ತಿರುವಂತೆ ಅಂದಿನ ಕಾಲದಲ್ಲಿ ಸಂಪರ್ಕ ವ್ಯವಸ್ಥೆ ಬಹಳ ಹಿಂದುಳಿದಿತ್ತು. ಮಳೆಗಾಲದಲ್ಲಿ ಅನೇಕ ಹಳ್ಳಿಗಳು ಹಳ್ಳ-ಕೊಳ್ಳಗಳಿಂದ ಪರಸ್ಪರ ಸಂಪರ್ಕವಿಲ್ಲದೆ ಏಕಾಂಗಿಯಾಗುತ್ತಿದ್ದವು. ಅದರಲ್ಲೂ ಮಲಪ್ರಭಾ ನದಿಯು ಬಹಳ ಕ್ರೂರವಾಗಿ ಹರಿಯುತ್ತಿತ್ತು ಎನ್ನಲಾಗಿದೆ.

ದೊರೆ ಮಲ್ಲಸರ್ಜನ ಕಾಲದಲ್ಲಿ ಕಿತ್ತೂರಿನಲ್ಲಿ ವ್ಯಾಪಾರ – ಉದ್ದಿಮೆಗಳು ಬೆಳೆದವು, ಸಮೃದ್ಧವಾದ ಕಲೆ, ಕರಕುಶಲತೆ ಹಾಗೂ ಗುಡಿಕೈಗಾರಿಕೆಗಳನ್ನು ಬೆಳೆಸಿಕೊಂಡರು. ಕೃಷಿ ಸಲಕರಣೆಗಳನ್ನು ಸುಧಾರಿಸಿಕೊಂಡರು. ನಂದಗಡ, ಖಾನಾಪುರ, ಬೈಲಹೊಂಗಲ, ಕಿತ್ತೂರ, ಸಂಪಗಾಂವ, ದೇಶನೂರಗಳು ಮಹತ್ವದ ವ್ಯಾಪಾರ ವಹಿವಾಟಿನ ಕೇಂದ್ರಗಳಾಗಿದ್ದವು. ಅಂದಿನ ಬೈಲಹೊಂಗಲವು ಇಂದಿನ ಬೈಲಹೊಂಗಲದಂತೆ ಹತ್ತಿ ಮತ್ತು ಬಟ್ಟೆ ತಯಾರಿಕೆಯ ಕೇಂದ್ರವಾಗಿತ್ತು. ಅಂದು ಕಿತ್ತೂರ ಸಂಸ್ಥಾನದ ವಾರ್ಷಿಕ ಆದಾಯ ಮೂರುವರೆ ಲಕ್ಷ ರೂಪಾಯಿಯಾಗಿತ್ತು

ದೊರೆ ಮಲ್ಲಸರ್ಜನು ಸಂಸ್ಕೃತಿಯ ಪ್ರತೀಕನಾಗಿದ್ದನು. ಆತ ಕಲೆ, ಸಾಹಿತ್ಯ, ಸಂಗೀತ, ನೃತ್ಯ ಮುಂತಾದವುಗಳನ್ನು ಪ್ರೋತ್ಸಾಹಿಸುತ್ತಿದ್ದನು. ಬರಹಗಾರರಿಗೆ, ಕವಿಗಳಿಗೆ ಆಶ್ರಯದಾತನಾಗಿದ್ದನು. ಕವಿ ಪ್ರಮುಖರಾದ "ಮೂಲ ತರಂಗಿಣಿಯ" ಕೃತಿ ಅಮೃತೇಶ್ವರ, ವೆಂಗಿ ಚನ್ನಬಸಪ್ಪ, ಮಲಗುಂದ ಜವಳಿ ಶೆಟ್ಟರ, ಚನ್ನಪ್ಪ ಕಾಶಿರಾಜ, ವರರುದ್ರ ಕವಿ ಮಣಿಪುರದ ನೀಲಕಂಠಾಚಾರ್ಯ ಮತ್ತು ಮಾಗುಂಡಿ ಶಿವಲಿಂಗ ಶಾಸ್ತ್ರಿಗಳೆಲ್ಲ ಕಿತ್ತೂರಿನ ರಾಜಾಶ್ರಯದಲ್ಲಿಯೇ ಬೆಳೆದವರು. ಈ ಕವಿಗಳ ಕಾವ್ಯವಿಂದು ಅಧ್ಯಯನಕ್ಕೆ ಲಭ್ಯವಿದೆ. ಅವರಲ್ಲಿ ಅನೇಕರು ಮಲ್ಲಸರ್ಜದೊರೆಯ ಕಾಲದವರು. ಜನಪದ ವೈವಿಧ್ಯ "ಢಮ-ಢಮಿ" ಯು ಕನ್ನಡ ಸಾಹಿತ್ಯಕ್ಕೆ ಕಿತ್ತೂರು ರಾಜಾಶ್ರಯ ನೀಡಿದ ಕೊಡುಗೆಯಾಗಿದೆ.

ದೊರೆ ಒಳ್ಳೆಯ ಪೋಷಾಕುಗಳನ್ನು ಧರಿಸುತ್ತಿದ್ದನು. ಆತ ಉತ್ತಮ ಬಟ್ಟೆಗಳನ್ನು ಬಯಸುತ್ತಿದ್ದನಾದ್ದರಿಂದ ಆತನ ಅರಮನೆಯಲ್ಲಿ ದೇಶದ ಎಲ್ಲ ಕಡೆಯ ಬಟ್ಟೆಗಳು ಇರುತ್ತಿದ್ದವು. ಆತ ನಿಸರ್ಗ ಪ್ರಿಯನು ಕೂಡ ಹತ್ತಿರದ "ದೇವರಸೀಗಿಹಳ್ಳಿ" ಯಲ್ಲಿ ಆತ ಒಂದು ಬೊಟಾನಿಕಲ್ ಗಾರ್ಡನ್ ನಿರ್ಮಿಸಿದ್ದನೆಂದು ಹೇಳುತ್ತಾರೆ. ಹೀಗೆ ಆ ದೊರೆ ಹಲವಾರು ಉತ್ತಮ ವಸ್ತುಗಳೆಲ್ಲದರ ಆಶ್ರಯದಾತನಾಗಿದ್ದನೆಂದು ತಿಳಿದುಬರುತ್ತದೆ.

ದೊರೆ ಮಲ್ಲಸರ್ಜನು ಒಳ್ಳೆಯ ಧಾರ್ಮಿಕ ಸ್ವಭಾವದವನಾಗಿದ್ದನೆಂದು ಹೇಳಬೇಕು. ತನ್ನ ಸಂಸ್ಥಾನದಲ್ಲಿ ಸರ್ವ ಧರ್ಮದವರ ಸಂಸ್ಥೆಗಳಾದ ದೇವಸ್ಥಾನ, ಮಸೀದಿ ಇತ್ಯಾದಿಗಳೆಲ್ಲವನ್ನು ಗೌರವಿಸಿದನು. "ಸಾವಿರ ಸಂಸ್ಥಾನ ಮಠ" ಎಂಬ ಗೌರವಕ್ಕೆ ಪಾತ್ರವಾದ ಕಿತ್ತೂರಿನ ಕಲಮಠದ ಅಧೀನ ಒಂದು ಸಾವಿರ ಮಠಗಳಿದ್ದವು ಎಂದು ತಿಳಿದುಬರುತ್ತದೆ. ಈ ಕಲ್ಮಠದ ಸ್ವಾಮಿಜಿಗಳು ಕಿತ್ತೂರು ಸಂಸ್ಥಾನದ ಕುಲಪುರೋಹಿತರಾಗಿದ್ದರು ಎಂಬುದು ಗಮನಾರ್ಹ.

ಕಿತ್ತೂರಿನ ಖ್ಯಾತ ನಾಮರಾದ ಚನ್ನಮ್ಮ ಕಾಕತಿಯ ದೇಸಾಯಿ ಮನೆತನದವಳು. ಅವಳು ವೀರವನಿತೆಯಾಗಿದ್ದಳು. ಧೂಳಪ್ಪಗೌಡ ಅವಳ ತಂದೆ, ಪದ್ಮಾವತಿ ಅವಳ ತಾಯಿಯಾಗಿದ್ದಳು. ಅವಳು ತನ್ನ ೨೨ನೇ ವಯಸ್ಸಿನಲ್ಲಿ ಕಿತ್ತೂರಿನ ದೊರೆ ಮಲ್ಲಸರ್ಜನನ್ನು ಮದುವೆಯಾದಳು. ಅವಳು ದೊರೆಯ ಎರಡನೆಯ ಪತ್ನಿ, ರಾಣಿ ಚನ್ನಮ್ಮನಿಗೆ ಪತಿಯ ರಾಜ್ಯಭಾರದ ವಿಷಯದಲ್ಲಿ ಆಸಕ್ತಿ ಇದ್ದುದರಿಂದ, ಕಿತ್ತೂರು ಸಂಸ್ಥಾನದ ಬಗ್ಗೆ ಬ್ರಿಟೀಷರು ಹೊಂದಿದ ಧೋರಣೆಯನ್ನು ಸಹಿಸದಾದಳು. ದೊರೆ ಮಲ್ಲಸರ್ಜ ತೀರಿಕೊಂಡ ನಂತರ ತಾನೇ ರಾಜ್ಯಭಾರ ನಡೆಸಲಾರಂಭಿಸಿದಳು. ೧೮೨೪ರ ಅಕ್ಟೋಬರ ೨೩ರಂದು ಧಾರವಾಡದ ಕಲೆಕ್ಟರ ಥ್ಯಾಕರೆಯು ಅವಳೊಂದಿಗೆ ಚರ್ಚಿಸಲು ಆಗಮಿಸಿದನು. ಆದರೆ ಅವನ ಸೊಕ್ಕಿನ ಸ್ವಭಾವ ಅವಳಿಗೆ ಹಿಡಿಸಲಿಲ್ಲ. ಸಿಟ್ಟಿಗೆದ್ದ ರಾಣಿ ಕಿತ್ತೂರು ಕೋಟೆಯ ಮಹಾದ್ವಾರವನ್ನು ಮುಚ್ಚಿಸಿದಳು. ರೊಚ್ಚಿಗೆದ್ದ ಥ್ಯಾಕರೆ ಮಹಾದ್ವಾರವನ್ನು ಇಪ್ಪತ್ತು ನಿಮಿಷಗಳಲ್ಲಿ ತೆರೆಯಬೇಕೆಂದು ಆಜ್ಞೆ ಮಾಡಿದನು. ಇದರಿಂದ ಕೆಂಡಾಮಂಡಲವಾದ ಕಿತ್ತೂರಿನ ಸೈನಿಕರು ಹೊರಗೆ ನಿಂತಿದ್ದ ಥ್ಯಾಕರೆಯನ್ನು, ಆತನ ಬಳಗದಲ್ಲಿದ್ದ ಕ್ಯಾಪ್ಟನ್ ಬ್ಲ್ಯಾಕ್, ಕ್ಯಾಪ್ಟನ್ ಸೆವೆಲ್, ಲೆಫ್ಟಿನೆಂಟ ಡೈಟನನ್ನು ಹಾಗೂ ಇನ್ನೂ ಅನೇಕ ಅಧಿಕಾರಿಗಳನ್ನು ಕೊಂದು ಹಾಕಿದರು.

ಈ ದುರಂತದಿಂದಾಗಿ ಕುಪಿತಗೊಂಡ ದಕ್ಷಿಣ ಭಾರತದ ಇಂಗ್ಲೀಷ ಆಯುಕ್ತನು, ಬಳ್ಳಾರಿ ಮತ್ತು ಸೊಲ್ಲಾಪುರ ಮುಂತಾದೆಡೆಗಳಲ್ಲಿರುವ ಸೈನಿಕರನ್ನು ಕಿತ್ತೂರ ಮುತ್ತಿಗೆಗೆ ಕಳಿಸಿದನು. ರಾಣಿ ಚನ್ನಮ್ಮ ಪುಣೆಯ ಆಯುಕ್ತನಿಗೆ ತಾನು ಪಡೆದ ದತ್ತು ಮಗುವನ್ನು ಉತ್ತರಾಧಿಕಾರಿಯನ್ನಾಗಲು ಬಿಡಬೇಕೆಂದು ಹಾಗೂ ತಾನು ಬ್ರಿಟೀಷರೊಂದಿಗೆ ಯುದ್ಧ ಮಾಡುವ ಯೋಜನೆಯನ್ನು ಹೊಂದಿಲ್ಲವೆಂದು ತಿಳಿಸಿ ಪತ್ರ ಬರೆದಳು. ಥ್ಯಾಕರೆ ಮಡಿದಾಗ ಆತನ ಜೊತೆಗಿದ್ದ ಕೆಲವು ಬ್ರಿಟೀಷ ಅಧಿಕಾರಿಗಳನ್ನು ಚನ್ನಮ್ಮ ಸೆರೆಮನೆಯಲ್ಲಿಸಿರಿದ್ದಳಾದರೂ ಅವರನ್ನ ಕೈದಿಗಳಂತೆ ಕಾಣದೆ ತನ್ನ ಅತಿಥಿಗಳಂತೆ ನೋಡಿಕೊಂಡಳು. ಕೈದಿಗಳಾಗಿದ್ದ ಅಧಿಕಾರಿಗಳು ತಮ್ಮನ್ನು ಬಿಡಬೇಕೆಂದು ಅನಂತರದಲ್ಲಿ

ತಾವು ಬ್ರಿಟೀಷ ಮೇಲಾಧಿಕಾರಿಗಳಿಂದ ಅವಳಿಗೆ ಸಹಾಯ ಮಾಡಿಸುವೆವೆಂದು ಆಶ್ವಾಸನೆ ನೀಡಿದರು. ಆಗಲೇ ಹೇಳಿದ ಬ್ರಿಟೀಷ ಆಯುಕ್ತ ಚಾಪೆಲ್ಲೆನನು, ಒಂದು ವೇಳೆ ಚನ್ನಮ್ಮ ಆ ಸೆರೆಮನೆಯಲ್ಲಿದ್ದವರನ್ನು ಬಿಟ್ಟರೆ ಹಾಗೂ ಅವಳು ಬ್ರಿಟೀಷರಿಗೆ ಶರಣಾದರೆ, ಯುದ್ಧದ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ತಿಳಿಸಿದನು. ಚನ್ನಮ್ಮ ಯುದ್ಧದ ಸಿದ್ಧತೆಯಲ್ಲಿದ್ದಳು. ಕೊಲ್ಲಾಪುರದ ಮಹಾರಾಜನಿಗೆ ನೆರವಿಗಾಗಿ ಮೊರೆ ಇಟ್ಟಳು. ಚನ್ನಮ್ಮ ಮಾತುಕತೆಯ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಮನಸ್ಸು ಮಾಡಿದ್ದು ನಿಜ. ಅದರಂತೆ ದಿನಾಂಕ ೦೨-೧೨-೧೮೨೪ ರಂದು ಸೆರೆಯಲ್ಲಿದ್ದ ಇತರ ಬ್ರಿಟೀಷ ಅಧಿಕಾರಿಗಳಾದ "ಎಲಿಯಟ್ ಮತ್ತು ಸ್ಟೆವನ್‌ಸನ್‌ರನ್ನು" ಬಿಟ್ಟು ಕೊಟ್ಟಳು. ಆದರೆ ಇಂಗ್ಲೀಷ ಆಯುಕ್ತ ಚಾಪ್ಲೆನನು ಕೋಟೆಯ ಒಳಗಡೆ ಇದ್ದವರೆಲ್ಲ ಶರಣಾಗಬೇಕೆಂದು ಕೇಳಿಕೊಂಡನು. ಇದರಿಂದ ಕುಪಿತಗೊಂಡ ರಾಣಿಯು ಆತನ ಸೇನಾ ತುಕಡಿಯ ಮೇಲೆರಗಿದಳು. ಈ ಘಟನೆ ನಡೆದದ್ದು ೧೮೨೪ರ ಡಿಸೆಂಬರ ೩ರಂದು. ಆದರೆ ಉತ್ತಮ ಯುದ್ಧ ಕೌಶಲ್ಯ ಹೊಂದಿದ್ದ ಬ್ರಿಟೀಷರು ಕಿತ್ತೂರಿನ ಸೈನ್ಯವನ್ನು ಸೋಲಿಸಿ ಚನ್ನಮ್ಮನನ್ನು ಬಂಧಿಸಿದರು. ಆಮೇಲೆ ಕಿತ್ತೂರು ಪ್ರದೇಶವನ್ನು ಬೆಳಗಾವಿಗೆ ಸೇರಿಸಿದರು. ರಾಣಿ ಚನ್ನಮ್ಮನನ್ನು ಬೈಲಹೊಂಗಲದ ಸೆರೆಮನೆಯಲ್ಲಿಟ್ಟರು. ಸೆರೆಯಲ್ಲಿದ್ದ ರಾಣಿ ಐದು ವರ್ಷಗಳ ನಂತರ ಅನಾರೋಗ್ಯದಿಂದ ನರಳಿ ೨ನೇ ಫೆಬ್ರುವರಿ ೧೮೨೯ರಂದು ಅಲ್ಲಿಯೇ ಸಾವನ್ನಪ್ಪಿದಳು. ಆದರೆ ಚನ್ನಮ್ಮ ಆರಂಭಿಸಿದ ಸ್ವಾತಂತ್ರ್ಯ ಚಳುವಳಿ ಅವಳೊಂದಿಗೇ ಕೊನೆಗೊಳ್ಳಲಿಲ್ಲ. ಅದು ಅವಳಿಂದಾಗಿ ಹೆಚ್ಚು ಹಬ್ಬಿತು. ಆಕೆಯ ವೀರ ಸೈನಿಕ ಸಂಗೊಳ್ಳಿಯ ಭರಮಣ್ಣ ಮತ್ತು ಕೆಂಚವ್ವಳ ಮಗನಾದ ರಾಯಣ್ಣನು ಚನ್ನಮ್ಮನಿಗೆ ನ್ಯಾಯ ಒದಗಿಸುವ ಸಲುವಾಗಿ ತನ್ನದೇ ಆದ ಪಡೆಯನ್ನು ಕಟ್ಟಿಕೊಂಡು ಬ್ರಿಟೀಷರ ಮೇಲೆ ದಾಳಿಯನ್ನು ಆರಂಭಿಸಿದ. ಚನ್ನಮ್ಮನ ದತ್ತು ಪುತ್ರನನ್ನು ಗೌರವಿಸಿ ಕಿತ್ತೂರ ಸಂಸ್ಥಾನವನ್ನು ಬ್ರಿಟೀಷರಿಂದ ಮುಕ್ತಗೊಳಿಸುವುದು ಮತ್ತು ಆತನನ್ನು ಸಿಂಹಾಸನದ ಮೇಲೆ ಕೂಡಿಸುವುದು ರಾಯಣ್ಣನ ಉದ್ದೇಶವಾಗಿತ್ತು.

ಈ ದಿಸೆಯಲ್ಲಿ ಸುರಪುರದ ನಾಯಕರು ಆತನಿಗೆ ಬೆಂಬಲ ನೀಡಿದರು. ಆದರೇನು ಕ್ರೂರ ವಿಧಿ ಅಲ್ಲಿತ್ತು. ರಾಯಣ್ಣನ ಜನರೇ ಅವನನ್ನು ಬ್ರಿಟೀಷರಿಗೆ ಒಪ್ಪಿಸಿದರು. ನಂದಗಡದಲ್ಲಿನ ಆಲದ ಮರಕ್ಕೆ ೨೮ನೇ ಡಿಸೆಂಬರ ೧೯೩೦ ರಂದು ಬ್ರಿಟೀಷರು ಆತನನ್ನು ಗಲ್ಲಿಗೇರಿಸಿದರು. ಕಿತ್ತೂರಿನ ಇನ್ನೊಬ್ಬ ವೀರ ಗುರುಸಿದ್ದಪ್ಪನು ಚನ್ನಮ್ಮನ ದತ್ತು ಪುತ್ರ ಶಿವಲಿಂಗಪ್ಪನನ್ನು ಪಟ್ಟಕ್ಕೆ ಕೂಡಿಸಲು ಬ್ರಿಟೀಷರ ವಿರುದ್ಧ ಪ್ರತಿಭಟನೆ ನಡೆಸಿದನು. ೧೮೩೦ರ ವೇಳೆಗೆ ಶಂಕ್ರಣ್ಣನೆಂಬುವನು ಬ್ರಿಟೀಷರ ವಿರುದ್ಧ ಕತ್ತಿ ಮಸೆದದ್ದು ಪ್ರಯೋಜನವಾಗಲಿಲ್ಲ. ೧೮೩೭ರ ವೇಳೆಗೆ ನಾಗಪ್ಪ ಗಜಪತಿ ಸವೈಶೆಟ್ಟಿ ಮತ್ತು ರುದ್ರಪ್ಪ ಕೊಟಗಿ ಎಂಬ ಸ್ವಾತಂತ್ರ್ಯ ಹೋರಾಟಗಾರರ ಗುಂಪೊಂದು ಪೋರ್ಚುಗೀಸರ ಸಹಾಯದಿಂದ ಬ್ರಿಟೀಷರ ವಿರುದ್ಧ ಸೆಣೆಸಲು ಯತ್ನಿಸಿತು. ಆದರೆ ಅವರ ಪ್ರಯತ್ನಗಳು ಫಲಿಸಲಿಲ್ಲ. ಕಿತ್ತೂರ ಸಂಸ್ಥಾನ ಬ್ರಿಟೀಷರಿಗೆ ಸೋತರೂ ಅಲ್ಲಿಯ ಜನತೆ ಬ್ರಿಟೀಷರ ವಿರುದ್ಧ ಎಷ್ಟು ವ್ಯಗ್ರವಾಗಿದ್ದರೆಂದರೆ, ಅವರು ರಾಯಣ್ಣನನ್ನು ಮೋಸದಿಂದ ಬ್ರಿಟೀಷರಿಗೆ ಒಪ್ಪಿಸಿದ ಖಾನಾಪುರದ ಲಿಂಗಣ್ಣ ಗೌಡನನ್ನು ನಿರ್ದಯವಾಗಿ ಕೊಂದುಹಾಕಿದರು.

ಜನತೆ ಬ್ರಿಟೀಷರ ವಿರುದ್ಧ ಹೊಂದಿದ್ದ ದ್ವೇಷ ಹಾಗೂ ಕಿತ್ತೂರಿನ ಅರಸರ ಸ್ವಾತಂತ್ರ್ಯ ಪ್ರಿಯತೆಯನ್ನು ತೋರಿಸುತ್ತದೆ. ಹೀಗೆ ೧೫೮೫ ರಿಂದ ೧೮೨೪ ರ ವರೆಗಿನ ೨೩೯ ವರ್ಷಗಳಲ್ಲಿ ೧೨ ಜನ ಅರಸರು ಕಿತ್ತೂರು ಸಂಸ್ಥಾನದಲ್ಲಿ ಆಳ್ವಿಕೆ ನಡೆಸಿದರು. ಕಿತ್ತೂರಿನ ಹಿಂದಿನ ಅರಸರ ಅಧ್ಯಯನ ಮೌಲಿಕವಾಗಿದೆ. ಕಿತ್ತೂರ ಅರಸರು ಹಾಗೂ ನಾಗರಿಕರು ಇತಿಹಾಸದ ಕಹಿ ಪಾಠಗಳನ್ನು ಕಲಿತು ಬ್ರಿಟೀಷರ ವಿರುದ್ಧ ಹಲವಾರು ವಿಷಯಗಳಲ್ಲಿ ಜಯಶಾಲಿಗಳಾದರು. ಈ ಮೇಲಿನ ಎಲ್ಲ ಘಟನೆಗಳಿಂದ ಪ್ರೇರಿತರಾಗಿ ಅನೇಕ ಸ್ವಾತಂತ್ರ್ಯಪ್ರಿಯರು ಉದಯಿಸಿದರು.

ಮಹಿಳೆಯರ ಪಾತ್ರ

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಮಹಿಳೆಯರ ತ್ಯಾಗ, ಬಲಿದಾನ ಮತ್ತು ಸತ್ಯಾಗ್ರಹವನ್ನು ಸುವರ್ಣಾಕ್ಷರಗಳಲ್ಲಿ ಬರೆಯಬೇಕು. ಅವರು ತಮ್ಮ ನಾಡಿನ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಮಹಿಳೆಯರು ವಹಿಸಿದ ಪಾತ್ರ ಬಹು ವಿಶೇಷವಾಗಿದೆ. ಗಾಂಧಿ ಯುಗದಲ್ಲೂ ನಾಡಿನ ಸ್ತ್ರೀಯರು ಸ್ವಾತಂತ್ರ್ಯಕ್ಕಾಗಿ, ಮಾತೃ ಭೂಮಿಯ ಗೌರವಕ್ಕಾಗಿ ತಮ್ಮ ವೈಯಕ್ತಿಕ ಜೀವನವನ್ನು ಮರೆತಿದ್ದಾರೆ. ಕರ್ನಾಟಕದಲ್ಲೆಲ್ಲಾ ಸ್ವಾತಂತ್ರ್ಯದ ಚಳುವಳಿಯ ಗಾಂಧಿ ಯುಗವು ೧೯೨೦ರಲ್ಲಿ ಆರಂಭವಾಯಿತು. ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯಲ್ಲಿ ಕೆಲವರು ತಮ್ಮ ವಿಶೇಷ ವ್ಯಕ್ತಿತ್ವಕ್ಕಾಗಿ ಹೆಸರಾಗಿದ್ದಾರೆ. ಈ ದೇಶದ ಸ್ವಾತಂತ್ರ್ಯ ಚಳುವಳಿಯ (೧೯೨೦ ರಿಂದ ೧೯೪೭) ಯುಗವನ್ನು ಪ್ರಭಾವಗೊಳಿಸಿದ ಮಹಾತ್ಮಾ ಗಾಂಧಿ ಈ ದೇಶದ ಎಲ್ಲ ಕ್ಷೇತ್ರದ ಜನರನ್ನು ಹೋರಾಟಕ್ಕೆ ಆಹ್ವಾನಿಸಿದರು. ೧೯೨೪ರ ಬೆಳಗಾವಿಯ ಅಖಿಲ ಭಾರತ ಕಾಂಗ್ರೇಸ್ ಅಧಿವೇಶನಕ್ಕೆ ಆಗಮಿಸಿದ ಗಾಂಧಿಯ ಪ್ರಭಾವ ಈ ನಾಡಿನ ಮಹಿಳೆಯರ ಮೇಲೆ ಅಪಾರವಾಯಿತು. ತಕ್ಷಣ ಅವರೆಲ್ಲ ಆತನ ಅನುಯಾಯಿಗಳಾದರು. ಅಂತಹ ಕೆಲವರಲ್ಲಿ ಉಮಾಬಾಯಿ ಕುಂದಾಪುರ, ಬಳ್ಳಾರಿ ಸಿದ್ದಮ್ಮ, ಟಿ.ಸುನಂದಮ್ಮ, ಕಮಲಾದೇವಿ ಚಟ್ಟೋಪಾಧ್ಯಾಯ, ನಾಗಮ್ಮ ಪಾಟೀಲ, ಕೃಷ್ಣಾಬಾಯಿ ಪಂಜಿಕರ, ಸುಬ್ಬವ್ವ ಜೋಯಿಸ, ಯಶೋಧರಮ್ಮ ದಾಸಪ್ಪ, ಪದ್ಮಾವತಿ ಬಿದರಿ, ಜಯದೇವಿತಾಯಿ ಲಿಗಾಡೆ, ಸೀತಾಬಾಯಿ ರಾಮಚಂದ್ರ ಮದಗಾಂವಕರ ಮತ್ತು ಶಕುಂತಲಾ ಕುರ್ತಕೋಟಿ ಪ್ರಮುಖರು.

ಗಾಂಧಿಯುಗದ ಸ್ವಾತಂತ್ರ್ಯ ಚಳುವಳಿಯ ಹೋರಾಟಗಾರರೆಂದಾಕ್ಷಣ ಉಮಾಬಾಯಿ ಕುಂದಾಪುರರ ಹೆಸರು ನೆನಪಿಗೆ ಬರುತ್ತದೆ. ಮುಂಬೈಯ ಈ ಹೆಣ್ಣುಮಗಳು ೧೯೨೩ರಲ್ಲಿ ಹುಬ್ಬಳ್ಳಿಗೆ ಸೊಸೆಯಾಗಿ ಬಂದವಳು. ಅವರ ಮಾವ ಶ್ರೀ ಆನಂದರಾವ ಕುಂದಾಪುರ ಸ್ವತಃ ಸ್ವಾತಂತ್ರ್ಯ ಹೋರಾಟ ಗಾರರಾಗಿದ್ದರಿಂದ ಸೊಸೆ ಉಮಾದೇವಿಗೆ ಸಾಮಾಜಿಕ ಚಟುವಟಿಕೆ ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಲು ಪ್ರೋತ್ಸಾಹಿಸಿದರು. ದುರ್ದೈವವಶಾತ ಆಕೆ ತನ್ನ ಸಣ್ಣ ವಯಸ್ಸಿನಲ್ಲಿಯೇ ವಿಧವೆಯಾದ್ದರಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮ ಉಳಿದ ಜೀವನವನ್ನು ಅರ್ಪಿಸಲು ಬಯಸಿದರು. ಆಕೆ

ಮುಂಬೈಯವಳಾಗಿದ್ದರಿಂದ ಅಲ್ಲಿ ಅನೇಕ ರಾಷ್ಟ್ರೀಯ ನಾಯಕರ ಭಾಷಣಗಳನ್ನು ಕೇಳಿದ್ದಳು. ಅವಳು ಅಂದು ಹುಬ್ಬಳ್ಳಿಯಲ್ಲಿದ್ದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರ ಎನ್. ಎಸ್. ಹರ್ಡಿಕರರ ಸಂಪರ್ಕಕ್ಕೆ ಬಂದಳು. ಹುಬ್ಬಳ್ಳಿಯ "ಭಗಿನಿ ಸಮಾಜ" ಮತ್ತು "ಟಿಳಕ ಕನ್ಯಾ ಶಾಲೆಗಳು" ಸ್ತ್ರೀಯರಲ್ಲಿ ಸ್ವಾತಂತ್ರ್ಯ ಚಳುವಳಿಯ ಕುರಿತು ಅರಿವನ್ನುಂಟು ಮಾಡಲು ಹುಟ್ಟಿಕೊಂಡಂತವುಗಳು. ಕೆಲವು ವರ್ಷಗಳಲ್ಲಿ ಉಮಾದೇವಿ ಈ ಮಹಿಳಾ ಕೇಂದ್ರಗಳನ್ನು ನಡೆಸುವ ಜವಾಬ್ದಾರಿಯನ್ನು ವಹಿಸಿಕೊಂಡಳು. ಗಾಂಧಿಯವರು ೧೯೨೪ರ ಬೆಳಗಾವಿ ಅಧಿವೇಶನಕ್ಕೆ ಆಗಮಿಸಿದಾಗ, ಸ್ತ್ರೀಯರಲ್ಲಿ ರಾಷ್ಟ್ರದ ಕುರಿತಾದ ತಿಳುವಳಿಕೆಯನ್ನು ಮೂಡಿಸಿದ ಉಮಾದೇವಿಯವರ ಸೇವೆ ಬಹು ದೊಡ್ಡದು. ಅವರು ಇಡೀ ಕರ್ನಾಟಕವನ್ನು ಸುತ್ತಾಡಿ ಎಲ್ಲ ಕಡೆಗಳಿಂದಲೂ ಮಹಿಳಾ ಪ್ರತಿನಿಧಿಗಳನ್ನು ಬೆಳಗಾಂವಿಯ ಅಧಿವೇಶನಕ್ಕೆ ಕರೆತಂದರು. ಇದಕ್ಕಾಗಿ ಆಕೆಯನ್ನು ಸೇವಾ ದಳದ ಸ್ತ್ರೀ ವಿಭಾಗದ ಮುಖ್ಯ ಸಚೇತಕಿಯೆಂದು ನೇಮಕ ಮಾಡಲಾಯಿತು. ಅದರಂತೆ ಆಕೆ ಉಪ್ಪಿನ ಸತ್ಯಾಗ್ರಹದ ಪ್ರಚಾರಕ್ಕಾಗಿ ಕಾರವಾರಕ್ಕೂ ಹೋಗಿದ್ದರು. ೧೯೩೨ರಲ್ಲಿ ಆಕೆಯ ಸೇವೆ ಹಾಗೂ ಕಾರ್ಯದಕ್ಷತೆಯನ್ನರಿತು "ನಾನ್ ಕೋ ಆಪರೇಶನ್" ಚಳುವಳಿಯ ನಿರ್ದೇಶಕರನ್ನಾಗಿ ನೇಮಕ ಮಾಡಲಾಯಿತು. ಆದರೆ ಆಕೆ ಸತ್ಯಾಗ್ರಹ ಕೈಕೊಂಡಾಗ ಕಂಪನಿ ಸರಕಾರ ಆಕೆಯನ್ನು ಬಂಧಿಸಿತು. ಜೈಲಿನಿಂದ ಹೊರ ಬಂದ ಮೇಲೆ ವಯಸ್ಕರ ಶಿಕ್ಷಣ ಮತ್ತು ಇತರ ಸಾಮಾಜಿಕ ಕಾರ್ಯಕ್ರಮಗಳೊಂದಿಗೆ ಉಮಾದೇವಿ ಕೆಲಸ ನಿರ್ವಹಿಸಿದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲುದಾರರಾದ "ಬಳ್ಳಾರಿಯ ಸಿದ್ದಮ್ಮ" ಸ್ಮರಣೀಯಳು. ಅವರು ೧೯೦೩ರಲ್ಲಿ ಹಾವೇರಿ ಜಿಲ್ಲೆಯ ದುಂಡಸಿಯಲ್ಲಿ ಜನಿಸಿದರು. ಅವರ ತಂದೆಯೇ ಅವರಿಗೆ ರಾಷ್ಟ್ರೀಯ ಚಳುವಳಿಯ ಬಗ್ಗೆ ಪ್ರೋತ್ಸಾಹ ನೀಡಿದರು. ಅವರು ಆಧ್ಯಾತ್ಮಿಕ ಸ್ವಭಾವದವರು ಕೂಡ, ಅನುಕೂಲವೆಂದರೆ, ಅವರು ರಾಷ್ಟ್ರೀಯವಾದಿ ಹಾಗೂ ಗಾಂಧಿ ಅನುಯಾಯಿ ಬಳ್ಳಾರಿಯ ಮುರುಗೆಪ್ಪನವರನ್ನು ವಿವಾಹವಾದರು. ನಂತರ ತೀವ್ರ ರಾಷ್ಟ್ರೀಯವಾದಿ ಮಲ್ಲಪ್ಪ ಧನಶೆಟ್ಟಿಗೆ ಮರಣದಂಡನೆ ಶಿಕ್ಷೆಯನ್ನು ನೀಡಿದ್ದು ಬಳ್ಳಾರಿಯ ಸಿದ್ದಮ್ಮನಿಗೆ ತೀವ್ರತರದ ನೋವನ್ನುಂಟು ಮಾಡಿತು. ಇದರಿಂದ ಅವರು ಹೋರಾಟಕ್ಕೆ ಇಳಿಯುವಂತಾಯಿತು. ರಾಜ್ಯದ ಹಲವಾರು ನಾಯಕರ ಪ್ರತಿಭಟನೆಯ ಮಧ್ಯದಲ್ಲೂ ಮಲ್ಲಪ್ಪ ಧನಶೆಟ್ಟಿಯನ್ನು ಗಲ್ಲಿಗೇರಿಸಿದರು. ಇದರಿಂದಾಗಿ ಇನ್ನೂ ಹಲವಾರು ಯುವಕರು ರಾಷ್ಟ್ರೀಯ ಚಳುವಳಿಗೆ ಧುಮುಕಿದರು. ಈ ವೇಳೆಗೆ ಬಳ್ಳಾರಿ ಸಿದ್ದಮ್ಮನವರು "ನಾವು ಭಾರತದಿಂದ ಬ್ರಿಟೀಷರನ್ನು ಹೊರಹಾಕಬೇಕು, ಹಾಗೂ ಏನೇ ಬಂದರೂ ಸ್ವಾತಂತ್ರ್ಯ ಪಡೆಯಬೇಕು" ಎಂದು ಕರೆಕೊಟ್ಟರು. ಸಿದ್ದಮ್ಮನವರು ವೀರ ಸ್ತ್ರೀಯಾಗಿದ್ದು, ಅವರು ದಾವಣಗೇರೆ ಮತ್ತು ಚಿತ್ರದುರ್ಗದ ಎಲ್ಲ ಹಳ್ಳಿಗಳಿಗೆ ಹೋಗಿ ಅಲ್ಲಿಯ ಜನತೆಯನ್ನು ಉದ್ದೇಶಿಸಿ ಭಾಷಣ ಮಾಡಿದರು. ಅವರ ಸಹಾಯ, ಸಹಕಾರವನ್ನು ಅಪೇಕ್ಷಿಸಿದವರು ಅವರ ಕಾರ್ಯ ನಿರ್ವಹಣಾ ಶಕ್ತಿಯನ್ನು ಗುರುತಿಸಿ ತಕ್ಷಣ ಅವರನ್ನು ಅಂದಿನ ಮೈಸೂರ ರಾಜ್ಯದ ಸ್ವಾತಂತ್ರ್ಯ ಹೋರಾಟದ ನಾಯಕಿಯೆಂದು ಮಾನ್ಯ ಮಾಡಲಾಯಿತು. ಆಗಲೇ ಸರದಾರ ವೀರನಗೌಡ ಪಾಟೀಲ, ಕೆ.ಎಫ್.ಪಾಟೀಲ, ನಾಗಮ್ಮ ಪಾಟೀಲ, ಎಸ್. ನಿಜಲಿಂಗಪ್ಪ ಮತ್ತು ಟಿ.ಸಿದ್ದಲಿಂಗಯ್ಯನವರೊಂದಿಗೆ ಅವರು ಹೊಂದಿದ ಸಂಪರ್ಕವು

ಅವರು ತಮ್ಮ ಕಾರ್ಯಕ್ಷೇತ್ರವನ್ನು ವರ್ಧಿಸಿಕೊಳ್ಳಲು ಸಹಾಯಕವಾಯಿತು. ಅವರ ಸ್ವಾತಂತ್ರ್ಯ ಹೋರಾಟದಲ್ಲಿ ಮೊದಲ ಮಹತ್ವದ ಘಟನೆ ಎಂದರೆ, ಎಪ್ರೀಲ್ ೧೯೩೮ ರಲ್ಲಿ ಉತ್ತರ ಭಾರತದ ಶಿವಪುರದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದು ಎಂದು ಹೇಳಬಹುದು. ನಂತರ ಮೈಸೂರು ರಾಜ್ಯದ ಅರಸರ ಅಧಿವೇಶನವೊಂದು ಜರುಗಿತು. ಆ ಅಧಿವೇಶನದಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸಿದ ಅನೇಕ ಭಾರತೀಯ ನಾಯಕರನ್ನು ೧೯೩೮ರ ಎಪ್ರೀಲ್ ೧೨ರಂದು ಬಂಧಿಸಿದರು. ರಾಷ್ಟ್ರ ಧ್ವಜವನ್ನು ಹಾರಿಸಿದ ಬಳ್ಳಾರಿ ಸಿದ್ದಮ್ಮನನ್ನು ಕೂಡ ಬಂಧಿಸಿದರು. ಅಂದು ಮೈಸೂರು ರಾಜ್ಯದ ಪೋಲೀಸರು ಬಂಧಿಸಿದ ಮೊದಲ ಮಹಿಳೆ ಅವರಾಗಿದ್ದರು. ನಂತರ ಹೊರಬಿಟ್ಟಾಗ ಅವರು ಇಡೀ ರಾಜ್ಯದ ತುಂಬಾ ಪ್ರವಾಸ ಕೈಗೊಂಡು ಜನತಾ ಆಂದೋಲನಕ್ಕೆ ಪ್ರಯತ್ನಿಸಿದರು. ಅವರ ವಿಶೇಷತೆ ಎಂದರೆ ಅವರು ಮುಖ್ಯವಾಗಿ ಗ್ರಾಮೀಣ ಭಾಗದಲ್ಲಿ ಕೆಲಸ ಮಾಡುತ್ತಿದ್ದುದು. ಅವರ ಜೀವನದ ೨ನೇ ಮಹತ್ವದ ಘಟನೆಯೆಂದರೆ ೧೯೪೦ರಲ್ಲಿ "ಭಾರತ ಬಿಟ್ಟು ತೊಲಗಿ" ಚಳುವಳಿಯ ಹೋರಾಟದಲ್ಲಿ ಎಸ್. ನಿಜಲಿಂಗಪ್ಪ ನೇತೃತ್ವದಲ್ಲಿ ಚಿತ್ರದುರ್ಗ ಜಿಲ್ಲೆಯ ತರುವೇಕೆರೆ ಊರಲ್ಲಿ ನಡೆದ ಸಿಂದಿ ಮರಗಳನ್ನು ಕಡಿಯುವ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು, ಅವರು "ಭೂಗತ ಚಟುವಟಿಕೆಗಳಲ್ಲಿಯೂ ಧೀಮಂತರಾಗಿ ಕಾರ್ಯನಿರ್ವಹಿಸಿದರು". ಈ ದೇಶದ ರಾಷ್ಟ್ರೀಯ ಚಳುವಳಿಗೆ ಸಲ್ಲಿಸಿದ ಅಮೋಘ ಸೇವೆಗಾಗಿ ಅವರಿಗೆ ಒಂದು ತಾಮ್ರ ಪತ್ರವನ್ನು ನೀಡಿ ಪುರಸ್ಕರಿಸಲಾಯಿತು.

೧೯೩೩ ರಲ್ಲಿ ಮಹಾತ್ಮಾ ಗಾಂಧಿಯವರು ಜನರಿಗೆ ಅಸ್ಪೃಶ್ಯತೆಯ ವಿರುದ್ಧ ಅರಿವನ್ನುಂಟು ಮಾಡಲು ಇಡೀ ಭಾರತ ದೇಶದ ತುಂಬೆಲ್ಲಾ ಪಾದಯಾತ್ರೆ ಕೈಗೊಂಡಾಗ ಅವರು ಕರ್ನಾಟಕಕ್ಕೂ ಭೇಟಿ ಇತ್ತರು. ಅವರನ್ನು ಮಂಗಳೂರಿನಲ್ಲಿ ಸ್ವಾಗತಿಸಿದವರೆಂದರೆ ಖ್ಯಾತ ಸ್ವಾತಂತ್ರ್ಯವಾದಿ ಸರದಾರ ವೀರನಗೌಡ ಪಾಟೀಲರು ಮತ್ತು ಅವರ ಪತ್ನಿ ನಾಗಮ್ಮ. ಈ ಕಾರ್ಯಕ್ರಮವನ್ನು ಬಹು ಉತ್ತಮ ರೀತಿಯಲ್ಲಿ ಸಂಯೋಜಿಸಿದ್ದರು. ಇಷ್ಟರಲ್ಲಾಗಲೇ ಅವರು ಹುಬ್ಬಳ್ಳಿಯಲ್ಲಿ ಹರಿಜನ ಬಾಲಿಕಾ ಆಶ್ರಮವನ್ನು ತೆರೆದಿದ್ದರು. ಅದು ಸರಬಮತಿ ಆಶ್ರಮದ ತೆರದಲ್ಲಿಯೇ ಇತ್ತು. ನಂತರ ಬಳ್ಳಾರಿ ಸಿದ್ದಮ್ಮನವರು ಎಲ್ಲ ನೆರೆಹೊರೆಯ ಜಿಲ್ಲೆಗಳ ಪ್ರವಾಸ ಕೈಗೊಂಡು ಆಶ್ರಮದಲ್ಲಿ ಕಲಿಯಲು, ಕಲಿಸಲು ಹರಿಜನ ಬಾಲೆಯರನ್ನು ಆಯ್ಕೆ ಮಾಡಿದರು. ಬ್ಯಾಡಗಿಯಲ್ಲಿ ಜರುಗಿದ ಸಭೆಯೊಂದರಲ್ಲಿ ಸಿದ್ದಮ್ಮನವರು ಬ್ರಿಟೀಷರಿಗೆ ಸಹಕರಿಸಬೇಡಿರಿ ಎಂದು ಜನತೆಗೆ ಕರೆ ನೀಡಿದ ಕಾರಣ ಅವರನ್ನು ಬಂಧಿಸಲಾಯಿತು.

ಜಯದೇವಿತಾಯಿ ಲಿಗಾಡೆಯವರು ಭಾರತದ ರಾಷ್ಟ್ರೀಯ ಚಳುವಳಿಯ ನೇತಾರರಾದ ಲೋಕಮಾನ್ಯ ಬಾಲ ಗಂಗಾಧರ ತಿಲಕ, ಎಂ.ಜಿ.ರಾನಡೆ ಮತ್ತು ಗೋಪಾಲಕೃಷ್ಣ ಗೋಖಲೆಯವರ ಸಹವರ್ತಿ ಮಲ್ಲಪ್ಪವಾರದರ ಮೊಮ್ಮಗಳು ಜಯದೇವಿ ತಮ್ಮ ತಾಯಿಯೊಂದಿಗೆ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದರು. ಅವರು ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಬೀದರ, ಗುಲಬರ್ಗಾ ಮತ್ತು ರಾಯಚೂರುಗಳಲ್ಲಿ ಸೇವೆ

ಸಲ್ಲಿಸಿದ್ದಾರೆ. ಅವರು ಬ್ರಿಟೀಷ ಸಹವರ್ತಿ ಮತ್ತು ಕ್ರೂರಿಯಾದ ಹೈದರಾಬಾದಿನ ನಿಜಾಮನ ವಿರುದ್ಧ ಚಳುವಳಿ ಮಾಡಿದರು. ಬಸವಕಲ್ಯಾಣದ ಹತ್ತಿರದ ಜಹೀರಾಬಾದದಲ್ಲಿ ಜಯದೇವಿತಾಯಿ ಲಿಗಾಡೆಯವರು ಜನರನ್ನು ಉದ್ದೇಶಿಸಿ ಭಾಷಣ ಮಾಡಿದ್ದಾರೆ. ವೀರವನಿತೆ ಕಮಲಾದೇವಿಯವರು ೧೯೦೩ರಲ್ಲಿ ಮಂಗಳೂರಿನ ಶ್ರೀಮಂತ ಕುಟುಂಬವೊಂದರಲ್ಲಿ ಜನಿಸಿದರು. ಅವರು ಸರೋಜನಿ ನಾಯ್ಡುರವರ ಸಹೋದರ ಹರೀಂದ್ರನಾಥರೊಂದಿಗೆ ಮದುವೆಯಾದದ್ದು ಅವರ ಕುಟುಂಬದಲ್ಲಿ ಪ್ರಚಂಡ ಪ್ರತಿಭಟನೆಯನ್ನುಂಟು ಮಾಡಿತಾದರೂ ಅದು ಅವರಿಗೆ ಬಹಳಷ್ಟು ಕೀರ್ತಿ–ಗೌರವಗಳನ್ನು ಒದಗಿಸಿತು. ಅವರು ರಾಷ್ಟ್ರೀಯ ನಾಯಕರಾದ ಮಹಾತ್ಮಾ ಗಾಂಧಿ, ಗೋಪಾಲ ಕೃಷ್ಣ ಗೋಖಲೆ ಮತ್ತು ಪಂಡಿತ ರಮಾಬಾಯಿಯಂತಹವರೊಂದಿಗೆ ಭೇಟಿಯಾಗುವ ಅವಕಾಶ ಪಡೆದರು. ಪುಣೆಯಲ್ಲಿ ಅವರು ಸ್ತ್ರೀ ವಾಲಂಟಿಯರ್‌ಗಳನ್ನು ಸೇರಿಸಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಭಾಗಿಯಾದರು. ೧೯೩೧ರಲ್ಲಿ ಸೇವಾದಳದ ಜವಾಬ್ದಾರಿಯನ್ನು ನಿರ್ವಹಿಸಿದರು. ಅವರ ಮುಖ್ಯ ಕೆಲಸವೆಂದರೆ, ಸ್ತ್ರೀಯರನ್ನು ಎಲ್ಲ ವಿದಧ ಚಳುವಳಿಯ ಕೆಲಸಕ್ಕೆ ತರಬೇತುಗೊಳಿಸುವುದಾಗಿತ್ತು. ಇಂತಹ ಉತ್ತಮ ಸೇವೆ ಸಲ್ಲಿಸಿದ ಅವರು ೧೯೩೪ರಲ್ಲಿ ಮಂಗಳೂರಿಗೆ ಹಿಂತಿರುಗಿದರು. ಅಲ್ಲಿ ಅವರು ವಯಸ್ಕರ ಶಿಕ್ಷಣವನ್ನು ನಡೆಸಿದರಲ್ಲದೇ ಹಲವಾರು ಯುನಿಯನ್‌ಗಳಲ್ಲಿ ಭಾಗವಹಿಸಿದರು. ಅವರು ರಾಜಕೀಯ ಅರಿವನ್ನುಂಟು ಮಾಡುವದರೊಂದಿಗೆ ಕಾಂಗ್ರೇಸ್ ಸಮಿತಿಗಳನ್ನು ವ್ಯವಸ್ಥಿತಗೊಳಿಸಿದರು. ನಂತರ ಅವರು "ಭಾರತ ಬಿಟ್ಟು ತೊಲಗಿ" ಆಂದೋಲದಲ್ಲಿ ಭಾಗವಹಿಸಿದರು. ಸ್ವಾತಂತ್ರ್ಯಾ ನಂತರ ಅವರು ತಮ್ಮ ಜೀವನವನ್ನು ಸಾರ್ವಜನಿಕ ಕೆಲಸಕ್ಕಾಗಿ ಮುಡಿಪಾಗಿಟ್ಟರು. ಅವರ ಸ್ಮರಣೀಯ ಸೇವೆಗಾಗಿ ೧೯೬೬ರಲ್ಲಿ ಅವರಿಗೆ "ರೋಮನ್ ಮ್ಯಾಗ್ಸಸೆ" ಪ್ರಶಸ್ತಿ ಸಂದಿದೆ.

ಕೃಷ್ಣಾಬಾಯಿಯವರು ಓರ್ವ ಶ್ರೇಷ್ಠ ಮಟ್ಟದ ಸ್ವಾತಂತ್ರ್ಯ ಹೋರಾಟಗಾರ್ತಿ. ಅವರು ೧೯೦೬ರಲ್ಲಿ ಅಗಸ್ಟ ೮ರಂದು ಹೊನ್ನಾವರದಲ್ಲಿ ಜನಿಸಿದರು. ತಮ್ಮ ಶೈಕ್ಷಣಿಕ ಜೀವನವನ್ನು ಪೂರೈಸಿದ ನಂತರ ಅವರು ಧಾರವಾಡದಲ್ಲಿ ಪ್ರಾಥಮಿಕ ಶಾಲೆಯೊಂದನ್ನು ಹಾಗೂ ಮಹಿಳಾ ಸಮಾಜವನ್ನು ಆರಂಭಿಸಿದರು. ಸ್ವದೇಶಿ ಆಂದೋಲನದಲ್ಲಿ ಭಾಗಿಯಾಗಿದ್ದರು. ಅವರ ಕಾರ್ಯ ದಕ್ಷತೆಯನ್ನು, ಅಪರಿಮಿತವಾದ ಧೈರ್ಯವನ್ನು ಮನಗಂಡ ಅಲ್ಲಿಯ ನೇತಾರರು ಉಪ್ಪಿನ ಸತ್ಯಾಗ್ರಹಕ್ಕಾಗಿ ಜನರನ್ನು ನೇಮಿಸುವಂತೆ ಕೇಳಿಕೊಂಡರು. ಇದಕ್ಕಾಗಿ ಶ್ರೀಮತಿ ಕೃಷ್ಣಾಬಾಯಿಯವರು ಹಳ್ಳಿಯಿಂದ ಹಳ್ಳಿಗೆ ತಿರುಗಿ ತಮ್ಮ ಭಾಷಣಗಳಿಂದ ಜನರನ್ನು ಆಕರ್ಷಿಸಿದರು. ೧೯೩೨ರಲ್ಲಿ ಸರಕಾರ ವಿರೋಧಿ ಭಾಷಣದಿಂದಾಗಿ ಅವರನ್ನು ಬಂಧಿಸಲಾಯಿತು. ೧೯೪೦ರಲ್ಲಿ ಆವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿದ್ದರು. ಮತ್ತೆ ೧೯೪೨ರಲ್ಲಿ ಅವರು ಬ್ರಿಟೀಷ ವಿರೋಧಿ ಸಂಘಟನೆಗಾಗಿ ಬಂಧನದಲ್ಲಿರಬೇಕಾಯಿತು.

ಕಾಂಗ್ರೆಸ್ಸಿನ ಉತ್ತಮ ಹೋರಾಟಗಾರ ಎಂ. ಎನ್. ಜೋಯಿಸರ ಹೆಂಡತಿ ಮಾಡಿದ ತ್ಯಾಗ ಸ್ಮರಣಾರ್ಹವಾಗಿದೆ. ತನ್ನ ಪತಿಯೊಂದಿಗೆ ಸುಬ್ಬಮ್ಮ ಕಾರವಾರದಲ್ಲಿ ಜರುಗಿದ

ಸುಂಕ ವಿರೋಧಿ ಚಳುವಳಿ ಹಾಗೂ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಗೌರಮ್ಮ ಎಂಬ ಮಹಿಳೆ ಸಂಘಟಿಸಿದ್ದ ಧ್ವಜ ಹಾರಿಸುವ ಹಾಗೂ ಕರಪತ್ರಗಳನ್ನು ಜನರಿಗೆ ಹಂಚುವ ಕೆಲಸಗಳಲ್ಲಿ ಸುಬ್ಬಮ್ಮನವರು ಸಕ್ರಿಯ ಪಾತ್ರ ವಹಿಸಿದರು. ನಂತರ ಈ ಎಲ್ಲಾ ಮಹಿಳೆಯರು "ಕರನಿರಾಕರಣೆ" ಆಂದೋಲನವನ್ನು ಬಲಗೊಳಿಸಿದರು. ಶಿವಮೊಗ್ಗದಲ್ಲಿ ಸತ್ಯಾಗ್ರಹಿಗಳ ಮಕ್ಕಳಿಗಾಗಿ ಕೆ.ಎ.ವೆಂಕಟರಾಮಯ್ಯನವರು ತೆರೆದ ಆಶ್ರಮದಲ್ಲಿ ಸುಬ್ಬಮ್ಮ ಕೆಲಸ ಮಾಡಿದರು. ಗಾಂಧಿ ಯುಗದ ಮೊದಲ ಪೀಳಿಗೆಯ ಹೋರಾಟಗಾರ್ತಿಯರಲ್ಲಿ ಯಶೋಧರಮ್ಮ ದಾಸಪ್ಪ ವಹಿಸಿದ ಪಾತ್ರ ದೊಡ್ಡದು. ಹಿಂದಿನ ಮೈಸೂರು ರಾಜ್ಯದ ಗಣ್ಯ ಕಾಂಗ್ರೇಸ್ ಕಾರ್ಯಕರ್ತ ಎಚ್.ಸಿ.ದಾಸಪ್ಪನವರ ಹೆಂಡತಿ ಇವರಾಗಿದ್ದರು. ೧೯೩೮ರ ಎಪ್ರೀಲ ೧೦ರಂದು ಶಿವಪುರದಲ್ಲಿ ಅಖಿಲ ಭಾರತ ಕಾಂಗ್ರೇಸ್ ರಾಷ್ಟ್ರೀಯ ಅಧಿವೇಶನ ನಡೆದಾಗ ಯಶೋಧರಮ್ಮ ಸರಕಾರವನ್ನು ಎದುರುಹಾಕಿಕೊಂಡರು. ಅವರು ಇತರ ಸ್ತ್ರೀಯರೊಂದಿಗೆ ರಾಷ್ಟ್ರೀಯ ಧ್ವಜವನ್ನು ಹಾರಿಸಿದಾಗ ಬಂಧನಕ್ಕೊಳಗಾಗಬೇಕಾಯಿತು. ಅವರು ಗೌಪ್ಯ ಚಟುವಟಿಕೆಗಳಲ್ಲೂ ಇದ್ದರೆಂಬುದು ತಿಳಿಯಿತು. ರಾಷ್ಟ್ರೀಯ ಚಟುವಟಿಕೆಗಳಲ್ಲಿ ಭಾಗವಹಿಸಿದ ಜನರೊಂದಿಗೆ ಕ್ರೂರವಾಗಿ ನಡೆದುಕೊಂಡ ಬ್ರಿಟೀಷ ಅಧಿಕಾರಿ ಹ್ಯಾಮಿಲ್ಟನ್‌ರ ಹೆಸರನ್ನು ಮೈಸೂರಿನ ನಗರ ಭವನಕ್ಕೆ ಇಡಲು ಮುಂದಾದಾಗ ಅದನ್ನು ಕಟುವಾಗಿ ಟೀಕಿಸಿದವರು ಯಶೋಧರಮ್ಮ.

೧೯೩೬ರಲ್ಲಿ ಟಿ. ನರಸಿಂಹ ಅಯ್ಯಂಗಾರ ಮತ್ತು ಟಿ. ಸಿದ್ದಲಿಂಗಯ್ಯನವರು ನಿಗ್ಗರರ ಯುವಕಾ ಗುಂಪನ್ನು ಆರಂಭಿಸುವಾಗ ಅವರೊಂದಿಗೆ ಸಂಪರ್ಕದಲ್ಲಿದ್ದವರು ದೊಡ್ಡ ಬಳ್ಳಾಪುರದ ಬಿ. ಸುನಂದಮ್ಮನವರು. ಒಮ್ಮೆ ಸರದಾರ ವಲ್ಲಭಾಯಿ ಪಟೇಲರು ಈ ಬಳಗವನ್ನು ಉದ್ದೇಶಿಸಿ ಮಾತನಾಡಲು ಬಂದಿದ್ದರು. ಶಿವಪುರ ಕಾಂಗೇಸ್‌ನಲ್ಲಿ ಬಿ. ಸುನಂದಮ್ಮ ಮತ್ತು ಅವರ ಪತ್ನಿ ಈ ಬಳಗದ ಬಗ್ಗೆ ಕಳಕಳಿಹೊಂದಿದ್ದರು. ಬಿ. ಸುನಂದಮ್ಮ ವಾಲಂಟಿಯರಗಳ ನಾಯಕಿಯಾಗಿದ್ದಳು. ಅಲ್ಲಿ ಅವರು ಹೆಣ್ಣು ಮಕ್ಕಳೊಂದಿಗೆ ರಾಷ್ಟ್ರಧ್ವಜದ ಪರವಾಗಿ ಕೆಲಸ ಮಾಡುತ್ತಿದ್ದರು. ಇವರು ಮೈಸೂರಿನ ನಾಗರಿಕ ಭವನದ ಸತ್ಯಾಗ್ರಹದಲ್ಲಿ ಯಶೋಧರಮ್ಮನೊಂದಿಗೆ ಕೆಲಸ ಮಾಡಿದ್ದರು.

ಈ ವೀರಾಗ್ರಣಿಯರ ಯಾದಿಗೆ ಇನ್ನು ಹಲವರನ್ನು ಸೇರಿಸಬೇಕಾಗುತ್ತದೆ. ಸ್ವಾತಂತ್ರ್ಯಕ್ಕಾಗಿ ಅಮೋಘ ಸೇವೆ ಸಲ್ಲಿಸಿದ ಇತರ ಸ್ತ್ರೀಯರಲ್ಲಿ ಧಾರವಾಡದ ಹುತಾತ್ಮ ಮೈಲಾರ ಮಹದೇವನ ಹೆಂಡತಿ ಸಿದ್ದಮ್ಮ ಮೈಲಾರ ಮತ್ತು ಶಕುಂತಲಾ ಧಾಬಡೆ, ಬೆಳಗಾವಿಯ ರಮಾಬಾಯಿ ಜೀವನರಾವ್ ಯಳಗಿ ಮತ್ತು ಸುಶೀಲಾಬಾಯಿ ಕುಲಕರ್ಣಿ ಮತ್ತು ಸಿದ್ದಾಪುರದ ಸೀತಾಬಾಯಿ ಮದಗಾಂವಕರ ಭಾಗೀರಥಿ ಪುರಾಣಿಕ ಮತ್ತು ಮಹಾದೇವಿ ಹೆಗಡೆ, ಭವಾನಿಬಾಯಿ ಕಣಗೊಡ, ಚಿತ್ರದುರ್ಗ ಜಿಲ್ಲೆಯ ಟಿ.ಬಿ.ಜಯಲಕ್ಷ್ಮೀಬಾಯಿ, ಗಂಗಾಬಾಯಿ ಮಿರಜಕರ, ವಿರಾಜಪೇಟೆಯ ಮುದ್ದಮ್ಮ ಹುಬ್ಬಳ್ಳಿಯ ವೀರನಗೌಡ ಪಾಟೀಲರ ಮಗಳು ಲೀಲಾವತಿ ಮಾಗಡಿ, ಧಾರವಾಡ ಜಿಲ್ಲೆಯ ಶಕುಂತಲಾ ಕುರ್ತುಕೋಟಿ, ಸಾಗರದ ರಮಾಬಾಯಿ ಪ್ರಭು, ಬೀಳಗಿಯ ಲಕ್ಷ್ಮೀ ಹರಿಬಾಯಿ, ಶಾಂತಿಬಾಯಿ ಸಿದ್ದಾಪುರ, ಶಾಂತಿಬಾಯಿ ಕರ್ಮರಕರ, ಬೆಂಗಳೂರಿನ

ಶಕುಂತಲಾ ಸೇತುರಾವ, ಕಾಮಾಕ್ಷಮ್ಮ ಹಾಗೂ ತುಮಕೂರಿನ ಭಾಗೀರಥಮ್ಮ ಪ್ರಮುಖರಾಗಿದ್ದಾರೆ. ಇವರೆಲ್ಲ ಸ್ವಾತಂತ್ರ್ಯ ಚಳುವಳಿಯಲ್ಲಿ ತನು-ಮನ-ಧನ ಪೂರ್ವಕವಾಗಿ ಸೇವೆ ಸಲ್ಲಿಸಿದವರು. ಅವರು ಮುಖ್ಯವಾಗಿ ಕರಪತ್ರ ಹಂಚುವದು. ಸ್ತ್ರೀಯರಲ್ಲಿ ಜಾಗೃತಿಯನ್ನುಂಟು ಮಾಡುವುದು ಮತ್ತು ಸ್ವಯಂ ಸೇವಕರುಗಳನ್ನು ಸಂಘಟಿಸುವುದರಲ್ಲಿ ಪರಿಣಿತರಾಗಿದ್ದರು. ಅವರು ವೈಯಕ್ತಿಕ ಸತ್ಯಾಗ್ರಹ ಸುಂಕ ವಿರೋಧಿ ಚಳುವಳಿ ಹಾಗೂ ಉಪ್ಪಿನ ಸತ್ಯಾಗ್ರಹದಲ್ಲಿ ಮೆರೆದವರು. ಅವರು ಪುರುಷ ಹೋರಾಟಗಾರರೊಂದಿಗೆ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಆರ್ಥಿಕ-ಸಾಮಾಜಿಕ ಮೌಲ್ಯಗಳಿಗಾಗಿ ಹಾಗೂ ಪ್ರಜಾಸತ್ತಾತ್ಮಕ ತತ್ವಗಳಿಗಾಗಿ ದುಡಿದರು. ಅವರು ದೇಶದ ಆರ್ಥಿಕ ಪ್ರಗತಿ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಾಗಿದ್ದಾರೆ.

* * *

ಅಧ್ಯಾಯ-೩

ವಾದ-ವಿವಾದಗಳ ಕಾರಣಗಳು ಹಾಗೂ ಸನ್ನಿವೇಶಗಳು

೧೮೨೪ರಲ್ಲಿ ಕಿತ್ತೂರಿನ ಕೊನೆಯ ದೊರೆ ಶಿವಲಿಂಗ ರುದ್ರ ಸರ್ಜ ದೇಸಾಯಿಯು ಕಾಯಿಲೆಯಿಂದ ಬಳಲಿ ಸಾವಿನ ದವಡೆಯಲ್ಲಿದ್ದಾಗ, ಶಿವಲಿಂಗಪ್ಪನನ್ನು ತನ್ನ ದತ್ತು ಪುತ್ರನನ್ನಾಗಿ ಅಂಗೀಕರಿಸಿ ಆತ ತನ್ನ ಉತ್ತರಾಧಿಕಾರಿಯಾಗಬೇಕೆಂದು ಆಶಿಸಿದನು. ಆದರೆ ಬ್ರಿಟೀಷರು ಮಗುವಿನ ದತ್ತಕ ವಿಷಯವನ್ನು ಅನುಮೋದಿಸದೆ "ದತ್ತು ಮಕ್ಕಳಿಗೆ ಹಕ್ಕಿಲ್ಲ" ಎಂಬ ನೀತಿಯ ಮೇರೆಗೆ ಕಿತ್ತೂರು, ಕಂಪನಿ ಸರಕಾರಕ್ಕೆ ಶರಣಾಗಬೇಕೆಂದು ಬಯಸಿದರು. ಇದರಿಂದ ನೊಂದ ವಿಧವೆ ರಾಣಿ ಚನ್ನಮ್ಮ ಬ್ರಿಟೀಷ ಆಡಳಿತದ ವಿರುದ್ಧ ಸಿಡಿದೆದ್ದಳು. ಕಿತ್ತೂರ ಸೈನ್ಯ ವೀರಾವೇಶದಿಂದ ಕಾದಾಡಿದರೂ ಬ್ರಿಟೀಷರು ಕಿತ್ತೂರನ್ನು ವಶಪಡಿಸಿಕೊಂಡರು. ೧೮೨೯ರಲ್ಲಿ ರಾಯಣ್ಣ ಪ್ರತಿಭಟಿಸಿದರೂ ಪ್ರಯೋಜನವಾಗಲಿಲ್ಲ. ನಂತರ ಕಿತ್ತೂರನ್ನು ಒಳಗೊಂಡ ಧಾರವಾಡ ಕಲೆಕ್ಟೋರೇಟ ಸೃಷ್ಟಿಯಾದರೂ ಅದನ್ನು ೧೮೩೮ರಲ್ಲಿ ಬೆಳಗಾಂವಿಗೆ ಸೇರಿಸಲಾಯಿತು.

ಶಿವಲಿಂಗ ರುದ್ರಸರ್ಜನು ದಿವಂಗತ ದೊರೆ ಮಲ್ಲಸರ್ಜನಿಗೆ ಯೋಗ್ಯ ಉತ್ತರಾಧಿಕಾರಿಯಾಗಿರಲಿಲ್ಲ ಅವನ ಆಸಕ್ತಿಯ ವಿಷಯಗಳು ಬೇರೆಯೇ ಆಗಿದ್ದವು. ಆರೋಗ್ಯವಂತನಾದ ಆದ ಸಾಹಿತ್ಯದಲ್ಲಿ ಆಸಕ್ತನಾಗಿದ್ದನು. ಆತ ಕನ್ನಡದಲ್ಲಿ ಮೂರು ಪುಸ್ತಕಗಳನ್ನು ಬರೆದಿದ್ದಾನೆ. ಆತನ ಹೆಂಡತಿ ವೀರಮ್ಮ ಶಿವನಗಟ್ಟಿಯ ಉತ್ತಮ ಮನೆತನದಿಂದ ಬಂದವಳು. ಕೆಲವರು ಹೇಳುವಂತೆ ಆತ ಮೈಸೂರಿನಿಂದ "ಹವ್ಯಕ" ವಿದ್ವಾಂಸ ಗಾಣಿಗ ಚನ್ನಬಸಪ್ಪನನ್ನು ಕರೆಯಿಸಿ ತತ್ವಜ್ಞಾನ ಮತ್ತು ಧರ್ಮವನ್ನು ಅಭ್ಯಸಿಸಿದನು. ಉತ್ತರಾಧಿಕಾರಿಯಾಗಿ ನೇಮಕನಾದ ಆತ ಇನ್ನು ಸಣ್ಣವನು ಹಾಗೂ ಅನನುಭವಿಯೂ ಆಗಿದ್ದು, ಆತನ ಸುತ್ತೆಲ್ಲ ಅಂಜುಬುರುಕರು ಹಾಗೂ ಹೊಗಳುಬಟ್ಟರು ಇದ್ದರು.

ಕಿತ್ತೂರು ಸಂಸ್ಥಾನದ ಅರಮನೆಯಲ್ಲಿ ಅಧಿಕಾರಿಗಳ ಗುಂಪುಗಳಿದ್ದವು. ಸರ್ದಾರ ಗುರುಸಿದ್ದಪ್ಪನ ಗುಂಪು ರಾಣಿ ಚನ್ನಮ್ಮನಿಗೆ ವಿಧೇಯಕವಾಗಿದ್ದರೆ, ವೆಂಕಟರಾವ ಮತ್ತು ಮಲ್ಲಪ್ಪ ಶೆಟ್ಟಿಯ ಗುಂಪು ದ್ರೋಹಿಗಳಿಂದ ಕೂಡಿದ್ದು, ಸದಾ ಸ್ವಾರ್ಥ ಸಾಧನೆಯನ್ನೇ ಯೋಜಿಸುತ್ತಿತ್ತು. ಕಿತ್ತೂರನ್ನು ಒಂದಿಲ್ಲ ಒಂದು ನೆಪದ ಮೇಲೆ ಕಂಪನಿ ಸರಕಾರದಲ್ಲಿ ವಿಲೀನಗೊಳಿಸಿಕೊಳ್ಳಲು ಹವಣಿಸುತ್ತಿದ್ದ ಬ್ರಿಟೀಷರು ಇಂತಹವರ ಸಂಬಂಧ ಬಯಸಿದ್ದರು. ಕ್ಷುಲ್ಲಕ ಆಶೆ-ಆಮಿಷಗಳಿಗೆ ಈಡಾಗಿ ಬ್ರಿಟೀಷರೊಂದಿಗೆ ಸಂಬಂಧ ಹೊಂದಿದ್ದ ವೆಂಕಟರಾವ ಮತ್ತು ಮಲ್ಲಪ್ಪ ಶೆಟ್ಟಿಯವರ ಬಳಗಕ್ಕೆ ಯುವ ಶಿವಲಿಂಗರುದ್ರ ಸರ್ಜ ಸೇರಿದ್ದು ಒಂದು ದುರ್ದೈವವೇ ಸರಿ.

ಶಿವಲಿಂಗ ರುದ್ರ ಸರ್ಜ ೧೮೧೬ರಲ್ಲಿ ದೇಶಗತ ಸ್ಥಾನವನ್ನು ಹೊಂದಿದವನು. ೧೮೧೭ ಮತ್ತು ೧೮೧೮ರಲ್ಲಿ ಪೇಶ್ವೆ ಬಾಜಿರಾಯನು ತೊಂದರೆಗೆ ಸಿಲುಕಿದನು. ತಮ್ಮ ಸಾಮ್ರಾಜ್ಯದ ವಿಸ್ತರಣಾ ಯೋಜನೆಗೆ ಅಡ್ಡಿಯನ್ನುಂಟು ಮಾಡುತ್ತಿದ್ದ ಪೇಶ್ವೆಯ ಅಸ್ತಿತ್ವವನ್ನು ನಿರ್ನಾಮಗೊಳಿಸಲು ಬ್ರಿಟೀಷರು ಪೇಶ್ವೆಯ ಮೇಲೆ ದಾಳಿ ನಡೆಸಿದ ಫಲವಾಗಿ ೨೨ ದಿನಗಳಲ್ಲಿ ಪೇಶ್ವೆಯ ಬೆಳಗಾಂವಿಯ ಕೋಟೆ ಅವರ ವಶವಾಯಿತು. ಇದರಿಂದಾಗಿ ಪೇಶ್ವೆಯ ಇತರ ಪ್ರದೇಶಗಳೂ ಬ್ರಿಟೀಷರ ವಶಕ್ಕೆ ಬಂದವು. ಇದರಿಂದಾಗಿ ಕಿತ್ತೂರ ಸಹ ಬ್ರಿಟೀಷರ ಅಧೀನ ಪ್ರಾಂತವಾಯಿತು. ತಕ್ಷಣ ಧಾರವಾಡದ "ಥಾಮಸ್ ಮನ್ರೋ" ಕಿತ್ತೂರ ದೇಸಾಯಿಯೊಂದಿಗೆ ಒಪ್ಪಂದಕ್ಕೆ ಬಂದು ಪ್ರತಿವರ್ಷ ೧,೭೬,೦೦೦.೦೦ ರೂಪಾಯಿ (ಒಂದು ಲಕ್ಷ ಎಪ್ಪತ್ತಾರು ಸಾವಿರ ರೂಪಾಯಿಗಳು) ಕೊಟ್ಟರೆ ಮಾತ್ರ ಆತ ರಾಜನಾಗಿ ಮುಂದುವರೆಯಬಹುದೆಂದು ತಿಳಿಸಿದ ಜೊತೆಗೆ ತಮಗಾಗಿ ಒಂದು ಸೇನಾ ತುಕಡಿಯನ್ನು ಕೊಡಬೇಕೆಂದು ಹಾಗೂ ಆ ಸೇನೆಯ ಹೊಟ್ಟೆ-ಬಟ್ಟೆಗಾಗಿ ಖಾನಾಪುರ ತಾಲೂಕನ್ನು ಬ್ರಿಟೀಷರಿಗೆ ಒಪ್ಪಿಸಬೇಕೆಂದು ದೇಸಾಯಿಯನ್ನು ಕೇಳಲಾಯಿತು. ಅದರಂತೆ ಬ್ರಿಟೀಷರ ಆಳ್ವಿಕೆಯನ್ನು ಪ್ರಶ್ನಿಸದೆ ಇರುವತನಕ, ಕಿತ್ತೂರಿನ ಒಳಾಡಳಿತದಲ್ಲಿ ತಾವು ಕೈ ಹಾಕುವುದಿಲ್ಲವೆಂದು ಮಾತು ಕೊಟ್ಟರು.

ಕಿತ್ತೂರ ಸಂಸ್ಥಾನದೊಂದಿಗೆ ಕಲೆಕ್ಟರ ಮನ್ರೊ ಮಾಡಿಕೊಂಡ ಕರಾರುಗಳು :-

೧. ಬ್ರಿಟೀಷರು ಕಿತ್ತೂರ ಸಂಸ್ಥಾನವು ಮೊದಲು ಬಿಜಾಪುರ ಸುಲ್ತಾನನಿಂದ ನಂತರ ಪೇಶ್ವೆಗಳಿಂದ ಸ್ವಾಧೀನ ಪಡೆದಿದ್ದ ಎಲ್ಲ ಪ್ರದೇಶವನ್ನು ಆಳಲು ನಿರ್ಧರಿಸಿದರು.

೨. ಕಿತ್ತೂರ ಸಂಸ್ಥಾನದವರು ಆರಂಭದಿಂದಲೂ ಹೊಂದಿರುವ ಬಿರುದು, ಮತ್ತಿತರ ರಾಜ ಗೌರವದ ವಿಷಯಗಳಲ್ಲಿ ಕೈಹಾಕುವುದಿಲ್ಲ ಎನ್ನಲಾಯಿತು.

೩. ತಾವು ಮಾಡಿಕೊಂಡ ಈ ಒಪ್ಪಂದದ ಮೇರೆಗೆ ಬ್ರಿಟೀಷರು ಕಿತ್ತೂರ ದೇಸಾಯಿಯ ಸ್ವಾತಂತ್ರ್ಯವನ್ನು ಗೌರವಿಸಲು ಅಣಿಯಾದರು. ಎಲ್ಫಿನ್ಸ್ಟನನು ಗವರ್ನರ ಜನರಲ್‌ನಿಗೆ ಬರೆದ ಜೂನ್ ೧೮೧೮ರ ಪತ್ರದ ಪ್ರಕಾರ ಅವರು ದೇಸಾಯಿಯವರನ್ನು ಉದಾರವಾಗಿ ನಡೆಸಿಕೊಳ್ಳಲು ಒಪ್ಪಿದರು.

೪. ಹಿಂದೆ ಪೇಶ್ವೆಗಳು ಯುದ್ಧಕ್ಕೆ ಬಂದಾಗ ನೀಡಬೇಕಾಗಿದ್ದ ೪೭೩ ಅಶ್ವಸೈನ್ಯ ಹಾಗೂ ೧೦೦೦ ಕಾಲದಳವನ್ನು ಕೊಡುವುದನ್ನು ನಿಲ್ಲಿಸಲಾಯಿತು. ಅಂದರೆ ಅವರು ಕಿತ್ತೂರ ಸಂಸ್ಥಾನದವರ ಸ್ವಾಯತ್ತತೆಯನ್ನು ಪ್ರಶ್ನಿಸುವಂತಿಲ್ಲ.

ಏನಿದ್ದರೂ ಖಾನಾಪುರನ್ನು ಬ್ರಿಟೀಷರಿಗೆ ಒಪ್ಪಿಸುವ ಠರಾವು ಅವಮಾನಕರ ವಾಗಿತ್ತು. ಇದರಿಂದಾಗಿ ಕಿತ್ತೂರ ಸಂಸ್ಥಾನದ ಬಹುಮುಖ್ಯ ಪ್ರದೇಶ ಕೈಬಿಟ್ಟಂತಾಯಿ ತಲ್ಲದೆ, ಅದರ ಮುಖ್ಯ ಆದಾಯವು ಕೈತಪ್ಪಿತು. ರಾಣಿ ಚನ್ನಮ್ಮ ಇದರಿಂದ ಅತೃಪ್ತಳಾದರೂ, ಅವಳು ನಿಸ್ಸಹಾಯಕಳಾಗಿದ್ದಳು.

ನಂತರ ಕಲ್ಮಠದ ಶ್ರೀಗಳೊಂದಿಗೆ ರಾಣಿಯು ಸಾಕಷ್ಟು ಚರ್ಚೆ, ವಾದ-ವಿವಾದ

ಮಾಡಿ ಬ್ರಿಟೀಷರೊಂದಿಗೆ ಕಿತ್ತೂರಿನ ಸಂಬಂಧದ ಬೆಳವಣಿಗೆಯನ್ನು ಕಾದು ನೋಡಲು ನಿರ್ಧರಿಸಿದಳು. ರಾಣಿಯು ಬ್ರಿಟೀಷರನ್ನು ನಿರ್ಲಕ್ಷ ಮಾಡುವುದೆಂದರೆ, ಅದೊಂದು ಉತ್ತಮ ನಿರ್ಧಾರ ಎಂದು ಭಾವಿಸಿದಂತಿತ್ತು. ಏತನ್ಮಧ್ಯೆ ಅವಳು ಶಿವಲಿಂಗ ರುದ್ರಸರ್ಜನಿಗೆ ಸ್ವಾಭಿಮಾನ, ದಕ್ಷತೆ, ಪ್ರಗತಿ ಇತ್ಯಾದಿ ರಾಜಕೀಯ ಗುಣಗಳ ಕುರಿತು ಶಿಸ್ತಿನ ಪಾಠ ಹೇಳಿದಳು. ಅವನಲ್ಲಿ ಧೈರ್ಯ ಮತ್ತು ಸಾಹಸವನ್ನು ಕುದುರಿಸಲು ಪ್ರಯತ್ನಿಸಿದಳು. ಈ ಹಂತದಲ್ಲಿ ಬ್ರಿಟೀಷರು ಕೂಡ ಕಿತ್ತೂರಿನಲ್ಲಿಯ ಬೆಳವಣಿಗೆಯನ್ನು ವೀಕ್ಷಿಸುತ್ತಾ ಆ ಸಂಸ್ಥಾನವನ್ನು ಕಬಳಿಸಲು ಸೂಕ್ತವಾದ ಅವಕಾಶಕ್ಕಾಗಿ ಕಾಯುತ್ತಿದ್ದರು.

ದಿನ ಕಳೆದಂತೆ ರಾಣಿ ಚನ್ನಮ್ಮ ಕಿತ್ತೂರ ಸಂಸ್ಥಾನದ ಮೇಲೆ ತನ್ನ ನಿಯಂತ್ರಣವನ್ನು ಸಾಧಿಸಿದಳು. ಸುಂದರಳು, ಧೈರ್ಯವಂತಳೂ, ಒಳ್ಳೆಯವಳೂ ಆದ ರಾಣಿ ಕುದುರೆ ಸವಾರಿ, ಕತ್ತಿವರಸೆ ಮತ್ತು ರಾಜ್ಯಾಡಳಿತದಲ್ಲಿ ಶ್ರೇಷ್ಠ ನೈಪುಣ್ಯತೆಯನ್ನು ಹೊಂದಿದ್ದಳು. ಅರಮನೆಯ ನ್ಯಾಯ ಸಭೆಯಲ್ಲಿ ರಾಣಿಯು ಬಹು ಗಂಭೀರ ಚಿತ್ತಳಾಗಿದ್ದು ಅವಳು ತೆಗೆದುಕೊಳ್ಳುವ ಯಾವುದೇ ನಿರ್ಣಯವು ನ್ಯಾಯಯುತವಾಗಿಯೂ, ಹಿತಕಾರಿಯೂ, ಪ್ರಜೆಗಳ ಪರವಾಗಿಯೂ ಇರುತ್ತಿದ್ದವು. ಹೀಗೆ ಕಿತ್ತೂರಿನ ಕೀರ್ತಿ ದಶದಿಕ್ಕಿನಲ್ಲೆಲ್ಲಾ ಹರಡಿ ರಾಣಿಯು ಪ್ರಖ್ಯಾತಳಾದಳು.

೧೮೨೨ರಲ್ಲಿ ಧಾರವಾಡದ ಪ್ರಮುಖ ಕಲೆಕ್ಟರ್ ಥ್ಯಾಕರೆಯು ಕಿತ್ತೂರ ಅರಸರಿಗೆ ಪತ್ರವೊಂದನ್ನು ಬರೆದು ಅವರು ತಮ್ಮ ಪ್ರಾಂತದಲ್ಲಿ ರಾಜ್ಯ ವಿರೋಧಿಗಳಿಗೆ ಮತ್ತು ಗೂಂಡಾಗಳಿಗೆ ಅವಕಾಶ ನೀಡಿ ಆ ಭಾಗದಲ್ಲಿ ಅಶಾಂತಿ ಮತ್ತು ಗದ್ದಲಗಳಿಗೆ ಅವಕಾಶ ನೀಡುತ್ತಿದ್ದಾರೆಂದು ದೂರಿದನು. ಆತ ಈ ವಿಷಯದಲ್ಲಿ ಗಂಭೀರವಾದ ಶಿಸ್ತಿನ ಕ್ರಮವನ್ನು ಜರುಗಿಸುತ್ತೇನೆಂದು ಹೆದರಿಸಿದನು. ಕಿತ್ತೂರ ಸಂಸ್ಥಾನವನ್ನು ಕಬಳಿಸಲು ಮಾಡಿದ ಸಂಚಿನ ಕ್ರಮ ಇದಾಗಿತ್ತು. ಆದರೆ ಮಧ್ಯ ಪ್ರವೇಶಿಕೆಯ ಅನಾಹುತವನ್ನು ಅರಿತ ಥ್ಯಾಕರೆ ನಿಜವಾದ ಕಾರಣವೊಂದಕ್ಕಾಗಿ ತನ್ನ ಉಪಾಯವನ್ನು ಮುಂದೂಡಿದನೆಂದು ಹೇಳಬಹುದು.

ಕಿತ್ತೂರಿನ ರಾಜಕೀಯದಲ್ಲಿ ಶಿವಲಿಂಗ ರುದ್ರಸರ್ಜ ಕೇವಲ ಹೆಸರಿಗೆ ಮಾತ್ರ ದೊರೆಯಾಗಿದ್ದ. ಆತ ಕಾಯಿಲೆಯಿಂದ ನರಳುತ್ತಿದ್ದು ಹಾಸಿಗೆಯಲ್ಲಿ ತನ್ನ ಎಂಟು ವರ್ಷದ ಆಡಳಿತದ ನಂತರ ಆತ ೧೧ನೇ ಸಪ್ಟೆಂಬರ ೧೮೨೪ರಲ್ಲಿ ತೀರಿಕೊಂಡಾಗ ರಾಣಿ ಚನ್ನಮ್ಮ ಕಿತ್ತೂರಿನ ಮೇಲೆ ಪೂರ್ಣಪ್ರಮಾಣದ ಅಧಿಕಾರವನ್ನು ತನ್ನ ವಶವಾಗಿಸಿಕೊಂಡಳು.

ಹಿಂದಿನ ದೊರೆ ಮಲ್ಲಸರ್ಜನಿಗೆ ರುದ್ರಮ್ಮ ಮತ್ತು ಚನ್ನಮ್ಮ ಎಂಬ ಇಬ್ಬರು ರಾಣಿಯರಿದ್ದು, ಪಟ್ಟದರಸಿ ರುದ್ರಮ್ಮ ತಲ್ಲೂರಿನ ದೇಸಾಯಿಯ ಮನೆತನದವಳಾಗಿದ್ದು ಅವಳ ವಂಶಜರು ಇಂದಿಗೂ ಈ ಊರಿನಲ್ಲಿದ್ದಾರೆ. ಅವಳು ಯುದ್ಧ ಕಲೆಯನ್ನರಿತ ರಾಣಿಯಾಗಿದ್ದಳು. ದೇಶನೂರಲ್ಲಿ ನಡೆದ ಟಿಪ್ಪು ಸುಲ್ತಾನ ವಿರುದ್ಧದ ಕಿತ್ತೂರಿನ ಕಾಳಗದಲ್ಲಿ ಈಕೆ ಪ್ರಮುಖ ಪಾತ್ರವಹಿಸಿದ್ದಳೆಂದು ದಾಖಲೆಗಳು ಹೇಳುತ್ತವೆ. ಅವಳು ಉತ್ತಮ ಶಿಕ್ಷಣ ಹೊಂದಿದ್ದು, ಉರ್ದು ಮತ್ತು ಪರ್ಶಿಯನ್ ಭಾಷೆ ಬಲ್ಲವಳಾಗಿದ್ದಳು.

ಅಂತೆಯೇ ಅವಳು ಪತಿಗೆ ಆಡಳಿತದಲ್ಲಿ ಬಹು ವಿಧದಲ್ಲಿ ನೆರವಾದಳು. ಟಿಪ್ಪುವಿಗೆ ಬರೆದ ಪತ್ರಗಳನ್ನೆಲ್ಲಾ ಅವಳೆ ತಯಾರಿಸಿದ್ದಳು ಎನ್ನುತ್ತಾರೆ. ಹಾಗಾದರೆ ಮಲ್ಲಸರ್ಜದೊರೆ ತನ್ನ ಮೊದಲನೆಯ ಹೆಂಡತಿಯೊಂದಿಗೆ ಸಂತೃಪ್ತನಾಗಿದ್ದರೆ ಆತ ಚನ್ನಮ್ಮನನ್ನು ಏಕೆ ಮದುವೆಯಾದನೆಂಬ ಪ್ರಶ್ನೆ ಬರುತ್ತದೆ. ಮಲ್ಲಸರ್ಜ ಚನ್ನಮ್ಮನ್ನಲ್ಲಿ ಅನುರಕ್ತನಾದ ಘಟನೆಯನ್ನು ಜಾನಪದ ಸಾಹಿತ್ಯದಲ್ಲಿ ಕಾಣಬಹುದು.

ದೊರೆ ಮಲ್ಲಸರ್ಜನು ಡೆಕ್ಕನ್ ಪ್ರಾಂತದಲ್ಲಿಯ ಪಾಳೆಗಾರ ಸಂಸ್ಥಾನದಲ್ಲಿ ನಾಯಕನಾಗಿದ್ದನು. ಟಿಪ್ಪು ಮತ್ತು ಪೇಶ್ವೆಗಳ ನಡುವಿನ ಯುದ್ಧದಿಂದಾಗಿ ಸಂಸ್ಥಾನದ ಅರಸರು ಬಹು ತೊಂದರೆಯಲ್ಲಿದ್ದರು. ಆತನಿಗೆ ಚಿಂತೆಯನ್ನುಂಟು ಮಾಡಿದ್ದರು, ಜೊತೆಗೆ ಈ ತಿಕ್ಕಾಟದ ಲಾಭ ಪಡೆದವರು ಬ್ರಿಟೀಷರು ಎಂಬುದು ಅನೇಕರಿಗೆ ತಿಳಿದಿರಲಿಲ್ಲ. ಸ್ವತಃ ದೇಶಾಭಿಮಾನಿಯಾದ ಆತ ಟಿಪ್ಪು ಮತ್ತು ಪೇಶ್ವೆಗಳು ಬ್ರಿಟೀಷರಿಂದ ಜರ್ಜರಿತವಾಗುವುದನ್ನು ಮೆಚ್ಚಲಿಲ್ಲ. ಅದರಂತೆ ಕೊಲ್ಲಾಪುರದ ಅರಸನನ್ನು ಸೇರಿಸಿಕೊಂಡು ಎಲ್ಲ ದೇಸಾಯಿಗಳನ್ನು, ಮಾಂಡಲೀಕರನ್ನು ಒಂದುಗೂಡಿಸಿ ಬ್ರಿಟೀಷರ ವಿರುದ್ಧ ಹೋರಾಡುವಾಸೆ ಆತನದಾಗಿತ್ತು. ಬ್ರಿಟೀಷರಿಗೆ ಗೊತ್ತಾಗದಂತೆ ಆತ ನಂಬಿಗಸ್ತರಾದಂತಹ ಮಾಂಡಲೀಕರನ್ನು ಭೇಟಿಯಾದ. ಅಂತಹ ಒಂದು ಸಂದರ್ಭದಲ್ಲಿ ಚನ್ನಮ್ಮನ ಊರಾದ ಕಾಕತಿಗೆ ಬಂದನು. ೧೨೫೦ರ ಮಮದಾಪುರದ ಯಾದವ – ಹರದೇವನ ಶಿಲಾಶಾಸನದಲ್ಲಿ ನಮೂದಿಸಿದಂತೆ ಈ ಊರಿಗೆ ಅಂದು "ಕಾಕತಿಯಬಾದ" ಎಂಬ ಹೆಸರಿತ್ತು. ಧೂಳಪ್ಪಗೌಡ ದೇಸಾಯಿಯು ಆ ಚಿಕ್ಕ ಸಂಸ್ಥಾನದ ದೊರೆಯಾಗಿದ್ದನು. ಅಂದು ಕಾಕತಿಯು ಸಾಂಗ್ಲಿಯ ಮಾಂಡಲೀಕತ್ವದಲ್ಲಿತ್ತು. ದೊರೆ ಮಲ್ಲಸರ್ಜನು ಆ ಊರಲ್ಲಿ ಒಂದು ದಿನ ತಂಗಿದ್ದನು.

ಆಗ ಆ ಊರಲ್ಲಿ ಒಂದು ಆಶ್ಚರ್ಯಕರವಾದ ಘಟನೆ ಜರುಗಿತು. ಅಲ್ಲೊಂದು ಹುಲಿ ಬಂದು, ಆಗಾಗ್ಗೆ ಜನರಿಗೆ ತೊಂದರೆ ಕೊಡುತ್ತಿತ್ತು. ಜನ ಮಲ್ಲಸರ್ಜನಲ್ಲಿ ಹುಲಿಯನ್ನು ಕೊಲ್ಲಬೇಕೆಂದು ವಿನಂತಿಸಿಕೊಂಡರು. ಇದಕ್ಕೆ ಒಪ್ಪಿದ ವೀರ ದೊರೆ ತನ್ನ ಚಿಕ್ಕ ಪಡೆಯ ಸಹಾಯದಿಂದ ಅಡವಿಗೆ ಹೋಗಿ ತನ್ನ ಒಂದೇ–ಒಂದು ಬಾಣದಿಂದ ಆ ಹುಲಿಯನ್ನು ಮಟ್ಟ ಹಾಕಿದ. ದೊರೆ ಸತ್ತ ಆ ಹುಲಿಯ ಹತ್ತಿರ ಹೋದಾಗ ಅಲ್ಲಿ ಓರ್ವ ಸುಂದರವಾದ ಮಹಾರಾಣಿ ಸ್ವರೂಪದ ಕುವರಿ ಇದ್ದಳು. ಅವಳೇ ಧೂಳಪ್ಪಗೌಡನ ಮಗಳು ಚನ್ನಮ್ಮ.

ದೊರೆ ಮಲ್ಲಸರ್ಜನು ಅವಳ ಯೌವ್ವನ ಮತ್ತು ಸೌಂದರ್ಯಕ್ಕೆ ಮಾರುಹೋದ. ಹುಲಿಯ ದೇಹದಲ್ಲಿ ನೆಟ್ಟಿದ್ದ ಎರಡು ಬಾಣಗಳಲ್ಲಿ ಒಂದು ತನ್ನದೆಂದು ತೋರಿಸಿದಳು ಆ ವೀರರಮಣಿ. ಇದರಿಂದ ಸಂತಸಗೊಂಡ ದೊರೆಯು ಆ ಹುಲಿ ಮತ್ತು ಆ ಹುಡುಗಿಯೊಂದಿಗೆ ಅವಳ ತಂದೆಯ ಹತ್ತಿರ ಆಗಮಿಸಿದನು.

ಮರುದಿನ ಕಾಕತಿಯ ರಾಜನೊಂದಿಗೆ ದೀರ್ಘವಾಗಿ ಸಮಾಲೋಚಿಸಿದ ದೊರೆ ಮಲ್ಲಸರ್ಜನು "ಪರಕೀಯರೂ, ಶತೃಗಳೂ ಆದ ಇಂಗ್ಲೀಷರು, ಫ್ರೆಂಚರು ಹಾಗೂ

ಪೋರ್ತುಗೀಸರನ್ನು ಮಟ್ಟಹಾಕಲು ದೇಶೀಯ ಅರಸರು ಒಂದಾಗುವುದು ಅಗತ್ಯವೆಂದು ತಿಳಿಸಿದ. ಆನಂತರ ತಾನು ಆತನ ಮಗಳನ್ನು ಅನಿರೀಕ್ಷಿತವಾಗಿ ಸಂಧಿಸಿದ್ದನ್ನು ಹಾಗೂ ತಾನು ಅವಳನ್ನು ಮದುವೆಯಾಗುವ ಬಯಕೆಯನ್ನು ಧೂಳಪ್ಪಗೌಡ ದೇಸಾಯಿಗೆ ತಿಳಿಸಲಾಗಿ, ಕಾಕತಿಯ ನಾಯಕ ಅದರಿಂದ ಆನಂದಪಟ್ಟನು. ಹೀಗಾಗಿ ಚನ್ನಮ್ಮ ಮಲ್ಲಸರ್ಜನ ಎರಡನೆಯ ರಾಣಿಯಾಗುವ ಅವಕಾಶ ಪಡೆದಳು. ಹಿಂದಿನ ಕಾಲದಲ್ಲಿ ರಾಜ ಮನೆತನಗಳಲ್ಲಿ ಬಹು ಪತ್ನಿತ್ವ ಸಹಜವಾಗಿತ್ತು. ಚನ್ನಮ್ಮ ತಾನು ದೊರೆಯ ಪಟ್ಟದರಸಿಯನ್ನು ತನ್ನ ಹಿರಿಯ ಅಕ್ಕನಂತೆ ಕಾಣುತ್ತೇನೆಂದು ಹಾಗೂ ಯಾವ ಕಾರಣಕ್ಕೂ ಅವಳ ಮನ ನೋಯಿಸುವುದಿಲ್ಲವೆಂದು ಮಾತು ಕೊಟ್ಟಳು. ತಕ್ಷಣ ಕಾಕತಿಯಲ್ಲಿ ಅವರ ಮದುವೆಯಾಯಿತು.

ಚನ್ನಮ್ಮ, ರಾಣಿ ರುದ್ರಮ್ಮನ ಮಗ ಶಿವಲಿಂಗರುದ್ರಸರ್ಜನು ಮುಂದಿನ ಅರಸನಾಗಬೇಕೆಂದು ಬಯಸಿದಳು. ಚನ್ನಮ್ಮನ ಸ್ವಂತ ಮಗ ಶಿವಬಸವರಾಜ ಸಣ್ಣ ವಯಸ್ಸಿನಲ್ಲಿ ತೀರಿಕೊಂಡ ಕಾಯಿಲೆಯಿಂದ ಬಳಲಿದ ರುದ್ರಮ್ಮನ ಇನ್ನೊರ್ವ ಮಗ ರುದ್ರಸರ್ಜನು ಕಾಲವಾದ ನಂತರ ರಾಣಿ ರುದ್ರಮ್ಮ ವಯಸ್ಸಾದಂತೆ ಧರ್ಮ ಮತ್ತು ಆಧ್ಯಾತ್ಮದಲ್ಲಿ ಆಸಕ್ತಿ ಹೊಂದಿದಳು. ಕಲ್ಮಠದ ಸ್ವಾಮಿಗಳು ಅವಳಿಗೆ ಮಹಾಕಾವ್ಯಗಳಿಂದ ಆಯ್ದ ಧಾರ್ಮಿಕ ಸಾಹಿತ್ಯವನ್ನು ಹೇಳುತ್ತಿದ್ದರು.

ಆದರೆ ರಾಣಿ ಚನ್ನಮ್ಮ ರಾಜತಂತ್ರದಲ್ಲಿ ಆಸಕ್ತಳಾಗಿದ್ದಳು. ಅವಳ ದಯಾಪರತೆ ಮತ್ತು ನ್ಯಾಯ ನಿಷ್ಠುರತೆಗಳು ದೊರೆಯನ್ನು, ಜನರನ್ನು ಸಂತುಷ್ಟಗೊಳಿಸಿದವು. ಬ್ರಿಟೀಷರು ಮತ್ತು ಪೇಶ್ವೆಗಳಿಂದ ತೀರಾ ಸೆಳೆತಕ್ಕೊಳಗಾದ ಕಿತ್ತೂರ ಸಂಸ್ಥಾನದ ಆಡಳಿತದಲ್ಲಿ ಅವಳ ಸಹಾಯ ಅಪಾರವಾಗಿತ್ತು. ಸ್ನೇಹ ಜೀವಿಯೂ, ಮುಂದಾಲೋಚನೆಯುಳ್ಳವಳೂ ಆದ ಚನ್ನಮ್ಮ ಜನರನ್ನು ಅಪಾರವಾಗಿ ಪ್ರೀತಿಸುತ್ತಿದ್ದಳು. ಶೂರರನ್ನು, ಒಳ್ಳೆಯವರನ್ನು ಗೌರವಿಸುತ್ತಿದ್ದಳು. ದೊರೆಯ ಮರಣದ ನಂತರ ಶಿವಲಿಂಗರುದ್ರಸರ್ಜನನನ್ನು ಹೆಸರಿಗೆ ದೊರೆಯನ್ನಾಗಿ ಮಾಡಿ ಎರಡು ವರ್ಷ ಆಳ್ವಿಕೆ ನಡೆಸಿದಳು.

ಮುಂದೊಂದು ದಿನ ದತ್ತು ಪುತ್ರನ ವಿಷಯ ವಿವಾದಕ್ಕೆ ತಿರುಗಿತು. ಬ್ರಿಟೀಷರು ಕಿತ್ತೂರನ್ನು ಕಬಳಿಸುವ ಸಲುವಾಗಿ ಅವಕಾಶವೊಂದಕ್ಕಾಗಿ ಕಾಯುತ್ತಿದ್ದರು. ೧೮೨೪ರ ಮೇ ೧೮ರಂದು ಥ್ಯಾಕರೆಯು ಕಿತ್ತೂರಿಗೆ ಭೇಟಿ ನೀಡಿ ಅನಾರೋಗ್ಯದಿಂದ ಬಳಲುತ್ತಿದ್ದ ಶಿವಲಿಂಗ ರುದ್ರಸರ್ಜನನ್ನು ಕಂಡನು. ಸಹೋದರರಿಲ್ಲದ ದೊರೆ ಶಿವಲಿಂಗ ರುದ್ರಸರ್ಜನಿಗೆ ಮಕ್ಕಳೂ ಆಗಿರಲಿಲ್ಲದ್ದು ಇನ್ನೊಂದು ತೊಂದರೆಯಾಗಿತ್ತು. ಆದ್ದರಿಂದ ಆತ ದತ್ತು ಪುತ್ರನನ್ನು ತೆಗೆದುಕೊಳ್ಳುವ ಮನಸ್ಸಿದ್ದರು ಆ ವಿಚಾರವನ್ನು ಬ್ರಿಟೀಷ ಅಧಿಕಾರಿ ಥ್ಯಾಕರೆಗೆ ಹೇಳಲಿಲ್ಲ. ಆ ವೇಳೆಗೆ ಭಾರತದ ಗವರ್ನರ ಜನರಲ್ ಡಾಲ್‌ಹೌಸಿಗೆ "ದತ್ತು ಮಕ್ಕಳಿಗೆ ಹಕ್ಕಿಲ್ಲ" ಎಂಬ ನೀತಿಯನ್ನು ಜಾರಿಗೆ ತರುವಂತೆ ಹೇಳಿಕೊಟ್ಟವನೇ ಈ ಧಾರವಾಡದ ಕಲೆಕ್ಟರ್ ಥ್ಯಾಕರೆ.

ಶಿವಲಿಂಗರುದ್ರಸರ್ಜನ ಆರೋಗ್ಯ ಕುಸಿದಿದ್ದರಿಂದ ಆತ ದತ್ತು ಪುತ್ರನನ್ನು ತೆಗೆದುಕೊಳ್ಳುವ ವಿಚಾರವನ್ನು ತನ್ನ ಸೇನಾಧಿಕಾರಿಗಳಾದ ಕನ್ನೂರ ಮಲ್ಲಪ್ಪ, ವೀರಪ್ಪ

ಸುಬೇದಾರ ಮತ್ತು ಸರ್ದಾರ ಗುರುಸಿದ್ದಪ್ಪ ಇವರ ಮುಂದೆ ಇಟ್ಟನು. ಅರಮನೆಯ ಸಭೆಯಲ್ಲಿದ್ದ ಅನೇಕರು ತಮ್ಮ ಮಕ್ಕಳನ್ನು ದತ್ತು ನೀಡಲು ಮುಂದೆ ಬಂದರು. ವಿವಿಧ ಗುಂಪುಗಳು ನೀಡುವ ಕಿರುಕುಳದ ಅರಿವಿದ್ದ ಆತ ಹತ್ತಿರದ ಓರ್ವ ಬಾಲಕ ಶಿವಲಿಂಗಪ್ಪನನ್ನು ಎತ್ತಿ ಹಿಡಿದು "ಈ ಮಗು ನನ್ನ ಉತ್ತರಾಧಿಕಾರಿಯಾಗಲು ಯೋಗ್ಯನೆಂದು, ಆತ ತನ್ನ ಉತ್ತರಾಧಿಕಾರಿಯಾಗಲೆಂದು ಕೇಳಿಕೊಂಡನು. ಅಲ್ಲಿದ್ದವರೆಲ್ಲ ಅದನ್ನು ಅನುಮೋದಿಸಿದರು. ಅಂದಿನಿಂದ ಆ ಬಾಲಕನನ್ನು ಅರಮನೆಯಲ್ಲಿರಿಸಿ ಕೊಂಡು ಆತನಿಗೆ ರಾಜ್ಯ ಆಡಳಿತದ ಕುರಿತು ಪಾಠ ನೀಡಲಾರಂಭಿಸಿದರು. ತನ್ನ ಆರೋಗ್ಯ ಕ್ಷೀಣಿಸುತ್ತಿದ್ದುದರಿಂದ ಜುಲೈ ೧೦, ೧೮೨೪ರಲ್ಲಿ ದೊರೆಯು ಥ್ಯಾಕರೆಗೆ ಶಿವಲಿಂಗಪ್ಪನನ್ನು ದತ್ತು ತೆಗೆದುಕೊಳ್ಳುತ್ತೇನೆಂದು ಒಂದು ಪತ್ರ ಬರೆಯಿಸಿದ. ಆ ಪತ್ರದ ಒಕ್ಕಣೆ ಹೀಗಿತ್ತು. "ಮಾನ್ಯರೆ, ಥ್ಯಾಕರೆಯವರೆ ನಾನು ಅನಾರೋಗ್ಯ ಪೀಡಿತನಾದ್ದರಿಂದ ಓರ್ವ ಮಗು ಶಿವಲಿಂಗಪ್ಪನನ್ನು ದತ್ತು ತೆಗೆದುಕೊಂಡಿದ್ದು ಆತನೇ ಸಂಸ್ಥಾನದ ಸರದೇಸಾಯಿ ದೊರೆಯಾಗಿ ಈ ಸಂಸ್ಥಾನದ ಹೊಬ್ಳಿಯ ಆಜುಮನಗರ, ಖಾನಾಪುರ, ನಂದಗಡ ಹಾಗೂ ಸೂಪಾಗಳ ಸರದೇಸಾಯಿ, ದೇಶಪಾಂಡೆ ಒಡೆಯನಾಗಿ ಮುಂದುವರೆಯುವನು. ನಿಮ್ಮ ಉದಾರತೆಯಿಂದ ನನ್ನ ಪೂರ್ವಜರು ಮತ್ತು ನಾನು ಅನುಭವಿಸಿದ ಈ ಸಂಸ್ಥಾನದ ಆಳ್ವಿಕೆಯನ್ನು ಆತನು ಅನುಭವಿಸಲು ತಾವು ಸಮ್ಮತಿಸಬೇಕೆಂದು ವಿನಂತಿಸಿಕೊಂಡಿರುತ್ತೇನೆ". ಈ ಘಟನೆ ನಡೆದ ಕೆಲ ದಿನಗಳಲ್ಲಿಯೇ ದೊರೆಯ ಆರೋಗ್ಯ ಸುಧಾರಿಸಿದ್ದರಿಂದ ದೊರೆ ಆ ಪತ್ರವನ್ನು ತಕ್ಷಣ ಥ್ಯಾಕರೆಗೆ ಕಳಿಸಲಿಲ್ಲ. ಅದರ ಹೊರತಾಗಿ ಆತನ ಸೇನಾನಿಗಳಾದ ಗುರುಸಿದ್ದಪ್ಪನು, ಶಹಪುರ ತಾಲೂಕಿನ ಸಿಂಧೋಳಿ, ಮರಿಕಟ್ಟಿ, ಖೊದಾನಪುರ ಮತ್ತು ಮಸ್ತಮರಡಿಗಳಿಗೆ ಹಾಗೂ ಮುರಗೋಡ ತಾಲೂಕಿನ ಚಿಕ್ಕೊಪ್ಪಸಿಗೆ ಸುಬೇದಾರ ಮಲ್ಲಪ್ಪ ಹೋಗಿ ದೊರೆಯ ಸಂಬಂಧಿಕರ ಮನೆಗಳಿಗೆ ಒಬ್ಬ ಉತ್ತಮ ಬಾಲಕನನ್ನು ಉತ್ತರಾಧಿಕಾರಿಯನ್ನಾಗಿ ಮಾಡಲು ಪ್ರಯತ್ನಿಸಿದರು. ಗುರುಸಿದ್ದಪ್ಪ ನಾಲ್ಕಾರು ಬಾಲಕರನ್ನು ತಂದನು. ಅವರಲ್ಲಿ ಓರ್ವ ಶಿವಲಿಂಗಪ್ಪನನ್ನು ಉತ್ತರಾಧಿಕಾರಿಯನ್ನಾಗಿ ಮಾಡಲು ಬಯಸಿ, ದೊರೆ ಆ ಬಾಲಕನ ತಂದೆ ಮಸ್ತಮರಡಿಯ ಬಾಳಪ್ಪ ಗೌಡನಿಗೆ ಒಂದು ಪತ್ರವನ್ನು ಬರೆದನು.

"ನನ್ನ ಸಂಬಂಧಿಕರಲ್ಲಿ ನೀವು ಹತ್ತಿರದವರಾದ್ದರಿಂದ ಮಗನಿಲ್ಲದ ನಾನು ನಿಮ್ಮ ಮಗ ಶಿವಲಿಂಗಪ್ಪನನ್ನು ದತ್ತು ತೆಗೆದುಕೊಳ್ಳಲು ಬಯಸಿದ್ದೇನೆ. ಅನಾರೋಗ್ಯದಿಂದ ಬಳಲುತ್ತಿರುವ ನಾನು ಕೂಡಲೇ ಮಗುವಿಗೆ ಪಟ್ಟಾಧಿಕಾರ ನೀಡಲು ಬಯಸಿದ್ದರಿಂದ ಆತನನ್ನು ಕರೆದುಕೊಂಡು ಬನ್ನಿರಿ" ಎಂದು ಆ ಪತ್ರದಲ್ಲಿ ತಿಳಿಸಿದನು.

ದತ್ತು ತೆಗೆದುಕೊಂಡ ಪ್ರಕ್ರಿಯೆ :

೧೮೨೪ರ ಸಪ್ಟೆಂಬರ ೧೧ರಂದು ದೊರೆ ಮಲ್ಲಸರ್ಜನ ಆರೋಗ್ಯ ಹದಗೆಟ್ಟಿತು. ಆ ದಿನ ಆತ ತನ್ನ ಸರ್ದಾರರಿಗೆ ಆಜ್ಞೆ ನೀಡಿ ದತ್ತು ಪ್ರಕ್ರಿಯೆಯನ್ನು ಮುಗಿಸಲು ಕೇಳಿಕೊಂಡ. ಪ್ರಾರಂಭದ "ಮಂಗಳ ಸ್ನಾನ" ವಾದ ನಂತರ ದೇಸಾಯಿ ಪ್ರಭುತ್ವದ ಸಂಕೇತವಾದ "ಸಿಕ್ಕ"ವನ್ನು ಆತನಿಗೆ ತೊಡಿಸಲಾಯಿತು. ಆತನಿಗೆ "ಸವಾಯಿ ಮಲ್ಲಸರ್ಜ" ಎಂಬ ಹೆಸರು ನೀಡಿ ಕಿತ್ತೂರ ಸಂಸ್ಥಾನದ ಉತ್ತರಾಧಿಕಾರವನ್ನು ನೀಡಲಾಯಿತು.

ಧಾರವಾಡದ ಥ್ಯಾಕರೆಯ ಧೂರ್ತ ಪ್ರಭಾವವನ್ನರಿತ ರಾಣಿ ಚನ್ನಮ್ಮಳಿಗೆ ಕಿತ್ತೂರ ಸಂಸ್ಥಾನದ ಬಗ್ಗೆ ಹೆದರಿಕೆಯುಂಟಾಗಿತ್ತು. ಅವಳಿಗೆ ತನ್ನ ಸಂಸ್ಥಾನದ ಸೇನಾನಿ ಕನ್ನೂರ ಮಲ್ಲಪ್ಪನ ಮೇಲೆ ನಂಬಿಕೆ ಇರಲಿಲ್ಲ. ಆದ್ದರಿಂದ ತನ್ನ ಸರ್ದಾರರಾದ ಸರ್ದಾರ ಮಲ್ಲಪ್ಪ ಶೆಟ್ಟಿ, ಕನ್ನೂರ ಮಲ್ಲಪ್ಪ, ಗುರುಸಿದ್ದಪ್ಪ, ಹೇಮಂತಸಿಂಘ, ನರ್ಸಿಂಗರಾವ ಗುರುಪುತ್ರ ವೀರಪ್ಪ ಮುಂತಾದವರನ್ನು ಕರೆಸಿ ಥ್ಯಾಕರೆಯು ಕಿತ್ತೂರ ಮೇಲೆ ದಂಡೆತ್ತಿ ಬಂದರೆ ಅವರೆಲ್ಲ ತಮ್ಮ ತಮ್ಮ ಮಧ್ಯದ ವ್ಯಾಜ್ಯಗಳನ್ನು ಮರೆತು ಶೌರ್ಯದಿಂದ ಹೋರಾಡಬೇಕೆಂದು ಮನವಿ ಮಾಡಿದಳು. ಅವರೆಲ್ಲ ರಾಣಿಯ ಮಾತಿಗೆ ಬೆಲೆ ನೀಡಿ ದತ್ತು ಪ್ರಕ್ರಿಯೆಯಲ್ಲಿ ಭಾಗವಹಿಸಿದರು. ಆದರೂ ಕನ್ನೂರ ಮಲ್ಲಪ್ಪ ಮತ್ತು ವೆಂಕಟರಾವರು ದುರುದ್ದೇಶ ಹೊಂದಿದವರು. ತದನಂತರ ಚನ್ನಮ್ಮ ರಾಣಿಯು ಶಿವಲಿಂಗಪ್ಪನ ದತ್ತು ಪ್ರಕ್ರಿಯೆಯನ್ನು ಬ್ರಿಟೀಷರಿಂದ ಅನುಮೋದಿಸಿಕೊಳ್ಳಲು ಕನ್ನೂರ ಮಲ್ಲಪ್ಪ ಮತ್ತು ಸರ್ದಾರ ಮಲ್ಲಪ್ಪರನ್ನು ಧಾರವಾಡದ ಥ್ಯಾಕರೆಯಲ್ಲಿಗೆ ಕಳಿಸಿದಳು. ಅವಳು ತನ್ನ ಸರ್ದಾರರು ಕಿತ್ತೂರಿನ ರಾಜ ಮನೆತನಕ್ಕೆ ವಿಧೇಯರಾಗಿ, ಅದರ ಘನತೆ ಗೌರವಗಳನ್ನು ಕಾಪಾಡಲೆಂದು ಆಶಿಸಿದಳು. ದೊರೆ ಶಿವಲಿಂಗ ರುದ್ರಸರ್ಜ ಮರುದಿನ ಸಪ್ಟೆಂಬರ ೧೧ ಬೆಳಗಿನ ನಾಲ್ಕು ಗಂಟೆಗೆ ಕಾಲವಾದನು. ಅದೇ ದಿನ ಮುಂಜಾನೆ ಮಲ್ಲಪ್ಪ ಆ ಪತ್ರವನ್ನು ಥ್ಯಾಕರೆಗೆ ಒಪ್ಪಿಸಿದನು. ಆ ಪತ್ರ ಸಪ್ಟೆಂಬರ ೧೦ ರಂದು ಬರೆಯಲ್ಪಟ್ಟಿದ್ದರಿಂದ ಥ್ಯಾಕರೆಗೆ ಸಂಶಯ ಬಂತು. ಆತನ ಸಂಶಯವೇನೆಂದರೆ ಕೆಲವು ಜನರು ತಮ್ಮ ಸ್ವಾರ್ಥಕ್ಕಾಗಿ ದೊರೆಯ ಸಹಿಯನ್ನು ದೊರೆ ಮಾನಸಿಕವಾಗಿ ಸರಿ ಇಲ್ಲದಿದ್ದಾಗ ಹಾಕಿಸಿಕೊಂಡಿರಬೇಕು ಎಂಬುದಾಗಿತ್ತು. ಆದ್ದರಿಂದ ತಕ್ಷಣ ಆತ ಧಾರವಾಡದಿಂದ ಒಬ್ಬ ತಜ್ಞ ಡಾ॥ ಜಿ. ಎಚ್. ಬೆಲ್‌ನನ್ನು ಕಿತ್ತೂರಿಗೆ ಕಳುಹಿಸಿ ಅಲ್ಲಿಯ ವಸ್ತುಸ್ಥಿತಿಯನ್ನು ಅರಿಯಲು ತವಕಿಸಿದನು. ಡಾ॥ ಬೆಲ್‌ರು ದಿನಾಂಕ ೧೭-೦೯-೧೮೨೪ ರಂದು ತಮ್ಮ ವರದಿಯನ್ನು ಸಲ್ಲಿಸಿದರು.

ದಿವಂಗತ ದೊರೆ ತನ್ನ ಪತ್ರದಲ್ಲಿ ನಮೂದಿಸಿದ ದಿನಾಂಕದಲ್ಲಿ ಸ್ವಲ್ಪ ಏರುಪೇರು ಆಗಿದ್ದೆ, ಥ್ಯಾಕರೆಯ ಸಂಶಯಕ್ಕೆ ಕಾರಣವಾಯಿತು. ಮುಂದಿನ ಎರಡು ದಿನಗಳಲ್ಲಿ ಥ್ಯಾಕರೆಯು ಕಿತ್ತೂರಿಗೆ ತೆರಳಿ, ರಾಜ ಮನೆತನವನ್ನು ಪರೀಕ್ಷಿಸಿ ಅವರಿಗೆ ರಾಜ್ಯ ಮನೆತನವನ್ನು ಖಾಲಿ ಮಾಡಬೇಕೆಂದು ಆಜ್ಞೆ ನೀಡಿದ. ಅದೇ ವಾರದಲ್ಲಿ "ಡೆಕ್ಕನ್" ಪ್ರಾಂತದ ಆಯುಕ್ತ "ಚಾಪ್ಲೆನನಿಗೆ" ಆತ ಬರೆದ ಪತ್ರ ನೋಡಿದರೆ, ಥ್ಯಾಕರೆಯು ತನ್ನ ಅಪೇಕ್ಷೆಯಂತೆ ಕಿತ್ತೂರನ್ನು ಕಬಳಿಸಲು ಪ್ರಯತ್ನಿಸುತ್ತಿದ್ದನೆಂದು ಅರ್ಥವಾಗದೆ ಇರದು. ಡಾ॥ ಬೆಲ್ ಎಂಬುವನ ಪ್ರಕಾರ ಹಿಂದಿನ ದೊರೆ ನಿಜವಾಗಿಯು ಈ ಉತ್ತರಾಧಿಕಾರಿಯನ್ನು ಬಯಸಿರಲಿಲ್ಲ ಎಂದಿದೆ. ಆತ ನಿಜವಾದ ಸಂಬಂಧಿ ಅಲ್ಲದ್ದರಿಂದ ಅದನ್ನು ಬ್ರಿಟೀಷ ಸರಕಾರ ಮನ್ನಿಸಲಿಲ್ಲ.

ಕಿತ್ತೂರಿನ ಖಜಾನೆಯ ಸಂರಕ್ಷಣೆಗಾಗಿ ಥ್ಯಾಕರೆಯು ದಿನಾಂಕ ೨೧-೧೦-೧೮೨೪ರಂದು ರಾಣಿ ಚನ್ನಮ್ಮನನ್ನು ಭೇಟಿಯಾಗಲು ಹೋದರೆ ರಾಣಿಯು ಆತನಿಗೆ ಅವಕಾಶ ನೀಡಲಿಲ್ಲ. ಜೊತೆಗೆ ಅಲ್ಲಿ ಸೈನ್ಯ ಜಮಾವಣೆ ಆಗುತ್ತಿದ್ದುದನ್ನು ಅರಿತ ಥ್ಯಾಕರೆ ಮುಂಜಾಗ್ರತೆಯನ್ನು ವಹಿಸಿದನು. ಆ ಕ್ಷಣದಲ್ಲಿ ಗೋಲ್ಕೊಂಡಾದ ಕ್ಯಾಪ್ಟನ್ ಬ್ಲಾಕನು

ತನ್ನ ಸೇನಾ ತುಕಡಿಯೊಂದಿಗೆ ಥ್ಯಾಕರೆಯ ಬಳಿಯಲ್ಲಿದ್ದ. ಆತ ದ್ವಾರದ ಹತ್ತಿರ ಗನ್ನುಗಳನ್ನು ಇಡಿಸಿದ ಎನ್ನುತ್ತಾರೆ. ಮರುದಿನ ಮತ್ತೆ ಥ್ಯಾಕರೆ ಅಲ್ಲಿಗೆ ಹೋದರೆ ಆತನಿಗೆ ಅಲ್ಲಿ ಪ್ರವೇಶ ಸಿಕ್ಕಲಿಲ್ಲ. ಆಗಲೇ ಕೋಟೆಯ ಹೊರಬಾಗಿಲನ್ನು ಮುಚ್ಚಿದ್ದರು. ನಂತರ ಥ್ಯಾಕರೆ ತನ್ನ ಸುದ್ದಿಗಾರರನ್ನು ಕಳಿಸಿದರೂ ಪ್ರಯೋಜನವಾಗಲಿಲ್ಲ. ಆದ್ದರಿಂದ ಕುಪಿತಗೊಂಡ ಆತ ಇನ್ನು ಇಪ್ಪತ್ತು ನಿಮಿಷದಲ್ಲಿ ಬಾಗಿಲನ್ನು ತೆರೆಯದಿದ್ದರೆ ಅವುಗಳನ್ನು ಸ್ಫೋಟಿಸುವುದಾಗಿ ಹೆದರಿಕೆ ಹಾಕಿದನು. ತಕ್ಷಣ ಕ್ಯಾಪ್ಟನ್ ಸೆವೆಲ್ ಕ್ಯಾಪ್ಟನ್ ಬ್ಲ್ಯಾಕ್ ಲೆಫ್ಟನೆಂಟ ಡಿಟನರ, ಆ ಬಾಗಿಲನ್ನು ಸ್ಫೋಟಿಸಲು ನಿರತರಾದಾಗ, ಕಿತ್ತೂರಿನ ಕೆಲವು ಯೋಧರು ಬಂದು ಅವರನ್ನು ಕೊಂದು ಹಾಕಿದರು. ಅದೇ ವೇಳೆಗೆ ಅಲ್ಲಿಗೆ ಧಾವಿಸಿದ ಥ್ಯಾಕರೆಗೆ ಗುಂಡು ತಾಗಿ ಪ್ರಜ್ಞಾಹೀನನಾದನು. ನಂತರ ಆತನ ರುಂಡವನ್ನು ಚನ್ನಮ್ಮ ತೆಗೆದಳು.. ಆಮೇಲೆ ಬ್ರಿಟೀಷರ ರಾಜಕೀಯ ವ್ಯಕ್ತಿಗಳನ್ನು ಸೆರೆ ಹಿಡಿಯಲಾಯಿತು. ಅವರನ್ನು ರಾಣಿಯು ಗೌರವದಿಂದ ಕಂಡದ್ದು ಅವರಿಗೆಲ್ಲ ಆಶ್ಚರ್ಯವಾಯಿತೇನೋ ನಿಜ ಅವರನ್ನು ಅತಿಥಿಗಳಂತೆ ನೊಡಿಕೊಳ್ಳಲಾಯಿತು. ಇತಿಹಾಸಕಾರರು ಕೂಡ ಇದನ್ನು ಗೌರವಿಸಿದ್ದಾರೆ.

ಥ್ಯಾಕರೆಯು ಡೆಕ್ಕನ್ ಆಯುಕ್ತ ಚಾಪ್ಲೆನ್‌ಗೆ ಬರೆದ ಪತ್ರದಲ್ಲಿ ಆತ ದಿನಾಂಕ ೧೨-೦೯-೧೮೨೪ರಂದು ಕಿತ್ತೂರಿನ ಮಲ್ಲಶೆಟ್ಟಿಯನ್ನು ಸ್ವಾಗತಿಸಿಕೊಂಡನೆಂದು ಆ ಸರ್ದಾರನು ಕಿತ್ತೂರಿನ ದೊರೆ ಮಲ್ಲಸರ್ಜನು ಅದೇ ದಿನ ಮುಂಜಾವಿನಲ್ಲಿ ಪ್ರಜ್ಞಾಹೀನನಾಗಿದ್ದನೆಂದು, ಆದರೆ ಮುಂಚಿನ ದಿನ ದತ್ತು ಪುತ್ರನ ಅಂಗೀಕಾರ ಪ್ರಕ್ರಿಯೆ ಮುಗಿದಿತ್ತು ಎಂದು ಹೇಳಲಾಗಿದೆ. ಇದನ್ನರಿತ ಥ್ಯಾಕರೆ ಈ ಘಟನೆಯ ಸತ್ಯಾಸತ್ಯತೆಯನ್ನು ಅರಿಯಲು ಜಿಲ್ಲಾ ಶಸ್ತ್ರ ವೈದ್ಯ ಡಾ॥ ಬೆಲ್‌ನನ್ನು ಕಳಿಸಿದನೆಂದಿದೆ. ನಂತರ ಆ ವೈದ್ಯಾಧಿಕಾರಿ ತಿಳಿಸುವುದೇನೆಂದರೆ ಮಲ್ಲಪ್ಪನು ಕಿತ್ತೂರನ್ನು ಬಿಡುವ ಪೂರ್ವದಲ್ಲಿಯೇ ರಾಜ ತೀರಿಕೊಂಡನೆಂದು ಥ್ಯಾಕರೆಗೆ ಹೇಳುತ್ತಾನೆ. "ನಾನು ಕೊಲ್ಲಾಪುರದಿಂದ ಧಾರವಾಡಕ್ಕೆ ಬಂದಾಕ್ಷಣ ನಾನು ದೊರೆಯನ್ನು ನೋಡಬೇಕೆಂದು, ಸಾಧ್ಯವಾದರೆ ಆತನಿಗೆ ಔಷಧಿಯನ್ನು ಒದಗಿಸಬೇಕೆಂದು ದೊರೆ ನನಗೆ ಬರೆದಿದ್ದನು. ತಕ್ಷಣ ನನ್ನ ಮುಂದೆ ದತ್ತು ತೆಗೆದುಕೊಳ್ಳುವ ವಿಷಯವಾಗಿ ಮಾತನಾಡಲಿಲ್ಲ. ದೊರೆ ದೇಸಾಯಿಯ ಸರ್ದಾರರು ದೊರೆಯ ಆರೋಗ್ಯ ಸರಿಯಿಲ್ಲವಾದ್ದರಿಂದ ಅವನು ನನಗೆ ದತ್ತು ತೆಗೆದುಕೊಳ್ಳಲು ಅನುಮತಿಗಾಗಿ ಪತ್ರವನ್ನು ಬರೆಯಲಿಲ್ಲ ಎನ್ನುವುದಿದೆ. ನಂತರ ನಾನು ಕಿತ್ತೂರ ದೊರೆಯ ಮುಖ್ಯ ಪ್ರತಿನಿಧಿಗಳೊಂದಿಗೆ ಈ ದತ್ತು ಸಮಾರಂಭದ ದಿನಾಂಕ ಹಾಗೂ ದೊರೆ ಅದರ ಬಗ್ಗೆ ನಮೂದಿಸಿದ ದಿನಾಂಕಗಳ ವಿಷಯವಾಗಿ ವಿಚಾರಿಸಿದರೆ ಅವರು ಸಮಂಜಸವಾಗಿ ಉತ್ತರಿಸಲಿಲ್ಲ. ಒಂದು ವೇಳೆ ದೊರೆ ದೇಸಾಯಿ ತನ್ನ ಸೇನಾನಿಗಳು ಮಾಡುತ್ತಿದ್ದ ದತ್ತು ಪುತ್ರನನ್ನು ತೆಗೆದುಕೊಳ್ಳುವ ಕೆಲಸವನ್ನು ಅನುಮೋದಿಸಿದ್ದರೆ. ಆ ಕೆಲಸ ಆತ ಸಾಯುವವರೆಗೆ ಆಗಿಲ್ಲವೆನ್ನಬೇಕು. ಇಲ್ಲವೇ ಆಗಿದ್ದರೆ ಸಮಚಿತ್ತವನ್ನು ಕಳೆದುಕೊಂಡ ಮೇಲೆ ಆಗಿರಬೇಕು.

ಇನ್ನೊಂದು ದೃಷ್ಟಿಯಿಂದ ಈ ಸಮಸ್ಯೆಯನ್ನು ಪರಿಶೀಲಿಸಿದರೆ ಈಗಾಗಲೇ ದತ್ತು ತೆಗೆದುಕೊಂಡ ಬಾಲಕ ದಿವಂಗತ ದೊರೆಯ ಬಹುದೂರದ ಸಂಬಂಧಿಕನಾಗಿದ್ದನೆಂಬುದು

ಸತ್ಯ. ಈ ಹಿನ್ನೆಲೆಯಲ್ಲಿ ಉತ್ತರಾಧಿಕಾರಿ ಅಧಿಕಾರದ ಆಧಾರದ ಮೇಲೆ ಕಿತ್ತೂರ ಸಂಸ್ಥಾನಕ್ಕೆ ಅಂತಹ ಒಬ್ಬ ಬಾಲಕನನ್ನು ದತ್ತು ತೆಗೆದುಕೊಂಡದ್ದು ಸಮಂಜಸವೆನಿಸಲಿಲ್ಲ. ಥ್ಯಾಕರೆ ಹೇಳುವಂತೆ ಕಿತ್ತೂರಿನ ಸೇನಾಪತಿಗಳು ತಮ್ಮ ಪ್ರಭಾವ ಉಳಿಸಿಕೊಂಡು ಹೋಗುವ ಸಲುವಾಗಿ ಈ ಕೆಲಸ ಮಾಡಿದರು ಎನ್ನಲಾಗಿದೆ. ಇದನ್ನು ವಿವರಿಸಿ ಹೇಳಲು ಪತ್ರದಲ್ಲಿದ್ದ ದಿವಂಗತ ದೇಸಾಯಿಯ ಸಹಿ ಅಸ್ಪಷ್ಟವಾಗಿತ್ತು.

"ದಿವಂಗತ ದೊರೆಯ ಪರಿವಾರ ದೊಡ್ಡದಾಗಿರಲಿಲ್ಲ. ಆ ದೊರೆಯ ೧೧ ವರ್ಷದ ವಿಧವೆ, ಆತನ ಅಣ್ಣನ ಹದಿನಾರು ವರ್ಷದ ವಿಧವೆ ಹಾಗೂ ಅಲ್ಲಿ ಆತನ ಮಲತಾಯಿ ಚನ್ನಮ್ಮ ಮಾತ್ರವಿದ್ದರು. ಉಳಿದವರೆಲ್ಲರು ದೂರದ ಸಂಬಂಧಿಗಳು. "ಇಲ್ಲಿ ನಾನು ಹೇಳುವುದಿಷ್ಟೆ ಆ ದತ್ತು ಮಗನ ಅಸ್ತಿತ್ವ ಅಸಮರ್ಪಕವಾಗಿದ್ದು ಅಲ್ಲಿಯ ರಾಜ್ಯಾಧಿಕಾರದ ದುರುಪಯೋಗವಾಗಬಾರದೆಂದು ಅವರ ಅಧಿಕಾರವನ್ನು ಅಂತ್ಯಗೊಳಿಸುವುದು ಸೂಕ್ತ. ಈ ಹಿನ್ನೆಲೆಯಲ್ಲಿ ಕಿತ್ತೂರ ಆಳ್ವಿಕೆಯನ್ನು ಉತ್ತಮ ಸ್ಥಿತಿಯಲ್ಲಿ ಇಡುತ್ತೇನೆ. ಕಿತ್ತೂರಿನಲ್ಲಿ ರಾಜಮನೆತನಕ್ಕೆ ಸಂಬಂಧಪಟ್ಟಂತೆ ಅನೇಕ ಭಿನ್ನಾಭಿಪ್ರಾಯಗಳಿವೆ. ಇದನ್ನು ನೋಡಿದರೆ ತಕ್ಷಣ ಕಿತ್ತೂರಿನ ಸಂಪತ್ತನ್ನು ಸೀಲು ಮಾಡಿ ಇಡುವುದು ಸದ್ಯದ ಅಗತ್ಯವಾಗಿದೆ. ಆದ್ದರಿಂದ ಸ್ಟೇವೆನಸನ್ ಹಾಗೂ ಫೆರೆ ಅದನ್ನು ಸೀಲ್ ಮಾಡಿದ್ದಾರೆ. ಅಲ್ಲಿರುವ ಹಣವನ್ನು ನಾನು ಲೆಕ್ಕ ಮಾಡಲು ಆಗಿದ್ದರು, ರಾಜ ತನ್ನ ದಿನಚರಿಯಲ್ಲಿ ಬರೆದಿರುವಂತೆ ಅಲ್ಲಿ ಎಂಟರಿಂದ ಒಂಭತ್ತು ಲಕ್ಷ ರೂಪಾಯಿಗಳಿವೆ. ಕೆಲವರು ಹೇಳುವಂತೆ ಅಲ್ಲಿಯ ನೆಲದಲ್ಲಿ "ನಿಧಿ" ಇದೆ. ದೊರೆ ಮಲ್ಲಸರ್ಜ ದೇಸಾಯಿಯ ತಂದೆ ಮಲ್ಲಪ್ಪನು ಪುಣೆಯಲ್ಲಿದ್ದಾಗ ಇಪ್ಪತ್ತೈದು ಲಕ್ಷ ರೂಪಾಯಿಯನ್ನು ಖರ್ಚು ಮಾಡಿದನು ಎನ್ನುತ್ತಾರೆ. ನಾನು ದೇಸಾಯಿ ದೊರೆಯ ಆಡಳಿತಾಧಿಕಾರಿಗಳನ್ನು ವಿಚಾರಿಸಿದರೆ ಅವರ್‍ಯಾರು ತೃಪ್ತಿಕರವಾದ ವಿವರಣೆಯನ್ನು ನೀಡಲಾರರು. ಆದ್ದರಿಂದ ನಾವೀಗ ನಮ್ಮ ಒಬ್ಬ ಅಧಿಕಾರಿಯನ್ನು ಕಿತ್ತೂರವರ ಅಧಿಕಾರಿಯೊಂದಿಗೆ ಅಲ್ಲಿಯ ವ್ಯವಸ್ಥೆಯನ್ನು ನೋಡಿಕೊಳ್ಳಲು ನೇಮಕ ಮಾಡುವುದು ಒಳ್ಳೆಯದು. ಇದರಿಂದಾಗಿ ನಾವು ಅಲ್ಲಿಯ ಆಡಳಿತವನ್ನು ತೊಂದರೆ ಇಲ್ಲದೆ ನೋಡಿಕೊಳ್ಳಬಹುದಾಗಿದೆ.

ಕಿತ್ತೂರಿನವರು ನಮಗೆ ಹಿಂದಿನ ವರ್ಷದ "ಪೇಶಸ್" ವನ್ನು ಕೊಡುವುದಿದೆ. ಅದನ್ನು ಅವರ ಹಣದಿಂದ ಪಡೆದುಕೊಳ್ಳಬಹುದು. ದೊರೆಗೆ ಮಕ್ಕಳಿರಲಿಲ್ಲ ಆತನ ಸಹೋದರರು ಇಂದು ಬದುಕಿಲ್ಲ. ಅವನ ವಿಧವೆ ಇರುವುದರಿಂದ ಅವಳಿಗೆ "ಸನದನ್ನು" ನೀಡಬಹುದಾದುದರ ಬಗ್ಗೆ ತಿಳಿಯಬೇಕು".

ಥ್ಯಾಕರೆಯ ಈ ಪತ್ರದಿಂದ ಆತ ಕಿತ್ತೂರ ಸಂಸ್ಥಾನವನ್ನು ಕಬಳಿಸಲು ಹವಣಿಸುತ್ತಿದ್ದನೆಂಬುದು ವ್ಯಕ್ತವಾಗುತ್ತದೆ. ಇನ್ನೊಂದು ವಿಷಯವೆಂದರೆ ಆತ ಕಿತೂರಿನ ಹಣದ ಮೇಲೆ ಕಣ್ಣಿಟ್ಟಿದ್ದ. ಚನ್ನಮ್ಮ ಕಿತ್ತೂರ ಸಂಸ್ಥಾನವನ್ನು ನಡೆಸಬಹುದಾದಷ್ಟು ಶಕ್ತಳಾಗಿದ್ದುದು ಗೊತ್ತಿದ್ದರೂ ಥ್ಯಾಕರೆ ಆ ಸಂಸ್ಥಾನದ ಕಾರಭಾರದಲ್ಲಿ ತಲೆ ಹಾಕಿದನೆಂದು ಹೇಳಬೇಕು.

ಥ್ಯಾಕರೆಯು ಚನ್ನಮ್ಮನ ವಿಚಾರ ಸರಿಯಾಗಿರಲಿಲ್ಲವೆಂಬಂತೆ ಬರೆಯುತ್ತಾನೆ. ಅವನು ಕಿತ್ತೂರಿನ ಅರಸರಲ್ಲಿ ತೀವ್ರತರವಾದ ಭಿನ್ನಾಭಿಪ್ರಾಯಗಳಿದ್ದವು ಎಂದಿದ್ದಾನೆ. ಇನ್ನೊಂದೆಡೆ ದೊರೆ ದೇಸಾಯಿಯು ದತ್ತು ಪುತ್ರನನ್ನು ತೆಗೆದುಕೊಳ್ಳಲು ಬಯಸಿರಲಿಲ್ಲವೆಂದು ಸುಳ್ಳು ಹೇಳುತ್ತಾನೆ. ವಾಸ್ತವಿಕವಾಗಿ ಮೇ ತಿಂಗಳಲ್ಲಿ ಥ್ಯಾಕರೆಯು ದೊರೆಯನ್ನು ಕಂಡಾಗ ದೊರೆಯು ದತ್ತು ತೆಗೆದುಕೊಳ್ಳುವ ವಿಷಯವಾಗಿ ಏನನ್ನು ಮಾತನಾಡಿರಲಿಲ್ಲ. ಆದರೆ ಥ್ಯಾಕರೆಗೆ ಗೊತ್ತಿರುವಂತೆ ದೊರೆಯು ಆ ಆಶೆಯ ಬಗ್ಗೆ ಆತನ ಇಬ್ಬರು ಸರ್ದಾರರಾದ ಮಲ್ಲಪ್ಪ ಮತ್ತು ಕನ್ನೂರ ಮಲ್ಲಪ್ಪ ಇದನ್ನು ಸರಕಾರಕ್ಕೆ ತಿಳಿಸಿದ್ದಾರೆ ಎಂದು ಥ್ಯಾಕರೆ ಹೇಳುತ್ತಾನೆ. ದೊರೆ ದೇಸಾಯಿ ಶಿವಲಿಂಗರುದ್ರ ಸರ್ಜನು ದತ್ತು ತೆಗೆದುಕೊಂಡಿಲ್ಲವೆಂದು, ಆದರೆ ಇದು ಸತ್ಯಕ್ಕೆ ತೀರಾ ವಿರುದ್ಧವಾದುದು. ಥ್ಯಾಕರೆಗೆ ಬರೆದ ಒಂದು ಮರಾಠಿ ಪತ್ರದಲ್ಲಿ ಈ ವಿಷಯ ನಮೂದಾಗಿದೆ. ಒಂದು ಅರ್ಥದಲ್ಲಿ ಥ್ಯಾಕರೆ ಕಿತ್ತೂರ ದೊರೆಯ ದತ್ತು ವಿಷಯದಲ್ಲಿ ಅಪನಂಬಿಕೆ ಹೊಂದಿದ್ದರಿಂದ ಆತನಿಗೆ ಈ ವಿಷಯ ಸರಿಯಾಗಿ ತಿಳಿದಿರಲಿಲ್ಲ.

ಥ್ಯಾಕರೆಯ ಮೂರನೆಯ ಆಕ್ಷೇಪಣೆ ಏನೆಂದರೆ ದೊರೆ ದತ್ತು ಪುತ್ರನನ್ನು ತೆಗೆದುಕೊಂಡದ್ದು ಕಾನೂನು ಬಾಹಿರವೆಂದು. ಅಂದರೆ, ಆತನ ಪ್ರಕಾರ ದೊರೆ ಈ ಕೆಲಸಕ್ಕಾಗಿ ಪೂರ್ವಾನ್ವಯ ಅಪ್ಪಣೆಯನ್ನು ಹೊಂದಿರದೇ ಇರುವುದು. ಆದರೆ ಕಿತ್ತೂರ ಅರಸರು ತಮ್ಮ ಆಂತರಿಕ ವಿಷಯದಲ್ಲಿ ಸ್ವಾಯತ್ತತೆಯನ್ನು ಹೊಂದಿದ್ದರಿಂದ ಅವರು ಕಂಪನಿ ಸರಕಾರದ ಸಮ್ಮತಿಯನ್ನು ಪಡೆಯಬೇಕೆಂದಿರಲಿಲ್ಲ.

ಕಿತ್ತೂರ ಸಂಸ್ಥಾನದ ಗತಕಾಲದ ಚರಿತ್ರೆಯ ಪುಟಗಳನ್ನು ತೆಗೆದು ನೋಡಿದರೆ ಇಂತಹ ಉದಾಹರಣೆಗಳು ಪೂರ್ಣ ಪ್ರಮಾಣದಲ್ಲಿ ಲಭ್ಯ. ಹಿಂದಿನ ದೊರೆ ವೀರಪ್ಪಗೌಡ ಸರದೇಸಾಯಿಯು ಮೀರಜಿನಲ್ಲಿ ಬಂಧನಕ್ಕೊಳಗಾಗಿ ತೀರಿಕೊಂಡಾಗ, ಆತನ ಪಟ್ಟದರಸಿ "ಪಾರ್ವತೆವ್ವ" ಮಲ್ಲಸರ್ಜನನ್ನು ದತ್ತಕ ತೆಗೆದುಕೊಂಡಿದ್ದಳು. ಆಗ ಕಿತ್ತೂರಿನರಸರು ಪೇಶ್ವೆಯ ಮಾಂಡಲೀಕರಾಗಿದ್ದರು. ೧೮೧೮ರಲ್ಲಿ ಕಿತ್ತೂರ ಅರಸರು ಸರ್ ಥಾಮಸ್ ಮನ್ರೋನೊಂದಿಗೆ ಮಾಡಿಕೊಂಡ ಒಡಂಬಡಿಕೆಯ ಪ್ರಕಾರ ಕಿತ್ತೂರ ದೇಸಾಯಿಗಳು ಬ್ರಿಟೀಷರ ಮಾಂಡಲೀಕರಾದ ಮೇಲೂ ಹಿಂದಿನ ಪೇಶ್ವೆಗಳ ಮಾಡಲೀಕತ್ವದಲ್ಲಿ ಅನುಭವಿಸುವ ಎಲ್ಲ ಹಕ್ಕುಗಳನ್ನು ಹೊಂದುವರೆಂದು ಒಪ್ಪಲಾಗಿತ್ತು. ಆ ಒಪ್ಪಂದದ ಮೇರೆಗೆ ದತ್ತು ವಿಷಯದಲ್ಲಿ ಕಿತ್ತೂರಿನವರೆಗೆ ಎಲ್ಲ ದಾರಿಗಳು ಸುಗಮವಾಗಿದ್ದವು. ಹಿಂದೆ ಕಾನೂನಿನ ಪ್ರಕಾರ ಮಕ್ಕಳಿಲ್ಲದ ತಂದೆ ಕಾಲವಾದ ನಂತರವೂ ಅವನ ವಿಧವೆ ದತ್ತು ತೆಗೆದುಕೊಳ್ಳಬಹುದಾಗಿದ್ದರಿಂದ, ಥ್ಯಾಕರೆ ಹೇಳುವಂತೆ ಕಿತ್ತೂರ ದೊರೆಯು ಮರಣದ ನಂತರ ಆ ದತ್ತು ಪ್ರಕ್ರಿಯೆ ಮುಗಿದಿದ್ದರೂ ಅದರಲ್ಲಿ ತಪ್ಪಿರಲಿಲ್ಲ. ಈ ಹಿನ್ನೆಲೆಯಲ್ಲಿ ಕಿತ್ತೂರ ಅರಸರು ಮಗುವನ್ನು ದತ್ತು ತೆಗೆದುಕೊಂಡಿದ್ದು ಕಾನೂನು ಬಾಹಿರವೆನ್ನುವದು ತೀರಾ ತಪ್ಪು.

ಥ್ಯಾಕರೆ ಹೇಳುತ್ತಾನೆ ದತ್ತು ತೆಗೆದುಕೊಂಡ ಮಗು ದಿವಂಗತ ದೊರೆಯ ನೇರ ವಂಶದ್ದಲ್ಲ. ಆದರೆ ಮನ್ರೋನೊಂದಿಗಿನ ಒಡಂಬಡಿಕೆಯ ಪ್ರಕಾರ ಅದೆಲ್ಲ ಸರಿಯಾದ ಆಕ್ಷೇಪಣೆಗಳಾಗಿರಲಿಲ್ಲ.

ಇಂತಹ ಅಪೂರ್ಣ ಏಕಪಕ್ಷೀಯ ಆಧಾರರಹಿತ ಹಾಗೂ ಖೊಟ್ಟಿ ಸಂಶಯಗಳ ಮೇಲೆ ಥ್ಯಾಕರೆಯು ಕಿತ್ತೂರಿನ ಸಂಸ್ಥಾನ ಬ್ರಿಟೀಷ ಈಸ್ಟ ಇಂಡಿಯಾ ಕಂಪನಿಗೆ ಸೇರತಕ್ಕದ್ದು ಎಂದು ವಾದಿಸಿದ್ದಾನೆ.

ಇಲ್ಲಿ ಒಂದು ಅಂಶವನ್ನು ಗಮನಿಸುವುದು ಅಗತ್ಯ. ೧೮೨೪ರ ಜುಲೈ ೧೦ರಂದು ಕಳಿಸಿದ ಪತ್ರವು ೧೮೨೪ರ ಸಪ್ಟಂಬರ ೧೨ರಂದು ಧಾರವಾಡವನ್ನು ಮುಟ್ಟಿದು ಏಕೆ ? ಇದಕ್ಕೆ ಕೆಲವು ಕಾರಣಗಳಿವೆ. ಮೊದಲನೆಯದೆಂದರೆ ಕನ್ನೂರ ಮಲ್ಲಪ್ಪನೇ ತನ್ನ ಮಗನನ್ನು ದತ್ತಕ ಕೊಡಲು ಮುಂದಾಗಿದ್ದನು. ಇಂತಹವರು ಅನೇಕರಿದ್ದರು, ಹಾಗಾಗಿ ಈ ದತ್ತು ಪ್ರಕ್ರಿಯೆಯನ್ನು ಮುಕ್ತವಾಗಿ ಮುಗಿಸದಿದ್ದರೆ ಈ ಸಂಸ್ಥಾನದಲ್ಲಿ ವಿಧ್ವಂಸಕಾರಕ ಚಟುವಟಿಕೆಗಳು ಜರುಗುತ್ತಿದ್ದವು. ಈ ಕಾರಣಕ್ಕಾಗಿ ದತ್ತು ಪುತ್ರನ ಪ್ರಕ್ರಿಯೆ ಪತ್ರವನ್ನು ಥ್ಯಾಕರೆಗೆ ಬೇಗ ಕಳಿಸಲಾಗಲಿಲ್ಲ. ಯಾವಾಗ ರಾಜ ಶಿವಲಿಂಗ ರುದ್ರಸರ್ಜನು ಸಾವಿನ ದವಡೆಯಲ್ಲಿದ್ದನೋ ಅಂದು ಅಂದರೆ ೧೮೨೪ರ ಸಪ್ಟಂಬರ ೧೧ರಂದು ಆ ಪತ್ರವನ್ನು ಬ್ರಿಟೀಷರಿಗೆ ಮುಟ್ಟಿಸಬೇಕಾಯಿತು.

ಹಿಂದಿನ ದೊರೆಯ ಸಾವಿನ ವಿಷಯವನ್ನು ಶಿವಲಿಂಗಪ್ಪ ದತ್ತು ಕ್ರಮವನ್ನು ಥ್ಯಾಕರೆಗೆ ತಿಳಿಸಲು ಹೋದ ಕನ್ನೂರ ಮಲ್ಲಪ್ಪನಾಗಲೀ, ಸರ್ದಾರ ಮಲ್ಲಪ್ಪ ಶೆಟ್ಟಿಯಾಗಲೀ ಥ್ಯಾಕರೆಗೆ ಈ ವಿಷಯವನ್ನು ತಿಳಿಸುವಾಗ ವ್ಯತ್ಯಾಸ ಮಾಡಿದರೆಂದು ತಿಳಿದು ಬರುತ್ತದೆ. ಇದಕ್ಕೆ ಕಾರಣವೆಂದರೆ ಸ್ವಂತ ಕನ್ನೂರ ಮಲ್ಲಪನು ಅನುಮಾನಾಸ್ಪದ ವ್ಯಕ್ತಿಯಾಗಿದ್ದನು. ಆತ ಚನ್ನಮ್ಮ ಮತ್ತು ಥ್ಯಾಕರೆಯ ನಡುವೆ ತಪ್ಪು ತಿಳುವಳಿಕೆಯನ್ನು ಸೃಷ್ಟಿಸಲು ಬಯಸಿದ. ಥ್ಯಾಕರೆಯ ಸಿಟ್ಟಿನ ಸ್ವಭಾವದಿಂದಾಗಿ ಇವರಿಬ್ಬರು ಆ ಸುದ್ದಿಯನ್ನು ಹೆದರಿಕೆಯಿಂದ ತಿಳಿಸಿದ್ದು ಕಂಡು ಬರುತ್ತದೆ.

ಪುಣೆಯಲ್ಲಿರುವ ಡೆಕ್ಕನ್ ಪ್ರಾಂತದ ಆಯುಕ್ತನಾದ ಚಾಪ್ಲೆನನು ಧಾರವಾಡದ ಕಲೆಕ್ಟರ ಥ್ಯಾಕರೆಯು ಕಿತ್ತೂರಿನ ಬಗ್ಗೆ ಬರೆದುದೆಲ್ಲವನ್ನು ನಂಬಿದನು. ಬ್ರಿಟೀಷ ಸಾಮ್ರಾಜ್ಯ ಶಾಹಿಯಾದ ಚಾಪ್ಲೆನನು ಕಿತ್ತೂರನ್ನು ವಶಪಡಿಸಿಕೊಳ್ಳಲು ಆತುರನಾಗಿದ್ದನು. ಅವರಿಬ್ಬರು ಒಂದೇ ಆಗಿದ್ದರು. ೧೮೨೪ರ ಸಪ್ಟಂಬರ ೨೦ರಂದು ಚಾಪ್ಲೆನನು ಮುಂಬೈಯಲ್ಲಿರುವ ಬ್ರಿಟೀಷ ಆಡಳಿತದ ಬಾಂಬೆ ಪ್ರಾಂತದ ಮುಖ್ಯ ಕಾರ್ಯದರ್ಶಿ ವಿಲಿಯಂ ನಿವ್ನಹ್ಯಾಂರಿಗೆ ಈ ಕೆಳಗಿನ ಪತ್ರ ಬರೆದನು.

"ಒಂದು ವೇಳೆ ಕಿತ್ತೂರಿನವರು ಪೂರ್ವಾನ್ವಯ ಅಪ್ಪಣೆಯೊಂದಿಗೆ ಓರ್ವ ಮಗುವನ್ನು ದತ್ತು ತೆಗೆದುಕೊಂಡಿದ್ದರೆ ನಾವು ಅವರ ಆಡಳಿತವನ್ನು ಮುಂದುವರೆಸುತ್ತಿದ್ದೆವು. ಆದರೆ ಈ ದತ್ತು ಕ್ರಮವು ದೊರೆಯ ಮರಣದ ದಿನದಂದು ಮಾಡಿರುವಂತಹದು. ಕಿತ್ತೂರಿನ ವಕೀಲರು ನೀಡುವ ದತ್ತು ಪುತ್ರನ ದೊರೆಯೊಂದಿಗಿನ ಸಂಬಂಧದ ಬಗೆಗಿನ ವಿವರಣೆ ತೃಪ್ತಿಕರವಾಗಿಲ್ಲ. ಇಂತಹ ಸೂಕ್ಷ್ಮ ಸಂದರ್ಭದಲ್ಲಿ ಈ ವಿಷಯದಲ್ಲಿ ನಾನು ಕೈಗೊಳ್ಳಬೇಕಾದ ಕಾರ್ಯದ ಬಗ್ಗೆ ನೀವು ನನಗೆ ಬರೆಯಬೇಕು. ಅಲ್ಲಿವರೆಗೆ ಥ್ಯಾಕರೆಯವರ ತಾತ್ಕಾಲಿಕ ವ್ಯವಸ್ಥೆ ಮುಂದುವರೆಯಲಿ ಈ ಕಿತ್ತೂರ ಸಂಸ್ಥಾನವು ಇತ್ತೀಚೆಗೆ ರಚಿತವಾದುದರಿಂದ

ಅದನ್ನು ಅಷ್ಟು ಸರಳವಾಗಿ ನಾವು ಕಸಿದುಕೊಳ್ಳಲು ಕಷ್ಟಸಾಧ್ಯ. ಒಂದು ವೇಳೆ ಕಿತ್ತೂರ ಸಂಸ್ಥಾನದ ದತ್ತು ಮಗುವಿಗೆ ರಾಜ್ಯವನ್ನು ನೀವು ಸಮ್ಮತಿಸಿದರೆ ಥ್ಯಾಕರೆಯವರು, ಆ ಮಗು ವಯಸ್ಸಿಗೆ ಬರುವವರೆಗೆ ಕಿತ್ತೂರಿನ ಆಡಳಿತವನ್ನು ನೋಡಿಕೊಳ್ಳುವುದು ಉಚಿತ. ನನಗೆ ತಿಳಿದಿರುವಂತೆ ಆ ರಾಜ್ಯದಲ್ಲಿ ಸಂಸ್ಥಾನವನ್ನು ನೋಡಿಕೊಳ್ಳುವಂತಹ ದಕ್ಷ ವ್ಯಕಿತಗಳಿದ್ದಂತಿಲ್ಲ.

ಈ ನಡುವೆ ಚಾಪ್ಲೆನನಿಗೆ ತಿಳಿಸದಂತೆ ಥ್ಯಾಕರೆಯು ಕಿತ್ತೂರಿನ ಸಂಪತ್ತನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹಾವೇರಿ ವೆಂಕಟರಾವ್ ಮತ್ತು ಸರ್ದಾರ ಮಲ್ಲಪ್ಪನಿಗೆ ಒಪ್ಪಿಸಿದನು. ಆತ ಅವರಿಗೆ ಆ ಸಂಪತ್ತನ್ನು ಕಾಪಾಡಲು ಅಗತ್ಯವಿರುವ ಮಾಹಿತಿಯನ್ನು ಒದಗಿಸಿದ. ಇದರಿಂದಾಗಿ ರಾಜಸದರು ಅಲ್ಲಿ ಅಷ್ಟು ಸರಳವಾಗಿ ನಡೆದುಕೊಳ್ಳುವಂತಿರಲಿಲ್ಲ.

ಮುಂಬೈಯಲ್ಲಿಯ ಕಂಪನಿ ಸರ್ಕಾರದ ಮುಖ್ಯ ಕಾರ್ಯದರ್ಶಿ ನಿವ್ಹ್ಯಾಂರು ಕಿತ್ತೂರ ಸಂಸ್ಥಾನವನ್ನು ನಿರ್ದಯವಾಗಿ ವಶಪಡಿಸಿಕೊಳ್ಳುವ ಆಸೆಯನ್ನು ಹೊಂದಿರಲಿಲ್ಲ. ನಂತರ ೧೮೨೪ರ ಸಪ್ಟೆಂಬರ ೨೩ರಂದು ಥ್ಯಾಕರೆಯು ಚಾಪ್ಲೆನನಿಗೆ ಕಿತ್ತೂರಿನ ವಂಶಾವಳಿಯನ್ನು ನೀಡಿದಾಗ ಈ ಕೆಳಗಿನ ಟಿಪ್ಪಣಿಯನ್ನು ಕಳಿಸಿದನು.

"ನನಗೆ ತಿಳಿದಿರುವಂತೆ ಇಲ್ಲಿ ಕಳಿಸಿದ ವಂಶಾವಳಿಯ ವಿವರಗಳು ಯಾವ ದಾಖಲಾತಿಯನ್ನು ಹೊಂದಿಲ್ಲ". ಒಂದು ವೇಳೆ ನಮ್ಮ ಕಂಪನಿ ಸರ್ಕಾರವು ಆ ಸಂಸ್ಥೆಯು ಮುಂದುವರೆಯಲು ಅವಕಾಶ ನೀಡಿದರೆ, ಆ ಸಂಸ್ಥೆಗೆ ನಮ್ಮ ಪೋಲಿಸರನ್ನು ಕಳಿಸುವುದು ಅಗತ್ಯ. ಇನ್ನೊಂದು ವಿಷಯವೆಂದರೆ ಆ ಸಂಸ್ಥೆಯ ಸುಂಕ ವಸೂಲಾತಿ ಪದ್ಧತಿಯನ್ನು ನವೀಕರಿಸಬೇಕಲ್ಲದೇ ಕಿತ್ತೂರಿನವರ ಹಣ ತಯಾರಿಸುವ ಕಾರ್ಖಾನೆಯನ್ನು ಮತ್ತೆ ತೆರೆಯಬಾರದು. ಒಂದು ವೇಳೆ ಕಿತ್ತೂರಿನ ಸಂಸ್ಥಾನದ ವಾರಸುದಾರರನ್ನು ಅನುಮೋದಿಸಿದರೆ, ಅವರಿಂದ ಒಂದು ನಿರ್ದಿಷ್ಟ "ನಜರಾನಾ" ವಸೂಲೀ ಮಾಡಿಕೊಳ್ಳಬೇಕು. ಈ ದಿಸೆಯಲ್ಲಿ ಪೇಶ್ವೆಗಳು ಮಲ್ಲಪ್ಪ ವೀರಪ್ಪ ಶಿವಲಿಂಗ ರುದ್ರ ಸರ್ಜನಿಂದ ತೊಂಭತ್ತು ಸಾವಿರ ರೂಪಾಯಿಯನ್ನು ಪಡೆದರೆಂಬ ದಾಖಲೆ ಇದೆ. ನನಗೆ ಅನಿಸಿದಂತೆ ದಿವಂಗತ ದೊರೆಗೆ ನೇರವಾದ ವಾರಸುದಾರನಿಲ್ಲದ್ದರಿಂದ ೧,೭೫,೦೦೦ ರೂಪಾಯಿಯ ದಂಡ ಹಾಕಿ ಅವರ ರಾಜ್ಯಭಾರವನ್ನು ಮುಂದುವರೆಸುವುದು ಸೂಕ್ತವಾಗಿದೆ.

೧೮೨೪ರ ಸಪ್ಟೆಂಬರ ೨೪ರಂದು ರಾಣಿ ಚನ್ನಮ್ಮ ಬ್ರಿಟೀಷರ ಏಜೆಂಟ ಶ್ರೀವೆಂಕಟರಾವರ ಕುರಿತು ಇನ್ನೊಂದು ಪತ್ರವನ್ನು ಮುಖ್ಯ ಕಾರ್ಯದರ್ಶಿಗೆ ಬರೆದು ಕೆಳಗಿನ ವಿಷಯವನ್ನು ಪ್ರಸ್ತಾಪಿಸುತ್ತಾಳೆ.

"ದೊರೆ ದೇಸಾಯಿಯು ಸಪ್ಟೆಂಬರ ೧೧ರ ರಾತ್ರಿ ೧೦ ಗಂಟೆಗೆ ತೀರಿಕೊಂಡನೆ ಹೊರತು ತಮಗೆ ಬೇರೆಯವರು ತಿಳಿಸಿದಂತೆ ಸಪ್ಟೆಂಬರ ೧೨ರಂದು ಅಲ್ಲ. ಮತ್ತೊಂದು ವಿಷಯವೆಂದರೆ, ರಾಜ್ಯಭಾರದ ಮೂವರು ಹಿರಿಯ ಸೇವಕರು ಧಾರವಾಡದ ಕಲೆಕ್ಟರನಿಗೆ ಕೊಡುತ್ತೇವೆಂದು ನಮ್ಮನ್ನು ಕೇಳದೇ ೧,೫೦,೦೦೦ ರೂಪಾಯಿ ಹಣವನ್ನು ಮೂರು ಆಭರಣ ಪೆಟ್ಟಿಗೆಗಳನ್ನು ಒಯ್ದಿರುತ್ತಾರೆ. ಸತ್ಯಾಂಶವೆಂದರೆ ಪುತ್ರನ ದತ್ತು ಪ್ರಕ್ರಿಯೆ

ದೊರೆ ಸತ್ತ ಮರುದಿನವೇ ಆಗಿದೆ. ಹಾಗೂ ರಾಜ್ಯದ ಹಿಂದಿನ ಕಾರಬಾರಿ ಮಲ್ಲಪ್ಪ ನಮ್ಮ ಸಂಪತ್ತಿನ ಬಹಳಷ್ಟು ಹಣವನ್ನು ತನ್ನ ಹತ್ತಿರ ಇರಿಸಿಕೊಂಡಿದ್ದಾನೆ.

ಥ್ಯಾಕರೆಯು ಮಲ್ಲಪ್ಪನಿಗೆ ಹೇಳಿದ ಈ ವಿಷಯಗಳು ನಮಗೆ ಗೊತ್ತಾಗಿವೆ. ಅದರಂತೆ ಧಾರವಾಡ ಕಲೆಕ್ಟೋರೇಟಿನ ಹಿರಿಯ ಗುಮಾಸ್ತ ವೆಂಟರಾವರೊಂದಿಗೆ ಜಂಟಿಯಾಗಿ ಕಾರಬಾರ ಮಾಡುತ್ತಿರುವ ನಮ್ಮವನೆ ಆದ ಮಲ್ಲಪ್ಪನು ಸಂಶಯಾಸ್ಪದ ವ್ಯಕ್ತಿಯಾದ್ದರಿಂದ ಆತನನ್ನು "ಕಾರಬಾರಿ' ಯಾಗಿ ಮುಂದುವರೆಸುವುದು ಸರಿಯಲ್ಲ'.

ನಂತರ ಮುಖ್ಯ ಕಾರ್ಯದರ್ಶಿ ನಿವ್ನಹ್ಯಾಮನು ಥ್ಯಾಕರೆಯ ವಿಚಾರಗಳನ್ನು ಸಮ್ಮತಿಸಿ ಈ ಪತ್ರಕ್ಕೆ ಉತ್ತರವನ್ನು ಬರೆದನು. ಕಿತ್ತೂರ ಮೇಲೆ ತೆಗೆದುಕೊಳ್ಳಬಹುದಾದ ಶಿಸ್ತಿನ ಕ್ರಮವು ಸಾಧುವಲ್ಲದ್ದರಿಂದ ನಿವ್ನಹ್ಯಾಮನನು ಸರಿಯಾದುದನ್ನೇ ವಿಚಾರಿಸುತ್ತಿದ್ದನು. ಥ್ಯಾಕರೆಯ ವಿಚಾರಗಳಿಗೆ ಸ್ಪಂದಿಸುತ್ತಾ ಆತ ಬರೆಯುತ್ತಾನೆ.

"ಸನದಿನ ಬಗ್ಗೆ ಚರ್ಚಿಸದೆ ನಾವು ನಮ್ಮ ಸರ್ಕಾರ ಕಿತ್ತೂರ ವಿಷಯವಾಗಿ ಕೆಲವು ಸಂಶಯಗಳನ್ನು ಹೊಂದಿರುತ್ತದೆ". ಕಿತ್ತೂರ್ಕರ (ಅಂದರೆ ಕಿತ್ತೂರ ದೇಸಾಯಿ) ಯವರಿಗೆ ನಿಜವಾದ ವಾರಸುದಾರರು ಇಲ್ಲದಿದ್ದರೆ ನಾವು ಈ ಸಂಸ್ಥಾನವನ್ನು ವಶಪಡಿಸಿಕೊಳ್ಳಬಹುದೇನೊ, ಅವರ ವಿಷಯದ ಸನದಿನ ಕುರಿತು ನೀವು ನಿರ್ಣಯ ತೆಗೆದುಕೊಳ್ಳುವಾಗ ಅವರ ಸಂಸ್ಥಾನದ ಬಗೆಗೆ ಸರಿಯಾಗಿ ತಿಳಿದುಕೊಳ್ಳುವುದು ಸೂಕ್ತ. ನೀವು ಅವರಿಗೆ ಅವರ ದತ್ತು ಪ್ರಕ್ರಿಯೆಯನ್ನು ನಾವು ಒಪ್ಪುವುದಿಲ್ಲವೆಂದು ಹೇಳಬಹುದು. ಹಾಗೂ ಈ ವಿಷಯದಲ್ಲಿ ನಿಮ್ಮದೇ ಆದ ವಿಚಾರಣೆಯನ್ನು ನಡೆಸಿರಿ.

ಇಲ್ಲಿ ಗಮನಾರ್ಹವಾದ ಅಂಶವೆಂದರೆ ಕಿತ್ತೂರ ಸಂಸ್ಥಾನದ ಮೇಲೆ ಟಿಪ್ಪು ಆಕ್ರಮಣ ಮಾಡುವ ಪೂರ್ವದಲ್ಲಿ ದತ್ತುಕವಾದ ಆ ಬಾಲಕನ ತಂದೆ ಸಂಸ್ಥಾನಿಕನಾಗಿದ್ದಾನೆ ಎಂಬುದನ್ನು ವಿಚಾರಿಸಿರಿ. ಒಂದು ವೇಳೆ ದೊರೆ ದೇಸಾಯಿಯ ಮರಣದ ನಂತರ ದತ್ತು ಪ್ರಕ್ರಿಯೆ ನಡೆದಿದ್ದರು ಅದು ಅಧಿಕೃತವಾಗಿದೆಯೇ ಎಂದು ವಿಚಾರಿಸಿರಿ. ದತ್ತು ಪ್ರಕ್ರಿಯೆ ಇಲ್ಲದೆ ಇದ್ದರು ಆ ಬಾಲಕ ದೊರೆ ದೇಸಾಯಿಯ ಹತ್ತಿರದ ಸಂಬಂಧಿಕನಾಗಿದ್ದರೂ ಆತ ಈ ಕೆಳಗಿನ ನಿರ್ಬಂಧನೆಗಳನ್ನು ಪೂರೈಸಿದರೆ ಆತನು ರಾಜ್ಯಾಧಿಕಾರಕ್ಕೆ ಅರ್ಹನಾಗಿರುತ್ತಾನೆಂದು ತಿಳಿಸಿರಿ.

ಇನ್ನೊಂದು ದೃಷ್ಟಿಯಿಂದ ದತ್ತುಕವಾದ ಬಾಲಕನು ದೊರೆ ದೇಸಾಯಿಯ ಮನೆತನದ ಪೂರ್ವಿಕರ ವಂಶಜನಾಗಿರದಿದ್ದರೆ, ಇಲ್ಲವೆ ಸ್ತ್ರೀ ಕಡೆಯಿಂದ ದಿವಂಗತ ದೊರೆಯ ಹತ್ತಿರದ ಸಂಬಂಧಿಕನಾಗಿರದಿದ್ದರೆ ಆತ ಉತ್ತರಾಧಿಕಾರಕ್ಕೆ ಬಾಧ್ಯವಾಗುವುದಿಲ್ಲ. ಅಂತಹ ಸ್ಥಿತಿಯಲ್ಲಿ ಕಿತ್ತೂರ ಸಂಸ್ಥಾನದ ಸ್ತ್ರೀಯರಿಗೆ ಅಲ್ಲಿಯ ಕೆಲಸಗಾರರಿಗೆ ಸರಿಯಾದ ಜೀವನ ನಿರ್ವಹಣ ಆಸ್ತಿಯನ್ನು ನೀಡಿ, ಆ ಸಂಸ್ಥಾನವನ್ನು ಕಂಪನಿಗೆ ವಿಲೀನ ಮಾಡಿಕೊಳ್ಳಲು ಅಡ್ಡಿ ಇಲ್ಲ. ಇಂತಹ ಜಹಗೀರದಾರಿಕೆಯ ದತ್ತಕ ಪ್ರಕರಣವು ಮಾನ್ಯವಾಗಬೇಕಾದರೆ ದತ್ತು ಬಾಲಕ ದಿವಂಗತ ದೊರೆಗೆ ಹತ್ತಿರದವನಾಗಿರಬೇಕು. ಹಾಗೂ ಆ ದೊರೆ ಆತನನ್ನು ಸರಿಯಾದ ಕ್ರಮದಲ್ಲಿ ದತ್ತು ಸ್ವೀಕರಿಸಿರಬೇಕು. ಒಂದು ವೇಳೆ ಸಂಬಂಧವಿಲ್ಲದ

ದತ್ತು ಪುತ್ರನನ್ನು ಸರಿಯಾಗಿ ಸ್ವೀಕರಿಸಿದ್ದರೆ ಅಥವಾ ಸಂಬಂಧವಿರುವ ಪುತ್ರನನ್ನು ಸರಿಯಾಗಿ ದತ್ತು ತೆಗೆದುಕೊಂಡಿದ್ದರೆ, ಆ ಸಂಸ್ಥಾನಕ್ಕೆ ಹೊಸ ನಿರ್ಬಂಧನೆಗಳನ್ನು ಹೇರಿ ಅಲ್ಲಿಯ ರಾಜ್ಯಭಾರವನ್ನು ಮುಂದುವರೆಸಬಹುದಾಗಿದೆ.

ಒಂದು ವೇಳೆ ದಿವಂಗತ ದೊರೆಯ ಖಾಸಗಿ ಸ್ವತ್ತುಗಳೇನಾದರೂ ಇದ್ದರೆ ಅಂತಹ ಆಸ್ತಿಯನ್ನು ಹಿಂದೂ ಕಾನೂನಿನ ಪ್ರಕಾರ ಅವರವರಿಗೆ ಕೊಟ್ಟು ಬಿಡಬೇಕು. ಒಂದು ವೇಳೆ ಅದರ ಭಾಗವೇನಾದರು ಸರ್ಕಾರಕ್ಕೆ ಸಿಗುವದಾಗಿದ್ದರೆ, ಎಲ್ಲ ಆಸ್ತಿ ಹಕ್ಕುದಾರರಿಗೆ ಉದಾರವಾಗಿ ಹಂಚಿದ ಮೇಲೆ ಉಳಿದದ್ದನ್ನು ಮಾತ್ರ ವಶಪಡಿಸಿಕೊಳ್ಳಬೇಕು.

ತನ್ನ ಮೇಲಾಧಿಕಾರಿಗಳಿಂದ ಈ ಪ್ರತ್ಯುತ್ತರವನ್ನು ಪಡೆದ ಥ್ಯಾಕರೆಯು ಕಿತ್ತೂರಿನ ವಿಷಯದಲ್ಲಿ ಇನ್ನಷ್ಟು ಕ್ರೂರಿಯಾದನು. ೧೮೨೪ರ ಸಪ್ಟೆಂಬರ ೨೪ರ ತನ್ನ ವರದಿಯ ಪ್ರಕಾರ ಆತ ಕಿತ್ತೂರಿನ ವ್ಯವಸ್ಥಾಪಕರೊಂದಿಗೆ ತನ್ನದೇಯಾದ ಜಂಟಿ ಏಜೆಂಟರನ್ನು ಇಟ್ಟಿದ್ದನು. ಈ ಇಬ್ಬರು ಅಧಿಕಾರಿಗಳು ಕಿತ್ತೂರಿನ ಆಡಳಿತವನ್ನು ಅಲ್ಲಿಯ ಸಂಪತ್ತನ್ನು ಸಂರಕ್ಷಣೆ ಮಾಡುತ್ತಿದ್ದರು. ಆ ನಂತರ ಘಟನೆಯೊಂದರಲ್ಲಿ ವೆಂಕಟರಾವನು ಕಿತ್ತೂರ ಸಂಸ್ಥಾನದ ಬಗ್ಗೆ ಥ್ಯಾಕರೆಗೆ ತಪ್ಪು ಮಾಹಿತಿಗಳನ್ನು ನೀಡಿದ ಮಲ್ಲಪ್ಪ ಶೆಟ್ಟಿಯನ್ನು ಸೇವೆಯಿಂದ ವಜಾ ಮಾಡಿದನು. ಥ್ಯಾಕರೆ ಹಿಂದಿನ ಕೆಲವು ಆಡಳಿತಗಾರರಾದ ಮಲ್ಲಪ್ಪ ಗುರುಸಿದ್ದಪ್ಪ ಮತ್ತು ನರಸಿಂಗರಾವರನ್ನು ಹೆದರಿಸಿದನು. ಆತ ಅನೇಕ ಹಳ್ಳಿಗಳ ಲೆಕ್ಕ ಪತ್ರಗಳನ್ನು ಪರಿಶೀಲಿಸಲು ಹವಾಲ್ದಾರರನ್ನು ನೇಮಿಸಿದನು.

ರಾಜ ಮನೆತನದ ಹಿರಿಯರನ್ನು ಲೆಕ್ಕಿಸದೇ ಕೆಲವು ಸೇವಕರನ್ನು ಸೇವೆಯಿಂದ ಅಮಾನುತುಗೊಳಿಸಿದನು. ರಾಜ್ಯಭಾರವನ್ನು ಮಾಮಲದಾರರಿಗೆ ನೀಡಿ ಆಗಲೇ ಕಿತ್ತೂರಿನ ಘನತೆಯನ್ನು ಕುಂದಿಸಿದನು. ಹಾವೇರಿ ವೆಂಕಟರಾವರ ಅನುಮತಿಯಿಲ್ಲದೇ, ಯಾವ ಕ್ರಿಯಾತ್ಮಕ ಕೆಲಸಗಳನ್ನು ಕೈಗೊಳ್ಳಬಾರದೆಂದು ಆಜ್ಞೆ ಇತ್ತನು. ಆತನನ್ನು ವಿರೋಧಿಸಿದವರಿಗೆ ಕಠಿಣ ಶಿಕ್ಷೆ ಕಾಯ್ದಿತ್ತು. ಇದರರ್ಥ ಈಗ ಕಿತ್ತೂರಿನ ಖಜಾನೆಯು ಥ್ಯಾಕರೆಯ ಅಧೀನದಲ್ಲಿತ್ತು. ಸುಮಾರು ಹತ್ತು ಲಕ್ಷ ರೂಪಾಯಿಯ ಆ ಖಜಾನೆಯ ರಕ್ಷಣೆಗಾಗಿ ೩೦ ಸಿಪಾಯಿಗಳನ್ನು ನೇಮಿಸಿದನು. ಆತನಿಗೆ ಕಿತ್ತೂರಿನ ಸಿಪಾಯಿಗಳ ಮೇಲೆ ನಂಬಿಕೆ ಇರಲಿಲ್ಲ. ಇದರಿಂದ ನೊಂದ ರಾಣಿ ಚನ್ನಮ್ಮ ಮುಂಬೈಯ ಗವರ್ನರರಾಗಿದ್ದ ಎಚ್.ಇ.ಮೌಂಟಸ್ಟುವರ್ಟ ಎಲ್ಫಿನ್‌ಸ್ಟನಗೆ ತನ್ನ ವಕೀಲರಾದ ರಾಚಪ್ಪ ಮತ್ತು ಲಿಂಗೋಪಂತರ ಮೂಲಕ ಪತ್ರವನ್ನು ಕಳಿಸಿದಳು. ಈ ವಕೀಲರು ದಿನಾಂಕ ೦೮-೧೦-೧೮೨೪ರಂದು ಎಲ್ಫಿನ್‌ಸ್ಟನ್‌ರನ್ನು ಕಂಡರೂ, ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ.

ಕಿತ್ತೂರಿನ ರಾಜಮನೆತನದ ಜನರಿಗೊಂದಿಷ್ಟು ತಪ್ಪು ತಿಳುವಳಿಕೆಯನ್ನು ಉಂಟು ಮಾಡುವುದು ಥ್ಯಾಕರೆಯ ಅಂದಿನ ಕೆಲಸವಾಗಿತ್ತು. ಅದರ ಪ್ರಕಾರ ಥ್ಯಾಕರೆಯು ಕೆಲವರ ಮೂಲಕ ದಿವಂಗತ ದೊರೆಯ ವಿಧವೆ ವೀರಮ್ಮನಿಗೆ ಒಂದು ಸುದ್ದಿ ಕಳಿಸಿ, ಆ

ಪಾವಿತ್ರ್ಯದ ಅರಿವಿತ್ತು. ಅವರಿಗೆ ಗೊತ್ತಿರುವಂತೆ ಚನ್ನಮ್ಮ ತನ್ನ ಮಗ ಬದುಕಿದರೆ ಅವನನ್ನು ರುದ್ರಮ್ಮನ ಮಗ ಅಂದರೆ, ದಿವಂಗತ ದೊರೆಯ ಅಂಗ ರಕ್ಷಕನನ್ನಾಗಿ ಮಾಡಲು ಆಶಿಸಿದ್ದಳು. ಅವಳು ಪ್ರಜೆಗಳಲ್ಲಿ ಇಟ್ಟಿರುವ ಪ್ರೀತಿ ಅಲ್ಲಿಯ ಎಲ್ಲರಿಗೂ ತಿಳಿದಿತ್ತು. ಇದರಿಂದಾಗಿ ಚನ್ನಮ್ಮನ ವಿರುದ್ಧ ಕತ್ತಿ ಮಸೆಯುತ್ತಿದ್ದ ಥ್ಯಾಕರೆಯ ಆಟ ನಡೆಯಲಿಲ್ಲ.

ಇಂತಹ ಸಂದಿಗ್ಧ ಸಮಯದಲ್ಲಿ ಚನ್ನಮ್ಮನ ಚಟುವಟಿಕೆಗಳನ್ನು ಥ್ಯಾಕರೆಯ ಜನ ವರದಿಯ ರೂಪದಲ್ಲಿ ಸಂಗ್ರಹಿಸುತ್ತಿದ್ದರು. ಅವಳು ತನ್ನ ಸರ್ದಾರರೊಂದಿಗೆ ಭೇಟಿಯಾಗದಂತೆ ನೋಡಿಕೊಳ್ಳಲಾಗಿತ್ತು. ಅವರೆಲ್ಲರನ್ನು ನಿರ್ಬಂಧಿಸಿ ಅವರ ಚಲನವಲನಗಳನ್ನು ಗಮನಿಸಲಾಗುತ್ತಿತ್ತು.

ದಿನ ಕಳೆದಂತೆ ಈ ಸ್ಥಿತಿ ಅಸಹನೀಯವಾಯಿತು. ಗಾಯದ ಮೇಲೆ ಬರೆ ಹಾಕುವಂತೆ ಥ್ಯಾಕರೆಯು ಒಂದು ಆಜ್ಞೆಯನ್ನು ಹೊರಡಿಸಿ ದತ್ತು ಪುತ್ರ ಶಿವಲಿಂಪ್ಪನನ್ನು ಕಿತ್ತೂರಿನಿಂದ ಹೊರ ಹಾಕಬೇಕೆಂದು ತಿಳಿಸಿದ. ಕಿತ್ತೂರ ಜನ ಆತನ ಅಲ್ಲಿಯ ಇರುವಿಕೆಯಿಂದ ತಮ್ಮ ಪ್ರಭುತ್ವಕ್ಕಾಗಿ ಪ್ರಯತ್ನಿಸುತ್ತಾರೇನೋ ಎಂಬ ಕಾರಣಕ್ಕಾಗಿ ಈ ಪಾಪದ ಕೆಲಸ ಮಾಡಿದನು ಥ್ಯಾಕರೆ. ಇದರಿಂದಾಗಿ ರಾಣಿ ಚನ್ನಮ್ಮನಿಗೆ ನೋವುಂಟಾಯಿತು. ಆ ವಾರಸುದಾರ ಕಿತ್ತೂರನ್ನು ತ್ಯಜಿಸುವುದಾದರೆ ಅವಳು ಕಿತ್ತೂರಿನಲ್ಲಿರಲು ಮನಸ್ಸು ಮಾಡಲಿಲ್ಲ. ಆಶ್ಚರ್ಯವೆಂದರೆ ರಾಣಿ ಚನ್ನಮ್ಮ ಥ್ಯಾಕರೆಗೆ ತನ್ನನ್ನು ಆ ದತ್ತು ಬಾಲಕನೊಂದಿಗೆ ಹೋಗಲು ವೀರಮ್ಮ "ಪುಣೆ" ಇಲ್ಲವೆ "ಮುಂಬೈ" ಗೆ ಹೋಗಲು ಇಲ್ಲವೆ ಅವರಿಬ್ಬರಿಗೂ ವಾರಣಾಸಿಗೆ ಹೋಗಲು ಅನುಮತಿ ನೀಡುವಂತೆ ಕೇಳಿಕೊಂಡಳು. ಆದರೆ ಥ್ಯಾಕರೆ ಚನ್ನಮ್ಮನ ಖರ್ಚನ್ನು ಮಾತ್ರ ಭರಿಸಲು ಇಚ್ಛಿಸಿದನಲ್ಲದೆ ಪದೇ ಪದೇ ದತ್ತು ಬಾಲಕ ಶಿವಲಿಂಗಪ್ಪನನ್ನು ಊರಿಂದ ಹೊರ ಹಾಕಬೇಕೆಂದು ಹೇಳತೊಡಗಿದ ಇದನ್ನು ಕೇಳಲಾಗದ ಚನ್ನಮ್ಮ ಮತ್ತು ವೀರಮ್ಮರು ೧೮೨೪ರ ಅಕ್ಟೋಬರ ೧೧ರಂದು ಡೆಕ್ಕನ್ ಪ್ರಾಂತದ ಆಯುಕ್ತ ಚಾಪ್ಲೆನನಿಗೆ ಒಂದು ಜಂಟಿ ಪತ್ರವನ್ನು ಬರೆದರು. ಅದರ ಒಕ್ಕಣಿಕೆ ಹೀಗಿತ್ತು. "ನಾವು ನಮ್ಮ ಮನುಷ್ಯ ರಾಚಪ್ಪನ ಕೈಯಲ್ಲಿ ನಮ್ಮ ಸಂಸ್ಥಾನದ ಲೆಕ್ಕ ಪತ್ರಗಳ ವಿವರಗಳನ್ನು ಕಳಿಸಿದ್ದು ಅದರ ಸ್ವೀಕೃತಿಯನ್ನು ನೀವು ನಮಗೆ ಇನ್ನು ಕಳಿಸಿಲ್ಲ".

ನಿಮಗೆ ಥ್ಯಾಕರೆಯವರಿಂದ ನಾವು ಪಡೆಯುವ ಬೆಂಬಲದ ಬಗ್ಗೆ ಗೊತ್ತಿದೆ. ಅವರು ತಮಗೆ ತಿಳಿದಂತೆ ನಮ್ಮನ್ನು ನಡೆಸಿಕೊಳ್ಳುತ್ತಿದ್ದಾರೆ. ನಾವು ಅವರ ವ್ಯವಹಾರದಲ್ಲಿ ಮಧ್ಯ ಪ್ರವೇಶಿಸಿಲ್ಲ. ನೀವು ನಮ್ಮ ವಿಚಾರದಲ್ಲಿ ಒಂದಿಷ್ಟು ದಯಾಳುಗಳಾಗಿರುವುದು ಸಂತಸದ ಸಂಗತಿ. ನಮಗೆ ಕೊಡಬೇಕಾದ ಗೌರವವನ್ನು ಕಡೆಗಾಣಿಸಿ ಒಮ್ಮೆ ಥ್ಯಾಕರೆಯವರು ನಮ್ಮೊಂದಿಗೆ ಸಂದರ್ಶನಕ್ಕಾಗಿ ಕೇಳಿಕೊಂಡರು. ನಮ್ಮ ಸಂಸ್ಥಾನದ ಮೇಲಾಧಿಕಾರಿಯಾಗುವ ಅವರೊಂದಿಗೆ ನಾವು ಅನುಚಿತವಾಗಿ ನಡೆದುಕೊಂಡು, ಅವರ ಪ್ರಶ್ನೆಗಳಿಗೆಲ್ಲ ಉತ್ತರಿಸಿದೆವು. ಆದರೆ ದಯವಿಟ್ಟು ನೀವು ನಮ್ಮ ಸಂಸ್ಥಾನವನ್ನು ಮುಂದುವರೆಸಲು ಅವಕಾಶ ನೀಡಬೇಕು.

ಥ್ಯಾಕರೆ ಸಾಹೇಬರು ನಮ್ಮ ಕುದುರೆ ಲಾಯಗಳು "ಪಾಲ್ಕಾನಗಳು" ಆಯುಧಗಳು, ಸೈನಿಕರು ಇತ್ಯಾದಿಗಳೆಲ್ಲವನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಿದ್ದಾರೆ. ನಮಗೆ ಬೇಕಾದುದನ್ನು

ಪಡೆಯಲು ಅವರು ಬಿಡುತ್ತಿಲ್ಲ. ಇದರಿಂದಾಗಿ ಸಂಸ್ಥಾನದಲ್ಲಿ ಕಾಲಕಳೆಯುವುದು ಕಷ್ಟವಾಗುತ್ತಿದೆ. ಆಗಲೇ ನಾವು ಈ ಸಂಸ್ಥಾನಕ್ಕೆ ಓರ್ವ ದತ್ತುಪುತ್ರನನ್ನು ತೆಗೆದುಕೊಂಡಿದ್ದೇವೆ. ಈಗ ಆತನನ್ನು ಹೊರಹಾಕು ಎನ್ನುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ಬೊಂಬಾಯಿಗೊ, ವಾರಣಾಸಿಗೊ ಹೋಗಬೇಕೆನಿಸುತ್ತಿದೆ. ಈ ವಿಷಯವಾಗಿ ನಾವು ಅವರಿಗೆ ಕೇಳಿಕೊಂಡಾಗ ಅವರು ಹೇಳುವುದೇನೆಂದರೆ, ನಾವು ಸದ್ಯ ಹೋಗುವುದೇ ಇದೆ. ಆದ್ದರಿಂದ ಇಷ್ಟು ಬೇಗ ಹೋಗುವುದು ಬೇಡ ಎನ್ನುತ್ತಿದ್ದಾರೆ. ನಮ್ಮ ಬಗ್ಗೆ ಅವರು ಬಳಸುವ ಭಾಷೆ ದಿನದಿಂದ ದಿನಕ್ಕೆ ಬದಲಾಗುತ್ತಿದೆ. ಅವರು ನಮ್ಮ ಸೇವಕರಿಗೆ ಹೊರಹೋಗು ಎನ್ನುತ್ತಿದ್ದಾರೆ. ಆದರೆ ಇಲ್ಲಿಯವರೆಗೆ ಇಲ್ಲಿಯ ಸೇವೆ ಸಲ್ಲಿಸಿದ ಅವರು ಈಗ ನೌಕರಿಗಾಗಿ ಎಲ್ಲಿ ತಾನೆ ಹೋಗಬೇಕು ? ಈ ಸಂಸ್ಥಾನವನ್ನು ಉಳಿಸಿದರೆ ಆ ಕೀರ್ತಿ ನಿಮ್ಮದಾಗುತ್ತದೆ ಎನ್ನುವುದನ್ನು ಮರೆಯಬೇಡಿ.

ಆ ಮುಂದಿನ ಪರಿಸ್ಥಿತಿಯ ವ್ಯಂಗವೆಂದರೆ, ಕಿತ್ತೂರ ರಾಜಮಾತೆಯರ ಪತ್ರಕ್ಕೆ ಡೆಕ್ಕನ್ ಆಯುಕ್ತ ಚಾಪ್ಲೆನನು ಯಾವ ಉತ್ತರವನ್ನು ಕೊಡಲಿಲ್ಲ. ಇದರಿಂದಾಗಿ ಬೇಸತ್ತ ರಾಣಿ ಚನ್ನಮ್ಮ ೧೮೨೪ರ ಅಕ್ಟೋಬರ ೧೮ರಂದು ರಾಜ್ಯದ ಎಲ್ಲ ಆಡಳಿತಗಾರರನ್ನು ಸೇನಾನಿಗಳನ್ನು ಉದ್ದೇಶಿಸಿ ಭಾಷಣ ಮಾಡಿದಳು. ಅದರ ವಿವರ ಕೆಳಗಿನಂತಿದೆ.

"ಕಿತ್ತೂರು ನಮ್ಮದು ನಾವು ನಮ್ಮ ಭೂಭಾಗದ ಮಾಲೀಕರು. ನಾವು ಇಂಗ್ಲೀಷರ ಅನುಮತಿಯಿಲ್ಲದೇ ಈ ಮಗುವನ್ನು ದತ್ತು ತೆಗೆದುಕೊಂಡಿದ್ದರಿಂದ ಅದು ಅಧಿಕೃತವಲ್ಲ ಎನ್ನುತ್ತಾರೆ. ಆದರೆ ಅದಕ್ಕಾಗಿ ನಾವು ಅವರ ಅನುಮತಿ ಪಡೆಯಬೇಕೆಂಬುದು ಎಲ್ಲಿ ಬರೆದಿದೆ ? ವ್ಯಾಪಾರಕ್ಕಾಗಿ ಈ ದೇಶಕ್ಕೆ ಆಗಮಿಸಿದ ಇಂಗ್ಲೀಷರಿಂದ ನಮ್ಮ ನಮ್ಮ ಒಳಜಗಳಗಳ ಲಾಭ ಪಡೆದು ಇಲ್ಲಿ ಸಾಮ್ರಾಜ್ಯ ಕಟ್ಟಲು ಹವಣಿಸುತ್ತಿದ್ದಾರೆ. ಅವರು ನಮ್ಮಿಂದ "ನಜರಾನಾ" ಎಂಬ ಬೃಹತ್ ಮೊತ್ತವನ್ನು ಕೇಳುತ್ತಿದ್ದಾರೆ. ಒಂದು ವೇಳೆ ಪೇಶ್ವೆಗಳು ನಮಗೆ ಅನ್ಯಾಯ ಮಾಡಿದ್ದಾರೆಂದರೆ ಅವರು ನಮ್ಮವರೇ ಆದ್ದರಿಂದ ಅದನ್ನು ಮರೆಯೋಣ. ಆದರೆ ನಮ್ಮವರಲ್ಲದ ಈ ಇಂಗ್ಲೀಷರು ನಮ್ಮದು ಸಣ್ಣ ಸಂಸ್ಥಾನವೆಂದು ನಮ್ಮನ್ನು ಮುಗಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಕಿತ್ತೂರ ಜನತೆ ತಮ್ಮ ಜೀವಕ್ಕಿಂತಲೂ ತಮ್ಮ ಸ್ವಾತಂತ್ರ್ಯಕ್ಕೆ ಹೆಚ್ಚಿನ ಬೆಲೆ ಕೊಡತ್ತಾರೆಂಬುದರ ಅರಿವು ಅವರಿಗಿಲ್ಲ. ಸಾವಿರಾರು ಹುತಾತ್ಮರ ಪುಣ್ಯ ಭೂಮಿ ಕಿತ್ತೂರಾಗಿದೆ. ನಮ್ಮದು ಸಣ್ಣ ಸಂಸ್ಥಾನ, ಸಣ್ಣ ಸೇನೆ ಇದ್ದರೂ ನಮ್ಮಲ್ಲಿ ದೇಶಾಭಿಮಾನದ ರಕ್ತ ಹರಿಯುತ್ತಿದೆ. ನಮ್ಮಲ್ಲಿ ಪ್ರತಿಯೊಬ್ಬನು ಅವರಲ್ಲಿಯ ಹತ್ತು ಜನರಿಗೆ ಸಮ. ನಾವು ಚಾಪ್ಲೆನ ಹಾಗೂ ಥ್ಯಾಕರೆಗೆ ನಮ್ಮ ಕೊನೆಯ ಉಸಿರಿರುವವರೆಗೆ ಹೋರಾಡುತ್ತೇವೆ ಎಂಬುದನ್ನು ತಿಳಿಸೋಣ.

ರಾಣಿ ಚನ್ನಮ್ಮನ ಈ ಸ್ಫೂರ್ತಿದಾಯಕ ಭಾಷಣ ಎಲ್ಲರಲ್ಲಿಯೂ ಧೈರ್ಯ, ಸಾಹಸಗಳನ್ನು ಬಡಿದೆಬ್ಬಿಸಿತು. ಅವರೆಲ್ಲ ಒಂದೇ ಧ್ವನಿಯಲ್ಲಿ "ಕಿತ್ತೂರಿಗೆ ಜಯವಾಗಲಿ" ಎಂದು ಘೋಷಿಸಿದರು. ಯುದ್ಧದ ಘೋಷಣೆಯ ಕರೆ ಮೊಳಗಿತು.

೨೦೦೦ ದ ಜೂನ ೨೦ರಂದು ಜರುಗಿದ ಒಂದು ಸಂದರ್ಶನದಲ್ಲಿ ಕಿತ್ತೂರಿನ

ತಾತಾಸಾಹೇಬ ದೇಸಾಯಿ ರಾಣಿ ಚನ್ನಮ್ಮ ಇಂಗ್ಲೀಷರ ವಿರುದ್ಧದ ಬಂಡಾಯದ ಕುರಿತು ಹೀಗೆ ಹೇಳುತ್ತಾರೆ.

"ಕಿತ್ತೂರ ಚನ್ನಮ್ಮ ನನ್ನ ಸಂಬಂಧಿ. ಅಂದು ಕಿತ್ತೂರ ಒಂದು ಸಂಸ್ಥಾನವಾಗಿತ್ತು. ಅಂದು ಚನ್ನಮ್ಮ ಧೂರ್ತ ಬ್ರಟೀಷರ ವಿರುದ್ಧ ಹೋರಾಡಿದಳು. ಅವಳ ಕೆಚ್ಚೆದೆಯ ಬಂಡಾಯವು ಇಡೀ ಭಾರತ ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿ ನೀಡಿತು, ನಾಂದಿ ಹಾಡಿತು, ಎಂದಿದ್ದಾರೆ ಮತ್ತು ಸರಕಾರ ಇವರಿಗೆ ಜಮೀನು ಮತ್ತು ಸ್ವಾತಂತ್ರ್ಯ ಯೋಧರ ಪಿಂಚಣಿ ಕೊಡುತ್ತದೆ. ಆದರೆ ಅವರು ಇನ್ನೂ ಹೆಚ್ಚಿನ ಸವಲತ್ತಿಗಾಗಿ ತಮ್ಮ ಹೋರಾಟವನ್ನು ಮುಂದುವರೆಸಿದ್ದಾರೆ. ಅವರಿಗೆ ಇಂದು ೮೫ ವರ್ಷ ವಯಸ್ಸಾಗಿದೆ. ೨೦೦೦ರ ಜುಲೈ ೨೮ರಂದು ಇನ್ನೊಂದು ಸಂದರ್ಶನದಲ್ಲಿ ತಲ್ಲೂರಿನ ಶ್ರೀಮತಿ ಗಿರಿಜಾ ದೇವಿಯವರು ಹೇಳುವಂತೆ ರುದ್ರಮ್ಮ ಮಲ್ಲಸರ್ಜನ ಮೊದಲ ಹೆಂಡತಿ. ಅವಳೂ ಕೂಡ ಚನ್ನಮ್ಮನಷ್ಟೆ ಶೂರಳೂ, ಧೈರ್ಯಶಾಲಿಯೂ ಆಗಿದ್ದಳು. ಅವಳು ಚನ್ನಮ್ಮನಿಗೆ ಅನೇಕ ವಿಷಯಗಳಲ್ಲಿ ಸಹಕರಿಸುತ್ತಿದ್ದಳು. ಅವರಿಬ್ಬರು ಅಕ್ಕತಂಗಿಯರಂತೆ ನಡೆದುಕೊಳ್ಳುತ್ತಿದ್ದರು. ಅವರಲ್ಲಿ ಆಂತರಿಕ ಮತ್ತು ಬಾಹ್ಯ ಯಾವುದೇ ತರಹದ ಭಿನ್ನಾಭಿಪ್ರಾಯಗಳಿರಲಿಲ್ಲ. ಅವರು ಕಿತ್ತೂರಿನ ಜನತೆಯ ಸ್ವಾತಂತ್ರ್ಯಕ್ಕಾಗಿ ಅವರ ಹಕ್ಕಿಗಾಗಿ ತಮ್ಮ ಪ್ರಾಣವನ್ನು ತ್ಯಾಗಮಾಡಿದ್ದಾರೆ. ಇಂದು ಅವರಿಬ್ಬರನ್ನು ಸ್ಮರಿಸುವುದು ಅಗತ್ಯವಾಗಿದೆ.

* * *

ಅಧ್ಯಾಯ–೪

ಕಿತ್ತೂರ ಯುದ್ಧ ಹಾಗೂ ಯುದ್ಧದ ಪರಿಣಾಮಗಳು

೧೮೨೪ರ ಅಕ್ಟೋಬರ ೨೧ರಂದು ಧಾರವಾಡದ ಕಲೆಕ್ಟರ ಥ್ಯಾಕರೆಯು ರಾಣಿ ಚನ್ನಮ್ಮನನ್ನು ಸಂದರ್ಶಿಸಲು ಬಂದರೂ, ರಾಣಿ ಅದಕ್ಕೊಪ್ಪದೆ ಕಿತ್ತೂರ ಸಂಸ್ಥಾನದ ಸ್ವಾತಂತ್ರ್ಯ ಪ್ರಿಯತೆಯ ಬಗ್ಗೆ ಆತನಿಗೊಂದು ಪಾಠ ಕಲಿಸಲು ನಿರ್ಧರಿಸಿದಳು. ಅಂದು ಸಂಜೆ ಅವಳು ಉತ್ತಮ ಮಾನಸಿಕ ಸ್ಥಿತಿಯಲ್ಲಿದ್ದಳು. ದಂಥ ಕತೆಯೊಂದರ ಪ್ರಕಾರ ಅಂದು ರಾತ್ರಿ ಆಕೆಗೆ ಕನಸೊಂದು ಬಿದ್ದಿತೆಂದೂ ಆ ಕನಸಿನಲ್ಲಿ ಆಕೆಯ ಪತಿ ದೊರೆ ಮಲ್ಲಸರ್ಜನು ಆಕೆಯೊಂದಿಗೆ ಮಾತನಾಡಿದನೆಂದು ಹೇಳುತ್ತಾರೆ. ಆಕೆಗೆ ಕಿತ್ತೂರ ಸಂಸ್ಥಾನಕ್ಕೆ ಕೆಟ್ಟ ಕಾಲ ಒದಗಿಬಂದಿದೆ, ಆದ್ದರಿಂದ ಆಕೆ ಶೌರ್ಯ ಮೆರೆಯಬೇಕೆಂದೂ ಬ್ರಿಟೀಷರ ವಿರುದ್ಧ ಕಾದಾಡಬೇಕೆಂದು ಹೇಳಿದನೆಂದೂ ಅದಕ್ಕೆ ರಾಣಿ ಚನ್ನಮ್ಮ ಒಪ್ಪಿದಳೆಂದೂ ತಿಳಿದುಬರುತ್ತದೆ.

ಮರುದಿನ ರಾಣಿ ತನಗೆ ಬಿದ್ದ ಕನಸನ್ನು ಕೆಲವರಿಗೆ ಹೇಳಿದಳು ಮತ್ತು ತಕ್ಷಣ ಅವಳು ಕಲ್ಮಠದ ಪೂಜ್ಯರನ್ನು ಕಂಡು ಅವರ ಆಶೀರ್ವಾದ ಪಡೆದಳು. ಮುಂದೆ ತನ್ನ ಸೈನ್ಯದ ದಳಪತಿ ಸರ್ದಾರ ಗುರುಸಿದ್ದಪ್ಪ ಮತ್ತು ಉಳಿದ ಉನ್ನತಾಧಿಕಾರಿಗಳನ್ನು ಕರೆಯಿಸಿದಳು. ಅವರೆಲ್ಲ ಬ್ರಿಟೀಷರ ವಿರುದ್ಧ ಮಾಡಲು ಯೋಜಿಸಿದ ಯುದ್ಧದ ಬಗ್ಗೆ ಚರ್ಚಿಸಿದರು.

ರಾಣಿ ಚನ್ನಮ್ಮನಿಗೆ ಬ್ರಿಟೀಷರ ಸೈನ್ಯ ಹಾಗೂ ಅವರ ಉನ್ನತ ಮಟ್ಟದ ಯುದ್ಧ ಸಾಮಗ್ರಿಗಳ ಬಗ್ಗೆ ತಿಳುವಳಿಕೆ ಇತ್ತು. ಈ ಸಂದರ್ಭದಲ್ಲಿ ಕೊಲ್ಲಾಪುರದ ಅರಸನ ಸಹಾಯವನ್ನು ಅವಳು ನಿರೀಕ್ಷಿಸಿದಳು. ಅಂತೆಯೇ ಆ ಅರಸನಲ್ಲಿಗೆ ಒಬ್ಬ ದೂತನನ್ನು ಕಳಿಸಿ ಒಂದು ಸೇನಾ ತುಕಡಿಯನ್ನು ಕಳಿಸಬೇಕೆಂದು ಮೊರೆ ಇಟ್ಟಳು. ತನ್ನ ಸಂಸ್ಥಾನದ ಸರ್ದಾರರು, ಸುಬೇದಾರರು, ಕಿಲ್ಲೆದಾರರು, ದಳವಾಯಿಗಳು ಹಾಗೂ ಜೌಬಾರಿಗಳಿಗೆಲ್ಲ ಯುದ್ಧದ ಕುರಿತಾದ ಸುದೀರ್ಘ ವಿವರಗಳನ್ನು ನೀಡಿದಳು. ಎಲ್ಲ ಹಳ್ಳಿಗಳ ಶೆಟ್ಟಿ – ಸನದಿಗಳಿಗೆ ಯುದ್ಧದಲ್ಲಿ ಭಾಗಿಯಾಗಲು ಕರೆ ಕಳಿಸಿದಳು. ಸುತ್ತಲಿನ ಹಳ್ಳಿಗಳ ವೀಕ್ಷಣಾ ಗೋಪುರಗಳಿಗೆ ತೆರಳಿದ ಕಿಲ್ಲೆದಾರರು ಆಕೆಗೆ ವೈರಿಗಳ ಸುಳಿವಿನ ಬಗ್ಗೆ ತಿಳಿಸಲು ಸನ್ನದ್ಧರಾದರು.

ಕಿತ್ತೂರ ಸಂಸ್ಥಾನದ ಕೋಟೆಯ ಪಶ್ಚಿಮದ ಗೋಪುರಗಳಾದ ಕಮ್ಮನ ಮರ್ಡಿ ಹಾಗೂ ಗಡದ ಮರ್ಡಿಯಲ್ಲೂ ಕಿಲ್ಲೆದಾರರು ನೇಮಕವಾದರು. ಅವರು ತಮಗೆ ಸುಮಾರು ಇಪ್ಪತ್ತು ಮೈಲುಗಳ ಅಂತರದವರೆಗೆ ಕಾಣಬಹುದಾದ ವಸ್ತು ಸ್ಥಿತಿಯನ್ನು ಹೇಳಬಲ್ಲವರಾಗಿದ್ದರು. ಅಂದು ಕಿತ್ತೂರ ಸೈನ್ಯವು ಏಳು ಸಾವಿರ ಕಾಲ್ದಳ, ಎರಡು ಸಾವಿರ ಅಶ್ವದಳ, ಒಂದು ಸಾವಿರ ಒಂಟೆಗಳನ್ನು, ಐವತ್ತು ಆನೆಗಳನ್ನು, ಎರಡು ೨೪–ಬಿ ಶ್ರೇಣಿಯ ಹಿತ್ತಾಳೆಯ ಗನ್ನುಗಳನ್ನು ಮತ್ತು ಹದಿನಾಲ್ಕು ಇತರೆ ಸಾಮಗ್ರಿಗಳನ್ನು

ಹೊಂದಿತ್ತು. ಸೈನಿಕರು ಬಂದೂಕು, ಕತ್ತಿ, ಬಿಲ್ಲು, ಬಾಣ, ಕೊಡಲಿ ಮುಂತಾದ ಆಯುಧಗಳನ್ನು ಬಳಸುತ್ತಿದ್ದರು. ಇದಲ್ಲದೆ ಆ ಸಂಸ್ಥೆ ಹೊಂದಿದ ಹಳ್ಳಿಗಳ ಪಡೆ "ಶೆಟ್ಟಿ-ಸನದಿಗಳು" ಯುದ್ಧದ ವೇಳೆಯಲ್ಲಿ ಉತ್ತಮ ರೀತಿಯಲ್ಲಿ ಹೋರಾಡುತ್ತಿದ್ದರು. ಇಡೀ ಸೈನ್ಯವನ್ನು ಬಹು ಎಚ್ಚರಿಕೆಯಿಂದ ಸಿದ್ಧಗೊಳಿಸಲಾಗಿತ್ತು. "ರಾಣಿ ಚನ್ನಮ್ಮನ ಸೈನ್ಯದಲ್ಲಿ ಕೆಲವು ಟರ್ಕಿ ಹಾಗೂ ಆಫ್ರಿಕಾದ ಸೈನಿಕರಿದ್ದರು.

ಎಲ್ಲ ಕೋಟೆ-ಕೊತ್ತಲಗಳಲ್ಲಿ ಯುದ್ಧ ಕರ್ತವ್ಯದಲ್ಲಿದ್ದ ದಳಪತಿ ಹಾಗೂ ಕಿಲ್ಲೆದಾರರುಗಳಿಗೆ ಬ್ರಿಟೀಷರ ಯಾವುದೇ ಮಾತಿಗೂ ಬೆಲೆ ಕೊಡಬಾರದೆಂದು ಕಟ್ಟಪ್ಪಣೆ ನೀಡಲಾಗಿತ್ತು. ಕೋಟೆ ಮತ್ತಿತರ ಕಡೆಗಳಲ್ಲಿ ಅಂದು ಸೃಷ್ಟಿಯಾದ ದೃಶ್ಯವೆಂದರೆ ಅದೊಂದು ರಣರಂಗದ ಚಿತ್ರದಂತಿತ್ತು. ಸಂಸ್ಥಾನದ ಮಹಾದ್ವಾರದಲ್ಲಿದ್ದ ಕೆಲವು ಇಂಗ್ಲೀಷ ಸೈನಿಕರು ಇದೆಲ್ಲವನ್ನು ನಿಲ್ಲಿಸಬೇಕೆಂದು ಕೇಳಿಕೊಂಡರು. ಆದರೆ ರಾಣಿಯ ಜನ ಅದಕ್ಕೆ ಬೆಲೆ ಕೊಡಲಿಲ್ಲ. ಆಗ ಇಂಗ್ಲೀಷ ಸೈನಿಕರು ಧಾರವಾಡದ ಕಲೆಕ್ಟರನಿಗೆ ಈ ವಿಷಯ ತಿಳಿಸಿದರು. ಇದನ್ನರಿತ ಥ್ಯಾಕರೆ ತನ್ನ ಕಾರಡಗಿಯ ೧೫೦೦ ಬಲವಾದ ಸೈನ್ಯವನ್ನು ಕಿತ್ತೂರಿಗೆ ಕಳಿಸಿದ್ದ. ಈ ಸೇನಾ ತುಕಡಿ ೧೮೨೪ ರ ಅಕ್ಟೋಬರ ೨೦ ರಂದು ಕಿತ್ತೂರನ್ನು ತಲುಪಿತು.

ಈ ಸಂದರ್ಭದಲ್ಲಿ ಥ್ಯಾಕರೆ ತನ್ನ ಚಿಕ್ಕದಾದ ಸೇನೆಯ ತುಕಡಿಯೊಂದಿಗೆ ಕಿತ್ತೂರನ್ನು ತಲುಪಿದ್ದನು. ಬ್ರಿಟೀಷ ಸೈನ್ಯದ ದೃಶ್ಯ ಕಂಡು ಕಿತ್ತೂರಿನ ಸೈನಿಕರು ಹೆದರಿ ಶರಣಾಗುವರೆಂದು ತಿಳಿದು ಆತ ಕಿತ್ತೂರಿನ ಕೆಮ್ಮನಮರ್ಡಿಯ ಪೂರ್ವದಲ್ಲಿ ತನ್ನ ಸೈನಿಕರಿಗಾಗಿ ಟೆಂಟಗಳನ್ನು ಹಾಕಿಸಿದ.

ಮರುದಿನ ಥ್ಯಾಕರೆ ತನ್ನ ಸಹಾಯಕರಾದ ಎಲ್ಲಿಯಟ್ ಹಾಗೂ ಸ್ಟೆವನ್‌ಸನ್‌ರನ್ನು ಕಿತ್ತೂರ ಅರಮನೆಗೆ ಕಳಿಸಿ ಅಲ್ಲಿಯ ರಾಜ ಪ್ರಮುಖರೆಲ್ಲರಿಂದ ಅಲ್ಲಿಯ ಖಜಾನೆಯ ಸುರಕ್ಷತೆಯ ಬಗ್ಗೆ ಒಂದು "ಬಾಂಡಿಗೆ" ಸಹಿ ಹಾಕಿಸಿಕೊಂಡು ಬರಲು ತಿಳಿಸಿದನು. ಅವರೆಲ್ಲ ಸರ್ದಾರ ಗುರುಸಿದ್ದಪ್ಪನನ್ನು ಭೇಟಿಯಾದರು. ಅಲ್ಲಿದ್ದ ಪ್ರತಿಭಟನಾ ವಾತಾವರಣ ಅವರಿಗೆ ದಿಗಿಲು ಹುಟ್ಟಿಸಿರಬೇಕು. ಕಿತ್ತೂರ ಸೇನಾ ಪ್ರಮುಖರು ಈ ಬ್ರಿಟೀಷ ಅಧಿಕಾರಿಗಳಿಗೆ ಬೆಲೆ ನೀಡಲಿಲ್ಲ. ಇದರಿಂದಾಗಿ ಕೋಪಗೊಂಡ ಥ್ಯಾಕರೆ ತನ್ನ ನೂರು ಅಶ್ವದಳದ ತುಕಡಿಗೆ ಕಿತ್ತೂರಿನ ಸೇನಾನಾಯಕರನ್ನು ಸೆರೆಹಿಡಿಯಬೇಕೆಂದು ಆದೇಶಿಸಿದ. ಆದರೆ ಸರ್ದಾರ ಗುರುಸಿದ್ದಪ್ಪ ಆ ಅಶ್ವದಳದವರನ್ನು ಹೊರ ಅಟ್ಟಿದ.

ಏತನ್ಮಧ್ಯೆ ಕಿತ್ತೂರ ಸೈನಿಕರು ತಮ್ಮ ಕೋಟೆಯ ಮಹಾದ್ವಾರವನ್ನು ಮುಚ್ಚಿದ್ದರಿಂದ ಬ್ರಿಟೀಷ ಸೈನಿಕರು ಪಾರಾಗಿ ಹೋಗಲು ಪರದಾಡಬೇಕಾಯಿತು. ಈ ಬಲಾಬಲ ಪರೀಕ್ಷೆಯಲ್ಲಿ ಕೆಲವು ಬ್ರಿಟೀಷ ಸೈನಿಕರು ಸತ್ತರು. ಅವರಲ್ಲಿ ಕೆಲವರು ಜನರ ನಿವಾಸಗಳಲ್ಲಿ ಅಡಗಿಕೊಂಡರೆ, ಇನ್ನು ಕೆಲವರು ಅಲ್ಲಲ್ಲಿ ಓಡಾಡುತ್ತಿದ್ದರು. ಕಿತ್ತೂರ ಸೈನಿಕರು ಅಂತಹ ನಲವತ್ತು ಜನರನ್ನು ಬಂಧಿಸಿದರು. ಅವರಲ್ಲಿ ಕೆಲವರು ಸ್ತ್ರೀಯರು, ಮಕ್ಕಳು ಇದ್ದರು. ರಾಣಿ ಅವರಿಗೆಲ್ಲ ಉತ್ತಮ ಆಶ್ರಯ ನೀಡಿದಳು. ಆಕೆ ಅವರಿಗೆ ಸಮಾಧಾನ ಹೇಳಿದಳು. ಅವರೆಲ್ಲರನ್ನು ಅತಿಥಿಗಳಂತೆ ನೋಡಿಕೊಂಡಳು. ನಂತರ ರಾಣಿ ಚನ್ನಮ್ಮ ಬ್ರಿಟೀಷ ಅಧಿಕಾರಿಗಳ ಬಳಿಗೆ ತನ್ನ ದೂತನನ್ನು ಕಳಿಸಿ ಅವರ ಸ್ತ್ರೀಯರು, ಮಕ್ಕಳು

ಸುರಕ್ಷಿತರಾಗಿದ್ದಾರೆಂದು, ಬ್ರಿಟೀಷರು ತಮಗೆ ಇಷ್ಟವಾದಾಗ ಅವರನ್ನು ಕರೆದುಕೊಂಡು ಹೋಗಬಹುದೆಂದು ತಿಳಿಸಿದಳು. ಇದರಿಂದಾಗಿ ಸಂತಸಗೊಂಡ ಥ್ಯಾಕರೆ ಅವಳನ್ನು ಭೇಟಿಯಾಗಲು ಬಯಸಿದ ಎನ್ನುತ್ತಾರೆ. ರಾಣಿಗೆ ಹನ್ನೊಂದು ಹಳ್ಳಿಗಳ "ಇನಾಂ" ನೀಡಿ ಈ ಯುದ್ಧವನ್ನು ಕೈಬಿಡುವ ಒಪ್ಪಂದಕ್ಕೂ ಆತ ಮನಸ್ಸು ಮಾಡಿದ್ದನು. ಆತ ರಾಣಿಗೆ ಈ ಸುದ್ದಿಯನ್ನು ತಿಳಿಸಿದ. ಆದರೆ ರಾಣಿ ಇದಕ್ಕೆ ಒಪ್ಪಲಿಲ್ಲ. ಆತ ಮಾರನೆಯ ದಿನವೂ ಆಕೆ ತನ್ನನ್ನು ಸಂಧಿಸಬಹುದೆಂದುಕೊಂಡಿದ್ದನು. ಆದರೆ ತನ್ನ ಮಂತ್ರಿಗಳೊಂದಿಗೆ ಚರ್ಚಿಸಿದ ರಾಣಿ, ಯುದ್ಧಕ್ಕೆ ಬಂದ ಥ್ಯಾಕರೆಯನ್ನು ಕಾಣಬಯಸಲಿಲ್ಲ.

ಮರುದಿನ ಥ್ಯಾಕರೆಯೇ ರಾಣಿಯನ್ನು ಕಾಣಲಿಕ್ಕೆ ಬಂದರೂ, ಕಿತ್ತೂರ ಸೈನ್ಯ ಅವನನ್ನು ಒಳಬಿಡಲಿಲ್ಲ. ಆ ವಾರ ಮಹಾನವಮಿ ಹಬ್ಬವನ್ನು ಆಚರಿಸಲಾಗುತ್ತಿತ್ತು. ಸರ್ದಾರರು, ಸುಬೇದಾರರು, ಹಳ್ಳಿಗಳ ಸೇಟ–ಸನದಿಗಳು ಅಲ್ಲಿ ಭಾಗವಹಿಸಿದ್ದರು. ಇದರಿಂದ ಅಸಂತೃಪ್ತನಾದ ಥ್ಯಾಕರೆಯು ತನ್ನ ಮುಂದಿನ ಕೆಲಸಕ್ಕಾಗಿ ತೆರಳಿದನು.

ಅದೇ ದಿನ ಸಂಜೆ ಥ್ಯಾಕರೆಯು ಕಿತ್ತೂರ ಸಂಸ್ಥಾನದ ಅಧಿಕಾರಿ ಗುರುಸಿದ್ದಪ್ಪ ತನ್ನನ್ನು ತಕ್ಷಣ ಕಾಣಬೇಕೆಂದು ಹೇಳಿ ಕಳಿಸಿದನು. ಬ್ರಿಟೀಷರು ತಮ್ಮನ್ನು ಗೌರವದಿಂದ ಕಾಣುತ್ತಿಲ್ಲವೆಂದು ಆತ ಥ್ಯಾಕರೆಯನ್ನು ಕಾಣಲು ಒಪ್ಪಲಿಲ್ಲ. ಇದರಿಂದ ವ್ಯಗ್ರನಾದ ಥ್ಯಾಕರೆ ತನ್ನ ಸೇನಾನಿ ಕ್ಯಾಪ್ಟನ್ ಬ್ಲ್ಯಾಕನಿಗೆ ಮಾರ್ಟರ ಗನ್‌ಗಳನ್ನು ಕೋಟೆಯ ಬಾಗಿಲಿಗೆ ಇಡಿಸಲು ಆಜ್ಞಾಪಿಸಿದನು. ಅಂತೆಯೇ ಮಹಾದ್ವಾರಕ್ಕೆ ಎರಡು ಬೃಹತ್ ಗನ್‌ಗಳನ್ನು ತರಿಸಲಾಯಿತು. ಅಂದು ಸಂಜೆಯ ವೇಳೆಯಲ್ಲಾದರೂ ರಾಣಿಯನ್ನು ಭೇಟಿಯಾಗಬೇಕೆಂದು ಥ್ಯಾಕರೆ ಹೋದನು.

ಅದು ಫಲಕಾರಿಯಾಗದೇ ಹೋದಾಗ ರಾಣಿಗೆ ಒಂದು ಸುದ್ದಿಯನ್ನು ನೀಡಿ ಆಕೆ ಮರುದಿನ ಬೆಳಿಗ್ಗೆ ತನಗೆ ಶರಣಾಗದೇ ಹೋದರೆ ಆಕೆ ಬಹು ಕೆಟ್ಟ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ ಎಂದು ತಿಳಿಸಿದನು.

ಮರುದಿನ ಬೆಳಿಗ್ಗೆ ಆರ್ಟಿಲರಿ ಅಧಿಕಾರಿ ರಕ್ಷಣಾ ಪಡೆಯನ್ನು ನೋಡಲು ಆ ಮಹಾದ್ವಾರಕ್ಕೆ ಬಂದನು. ಏನು ಮಾಡಿದರೂ ರಾಣಿ ಆತನನ್ನು ನೋಡಲು ತಿರಸ್ಕರಿಸಿದಳು. ಥ್ಯಾಕರೆ ಮತ್ತೆರಡು ಗನ್‌ಗಳನ್ನು ತರಿಸಿ ಆ ಮಹಾದ್ವಾರವನ್ನು ಒಡೆದು ಹಾಕಲು ನಿರ್ಧರಿಸಿದನು. ಈ ನಡುವೆ ಆತನಿಗೆ ತಿಳಿದಿರುವಂತೆ ಆ ಅರಮನೆಯಲ್ಲಿ ಎರಡು ಸಾವಿರ ಸೈನಿಕರು ಜಮಾಯಿಸಿದ್ದರು. ತಕ್ಷಣ ಬ್ರಿಟೀಷ ಸೈನ್ಯದ ತುಕಡಿಯೊಂದು ಆ ದ್ವಾರದ ಬಳಿಗೆ ಬಂತು. ಥ್ಯಾಕರೆ ಗುರುಸಿದ್ದಪ್ಪನಿಗೊಂದು ಎಚ್ಚರಿಕೆಯನ್ನು ನೀಡಿದ. ಆಗ ಗುರುಸಿದ್ದಪ್ಪನು ಥ್ಯಾಕರೆಯ ಸೈನ್ಯ ಅಲ್ಲಿಂದ ತೊಲಗಿದರೆ ಮಾತ್ರ ಆ ಮಹಾದ್ವಾರವನ್ನು ತೆರೆಯುವುದಾಗಿ ತಿಳಿಸಿದನು. ಇದರಿಂದಾಗಿ ಯಾವ ಪ್ರಯೋಜನವಾಗಲಿಲ್ಲ. ಆಗ ಥ್ಯಾಕರೆ ತನ್ನ ಇಬ್ಬರು ಕಮಾಂಡರಗಳಾದ ಕ್ಯಾ.ಬ್ಲ್ಯಾಕ ಹಾಗೂ ಲೆ.ಡೀಟನ್‌ರನ್ನು ಆ ಮಹಾದ್ವಾರದ ಎರಡು ಬದಿಗೆ ನಿಲ್ಲಿಸಿದನು. ಸೆವೆಲ್ಲನ ಕೈಕೆಳಗಿರುವ ಆರ್ಟಿಲ್ಲರಿ ಹಾಗೂ ಅಶ್ವದಳ ಕೋಟೆಯ ಒಳಗಿನವರನ್ನು ಹಣಿಯಲು ಸಿದ್ಧವಾಗಿತ್ತು. ಅದು ಬಹು ಕ್ರೂರವಾದ ಗಳಿಗೆಯಾಗಿತ್ತು, ಆ ಇಪ್ಪತ್ತನಾಲ್ಕು ನಿಮಿಷಗಳಲ್ಲಿ ಆ ದ್ವಾರ ತೆರೆಯದಿದ್ದಾಗ ತಾನು

ನಿರ್ದೇಶಿಸಿದಂತೆ ಥ್ಯಾಕರೆ ಗನ್‌ಗಳನ್ನು ಹಾರಿಸಲಾಗಿ, ಆ ಮಹಾದ್ವಾರ ಒಡೆದು, ಒಳಗಿದ್ದ ಚನ್ನಮ್ಮನ ಸೈನ್ಯ ಹೊರಗಿನ ಬ್ರಿಟೀಷರ ಸೈನ್ಯದ ಮೇಲೆ ಪ್ರಭಾವಯುತವಾಗಿ ನುಗ್ಗಿತು.

ಮುಂದೆ ನಡೆದ ಕಾಳಗದಲ್ಲಿ ಕಿತ್ತೂರ ಸೈನ್ಯ ಬ್ರಿಟೀಷ ಸೈನ್ಯಧ ಮೇಲೆ ಎರಡೂ ಕಡೆಗಳಿಂದ ಬಲವಾಗಿ ನುಗ್ಗಿತು. ದ್ವಾರದಿಂದ ಗುರುಸಿದ್ದಪ್ಪ ಸೈನ್ಯವನ್ನು ನಿಭಾಯಿಸಿದರೆ, ಕೋಟೆಯ ಮೇಲೆ ನಿಂತ ರಾಣಿ ಇನ್ನೊಂದು ತುಕಡಿಯನ್ನು ನಿರ್ದೇಶಿಸುತ್ತಿದ್ದಳು. ಆಕೆ ಉತ್ತಮವಾದ ಕುದುರೆಯ ಮೇಲೆ ಕುಳಿತಿದ್ದು ಸೊಂಟಕ್ಕೆ ಬಂಗಾರದ ಪಟ್ಟಿಯನ್ನು ಧರಿಸಿದ್ದಳು. ಆಕೆಯ ಸೈನಿಕರು ತಕ್ಷಣ ಎರಗುತ್ತ ಅನೇಕ ವೈರಿಗಳನ್ನು ಆಹುತಿ ತೆಗೆದುಕೊಂಡರು. ಬ್ಲ್ಯಾಕ ಹಾಗೂ ಡೀಟನ್‌ರು ಹೊಂದಿದ ಗನ್‌ಗಳನ್ನು ಕಸಿದುಕೊಂಡರು. ಅವರ ತಲೆಗಳನ್ನು ಕತ್ತರಿಸಿದರು. ಚನ್ನಮ್ಮನ ಸೈನ್ಯ ಆರ್ಟಿಲರಿಯ ಮೇಲೆ ಪ್ರಹಾರ ಮಾಡಿ, ಬ್ರಿಟೀಷರ ಸೇನಾದಳವನ್ನು ಮಟ್ಟ ಹಾಕಿತು.

ಆಗ ಕಿತ್ತೂರ ಸೈನ್ಯ ಬ್ರಿಟೀಷರ ಕ್ಯಾಂಪಿಗೆ ನುಗ್ಗಿ ಅಲ್ಲಿದ್ದ ಹಲವರನ್ನು ಕೊಂಡು ಹಾಕಿತು. ರಾಣಿ ಈ ಸೈನ್ಯವನ್ನು ನಿರ್ದೇಶಿಸುತ್ತಿದ್ದಳು. ಆಕೆಯ ಹತ್ತಿರ ಆಕೆಯ ಅಂಗರಕ್ಷಕ ಅಮಟೂರಿನ ಬಾಳಪ್ಪ ಸಾಧುನವರ ಇದ್ದನು. ಆಕೆಯ ಸುತ್ತ ನಾಲ್ಕು ಜನ ಕುದುರೆ ಸವಾರರು ಆಕೆಯ ರಕ್ಷಣೆಯಲ್ಲಿ ತೊಡಗಿದ್ದರು. ಕಿತ್ತೂರ ಸೈನ್ಯದ ಆಕ್ರಮಣ ಎಷ್ಟು ತೀಕ್ಷ್ಣವಾಗಿತ್ತೆಂದರೆ, ಇಂಗ್ಲೀಷರಿಗೆ ಚೇತರಿಸಿಕೊಳ್ಳಲಾಗಲಿಲ್ಲ. ಅವರೆಲ್ಲ ಹೆದರಿ ಓಡಿ ಹೋಗುವುದನ್ನು ಕಂಡ ಥ್ಯಾಕರೆ ಕೋಟೆಯ ಕಡೆಗೆ ಧಾವಿಸಿದ. ಇದನ್ನರಿತ ಜಾಣ ಬಾಳಪ್ಪ ಸಾಧುನವರ ಥ್ಯಾಕರೆಗೆ ಗನ್ ಹಾರಿಸಲಾಗಿ, ಚನ್ನಮ್ಮ ಅವನ ರುಂಡವನ್ನು ಕತ್ತರಿಸಿದಳು. ಆತ ತಕ್ಷಣ ಜೀವಕಳೆದುಕೊಂಡನು. ಆಕೆಯ ಓರ್ವ ಸೈನಿಕ "ರಾಮಹಬ್ಬಿಯು" ಥ್ಯಾಕರೆಯ ರುಂಡವನ್ನು ತನ್ನ ಕತ್ತಿಗೆ ಸಿಕ್ಕಿಸಿ, ರಣರಂಗದಲ್ಲಿ ಓಡಾಡುತ್ತಾ ಥ್ಯಾಕರೆ ಸತ್ತನು ಎಂದು ಕೂಗಿದನು.

ಸುಮಾರು ೮೦ ಜನ ಬ್ರಿಟೀಷರು ಮರಣವನ್ನಪ್ಪಿದರು. ಇನ್ನುಳಿದವರು ಬೇರೆಡೆಗೆ ಪಾರಾಗಲು ಪ್ರಯತ್ನಿಸುತ್ತಿದ್ದರು. ಬ್ರಿಟೀಷರ ೪೦ ಜನ ಆರ್ಟಿಲರಿ ಜನರನ್ನು ಬಂಧಿಸಲಾಗಿತ್ತು. ಥ್ಯಾಕರೆ ತನ್ನ ಜೀವ ಕಳೆದುಕೊಂಡ ನಂತರ ಕ್ಯಾ.ಬ್ಲಾಕ್, ಲೆ.ಡೀಟನ್, ಲೆ.ಸೆವೆಲ್ ಮುಂತಾದವರೆಲ್ಲರನ್ನು ಕೊಂಡು ಹಾಕಲಾಗಿತ್ತು.

ಬ್ರಿಟೀಷರನ್ನು ಜಯಿಸಿದ, ಅವರನ್ನು ತನ್ನ ಗಡಿಯಾಚೆ ಓಡಿಸಿದ ಕಿತ್ತೂರಿನ ಸೈನ್ಯ ಅರಮನೆಗೆ ವಾಪಸ್ಸಾಯಿತು. ಅಲ್ಲಿ ಅವರಿಗೆ ತಮ್ಮವರೆ ಆದ ಕೆಲವು ನೀಚರನ್ನು ಸದೆಬಡಿಯಬೇಕಾಗಿತ್ತು. ಅವರು ಬ್ರಿಟೀಷರಿಗೆ ಸಹಾಯ ಮಾಡಿದ್ದರು. ಅವರಲ್ಲಿ ದಿವಾನ ಕನ್ನೂರ ಮಲ್ಲಪ್ಪ, ಕನ್ನೂರ ವೀರಪ್ಪ ಹಾಗೂ ಸರ್ದಾರ ಮಲ್ಲಪ್ಪರನ್ನು ಹುಡುಕಿ ಅವರನ್ನು ಆನೆಯ ತುಳಿತಕ್ಕೆ ಸಿಕ್ಕಿಸಿ ಕೊಲ್ಲಲಾಯಿತು.

ಈ ವೇಳೆಗೆ ಕಿತ್ತೂರ ಪ್ರದೇಶದಲ್ಲಿ ಕೆಲವು ಬ್ರಿಟೀಷ ಸೈನಿಕರು ಅಡಗಿದ ಬಗ್ಗೆ ಸುದ್ದಿ ಬಂತು. ಚನ್ನಮ್ಮನ ಸೈನ್ಯ ಬೆಳಗಾವಿಗೆ ಹೋಗಿ ಅವರನ್ನು ಸದೆ ಬಡಿಯಿತು. ಅವರಲ್ಲಿ ಪ್ರಮುಖರೆಂದರೆ ಥ್ಯಾಕರೆಯ ರಾಜಕೀಯ ಸಹಾಯಕರಾದ ಎಲ್ಲಿಯಟ್ ಸ್ಟೀವನ್‌ಸನ್

ಹಾಗು ಅವರ ಶಿರಸ್ತೇದಾರ ಶ್ರೀನಿವಾಸರಾವರು. ಅವರನ್ನು ಬಂಧಿಸಿ ರಾಣಿಯ ಹತ್ತಿರ ತಂದರು. ಅವರನ್ನು ವಿಚಾರಣೆಗೆ ಗುರುಪಡಿಸಲಾಯಿತು.

ಆ ರಾತ್ರಿ ಕಿತ್ತೂರಿನಲ್ಲಿ ಉತ್ಸಾಹವೇ ಉತ್ಸಾಹ, ಸಂಸ್ಥಾನ, ಅರಮನೆ ಹಾಗೂ ಪಟ್ಟಣದಲ್ಲಿ ಜಯಘೋಷ ಮೊಳಗಿತ್ತು. ಅಂದಿನ ಸಂಗೀತ ಮತ್ತು ದೀಪ ಅಲಂಕಾರ ನೋಡಲು ರಮ್ಯವೂ, ವೈಭವೋಪೇತವೂ ಆಗಿತ್ತು. ಅಂದಿನ ದಿನ ಕರ್ನಾಟಕದಲ್ಲಷ್ಟೆ ಅಲ್ಲ ಭಾರತದ ಇತಿಹಾಸದಲ್ಲಿ ಮಹತ್ವದ ದಿನವಾಗಿತ್ತು.

೧೮೨೪ರ ಅಕ್ಟೋಬರ ೨೩ ರಂದುಮೊದಲು ಕಿತ್ತೂರ ಬ್ರಿಟೀಷ ಕಾಳಗದಲ್ಲಿ ಬ್ರಿಟೀಷ ಸೈನ್ಯ ನುಚ್ಚು ನೂರಾಯಿತು. ಈ ಸುದ್ದಿಯನ್ನು ಬ್ರಿಟೀಷ ಅಧಿಕಾರಿ ಟರ್ನ್‌ಬುಲ್‌ನು ಧಾರವಾಡದ ಸಿವಿಲಿಯನ್ ಅಧಿಕಾರಿ ಮುಸಗ್ರೇವ ಹ್ಯಾರಿಸನ್‌ನಿಗೆ ತಿಳಿಸಿದರೆ, ಆತ ಅದನ್ನು ಅಷ್ಟು ಬೇಗ ನಂಬಲಿಲ್ಲ. ತಕ್ಷಣ ಹ್ಯಾರಿಸನ್‌ನು ಧಾರವಾಡದ ಸೈನ್ಯದ ಕಮಾಂಡರ ಲೆ.ಕ.ಡಬ್ಲು ದುರಂದನಿಗೆ ಹೀಗೆ ಪತ್ರ ಬರೆದನು.

"ಕಿತ್ತೂರಿನಲ್ಲಿ ದಿವಂಗತ ರಾಜನ ಸೈನ್ಯದೊಂದಿಗೆ ನಮ್ಮ ಆರ್ಟಿಲರಿ ಯುದ್ಧ ಮಾಡಿ ಸೋತಿದೆ. ನಮ್ಮವರನೇಕರು ಹತರಾಗಿದ್ದಾರೆಂದು ನಮ್ಮ ಅಶ್ವದಳದ ಅಧಿಕಾರಿ ಡಾ|| ಟರ್ನ್‌ಬುಲ್ ಹೇಳುತ್ತಿದ್ದಾರೆ. ಆಗಲೇ ಬೆಳಗಾಂವಿಯ ನಮ್ಮ ಅಧಿಕಾರಿ ಕೆ. ಪಿಯರ್ಸನ್‌ನಿಗೆ ಈ ಸುದ್ದಿ ಹೋಗಿದ್ದು ನೀವು ನಿಮಗೆ ಸರಿ ಅನಿಸಿದ ಕ್ರಮವನ್ನು ಕೈಗೊಳ್ಳಬೇಕೆಂದು ತಿಳಿಸುತ್ತೇನೆ." ಇನ್ನೊಂದು ಗಂಟೆಯಲ್ಲಿ ಮತ್ತೊಬ್ಬ ದೂತನು ಧಾರವಾಡದ ಸಹಾಯಕ ಕಲೆಕ್ಟರ ವಾಕರ ಪುಲರಟನನನ್ನು ಕಂಡು ಥ್ಯಾಕರೆಯ ಸಾವಿನ ಬಗ್ಗೆ ತಿಳಿಸಿದನು. ಇದರಿಂದಾಗಿ ಗಾಬರಿಯಾದ ಪುಲಟರನನು ತಕ್ಷಣ ಬೆಳಗಾಂವಿಯ ಸೇನೆಗೆ ಈ ಕೆಳಗಿನ ಪತ್ರವನ್ನು ಬರೆದನು.

"ನೀವು ತಕ್ಷಣ ಕಿತ್ತೂರಿಗೊಂದು ಸೇನಾ ದಳವನ್ನು ಕಳಿಸಿರಿ. ಅಲ್ಲಿಗೆ ಹೋಗಿದ್ದ ಆರ್ಟಿಲರಿಯನ್ನು ಧ್ವಂಸಗೊಳಿಸಿದ್ದಾರೆ. ಥ್ಯಾಕರೆಯನ್ನು ಕೊಂದು ಹಾಕಿದ್ದಾರೆ. ಡೀಟನ್ ಮತ್ತು ಬ್ಲ್ಯಾಕ್‌ನನ್ನು ಕೊಂದು ಸೆವೆಲ್‌ನನ್ನು ಗಾಯಗೊಳಿಸಿದ್ದಾರೆ. ಎಲ್ಲಿಯಟ್ ಮತ್ತು ಸೆವೆನ್‌ಸನ್‌ರ ಬಗ್ಗೆ ಏನೂ ಸುದ್ದಿ ಬಂದಿಲ್ಲ. ನಮ್ಮ ತುಕಡಿಯ ಕೇವಲ ನೂರು ಜನರನ್ನು ಹೊಂದಿದ್ದು ಅದು ಬಲವಾಗಿಲ್ಲ". ಬ್ರಿಟೀಷರು ಅಗಾಧ ಸೈನ್ಯವನ್ನು ಕಳಿಸತೊಡಗಿದರು. ಮರುದಿನ ಲೆ.ಕ.ದುರಂದನು ಬ್ರಿಟೀಷ ಬಳ್ಳಾರಿ ಸೇನೆಗೂ ಈ ವಿಷಯ ಕಳಿಸಿದ. ಆತ ಕಿತ್ತೂರ ಸೇನೆ ಧಾರವಾಡದ ಮೇಲೆ ದಾಳಿ ಮಾಡಬಹುದೆಂದು ಶಂಕಿಸಿದನು. ಆ ವೇಳೆಗೆ ಥ್ಯಾಕರೆ ಮತ್ತಿತರ ಬ್ರಿಟೀಷರ ಅಧಿಕಾರಿಗಳ ಶವಗಳನ್ನು ಧಾರವಾಡಕ್ಕೆ ಕೊಂಡೊಯ್ಯಲಾಯಿತು. ಅಲ್ಲಿಯ ಯುರೋಪಿಯನ್ನರ ಸ್ಮಶಾನದಲ್ಲಿ ಅವರನ್ನು ದಪನಗೊಳಿಸಲಾಯಿತು.

ಕಿತ್ತೂರ ಯುದ್ಧದ ನಂತರದ ಬೆಳವಣಿಗೆಗಳು

ಬ್ರಿಟೀಷರ ಮೇಲೆ ಜಯಗಳಿಸಿದ ಕಿತ್ತೂರು ವಿಜಯೋತ್ಸವವನ್ನು ಆಚರಿಸಿತ್ತು. ರಾಣಿ ಚನ್ನಮ್ಮ ತನ್ನ ನಂಬಿಗಸ್ಥ ಸೇನಾಧಿಕಾರಿಗಳೊಂದಿಗೆ ಚೌಕಿಮಠಕ್ಕೆ ಭೇಟಿ ಇತ್ತಳು.

ಅಲ್ಲಿಯ ಗುಪ್ತ ಚೇಂಬರದಲ್ಲಿ ಒಂದು ಸಭೆಯನ್ನು ನಡೆಸಿದಳು. ಆಗಲೇ ಆಕೆಗೆ ಬ್ರಿಟೀಷರ ಬೆಳಗಾಂವಿಯ ಸೇನೆ ಬರುವ ಬಗ್ಗೆ ತಿಳಿದಿತ್ತು. ಅವರು ಕಿತ್ತೂರ ಮೇಲೆ ಸೇಡು ತೀರಿಸಿಕೊಳ್ಳಲು ಆಕ್ರಮಣ ಮಾಡುತ್ತಾರೆಂದು ಆಕೆಗೆ ಗೊತ್ತಿತ್ತು. ಆಕೆಗೆ ಅವಳ ಸಂಸ್ಥಾನದ ನ್ಯೂನ್ಯತೆಗಳ ಅರಿವಿತ್ತು. ಆಕೆ ಕೊಲ್ಲಾಪುರದ ಮಹಾರಾಜನಿಗೆ ಕಳಿಸಿದ ವಿನಂತಿಗೆ ಇನ್ನು ಪ್ರತಿಕ್ರಿಯೆ ಬಂದಿರಲಿಲ್ಲ. ಬ್ರಿಟೀಷರನ್ನು ಬಂಧಿಸಿದ್ದ ಹಿನ್ನೆಲೆಯಲ್ಲಿ ಕೊನೆಗೊಂದು ನಿರ್ಣಾಯಕ್ಕೆ ಬರಲಾಯಿತು. ಅದರಂತೆ ಚನ್ನಮ್ಮ ಬ್ರಿಟೀಷರೊಂದಿಗೆ ಒಪ್ಪಂದ ಮಾಡಿಕೊಂಡು ತನ್ನ ಸಂಸ್ಥಾನದ ಸ್ವಾಯತ್ತತೆಯನ್ನು ಉಳಿಸಿಕೊಳ್ಳಲು ನಿರ್ಧರಿಸಿದಳು. ಈ ಕೆಲಸಕ್ಕಾಗಿ ತಮ್ಮ ಬಳಿಯಲ್ಲಿದ್ದ ಎಲ್ಲಿಯಟ್ ಹಾಗೂ ಸ್ಟೆವನ್‌ಸನ್‌ರನ್ನು ಬಳಸಿಕೊಳ್ಳಲು ನಿರ್ಧರಿಸಿದಳು.

ಅದೇ ದಿನ ಸಂಜೆ ಸರ್ದಾರ ಗುರುಸಿದ್ದಪ್ಪ ಅವರಾದಿ ವೀರಪ್ಪ ಹಾಗೂ ಸರ್ದಾರ ಹೇಮಸಿಂಗ್‌ರು ಎಲ್ಲಿಯಟ್ ಹಾಗೂ ಸ್ಟೆವನ್‌ಸನ್‌ರನ್ನು ಸಂದರ್ಶಿಸಿದರು. ಅವರೊಂದಿಗೆ ಸ್ನೇಹ ಹಸ್ತ ಚಾಚಿದರು. ಥ್ಯಾಕರೆಯು ತಮ್ಮನ್ನು ಹೀನಾಯವಾಗಿ ನಡೆಸಿಕೊಳ್ಳುತ್ತಿದ್ದನೆಂದೂ, ಕಿತ್ತೂರಿನ ಸ್ವಾಯತ್ತತೆಯನ್ನು ಮುಂದುವರೆಸಿಕೊಂಡು ಹೋಗಬೇಕೆಂದು ತಾವು ಮುಂಬೈ ಗವರ್ನರ ಎಚ್.ಮೌಂಟಸ್ಟುವರ್ಟ ಎಲ್ಫಿನ್‌ಸ್ಟನ್‌ರಿಗೆ ಪತ್ರ ಬರೆದುದಾಗಿ ತಿಳಿಸಿದರು. ಈ ಇಬ್ಬರು ಬ್ರಿಟೀಷ ಅಧಿಕಾರಿಗಳು ಇದೆಲ್ಲ ರಾಣಿಯಿಂದ ಸ್ವೀಕೃತವೇ ಎಂದು ತಿಳಿಸಿದರು. ಇದರಿಂದಾಗಿ ಅವರು ಕಿತ್ತೂರ ಜನತೆ ತಮ್ಮ ಉಸಿರಾಟಕ್ಕಿಂತ ತಮ್ಮ ಸ್ವಾತಂತ್ರ್ಯಕ್ಕೆ ಹೆಚ್ಚಿನ ಬೆಲೆ ಕೊಡುತ್ತಾರೆಂಬುದನ್ನು ಅರಿತುಕೊಂಡರು.

೧೮೨೪ರ ಅಕ್ಟೋಬರ ೨೪ರಂದು ಎಲ್ಲಿಯಟ್ ಹಾಗೂ ಸ್ಟೆವೆನ್‌ಸನ್‌ರು ಪುನೆಯಲ್ಲಿಯ ಡೆಕ್ಕನ್ ಪ್ರಾಂತದ ಆಯುಕ್ತರಾದ ಚಾಪ್ಲೆನನಿಗೆ ಹಿಂದಿನ ಬೆಳವಣಿಗೆಯ ಬಗೆಗೆ ಒಂದು ಪತ್ರ ಬರೆದರು.

"ಥ್ಯಾಕರೆಯ ಸಾವಿನ ಬಗ್ಗೆ ತಿಳಿಸಲು ನಮಗೆ ದುಃಖವೆನಿಸುತ್ತದೆ. ಕಿತ್ತೂರ ಸರ್ದಾರರು, ನಮ್ಮ ಮಧ್ಯ ಪ್ರವೇಶಿಕೆಯನ್ನು ಮನ್ನಿಸಲಿಲ್ಲ. ನಮ್ಮಲ್ಲಿಯ ಅನೇಕರನ್ನು ಕೊಂದಿರುವ ಅವರು ನನ್ನನ್ನು ಹಾಗೂ ಎಲ್ಲಿಯಟರನ್ನು ಸೆರೆಯಲ್ಲಿಟ್ಟಿದ್ದಾರೆ. ಒಂದು ವೇಳೆ ಅವರು ಮುಂಬೈಗೆ ಬರೆದ ಪತ್ರಕ್ಕೆ ಸರಿಯಾದ ಪ್ರತಿಕ್ರಿಯೆ ಸಿಗದಿದ್ದರೆ, ಅವರು ನಮ್ಮನ್ನು ಮುಗಿಸುತ್ತೇವೆ ಎಂದಿದ್ದಾರೆ. ಒಂದು ವೇಳೆ ಬ್ರಿಟೀಷ ಸೈನ್ಯ ಕಿತ್ತೂರ ಮೇಲೆ ದಾಳಿ ಮಾಡಿದರೆ, ಇಲ್ಲಿಯ ಸರ್ದಾರರು ಜೋಹಾರ ಎಸಗುತ್ತೇವೆ ಎನ್ನುತ್ತಿದ್ದಾರೆ. ಒಂದು ವೇಳೆ ಸರ್ಕಾರ ಅವರ ಬೇಡಿಕೆಯನ್ನು ಮನ್ನಿಸದಿದ್ದರೆ ಅವರು ತಮ್ಮ ಕೊನೆಯ ಸೈನಿಕರವರೆಗೆ ಹೋರಾಡುವ ಸಾಧ್ಯತೆ ಇದೆ. ಹಾಗೇ ಅವರ ಬೇಡಿಕೆಗಳನ್ನು ದಯಾಪರ ರೀತಿಯಲ್ಲಿ ಪರಿಗಣಿಸಿರಿ. ಇಲ್ಲಿ ಈಗಾಗಲೇ ಸುಮಾರು ಐದು ಸಾವಿರ ಸೈನಿಕ ದಳವಿದೆ ಎಂಬುದು ನಿಮಗೆ ತಿಳಿದಿರಲಿ".

ಅದೇ ದಿನ ರಾಣಿ ಚನ್ನಮ್ಮ ಸಮೀಪದ ಮಲಪ್ರಭಾ ನದಿಯ ದೋಣಿಯಿಂದ ಬ್ರಿಟೀಷ ಸೈನ್ಯ ಬರದಂತೆ ನೋಡಿಕೊಳ್ಳಲು ತನ್ನ ಒಂದು ಸೈನ್ಯದ ತುಕಡಿಯನ್ನು ಕಳಿಸಿದಳು. ಅಲ್ಲಿಯ ಎಲ್ಲ ನಾವೆಗಳನ್ನು ನಿರಲ್ಲಿ ಮುಳುಗಿಸಿಬಿಡಲು ಹೇಳಿದಳು.

ಜೊತೆಗೆ ಮುಗಟಖಾನ ಹುಬ್ಬಳ್ಳಿ ಹಾಗೂ ಕಿತ್ತೂರ ನಡುವಿನ ರಸ್ತೆಯನ್ನು ನೋಡುವ ಸಲುವಾಗಿ ಇನ್ನೊಂದು ಸೇನಾ ತುಕಡಿ ಹೊರಟಿತು. ನಂತರ ರಾಣಿಯು ಶ್ರೀ ಶ್ರೀನಿವಾಸರಾವ ವಕೀಲನನ್ನು ಧಾರವಾಡಕ್ಕೆ ಕಳಿಸಿ ಒಪ್ಪಂದದ ಸಾಧ್ಯತೆಯ ಬಗ್ಗೆ ತಿಳಿಯಲು ಪ್ರಯತ್ನಿಸಿದಳು. ಈ ಸಂದರ್ಭದಲ್ಲಿ ಪುಣೆಯ ಆಯುಕ್ತ ಚಾಪ್ಲೆನನು ಕಿತ್ತೂರ ಘಟನೆಗಳಿಂದಾಗಿ ದಿಗ್ಭ್ರಾಂತನಾಗಿದ್ದನು. ಆತ ಅಂದಿನ ಕಾಲದ ವಿಚಿತ್ರವಾದ ಬ್ರಿಟೀಷ ಅಧಿಕಾರಿಯಾಗಿದ್ದ. ಈಗ ಆತ ಕಿತ್ತೂರ ಮೇಲೆ ಸೇಡು ತೀರಿಸಿಕೊಳ್ಳಲು ನಿರ್ಧರಿಸಿದನು. ಆತನಿಗೆ ರಾಣಿ ಚನ್ನಮ್ಮ ಒಪ್ಪಂದಕ್ಕಾಗಿ ಪ್ರಯತ್ನಿಸುತ್ತಿರುವುದು ಕಂಡು ಬಂದಿತು. ಆತ ಬ್ರಿಟೀಷರು ತಮ್ಮ ಬಲವನ್ನು ಸಂವರ್ಧಿಸಿಕೊಳ್ಳುವವರೆಗೆ ಆಕೆಯೊಂದಿಗೆ ಸರಿಯಾಗಿ ನಡೆದುಕೊಳ್ಳಲು ಬಯಸಿದನು. ಆತ ಆರ್.ಡೆನ್‌ನನ್ನು ಬೆಳಗಾಂವಿಯ ರಾಜಕೀಯ ಏಜೆಂಟನನ್ನಾಗಿಸಿ, ಮನ್ರೋನನ್ನು ಧಾರವಾಡದ ಕಲೆಕ್ಟರನನ್ನಾಗಿಸಿ, ಎಡನ್‌ನಿಗೆ ಕಿತ್ತೂರದೊಂದಿಗೆ ವ್ಯವಹರಿಸಲು ಅಧಿಕಾರ ನೀಡಿದನು.

ಬ್ರಿಟೀಷರ ಸೈನಿಕ ಶಕ್ತಿ ಅದೆಷ್ಟು ಬಲಶಾಲಿಯಾಗಿತ್ತೆಂದರೆ ಈ ವೇಳೆಗಾಗಲೆ ಅವರು ತಮ್ಮ ಸೈನ್ಯ ತುಕಡಿಗಳನ್ನೆಲ್ಲಾ ಜಮಾಯಿಸಿ ಕಿತ್ತೂರಿಗೆ ನುಗ್ಗಲು ಸಿದ್ಧರಾಗಿದ್ದರು. ಬೆಳಗಾಂವಿಯ "ದೋಅಬ್" ಪ್ರದೇಶದ ಸೈನ್ಯಾಧಿಕಾರಿ ಕೆ. ಪಿಯರ್ಸನ್ ತಾವು ಕಿತ್ತೂರ ಬಂಡಾಯವನ್ನು ಹತ್ತಿಕ್ಕಲು ಮಾಡಿದ ಪ್ರಯತ್ನದ ಬಗ್ಗೆ ಪುಣೆಯ ಕಾರ್ಲರ ಮಾಸ್ತರ ಜನರಲ್‌ನಿಗೆ ಪತ್ರ ಬರೆದನು. ತಾನು ಕಿತ್ತೂರಿಗೆ ಕಳಿಸುವ ಸೈನ್ಯದ ವಿವರ ನೀಡಿದನು. ಕ.ಪಿಯರ್ಸನ್ ಆಜ್ಞೆಯ ಪ್ರಕಾರ ಕ.ಮೆಕೆಲೋಡನು ಬೃಹತ್ ಸೈನ್ಯದೊಂದಿಗೆ ಕಿತ್ತೂರಿಗೆ ನಡೆದನು. ತಕ್ಷಣ ಓರ್ವ ಬ್ರಿಟೀಷ ದೂತನು ಬಂದು ಕಿತ್ತೂರ ಸೈನ್ಯ ಧಾರವಾಡದ ಮೇಲೆ ದಂಡೆತ್ತಿ ಬರಬಹುದೆಂದು ತಿಳಿಸಿದನು. ಇದರಿಂದಾಗಿ ಚಿಂತಿತಗೊಂಡ ಪಿಯರ್ಸನು ಮೆಕಲೊಡನಿಗೆ ಸಂದೇಶ ನೀಡಿ ಆತ ಧಾರವಾಡ ಮತ್ತು ಕಿತ್ತೂರ ನಡುವೆ ಬೀಡು ಬಿಡಲು ಕೇಳಿಕೊಂಡನು. ಧಾರವಾಡದಲ್ಲಿಯ ಮುಖ್ಯ ಕಲೆಕ್ಟರ್ ಖಜಾನೆ ಹಾಗೂ ಅಪರಾಧಿಗಳ ರಕ್ಷಣೆ ಅವರ ಗಮನ ಸೆಳೆದವು. ಜೊತೆಗೆ ಅವರು ಕಿತ್ತೂರಿನ ಬಂಡಾಯಗಾರರ ಬಗ್ಗೆ ಗಮನವಿಡಬೇಕೆಂದು ಹಾಗೂ ಅವರ ಬಗೆಗೆ ಮೇಲಿಂದ ಮೇಲೆ ಜಿಲ್ಲಾ ಹೆಡ್ ಕ್ವಾರ್ಟರ್ಸಗೆ ತಿಳಿಸಬೇಕೆಂದು ಕೇಳಿಕೊಳ್ಳಲಾಯಿತು. ಹಾಗೆಯೇ ಧಾರವಾಡದ ಸೈನ್ಯಾಧಿಕಾರಿಗಳೊಂದಿಗೆ ಸದಾ ಸಂಪರ್ಕದಲ್ಲಿರುವುದು ಯೋಗ್ಯವಾಗಿತ್ತು. ಬ್ರಿಟೀಷರ ಸಿದ್ಧತೆಯನ್ನು ಗಮನಿಸಿದ ರಾಣಿಯು ಮುಗಟಖಾನದ ಮಲಪ್ರಭೆಯ ಮೇಲೆ ನಿಗಾವಹಿಸಿ ಅಲ್ಲಿಯ ಎಲ್ಲ ದೋಣಿಗಳನ್ನು ಮುಳುಗಿಸಿದಳು. ಮುಗಟಕಾನ ಮತ್ತು ಕಿತ್ತೂರ ಮಧ್ಯ ಸಾಕಷ್ಟು ಸಂಪರ್ಕ ಇತ್ತು. ಬೆಳಗಾಂವಿಯ ಕ.ಪಿಯರ್ಸನು ತನ್ನ ಸಿದ್ಧತೆಯ ವಿಷಯವಾಗಿ ಪುನೆಯ ಆಯುಕ್ತನಿಗೆ ಬರೆಯುತ್ತಾ ಹೀಗೆ ಹೇಳುತ್ತಾನೆ. "ಕ.ಮೆಕಲೋಡನ ನೇತೃತ್ವದಲ್ಲಿ ಅಗತ್ಯವಿರುವಷ್ಟು ಸೈನ್ಯದ ೪೬ನೆಯ ಕಾಲ್ದಳವು ಕಿತ್ತೂರ ಕಡೆಗೆ ಬರುತ್ತಿದೆ. ಇನ್ನು ಹೆಚ್ಚಿನ ಸೇನಾಬಲಕ್ಕಾಗಿ ಪ್ರಯತ್ನಿಸುತ್ತಿದ್ದೇನೆ". ಅದೇ ದಿನ ಕ.ಪಿಯರ್ಸನು ಬಳ್ಳಾರಿಯ ಸೈನ್ಯಾಧಿಕಾರಿಗೊಂದು ಪತ್ರ ಬರೆದು ಯೂರೋಪಿನ ಕಾಲ್ದಳ ಸೈನ್ಯವು ೪೬ನೆಯ ಕಾಲ್ದಳ ಹಾಗೂ ಸ್ಥಳೀಯ ಕಾಲ್ದಳ ತುಕಡಿಗಳನ್ನು ತಕ್ಷಣ ಕಳಿಸಿಕೊಡಲು ತಿಳಿಸಿದನು.

ಈ ವೇಳೆಗೆ ಕಿತ್ತೂರಲ್ಲಿದ್ದ ಎಲ್ಲಿಯಟ್ ಹಾಗೂ ಸ್ಟೆವನ್‌ಸನ್‌ರು ಅಲ್ಲಿಯ ನಾಯಕರೊಂದಿಗೆ ಸಭೆ ನಡೆಸಿದ್ದರು. ಉತ್ತಮ ವ್ಯಕ್ತಿಯಗಿದ್ದ ಸ್ಟೆವೆನ್‌ಸನ್‌ನು ವಸ್ತು-ಸ್ಥಿತಿಯನ್ನು ವಾಸ್ತವಿಕವಾಗಿ ಗಮನಿಸಿದನು. ಆತ ಕಿತ್ತೂರ ಕದನಕ್ಕೆ ಕಾರಣನಾದ ಬ್ರಿಟೀಷ ಪರಿಸ್ಥಿತಿಯ ಬಗ್ಗೆ ವಿಷಾದಿಸಿದ. ಅಂದೇ ಆತ ಪೂಣೆಯ ಆಯುಕ್ತರಿಗೆ ಬರೆದ ಪತ್ರದಲ್ಲಿ ಹಿಂದಿನ ಬ್ರಿಟೀಷ ರಾಜಕೀಯ ಏಜೆಂಟನ ಬಗ್ಗೆ ವಿವರವಾಗಿ ತಿಳಿಸಿದನು.

ಕಿತ್ತೂರಿನ ಯುದ್ಧಕ್ಕೆ ಸೈನ್ಯದ ಜಮಾವಣೆ :-

ಸೈನ್ಯ	ಇಂದ	ಗೆ	ಆಗಮನ
೬ನೆಯ ಎನ್.ಯಾ.	ಸಾತಾರಾ	ಬೆಳಗಾಂ	೨೪ನೇ ನವೆಂಬರ್
ಅಶ್ವ ಆರ್ಟಿಲರಿ	ಪೂನಾ	ಬೆಳಗಾಂ	೨೪ನೇ ನವೆಂಬರ್
ತಾನ ಮರಾಠಾ ಲೈಟ ಅಶ್ವದಳ	ಸೋಲಾಪೂರ	ಬೆಳಗಾಂ	೧೧ನೇ ನವೆಂಬರ್
೨೩ನೇ ಎಂ.ಎನ್.ಆಯಾ			
೫೦ ಆರ್ಟಿಲರಿ ಮನುಷ್ಯರು	ಬಾಂಬೆ	ವೆಂಗುರ್ಲಾ	
ಒಂದನೆಯ ಯುರೋಪಿಯನ್ ರೆಜಿಮೆಂಟ್ ೩ ಎನ್.ಆಯ್.			
ಮೊದಲನೆಯ ಕಂಪನಿ			
ಎರಡನೆಯ ಕಂಪನಿ ಎಚ್.ಎಮ್.	ಬಳ್ಳಾರಿ	ಬೆಳಗಾಂ	
೪೬ನೇ ರೆಜಿಮೆಂಟ್ ಒಂದನೆಯ ರೆಜಿಮೆಂಟ ಎನ್.ಆಯ್.			

ಕಿತ್ತೂರಿನ ಮುಖ್ಯ ಸರ್ದಾರನಾದ ಗುರುಸಿದ್ದಪ್ಪ ಹಾಗೂ ಹಿಂದಿನ ದೊರೆಯ ವಿಧವೆ ರಾಣಿ ಚನ್ನಮ್ಮ ತಮ್ಮ ಸೈನಿಕ ತಯಾರಿ ಮಾಡಿಕೊಂಡರು. ತಾವು ಅಂದುಕೊಂಡದ್ದಕ್ಕಿಂತ ಹೆಚ್ಚಿನ ವೇಗದಲ್ಲಿ ಘಟನೆಗಳು ಜರುಗಿದ್ದರಿಂದ ತಾವು ಹಿಡಿದಿಟ್ಟುಕೊಂಡ ಸೆರೆಯಾಳುಗಳ ಸಹಾಯದ ಮೇಲೆ ಅವರು ಅವಲಂಬಿತರಾದರು. ಸೆರೆಯಲ್ಲಿದ್ದ ಸೆರೆಯಾಳುಗಳು ಆಗಲೇ ಪುಣೆಯ ಆಯುಕ್ತನಿಗೆ ಆತ ಯೋಗ್ಯವಾದ ಪ್ರತ್ಯುತ್ತರ ಬರೆದರೆ ಮಾತ್ರ ತಮ್ಮ ಉಳಿವು ಸಾಧ್ಯವೆಂದು ವ್ಯಕ್ತಪಡಿಸಿದ್ದರು. ಅಂದರೆ ಕಿತ್ತೂರ ಸಂಸ್ಥಾನದಲ್ಲಿ ವ್ಯತಿರಿಕ್ತವಾದ ಸ್ಥಿತಿಯೊಂದು ನಿರ್ಮಾಣವಾಗಿತ್ತು.

ಇಂತಹ ಗಂಭೀರ ಸ್ಥಿತಿಯಲ್ಲಿ ಕಿತ್ತೂರ ಜನತೆ ಯುವರಾಜ ದತ್ತು ಪುತ್ರ ಶಿವಲಿಂಗಪ್ಪನ ಪಟ್ಟಾಭಿಷೇಕವನ್ನು ೧೮೨೪ ಅಕ್ಟೋಬರ ೨೭ರಂದು ನೆರವೇರಿಸಿದರು. ಈ ಕಾರ್ಯಕ್ರಮ ಬೇರೆ ಮಠದಲ್ಲಿ ಜರುಗಿತು. ಅಲ್ಲಿಯ ಪೂಜ್ಯರು ಹೊಸ ರಾಜನನ್ನು ಆಶೀರ್ವದಿಸಿದರು.

ಕಿತ್ತೂರ ಸಂಸ್ಥಾನವು ಬ್ರಿಟೀಷರ ವಿರುದ್ಧ ಊದಿದ ಬಂಡಾಯ ಕಹಳೆ ಎಲ್ಲೆಡೆ ಹಬ್ಬಿ ಧಾರವಾಡ ಮತ್ತಿತರ ಸ್ಥಳಗಳಲ್ಲೂ ಬ್ರಿಟೀಷರ ವಿರುದ್ಧ ಜನತೆ ಪ್ರಚೋದನೆಗೊಂಡಿತು. ಗಾಬರಿಗೊಂಡ ಬ್ರಿಟೀಷ ಅಧಿಕಾರಿಗಳು ಅಂತಹ ಬಂಡಾಯದ ಬಗ್ಗೆ ಮಾಹಿತಿ ಸಂಗ್ರಹಿಸಿ

ಅವುಗಳನ್ನು ದಮನಗೊಳಿಸುತ್ತಿದ್ದರು. ಈ ಕೆಳಗಿನ ಡಾ॥ ಪಿಯರ್ಸ್‌ನ್ ಬರೆದ ಪತ್ರದಲ್ಲಿ ಅಂತಹುದರ ಬಗ್ಗೆ ಮಾಹಿತಿ ಇದೆ.

ನಾನು ಕಿತ್ತೂರ ಮತ್ತು ಧಾರವಾಡದಲ್ಲಿ ಏಳುತ್ತಿರುವ ಬಂಡಾಯವನ್ನು ಸ್ತಬ್ಧಗೊಳಿಸಲು ಕ.ಮೆಕಲೋಡನ್ ನೇತೃತ್ವದಲ್ಲಿ ಒಂದು ತಂಡವನ್ನು ಕಳಿಸಿದ್ದೆನು. ಅದರಲ್ಲಿ ನಾಲ್ಕನೆಯ ಲೈಟ ಕ್ಯಾವಲ್ರಿಯ ಮೂರು ಸ್ಕ್ವಾಡ್ರಾನ್‌ಗಳು, ಎರಡು..., ಹೀಸ್ ಮೆಜೆಸ್ಟಿಯ ೪೬ನೇ ದಳ ಮುಂತಾದವುಗಳಿಂದ ಈ ಹಂತದಲ್ಲಿ ಹೆಚ್ಚಿನ ಗಲಭೆಗಳಾಗುವ ಸಾಧ್ಯತೆ ಇದ್ದು ಚಿತ್ರದುರ್ಗದಿಂದ ಒಂದು ಸೇನಾ ತುಕಡಿ ಬರಲಿದೆ. ಜೊತೆಗೆ ಸೋಲಾಪುರದಲ್ಲಿಯ ಸೇನಾ ತುಕಡಿ ಈ ಕಡೆಗೆ ಬಂದ್ದದ್ದರಿಂದ ಬಾಂಬೆಯ ಒಂದು ಸೇನಾದಳ ಅಲ್ಲಿಗೆ ಆಗಮಿಸುವುದು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಧಾರವಾಡ ಕಿತ್ತೂರುಗಳ ಚಾರ್ಜನ್ನು ಹೊಂದಿದ ರಾಜಕೀಯ ಏಜೆಂಟ ಎಡೆನ್‌ನು ೧೮೨೪ರ ಅಕ್ಟೋಬರ ೨೬ರಂದು ಧಾರವಾಡಕ್ಕೆ ಬಂದಾಗ, ಕಿತ್ತೂರಿನ ವಕೀಲ ಶ್ರೀನಿವಾಸರಾವ ಅಲ್ಲಿಗೆ ಬಂದಿದ್ದನು. ಮೂರು ದಿನಗಳ ಹಿಂದೆ ಬರೆದ ಸ್ಟೆವನ್‌ಸನ್‌ನ ಪತ್ರವೂ ಅಲ್ಲಿಯೇ ಬಂದಿತ್ತು. ಇದರಿಂದಾಗಿ ಕಿತ್ತೂರಿನಲ್ಲಿ ಬ್ರಿಟೀಷ ಕೈದಿಗಳ ಸ್ಥಿತಿಗತಿಯನ್ನು ಅರಿತ ಆತ ಕ್ಯಾ.ಪಿಯರ್ಸ್‌ನಿಗೆ ಒಂದು ಪತ್ರ ಬರೆದು ಆತ ತಾನು ಕಿತ್ತೂರ ವಕೀಲನೊಂದಿಗೆ ಮಾತುಕತೆ ಮುಗಿಸುವವರೆಗೆ ಬ್ರಿಟೀಷ ಸೈನ್ಯವು ಮಲಪ್ರಭೆ ನದಿಯನ್ನು ದಾಟದಂತೆ ನೋಡಿಕೊಳ್ಳಲು ತಿಳಿಸಿದನು. ಆತನ ಪತ್ರದ ಪ್ರಕಾರ ಮುಂಬೈಯಿಂದ ಬ್ರಿಟೀಷ ಅಧಿಕಾರಿಗಳ ಪ್ರತ್ಯುತ್ತರ ಬರುವವರೆಗೆ ಅವರೆಲ್ಲ ಸಾವಧಾನದಿಂದ ಇರಬೇಕಾಗಿತ್ತು. ಇದರಿಂದಾಗಿ ಮೆಕಲಾಡನು ಮಲಪ್ರಭೆಯನ್ನು ದಾಟಲಿಲಲ್ಲ. ಹಾಗೂ ಕಿತ್ತೂರ ವಶದಲ್ಲಿದ್ದ ಸ್ಟೈವನ್‌ಸನ್ ಹಾಗೂ ಎಲ್ಲಿಯಟ್‌ರು ಪ್ರಾಣಾಪಾಯದಿಂದ ಪಾರಾದರು. ಅಷ್ಟರಲ್ಲಿ ಕಿತ್ತೂರ ವಕೀಲನು ಬೆಳಗಾಂವಿಯಲ್ಲಿ ಎಡೆನನ್ನು ಕಂಡು ಬ್ರಿಟೀಷ ಸೈನ್ಯ ಕಿತ್ತೂರ ಸಮೀಪದ ಮುಗಟಕಾನ ಹುಬ್ಬಳ್ಳಿಯ ಹತ್ತಿರ ನದಿಯನ್ನು ದಾಟದೆ ಎಣಗಿಯ ಹತ್ತಿರ ಆ ನದಿಯನ್ನು ದಾಟಲು ಅಡ್ಡಿಯಿಲ್ಲ ಎಂದು ನಿರ್ಧರಿಸಿದನು. ಅಂದರೆ ಈ ವೇಳೆಗೆ ಬ್ರಿಟೀಷ ದಳಗಳು ಹುಬ್ಬಳ್ಳಿ, ನರಗುಂದಗಳಲ್ಲಿ ಬೀಡುಬಿಟ್ಟಿದ್ದವು. ಅದರಂತೆ ಬೆಳಗಾಂವಿಯ ಕಡೆಯ ಬ್ರಿಟೀಷ ಸೇನಾದಳವು ಎಣಗಿಯ ಹತ್ತಿರ ನದಿಯನ್ನು ದಾಟಲು ಅಣಿಯಾದವು. ಅಕ್ಟೋಬರ ೨೯ರಂದು ಪಿಯರ್ಸ್‌ನ್‌ನು ಚಾಪ್ಲೆನನಿಗೆ ಪತ್ರ ಬರೆದು ಈ ಬೆಳವಣಿಗೆಯ ಬಗ್ಗೆ ವಿವರಿಸಿದನು. ಆಗ ಆತ ಸ್ಟೆವನ್‌ಸನ್‌ನಿಗೆ ಪತ್ರದ ಒಂದು ಪ್ರತಿಯನ್ನು ಕಳಿಸಿ, ಕಿತ್ತೂರ ಸ್ಥಿತಿಯನ್ನು ಮನದಟ್ಟು ಮಾಡಿದ. ಅಕ್ಟೋಬರ ೨೯ರಂದು ಮುಂಬೈ ಪ್ರಾಂತದ ಗವರ್ನರ ಎಪಿ.... ಈ ಬೆಳವಣಿಗೆಯನ್ನು ತಿಳಿದುಕೊಂಡು ತಕ್ಷಣ ಕಾರ್ಯಾಚರಣೆಗೆ ಉತ್ತರಿಸಿದನು. ಅವನ ಪತ್ರದ ಒಕ್ಕಣೆ ಕೆಳಗಿನಂತಿದೆ.

"ನಿಮ್ಮ ಪತ್ರಗಳನ್ನು ಗಮನಿಸಿದ್ದೇವೆ. ಅದರಂತೆ ಥ್ಯಾಕರೆಯ ಸಾವು ನಮಗೆ ತೊಂದರೆದಾಯಕವಾಗಿ ಪರಿಣಮಿಸಿದೆ. ಈಗಿನ ಮುಖ್ಯ ವಿಷಯವೆಂದರೆ, ನಾನು ಸೋಲ್ಲಾಪುರದ ಕಮಾಂಡರಗೆ ಬರೆದು ಅವರು ಬೆಳಗಾಂವಿಯ ಸೇವಾದಳಕ್ಕೆ ಸಹಾಯ ನೀಡಲು ತಮ್ಮ ಸೈನ್ಯ ಕಳಿಸಲು ತಿಳಿಸಿರುವೆ. ಅದರಂತೆ ಕಿತ್ತೂರ ಹಳ್ಳಿಗಳ ಜನರಿಗೆ ನಾವು

ಅವರನ್ನು ಅಧಿಕಾರದಿಂದ ವಂಚಿತರನ್ನಾಗಿಸುವುದಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಡಬೇಕು. ಕಿತ್ತೂರ ಬಂಡಾಯವನ್ನು ಮಟ್ಟಗೊಳಿಸಲು ಸಾಧ್ಯವಿದ್ದಲ್ಲಿ ಪ್ರಯತ್ನ ಮಾಡಿರಿ. ಕಿತ್ತೂರವು ಕೊಲ್ಹಾಪುರದ ಹಾಗೂ ವಾರಿ ಜಹಗೀರ್ದಾರರ ಜಹಗೀರದಾರಿ ಒಡೆತನದ ಭೂಮಿಗಳ ಮಧ್ಯದಲ್ಲಿದ್ದು ಅದು ನಮ್ಮ ಸಹ್ಯಾದ್ರಿ ಪರ್ವತ ಶ್ರೇಣಿಯ ಭೂಮಿ ಹಾಗೂ ನಮ್ಮ ವೈರಿಗಳಾದ ಪೋರ್ಚುಗೀಸರ ಗೋವೆಯ ಮಧ್ಯದಲ್ಲಿದೆ. ಒಂದು ವೇಳೆ ನಾವು ಅದನ್ನು ಅಡಗಿಸದಿದ್ದರೆ, ಅಲ್ಲಿ ಗೆರಿಲ್ಲಾ ಯುದ್ಧ ಬಹು ದಿನಗಳವರೆಗೆ ನಡೆಯುವ ಸಾಧ್ಯತೆ ಇದೆ. ನೀವು ದಕ್ಷಿಣದ ಕೆಲವು ಬಲಯುತವಾದ ಸೇನಾದಳಗಳ ಸಹಾಯದಿಂದ ಕಿತ್ತೂರ ಬಂಡಾಯವನ್ನು ಸದೆ ಬಡಿಯಿರಿ. ಈ ದಿಸೆಯಲ್ಲಿ ಬಾಂಬೆಯಿಂದ ಸೈನ್ಯ ಕಳಿಸುವುದು ಕಷ್ಟಕರ ಎಂಬುದು ತಿಳಿದಿರಲಿ.

ಈ ಮಧ್ಯೆ ಉತ್ತರಾಧಿಕಾರಿ ಇಲ್ಲದ ಕಿತ್ತೂರ ಸಂಸ್ಥಾನವನ್ನು ವಶಪಡಿಸಿಕೊಳ್ಳಲು ಹಾಗೂ ಅಲ್ಲಿಯ ಪ್ರತಿಭಟನೆಕಾರರನ್ನು ಕ್ಷಮಿಸಲು ಎರಡು ಘೋಷಣೆಗಳನ್ನು ಹೊರಡಿಸಲು ಅಡ್ಡಿ ಇಲ್ಲ. ಆದರೆ ಮಾರ್ಶಲ್ "ಲಾ" ವನ್ನು ಹೊರಡಿಸಬೇಡಿರಿ.

ಈ ಒಕ್ಕಣೆಯಿಂದ ತಿಳಿದು ಬರುವಂತೆ ಎಲ್ಫಿನ್‌ಸ್ಟನ್‌ನು ಕಿತ್ತೂರ ಸಂಸ್ಥಾನಕ್ಕೆ ಸಹಕರಿಸಿದವರು ಯಾರು ಎಂಬ ಆತಂಕವನ್ನು ಹೊಂದಿದ್ದನು. ಆತ ಆ ಎಲ್ಲ ಜಹಗೀರ್ದಾರರು ಕಿತ್ತೂರ ಸಂಸ್ಥಾನದ ದೊರೆಯ ಸಾವಿನ ನಂತರ ಆ ಸಂಸ್ಥಾನ ಅಂತ್ಯಗೊಂಡಿತು ಎಂಬುದನ್ನು ತಿಳಿಯಲಿ ಎಂದು ಬಯಸಿದ್ದನು. ಅದರಂತೆ ಕಿತ್ತೂರ ಬಂಡಾಯವನ್ನು ನಿರ್ದಯವಾಗಿ ಸದೆ ಬಡಿಯಲು ಆತ ಬಯಸಿದ್ದ. ಎಲ್ಫಿನ್‌ಸ್ಟನ್‌ನ್ನ ಇನ್ನೊಂದು ಕುತಂತ್ರವೆಂದರೆ ಆತ ಕಿತ್ತೂರ ಬಂಡಾಯಗಾರರನ್ನು ಕ್ಷಮಿಸಲು ನಿರ್ಧರಿಸಿದನೆಂದು ಹೇಳಬೇಕು. ಆತನಿಗೆ ಗೊತ್ತಿರುವಂತೆ ಈ ಬಂಡಾಯಕ್ಕೆ ಕಾರಣವಾದವನೇ ಥ್ಯಾಕರೆ ಹಾಗೂ ಆತ ಈ ಬಂಡಾಯವನ್ನು ಸದೆಬಡಿದು ಬ್ರಿಟೀಷರ ಘನತೆ ಗೌರವಗಳನ್ನು ಕಾಪಾಡಲು ಬಯಸಿದನು.

ಅದೇ ದಿನ ಮುಖ್ಯ ಕಾರ್ಯದರ್ಶಿ ನಿವ್ನಹ್ಯಾಂನು ಡೆಕ್ಕನ್ ಆಯುಕ್ತ ಚಾಪ್ಲೆನನಿಗೆ ಬರೆದ ಪತ್ರದಲ್ಲಿ ಬ್ರಿಟೀಷರು ಕಿತ್ತೂರ ವಿರುದ್ಧ ಮಾಡಬಹುದಾದ ಸೈನಿಕ ಕಾರ್ಯಾಚರಣೆಗಳ ಬಗ್ಗೆ ಬರೆದಿದ್ದಾನೆ.

ಎಲ್ಲವು ಪೂರ್ವ ನಿರ್ಧಾರದಂತೆ ಬ್ರಿಟೀಷರ ಸೈನ್ಯ ಕಿತ್ತೂರ ಹತ್ತಿರದ ಕೆಂಪಮರ್ಡಿಯ ಹತ್ತಿರ ಬಂದು ಬೀಡು ಬಿಟ್ಟವು. ಈ ಘಟನೆ ನಡೆದಿದ್ದು ನವೆಂಬರ ೩೦ ರಂದು ಬಾಂಬೆಯ ಸೈನ್ಯದ ಉಸ್ತುವಾರಿ ನಡೆಸಿದ್ದನು. ಅಲ್ಲಿಯ ಇಂಜೀನಿಯರ ಪರಿಣಿತರ ಪ್ರಕಾರ ಲೆ.ಕ ನೇತೃತ್ವದಲ್ಲಿನ ಎಚ್.ಎಮ್.೪೬ನೇ ರಜಿಮೆಂಟ ಹಾಗೂ ಲೆ.ಕ.ಶೆಲ್ಲಿಯ ನೇತೃತ್ವದಲ್ಲಿನ ೩ನೆಯ ಮುಂಬೈ ಸ್ಥಳೀಯ ಕಾಲದಳಗಳು ಕಿತ್ತೂರ ಕೋಟೆಯ ಮಹಾ ದ್ವಾರದ ಮೇಲೆ ದಾಳಿ ಮಾಡಲು ನಿರ್ಧರಿಸಿದವು. ಯುದ್ಧ ಆರಂಭವಾಗುವ ಡಿಸೆಂಬರ ೨೪ರ ಪೂರ್ವದಲ್ಲಿ ಶರಣಾಗತರಾಗುವ ಎಲ್ಲ ಕಿತ್ತೂರ ಹೋರಾಟಗಾರರನ್ನು ಕ್ಷಮಿಸುವ ಘೋಷಣೆಯೊಂದನ್ನು ಹೊರಡಿಸಲಾಯಿತು. ಬ್ರಿಟೀಷರು ಕಿತ್ತೂರ ಸಂಸ್ಥಾನಿಕರಿಗೆ ಎಚ್ಚರಿಕೆ ನೀಡಿ ಅಲ್ಲಿರುವ ಬ್ರಿಟೀಷ ಕೈದಿಗಳಿಗೆ ಏನಾದರೂ ಆದರೆ ಅದಕ್ಕೆ ಅವರೇ

ಕಾರಣೀಭೂತರೆಂದು ತಿಳಿಸಿದರು. ನವೆಂಬರ ೩೦ ರಂದು ಬ್ರಿಟೀಷರು ಕೋಟೆಗೆ ಮುತ್ತಿಗೆ ಹಾಕಿದರು. ಕೋಟೆಯ ಮೇಲೆ ಎರಗಲು ಕೆಂಪಮರ್ಡಿಯ ಮೇಲೆ ೩೦೦ ಗನ್‌ಗಳಿದ್ದು, ತಗ್ಗುಗಳನ್ನು ತೆಗೆದು ಕಾಲ್ದಳ ಸಿದ್ಧವಾಗಿತ್ತು. ಈ ಕ್ಷಣದಲ್ಲಿ ಕೋಟೆಯ ಒಳಗೆ ಅಪರಿಮಿತ ಬೆಳವಣಿಗೆಗಳು ನಡೆದವೆಂದು ಹೇಳಬೇಕು.

ಅಕ್ಟೋಬರ ೨೫ರಿಂದ ನವೆಂಬರ ೩೦ರವರೆಗೆ ಚನ್ನಮ್ಮ ಕಿತ್ತೂರ ಭವಿಷ್ಯದ ಕುರಿತು ಚಿಂತನೆ ನಡೆಸಿದ್ದಳು. ಅವಳು ತನ್ನ ಸೈನ್ಯದ ತಯಾರಿ ಮತ್ತು ಬಲವರ್ಧನೆ ಮಾಡಿದಳು. ಎಲ್ಲ ಹಳ್ಳಿಗಳ ಶೆಟ್ಟಿ ಸನದಿಗಳು ಅಲ್ಲಿ ಜಮಾವಣೆಗೊಂಡಿದ್ದರು. ಎಲ್ಲ ಯುದ್ಧ ಸಾಮಗ್ರಿಗಳನ್ನಲ್ಲಿ ಸಂಗ್ರಹಿಸಿದರಲ್ಲದೇ ಮುಂದಿನ ಆರು ತಿಂಗಳವರೆಗೆ ಬೇಕಾಗುವಷ್ಟು ಆಹಾರ ಸಾಮಗ್ರಿಗಳನ್ನು ಸಂಗ್ರಹಿಸಿಕೊಂಡಿದ್ದರು. ಚನ್ನಮ್ಮಳಿಗೆ ತಿಳಿದಿರುವಂತೆ ಅಕ್ಟೋಬರ ೨೫ರ ನಂತರ ಬ್ರಿಟೀಷ ದಾಳಿ ಖಚಿತವಾಗಿತ್ತು. ಆಕೆ ತನ್ನ ಸಂಬಂಧಿಕರಿಗೆಲ್ಲ ಈ ಯುದ್ಧದ ಪರಿಣಾಮಗಳ ಕುರಿತು ವಿವರಿಸಿದಳು. ಆಕೆ ಹೇಳಿದಂತೆ ಅವಳಿಗೆ ಉಳಿದ ಎರಡು ಮಾರ್ಗಗಳಲ್ಲಿ ಒಂದು ಸಾಯುವುದು ಹಾಗೂ ಇನ್ನೊಂದು ಹೋರಾಡಿ ಸ್ವತಂತ್ರವಾಗಿ ಬದುಕುವುದು ಆಗಿತ್ತು.

ಆ ಕಿತ್ತೂರ ಕೋಟೆಯಲ್ಲಿ ಎರಡು ಪಂಗಡಗಳಿದ್ದವು. ಅವರಲ್ಲಿಯ ದೊಡ್ಡ ಗುಂಪು ಬ್ರಿಟೀಷ ವಿರುದ್ಧ ಹೋರಾಡಲು ಬಯಸಿದರೆ, ಇನ್ನೊಂದು ಬ್ರಿಟೀಷರೊಡನೆ ಸಂಧಿಮಾಡಿಕೊಳ್ಳಲು ಬಯಸಿತು. ಆದರೆ ಚನ್ನಮ್ಮ ಈ ಎರಡನೆಯ ಗುಂಪಿನ ವಿಚಾರವನ್ನು ಗೌರವಿಸಲಿಲ್ಲ. ಅವಳು ತನ್ನ ಕಣ್ಣಲ್ಲಿ ನೀರು ತಂದುಕೊಂಡು ಎಲ್ಲರಿಗೂ ಈ ಯುದ್ಧದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತನ್ನ ಸಂಸ್ಥಾನದ ಸ್ವಾಯತ್ತತೆಯನ್ನು ಉಳಿಸಿಕೊಳ್ಳುವುದರ ಮೂಲಕ ತನ್ನ ದೊರೆಯ ಆತ್ಮಕ್ಕೆ ಶಾಂತಿ ಸಿಗುವಂತೆ ಮಾಡಲು ಮನವಿ ಮಾಡಿಕೊಂಡಳು. ಕಿತ್ತೂರ ಅರಮನೆಯ ಕವಿ ಹಾಗೂ ಆ ಸಂಸ್ಥಾನದ ಇತಿಹಾಸಕಾರ "ಮಾಗುಂಡಿ ಬಸವನು" ಚಿತ್ರಿಸುವಂತೆ ರಾಣಿ, ಸರ್ದಾರರು ಮತ್ತು ಸೈನಿಕರಿಗೆ ಮಾಡಿಕೊಂಡ ಮನವಿ ಹೃದಯ ತಟ್ಟುವಂತಿತ್ತು.

"ಬ್ರಿಟೀಷರ ಕೈಯಲ್ಲಿ ಸಿಕ್ಕು ದುರ್ಮರಣಕ್ಕೆ ಎಡೆಯಾಗುವುದು ಬೇಡಾ ಯುದ್ಧ ಸಾಮಗ್ರಿಗಳನ್ನು ಬಳಸಿ ಆ ಕಪಿಗಳನ್ನು ಹೊರ ಹಾಕೋಣ" ರಾಣಿಯ ಈ ಶೌರ್ಯದ ನುಡಿಯನ್ನು ಕೇಳಿದ ಸೈನಿಕರು "ನಾವು ಅವರ ಕೊನೆಯ ಸೈನಿಕನಿರುವವರೆಗೆ ಯುದ್ಧ ಮಾಡುತ್ತೇವೆ" ಎಂದರು. ಹಾಗೆ ಚನ್ನಮ್ಮ ಕೊಲ್ಲಾಪುರದ ಅರಸನಿಗೂ ಹಾಗೂ ಉಳಿದ ನಾಯಕರಿಗೆಲ್ಲ ಸಹಾಯಕ್ಕೆಂದು ಪತ್ರ ಬರೆದು ಬ್ರಿಟೀಷರನ್ನು ದಕ್ಷಿಣ ಮರಾಠಾ ಪ್ರಾಂತ್ಯದಿಂದ ಹೊರಹಾಕಲು ಪಣತೊಟ್ಟಳು. ಆದರೆ ಆಕೆಗೆ ಅವರಿಂದ ಯಾವ ಪ್ರತ್ಯುತ್ತರ ಬರಲಿಲ್ಲ.

ಯುದ್ಧ ಸಿದ್ಧತೆ ನಡೆಯಿತು. ಸುಮಾರು ೧೦ ಸಾವಿರ ಸನದಿಗಳು ಯುದ್ಧಕ್ಕೆ ತಯಾರಾಗಿ ಬಂದರು. ಅವರೆಲ್ಲ "ಕೇಸರಿ" ಬಣ್ಣದ ಬಟ್ಟೆಗಳಲ್ಲಿ ನಿಂತಿದ್ದರು. ಅವರು ಗದೆ, ಖಡ್ಗ, ಸ್ತ್ರಿಯರು, ಕೊಡಲಿ, ಪಿಸ್ತೂಲ ಮುಂತಾದವುಗಳನ್ನು ಹೊಂದಿದ್ದರು. ಈ ಹಳ್ಳಿಯ ದಾಂಡಿಗರು ತಮ್ಮ ಕುದುರೆಗಳ ಮೇಲೆ ಕುಳಿತು ಯುದ್ಧದ ಹಾಡುಗಳನ್ನು ಹಾಡುತ್ತಾ "ಹರಹರ ಮಹಾದೇವ" ಎಂಬ ಘೋಷಣೆಗಳೊಂದಿಗೆ ಕೋಟೆಗೆ ಆಗಮಿಸುತ್ತಿದ್ದರು. ಪ್ರತಿದಿನ ಮುಂಜಾನೆ ಅವರು ಕಿತ್ತೂರ ರಸ್ತೆಗಳಲ್ಲೆಲ್ಲ ಕವಾಯತ ನಡೆಸುತ್ತಿದ್ದರು. "ಸಾವು ಬಂದರು

ಸರಿ ನಾವು ನಮ್ಮ ರಾಣಿಯ ಗೌರವಕ್ಕಾಗಿ ಯುದ್ಧ ಮಾಡುತ್ತೇವೆ" ಎಂದು ಹೇಳುತ್ತಿದ್ದರು. ಅವರ ಈ ಸಂಗೀತ ಗುಡ್ಡ-ದಿನ್ನೆಗಳಲ್ಲೆಲ್ಲ ಪ್ರತಿಧ್ವನಿಸುತ್ತಿತ್ತು.

ರಾಣಿ ಚನ್ನಮ್ಮ ಈ ಯುದ್ಧ ಸಿದ್ಧತೆಯ ನಾಯಕಿಯಾಗಿದ್ದಳು. ಆಕೆಯ ಆ ಕೋಟೆಯಲ್ಲಿ ಸುಮಾರು ಹದಿನಾರು ಸಾವಿರ ಸೈನಿಕರಿದ್ದದ್ದರಿಂದ ಅಲ್ಲಿಯ ಚಟುವಟಿಕೆಗಳು ಎಂತಹವರನ್ನು ಬೆರಗುಗೊಳಿಸುವಂತಿದ್ದವು. ಬ್ರಿಟೀಷರನ್ನು ಸದೆಬಡಿಯಲು ಅಲ್ಲಲ್ಲಿ ಗನ್‌ಗಳನ್ನು ನಿಲ್ಲಿಸಿದ್ದರು.

೧೮೨೪ರ ನವೆಂಬರ ೩೦ರಂದು ಈ ನಿರ್ಣಾಯಕ ಯುದ್ಧ ಆರಂಭವಾಯಿತು. ಮಾಗುಂಡಿ ಬಸವನು ಚಿತ್ರಿಸುವಂತೆ ಅಂದಿನ ಮುಂಜಾವು ಬ್ರಿಟೀಷರ ಸೈನ್ಯ ಮಹಾದ್ವಾರದ ಕಡೆಗೆ ಬರತೊಡಗಿತ್ತು. ಆ ಸೈನ್ಯದ ಮುಂಭಾಗದಲ್ಲಿ ಅರಬರಿದ್ದರು. ಹಿಂದೆ ಬ್ರಿಟೀಷ ಸೈನಿಕರಿದ್ದರು. ಆಗ ಅಲ್ಲಿಯ ನೆಲವು ಅಲುಗಾಡಿತ್ತು. ಶೀಘ್ರದಲ್ಲಿ ಕಿತ್ತೂರಿನ ಸೈನ್ಯ ಅವರ ಮೇಲೆ ಎರಗತೊಡಗಿತು.

ಡ.ಡೀಕನ್ ಸಿ.ಬಿ.ಯು ಬ್ರಿಟೀಷ ಸೈನ್ಯದ ಮೇಲಾಧಿಕಾರಿಯಾಗಿದ್ದನು. ಪುಣೆಯ ಆಯುಕ್ತ ಚಾಪ್ಲೇನನೂ ಅಲ್ಲಿಗೆ ಆಗಮಿಸಿದ್ದನು. ಕೋಟೆಯ ಒಳಗಿದ್ದ ದ್ರೋಹಿಗಳು ಒಳಗಿನ ಸುದ್ದಿಯನ್ನು ಬ್ರಿಟೀಷರಿಗೆ ನೀಡುತ್ತಿದ್ದರು. ಕೆಲವರು ಇನ್ನು ಘನಘೋರವಾದ ಅಪರಾಧ ಎಸಗುತ್ತಿದ್ದರು. ಅಂತಹ ದ್ರೋಹಿಗಳಲ್ಲಿ ಕನ್ನೂರ ವೀರ ಬಸಪ್ಪ ಹಾಗೂ ಹುರಕಡ್ಲಿ ಮಲ್ಲಪ್ಪರನ್ನು ಹಿಡಿದು ಅವರನ್ನು ಆನೆಯ ಕಾಲಿಗೆ ಕಟ್ಟಿ ಕೊಲ್ಲಲಾಯಿತು. ಇನ್ನು ಹಲವರನ್ನು ಕೊಚ್ಚಿಹಾಕಲಾಯಿತು. ಇಂತಹ ಸಂದಿಗ್ಧ ಸನ್ನಿವೇಶದಲ್ಲೂ ಚನ್ನಮ್ಮ ಸಮಾಧಾನಿಯಾಗಿದ್ದಳು. ಆಕೆ ಯುದ್ಧ ಮಾಡುವವರ ವರ್ಗಕ್ಕೆ ಸೇರಿದ್ದವಳಾದ್ದರಿಂದ ಧೈರ್ಯವಾಗಿದ್ದಳು. ಆಕೆಗೆ ಕಿತ್ತೂರಿನ ಸ್ವಾತಂತ್ರ್ಯ ಬಹು ಮುಖ್ಯವಾಗಿತ್ತು.

ಕ್ಯಾ.ಕ.ಡೀಟನ್‌ನು ಹೇಳುವಂತೆ "ಬ್ಯಾಟರಿಗಳು ಸಿದ್ಧತೆಯಲ್ಲಿದ್ದವು. ಆದರೆ ಕಿತ್ತೂರ ಸೈನ್ಯ ಡಿಸೆಂಬರ ೫ ರಂದು ೮ ಗಂಟೆಗೆ ಶರಣಾಗತವಾಯಿತು. ಇದಕ್ಕೆ ಮುಂಚೆ ರಾಣಿ ಚನ್ನಮ್ಮ ಸೆರೆಯಾಳುಗಳನ್ನು ಬಿಟ್ಟುಕೊಡಲಿಲ್ಲ ಎಂಬುದು ಮುಖ್ಯ. ಆಕೆಗೆ ಬ್ರಿಟೀಷರ ಹೆದರಿಕೆ ಇರಲಿಲ್ಲ. ಡಿಸೆಂಬರ ೨೮ರಂದು ಊಹಿಸಲಾಗದ ಕೆಲವು ಘಟನೆಗಳು ನಡೆದವು. ಕೋಟೆಯ ಒಳಗಿದ್ದ ದೇಶದ್ರೋಹಿಗಳು ಮದ್ದುಗುಂಡುಗಳಿಗೆಲ್ಲಾ ನೀರು ಹಾಕಿ, ಸೆಗಣಿ, ಕೆಸರು ಬೆರೆಸಿ ಅವುಗಳನ್ನು ಬಲಹೀನಗೊಳಸಿದ್ದರು. ಇದನ್ನು ಹೊರಗಿನಿಂದಲೇ ಮಾಡಿಸಿದ್ದ ಬ್ರಿಟೀಷರು ಚನ್ನಮ್ಮನ ಅಸಹಾಯಕತೆಯನ್ನು ಅರಿತುಕೊಂಡರು. ಡಿಸೆಂಬರ ೩ ರಂದು ಬೆಳಿಗ್ಗೆ ಬ್ರಿಟೀಷರು ಆ ಕೋಟೆಯ ಮೇಲೆ ದಾಳಿ ಮಾಡಿದರು. ಮುಂದಿನ ೨೪ ಗಂಟೆಗಳಲ್ಲಿ ಆ ಕೋಟೆಯ ಗೋಡೆಯಲ್ಲಿ ಬಿರುಕನ್ನು ಸೃಷ್ಟಿಸಿದರು. ಅಲ್ಲಿಂದ ಆರಂಭವಾಯಿತು ಕಿತ್ತೂರಿನ ಅಧಃಪತನ.

ಕಿತ್ತೂರ ಬ್ರಿಟೀಷ ಕದನದಲ್ಲಿ ಸಾಕಷ್ಟು ರಕ್ತಪಾತವಾಯಿತು. ಇದೊಂದು ಭಯಂಕರ ದಾಳಿಯಾಗಿದ್ದು, ಆ ದಾಳಿಯಲ್ಲಿ ಒಂದು ಸೈನ್ಯ ತನ್ನ ಸ್ವಾಯತ್ತತೆಗಾಗಿ ತೀವ್ರವಾದ ದಾಳಿ ಮಾಡಿದರೆ, ಇನ್ನೊಂದು ಸೈನ್ಯ ಒಂದು ಚಿಕ್ಕದಾದ ಸಂಸ್ಥಾನವನ್ನು ಬಹು ಕ್ರೂರ ರೀತಿಯಲ್ಲಿ ಕಬಳಿಸಲು ಪ್ರಯತ್ನ ನಡೆಸುತ್ತಿತ್ತು. ಬ್ರಿಟೀಷ ಸೈನ್ಯ ಕಿತ್ತೂರ ಕೋಟೆಯ ಒಳಗೆ

ನುಗ್ಗಿ ಅಲ್ಲಿಯ ಜನರ ಮೇಲೆ ಭೀಕರವಾಗಿ ಎರಗಿ ಅವರಲ್ಲಿ ಅನೇಕರನ್ನು ಬಲಿತೆಗೆದು ಕೊಂಡಿತು.

ಡಿಸೆಂಬರ ೫ನೇ ದಿನ ಎಂದರೆ ಕಿತ್ತೂರ ಇತಿಹಾಸದ ಕರಾಳ ದಿನವೆಂದೇ ಹೇಳಬೇಕು. ಅಂದು ಚನ್ನಮ್ಮ ಇನ್ನೊಂದು ಗೇಟಿನಿಂದ ಬ್ರಿಟೀಷರನ್ನು ಹಣಿಯಲು ಯೋಚಿಸಿದಳು. ಆಕೆ ಯಶಸ್ವಿಯಾಗಲಿಲ್ಲ. ಕಿತ್ತೂರ ಸೇನಾಧಿಕಾರಿಗಳಾದ ಗುರುಸಿದ್ದಪ್ಪ, ರಾಯಣ್ಣ ಮತ್ತಿತರ ೨೦ ಜನರನ್ನು ಬ್ರಿಟೀಷರು ಬಂಧಿಸಿದರು. ಬ್ರಿಟೀಷರ ಸೆರೆಯಾಳುಗಳನ್ನು ಬಿಟ್ಟುದುದಲ್ಲದೇ ಕೋಟೆಯು ಶರಣಾಗತವಾಯಿತು. ಅಲ್ಲಿದ್ದ ರಾಜ ಪರಿವಾರದ ಮೂವರು ವಿಧವೆಯರಾದ ಚನ್ನಮ್ಮ, ವೀರಮ್ಮ ಹಾಗೂ ಜಾನಕಿಬಾಯಿಯನ್ನು ಬಂಧಿಸಲಾಯಿತು. ಗುರುಸಿದ್ದಪ್ಪ ಮತ್ತಿತರರನ್ನು ಬೆಳಗಾಂವಿಗೆ ಒಯ್ದು ಅವರನ್ನು ಗಲ್ಲಿಗೇರಿಸುವವರೆಗೆ ಅಲ್ಲಿಯೇ ಇಟ್ಟರು. ಗುರುಸಿದ್ದಪ್ಪ ಮತ್ತಿತರರು ಸ್ವಾತಂತ್ರ್ಯಕ್ಕಾಗಿ ವೀರ ಮರಣವನ್ನಪ್ಪಿದರು. ಆತನ ಶವವನ್ನು ಹಂದಿಗುಂಡ ಗಟರಿನಲ್ಲಿ ಒಗೆದರು.

ಕಿತ್ತೂರಿನ ರಾಣಿ ಚನ್ನಮ್ಮ ಬ್ರಿಟೀಷರ ಸೆರೆಯಾಳಾಗಿದ್ದಳು. ಆಕೆಯ ವೈಭವೋಪೇತವಾದ ಸಂಸ್ಥಾನ ಬ್ರಿಟೀಷರ ವಶವಾಗಿತ್ತು. ಬ್ರಿಟೀಷರು ಅಲ್ಲಿಯ ೧೬ ಲಕ್ಷ ರೂಪಾಯಿಗಳನ್ನು ನಾಲ್ಕು ಲಕ್ಷ ಬೆಲೆಯ ಆಭರಣಗಳನ್ನು ೨೦೦೦ ಕುದುರೆಗಳನ್ನು ೧೦೦೦ ಒಂಟೆಗಳನ್ನು ಹಾಗೂ ಅಲ್ಲಿಯ ಎಲ್ಲ ಯುದ್ಧ ಸಾಮುಗ್ರಿಗಳನ್ನು ವಶಪಡಿಸಿಕೊಂಡರು. ಆದರೆ ಅಲ್ಲಿಯ ಕೆಲವು ಸಂಪತ್ತು ಗೊತ್ತಿಲ್ಲದ ಪ್ರದೇಶಗಳನ್ನು ತಲುಪಿತು ಎನ್ನುತ್ತಾರೆ. ಅಕ್ಟೋಬರ ೧೨ ರಂದು ಈ ರಾಜ ಮನೆತನದ ಸ್ತ್ರೀಯರು ಕೆಲವು ದಾಖಲೆಗಳ ಮೇಲೆ ಸಹಿ ಹಾಕುವಂತೆ ಬಲವಂತ ಮಾಡಲಾಯಿತು. ಅದು ಇಂದು ಥ್ಯಾಕರೆಯ ಕನಸು ನನಸಾಯಿತೆಂದು ಹೇಳಬಹುದು. ಆ ದಿನವೇ ಚಾಪ್ಲೆನನು ಗರಡಿಮರ್ಡಿಯ ಗೋಪುರದ ಮೇಲಿರುವ ಕಿತ್ತೂರ ನಂದಿ ಧ್ವಜವನ್ನು ಕೆಳಗೆ ಇಳಿಸಿ ಬ್ರಿಟೀಷರ ಧ್ವಜವಾದ "ಯುನಿಯನ್ ಜಾಕ್" ಏರಿಸಿದನು. ಡಿಸೆಂಬರ ೫ ರಂದು ಆ ಸ್ತ್ರೀಯರೆಲ್ಲ ಕೋಟೆಯನ್ನು ತೆರವು ಮಾಡಬೇಕೆಂದು ಕೇಳಿಕೊಳ್ಳಲಾಯಿತು. ಚನ್ನಮ್ಮ, ವೀರವ್ವ ಹಾಗೂ ಜಾನಕಿ ಬಾಯಿಯನ್ನು ಬೈಲಹೊಂಗಲ ಸೆರೆಮನೆಗೆ ಕರೆದುಕೊಂಡು ಹೋದರು. ಅಲ್ಲಿ ಅವರು ರಾಜಕೀಯ ಸೆರೆಯಾಳುಗಳಾದರು.

ಬ್ರಿಟೀಷರು ಈ ರಾಜಕೀಯ ಸೆರೆಯಾಳುಗಳಿಗೆ ವರ್ಷಕ್ಕೆ ೪೦ ಸಾವಿರ ರೂಪಾಯಿಯ "ಪೆನ್‌ಶನ್" ನೀಡಿದರಲ್ಲದೇ ಅವರಿಗೆ ಸಾಧ್ಯವಾದ ಅನುಕೂಲಗಳನ್ನು ನೀಡಿದರು. ಚನ್ನಮ್ಮ ಅಲ್ಲಿಯೇ ನಾಲ್ಕು ವರ್ಷ ಓದು ಮತ್ತು ಧಾರ್ಮಿಕ ಚಿಂತನೆಯಲ್ಲಿ ಕಾಲ ಕಳೆದಳು. ಆಕೆ ಇನ್ನು ಕ್ರಾಂತಿಕಾರಿಯೇ ಆಗಿದ್ದಳು. ಅಲ್ಲಿದ್ದುಕೊಂಡೇ ಬ್ರಿಟೀಷರ ವಿರುದ್ಧ ಯುದ್ಧದ ಯೋಜನೆ ಹಾಕಿದ ವೀರ ವನಿತೆ ಅವಳಾದಳು. ಆಕೆ ಎರಡು ಸಲ ಅಲ್ಲಿಂದ ಪಾರಾಗಲು ಪ್ರಯತ್ನಿಸಿದಳು. ಆದರೆ ಬ್ರಿಟೀಷರು ಆಕೆಯ ಸುತ್ತ ಸರ್ಪಗಾವಲು ಹಾಕಿದ್ದರು. ಚನ್ನಮ್ಮನ ಕೊನೆಯ ದಿನಗಳು ಚಿಂತಾಜನಕವಾಗಿದ್ದವು. ಕಿತ್ತೂರಿನ ವೈಭವದ ನಾಶವೆಲ್ಲ ಆಕೆಯನ್ನು ಚಿಂತಾಕ್ರಾಂತವನ್ನಾಗಿಸಿದ್ದವು. ೧೮೨೯ರ ಫೆಬ್ರುವರಿ ೨ ರಂದು ಆಕೆ ಅಲ್ಲಿಯೇ ತನ್ನ ಕೊನೆಯುಸಿರೆಳೆದಳು. ಆಕೆಯನ್ನು ಪೂರ್ಣ ಸೈನಿಕ

ಗೌರವದೊಂದಿಗೆ ಕಲ್ಮರದ ಆವರಣದಲ್ಲಿ ಸಮಾಧಿಗೊಳಿಸಲಾಯಿತು. ಅಲ್ಲಿಯ "ಪತ್ರಿಯ" ಮರದ ಕೆಳಗೆ ಅವಳ ಸಮಾಧಿ ಇಂದು ಶಾಂತತೆಯ ಅಡಿಯಲ್ಲಿದೆ.

ಕಿತ್ತೂರಿನಿಂದ ೧೫ ಕಿ.ಮೀ. ದೂರದಲ್ಲಿರುವುದೇ ಸಂಗೊಳ್ಳಿ ಎಂಬ ಹಳ್ಳಿ. ಅದು ಬೈಲಹೊಂಗಲ ತಾಲೂಕಿನಲ್ಲಿದೆ. ಆ ಊರಿನ ಬರಮಪ್ಪ ಮತ್ತು ಕೆಂಚವ್ವರ ಮಗನೇ ರಾಯಣ್ಣನು. ಆತನದು ಬಡ ಕುಟುಂಬವಾಗಿತ್ತು. ರಾಣಿ ಚನ್ನಮ್ಮಳ ಧೀರ ಸೈನಿಕ ರಾಯಣ್ಣ ಆಕೆಯ ಸ್ವಾತಂತ್ರ್ಯದ ರಣ ಕಹಳೆಯನ್ನು ಊದಿದನು. ಕಿತ್ತೂರಿನ ಅನೇಕ ವೀರ ಯೋಧರು ರಾಯಣ್ಣನ ನೇತೃತ್ವದಲ್ಲಿ ಗೆರಿಲ್ಲಾ ಯುದ್ಧವನ್ನು ನಡೆಸಿ ಆ ಯುದ್ಧವನ್ನು ಮುಂದುವರೆಸಿದರು. ಇವರೆಲ್ಲಾ ಆ ಅರಸು ಮನೆತನದ ಮುಂದುವರಿಕೆಗಾಗಿ ಯುದ್ಧ ನಡೆಸಿದರೆ ವಿನಃ ತಮ್ಮ ಸ್ವಾರ್ಥಕ್ಕಾಗಿ ಅಲ್ಲವೆಂದು ಹೇಳಬೇಕು. ಅವರಿಗೆ ಶಿವಲಿಂಗಪ್ಪನು ಮತ್ತೆ ರಾಜ್ಯವನ್ನು ಮರಳಿ ಪಡೆಯಬೇಕೆಂಬ ಆಶೆ ಇತ್ತು. ಒಂದರ್ಥದಲ್ಲಿ ರಾಯಣ್ಣನ ಅವಸಾನದ ನಂತರವೇ ಬ್ರಿಟೀಷರು ಕಿತ್ತೂರ ಸಂಸ್ಥಾನವನ್ನು ಸಂಪೂರ್ಣವಾಗಿ ವಶಪಡಿಸಿ ಕೊಂಡರೆನ್ನಬಹುದು. ಸಂಗೊಳ್ಳಿ ರಾಯಣ್ಣ ಬದುಕಿರುವವರೆಗೂ ಬ್ರಿಟೀಷರಿಗೆ ಈ ಕಾರ್ಯ ಸಾಧ್ಯವಾಗಲೇ ಇಲ್ಲ. ಆತನ ಹೋರಾಟದಲ್ಲಿ ಜನ ಆತನಿಗೆ ಹಣ ಇಲ್ಲವೇ ವಸ್ತುಗಳ ರೂಪದಲ್ಲಿ ಸಹಾಯ ನೀಡಿದರಲ್ಲದೇ ಆತನಿಗೆ ಅಪಾರವಾದ ಪ್ರೋತ್ಸಾಹ ದೊರಕಿತ್ತು. ಒಂದು ಎಣಿಕೆ ಪ್ರಕಾರ ಆತನ ಹಿಂದೆ ಮೂರುನೂರರಿಂದ ಸಾವಿರ ಜನರ ಪಡೆ ಇತ್ತು ಎಂದು ಹೇಳಲಾಗುತ್ತದೆ.

ರಾಯಣ್ಣ ಮಾಡಿದ ಸಾಧನೆಯೆಂದರೆ, ಆತ ಬ್ರಿಟೀಷ ಕಚೇರಿಗಳ ಮೇಲೆ ಮಾಡಿದ ಅಭೂತ ಪೂರ್ವವಾದ ದಾಳಿಯೆನ್ನಬೇಕು. ೧೮೨೯ರಲ್ಲೊಮ್ಮೆ ಆತ ಖಾನಾಪುರದ ಮೇಲೆ ಆಕ್ರಮಣವೆಸಗಿದ ಆಗ ಸಂಪಗಾಂವ ಖಜಾನೆಯಿಂದ ಬ್ರಿಟೀಷರು ೨೧ ಸಾವಿರ ರೂಪಾಯಿಗಳನ್ನು ಒಯ್ಯುತ್ತಿದ್ದರು. ರಾಯಣ್ಣನಿಗೆ ಹೆದರಿ ಅವರು ಹಣವನ್ನು ಬೈಲಹೊಂಗಲದಲ್ಲಿಡಿಸಿದರು. ಆತ ಬ್ರಿಟೀಷರ ಆಡಳಿತವನ್ನು ಹಾಳುಗೆಡವಲು ಪ್ರಯತ್ನಿಸಿದ. ಕಿತ್ತೂರ ಜನತೆಯ ಬೆಂಬಲ ಹೊಂದಿದ್ದ ರಾಯಣ್ಣನನ್ನು ಬ್ರಿಟೀಷರು ಅಷ್ಟು ಬೇಗ ಸದೆ ಬಡಿಯಲಾಗಲಿಲ್ಲ. ಹಗಲು ಹಂದಿ ಬಡಗನಾಥ ಗುಡ್ಡದಲ್ಲಿ ಇಲ್ಲವೆ ಬಲಗುಂದದಲ್ಲಿ ಅಡಗಿ ರಾತ್ರಿ ಬ್ರಿಟೀಷರ ಕಚೇರಿ, ಖಜಾನೆಯ ಲೂಟಗಾಗಿ ಆತನ ಗುಂಪು ಹೋಗುತ್ತಿತ್ತು. ಅಂತಿಮವಾಗಿ ರಾಯಣ್ಣನನ್ನು ಮೋಸದಿಂದ ಹಿಡಿದು ಕೊಟ್ಟರು. ಅವನನ್ನು ಬ್ರಿಟೀಷರು ನಂದಗಡದಲ್ಲಿ ಆಲದ ಮರಕ್ಕೆ ದಿನಾಂಕ ೨೮ನೇ ಡಿಸೆಂಬರ ೧೮೨೯ರಲ್ಲಿ ಗಲ್ಲಿಗೇರಿಸಿದರು. ಅವನ ಜೊತೆಗೆ ಇನ್ನು ಅನೇಕ ಹೋರಾಟಗಾರರನ್ನು ಗಲ್ಲಿಗೇರಿಸಿದರು. ಈ ರೀತಿ ರಾಯಣ್ಣ ವೀರ ಮರಣವನ್ನಪ್ಪಿದ.

* * *

ಅಧ್ಯಾಯ-೫

ಉಪಸಂಹಾರ ಮತ್ತು ವೀಕ್ಷಣೆಗಳು

ಹಿಂದಿನ ಅಧ್ಯಾಯಗಳಲ್ಲಿ ಕಿತ್ತೂರ ಸಂಸ್ಥಾನದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ತಿಳಿದುಕೊಂಡಿದ್ದೇವೆ. ಆ ಹೋರಾಟಗಾರರು ೧೯ನೆಯ ಶತಮಾನದವರು ಎಂಬುದು ಮುಖ್ಯ. ದುರ್ದೈವವೆಂದರೆ ನಮ್ಮ ದೇಶದ ಅನೇಕರಿಗೆ ಬ್ರಿಟೀಷ ಸಾಮ್ರಾಜ್ಯಶಾಹಿ ಧೋರಣೆಯ ವಿರುದ್ಧ ಹೋರಾಡಿದ ಕಿತ್ತೂರ ರಾಣಿ ಚನ್ನಮ್ಮನ ಬಗೆಗೆ ಅರಿವಿಲ್ಲ. ಈ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದವರಲ್ಲಿ ಅಗ್ರಮಾನ್ಯಳು ಎಂಬುದನ್ನು ಒಪ್ಪಲೇಬೇಕು. ಅಂತಹ ಗೌರವ ಕರ್ನಾಟಕದ ಕಿತ್ತೂರ ಸಂಸ್ಥಾನಕ್ಕೆ ಸಲ್ಲುತ್ತದೆ ಎಂಬುದನ್ನು ಎಷ್ಟೋಜನ ಮರೆತಿದ್ದಾರೆ.

ರಾಣಿ ಚನ್ನಮ್ಮ ಲಿಂಗಾಯತ ಧರ್ಮಕ್ಕೆ ಸೇರಿದವಳಾದರೂ, ಅವಳು ಕೆಳ ಜಾತಿಯವರನ್ನು ಎಂದೂ ನಿರ್ಲಕ್ಷಿಸಿದಂತಿಲ್ಲ. ಸಣ್ಣ ಸಂಸ್ಥಾನದ ಪ್ರಮುಖಳಾದರೂ ಅವಳು ಮನುಷ್ಯ ಲೋಕದ ಅಪರಿಮಿತ ಜ್ಞಾನವನ್ನು, ರಾಜ್ಯಾಡಳಿತದ ದಕ್ಷತೆಯನ್ನು, ನ್ಯಾಯಪರತೆಯನ್ನು, ಸಾಕಷ್ಟು ಜ್ಞಾನ ಪರಿಜ್ಞಾನವನ್ನು ಹೊಂದಿದಳು. ಅವಳು ಓರ್ವ ಚಾಣಾಕ್ಷ ರಾಜನೀತಿಜ್ಞಳೂ ಆಗಿದ್ದಳೆಂಬುದರಲ್ಲಿ ಸಂಶಯವಿಲ್ಲ.

ರಾಣಿ ಚನ್ನಮ್ಮ ಉತ್ತಮ ನಿರ್ಣಯವನ್ನು ತೆಗೆದುಕೊಂಡು ಆ ನಿರ್ಣಯಗಳನ್ನು ತಕ್ಷಣ ಕಾರ್ಯರೂಪಕ್ಕೆ ತರುತ್ತಿದ್ದಳೆಂದು ಹೇಳಬೇಕು. ಅವಳಿಗೆ ಕಿತ್ತೂರ ಸಂಸ್ಥಾನದ ಮತ್ತು ಜನತೆಯ ಬಗೆಗೆ ಸಾಕಷ್ಟು ಪ್ರೇಮ-ಗೌರವಗಳಿದ್ದವು. ಈ ಗುಣಗಳು ಅವಳನ್ನು ಅಮರವಾಗಿಸಿವೆ.

ಬ್ರಿಟೀಷರು ಕಿತ್ತೂರ ಸಂಸ್ಥಾನದೊಂದಿಗೆ ನಡೆಸಿದ ಹೋರಾಟ ಬ್ರಿಟೀಷರ ಕಡೆಯಿಂದಲೇ ಆರಂಭವಾಯಿತು ಎನ್ನಬೇಕು. ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಬ್ರಿಟೀಷರು ಕಾಲಾನುಕ್ರಮದಲ್ಲಿ ಇಲ್ಲಿ ತಮ್ಮದೇ ಆದ ಸಾಮ್ರಾಜ್ಯವನ್ನು ಕಟ್ಟಲು ಪ್ರಯತ್ನಿಸಿದರು. ಅವರು ಪ್ರತಿಯೊಂದು ಕ್ಷೇತ್ರದಲ್ಲೂ ಕುತಂತ್ರವೆಸಗಿ ಇಲ್ಲಿಯ ಗುಡಿಕೈಗಾರಿಕೆಗಳನ್ನು, ವ್ಯಾಪಾರ ವಹಿವಾಟುಗಳನ್ನು, ಸಂಸ್ಥಾನಗಳ ರಾಜ್ಯಾಡಳಿತವನ್ನು ನಾಶಪಡಿಸಿ, ತಮ್ಮ ಜನಾಂಗೀಯ ರಾಜಕೀಯವನ್ನು ಆರಂಭಿಸಿದರು. ಅವರ ಆಡಳಿತದಲ್ಲಿ ಸಿಂಹಪಾಲು ಅವರದೇ ಎಂಬುದು ತಿಳಿದ ವಿಷಯ. ಅವರ ಸೇವೆಯಲ್ಲಿದ್ದ ಭಾರತೀಯರು ಕೈ ಕೆಲಸದಂತೆ ಗುಮಾಸ್ತಿಕೆಯನ್ನು ಮಾಡುತ್ತಿದ್ದರೆ ಹೊರತು ಯಾವ ಜವಾಬ್ದಾರಿಯುತ ಕೆಲಸಗಳನ್ನು ನಿರ್ವಹಿಸುವ ಅವಕಾಶ ಅವರಿಗಿರಲಿಲ್ಲ.

ಭಾರತದಲ್ಲಿ ಬ್ರಿಟೀಷ ಸಾಮ್ರಾಜ್ಯಶಾಹಿ ನೀತಿಗಳಲ್ಲಿ ಅವರ ಆರ್ಥಿಕ ವಹಿವಾಟುಗಳು ಕಟು ಟೀಕೆಗೆ ಒಳಗಾಗುವಂತಹವು. ಅವರು ಇಲ್ಲಿಯ ಆರ್ಥಿಕ ಸ್ವರೂಪವನ್ನು

ಬದಲಾಯಿಸಲು ಪ್ರಯತ್ನಿಸಿದರು. ತಮ್ಮ ಆರ್ಥಿಕ ಪ್ರಗತಿಯನ್ನು ಸಾಧಿಸುವುದಕ್ಕೋಸ್ಕರ ಭಾರತದಿಂದ ಇಂಗ್ಲಂಡಿಗೆ ರಫ್ತಾಗುತ್ತಿದ್ದ ವಸ್ತುಗಳ ಮೇಲೆ ಭಾರವಾದ ಸುಂಕವನ್ನು ವಿಧಿಸಿದರು. ಆದರೆ ಅಲ್ಲಿಂದ ಭಾರತಕ್ಕೆ ಆಮದಾಗುತ್ತಿದ್ದ ವಸ್ತುಗಳ ಮೇಲೆ ಸುಂಕವಿರಲಿಲ್ಲ. ಇದು ಅವರ ಆರ್ಥಿಕ ಕ್ರೌರ್ಯವೇ ಆಗಿತ್ತು.

ಬ್ರಿಟೀಷರ ಈ ದಬ್ಬಾಳಿಕೆಯ ಆರ್ಥಿಕ ನೀತಿಯನ್ನು ಭಾರತೀಯ ಅರಸರು ವಿರೋಧಿಸಿದರು. ೧೮೪೮ರಲ್ಲಿ ಅಂದಿನ ಭಾರತದ ಗವರ್ನರ ಲಾರ್ಡ ಡಾಲ್ ಹೌಸಿಯು ಪ್ರಸ್ತಾಪಿಸಿದ "ದತ್ತು ಮಕ್ಕಳಿಗೆ ಹಕ್ಕಿಲ್ಲ" ವೆಂಬ ನೀತಿಯನ್ನು ಇಡೀ ಭಾರತವೇ ವಿರೋಧಿಸಿತು. ಅಂದು ನಡೆದ "ಸಿಪಾಯಿ ದಂಗೆ" ಗೆ ಇದೂ ಒಂದು ಕಾರಣವಾಗಿತ್ತು. ಅವರ ಆರ್ಥಿಕ ಸಂಹಿತೆಗಳಿಂದಾಗಿ ಭಾರತದಲ್ಲಿನ ಲಕ್ಷಾಂತರ ಜನರ ಗುಡಿ ಕೈಗಾರಿಕೆಗಳು ನಾಶವಾದವು. ಇಲ್ಲಿಯ ಕರಕುಶಲ ಕರ್ಮಿಗಳು ರಾಜಕೀಯ, ಸಾಮಾಜಿಕ, ಆರ್ಥಿಕ ಜೀವನ ಎಲ್ಲವೂ ತೊಂದರೆಗೊಳಗಾದವು. ಅನೇಕ ಭಾರತೀಯ ಅರಸರು, ಮಾಂಡಲೀಕರು, ನಾಯಕರು ತಮ್ಮ ಬಿರುದು - ಬಾವಲಿಗಳನ್ನು ಸಂಪನ್ಮೂಲಗಳನ್ನು ಹಾಗೂ ಅನುಶಾಸನಗಳನ್ನು ಕಳೆದುಕೊಂಡರು. ಡಾಲಹೌಸಿಯು ಅನೇಕ ಮಾಜಿ ರಾಜಸದರ ಅನುವಂಶಿಕ ಬಿರುದುಗಳನ್ನು ಮಾಸಾಶನಗಳನ್ನು ರದ್ದು ಪಡಿಸಿದನು.

ರಾಣಿ ಚನ್ನಮ್ಮ ಮಾಡಿದ ಧೀರ ಹೋರಾಟದಿಂದಾಗಿ ಕಿತ್ತೂರು ಇಂದು ಭಾರತದ ಇತಿಹಾಸದಲಿ ಅಜರಾಮರವಾಗಿದೆ. ಬಲಶಾಲಿಯಾದ ಬ್ರಿಟೀಷರು ಕಿತ್ತೂರನ್ನು ಸೋಲಿಸಿದರೆಂಬುದು ಇಲ್ಲಿ ಮಹತ್ವದ್ದಲ್ಲ. ಕಿತ್ತೂರ ಜನತೆ "ಸ್ವಾತಂತ್ರ್ಯ ತಮ್ಮ ಜನ್ಮಸಿದ್ಧ ಹಕ್ಕು" ಎಂದು ಭಾವಿಸಿದ್ದರು ಎಂಬುದು ಗಮನಾರ್ಹ' ವಿಷಯವಾಗಿದೆ. ಕಿತ್ತೂರ ಜನರು ಧೈರ್ಯ ಸಾಹಸ, ದಿಟ್ಟತನದಿಂದ ಹೋರಾಡಿದ್ದು ಅವರಿಗೆ ಗೌರವವನ್ನು ತಂದುಕೊಟ್ಟಿದೆ. ಅಂದು ಕಿತ್ತೂರ ಜನತೆಗಾಗಿ, ಅವರ ಸಂಸ್ಥಾನವನ್ನು ಉಳಿಸುವಾಗ ಅವರು ಮಾಡಿದ ತ್ಯಾಗ, ಬಲಿದಾನಗಳು ಇಂದಿಗೂ ಜನಮನದಲ್ಲಿ ಅಚ್ಚಳಿಯದೇ ಉಳಿದಿವೆ. ಅಂದು ಬ್ರಿಟೀಷರು ಕಿತ್ತೂರಿನ ಮಲ್ಲಪ್ಪ ಶೆಟ್ಟಿ, ಶಂಕ್ರಣ್ಣ, ರಾಯಣ್ಣ ಮುಂತಾದವರ ಬಂಡಾಯಗಳನ್ನು ಸದೆಬಡಿದು ಅಂತಹ ಬಂಡಾಯಗಳು ಅಂತ್ಯಗೊಂಡವು ಎಂಬ ಭ್ರಮೆಯಲ್ಲಿದ್ದರೇನೊ ಸರಿ. ಆದರೆ ನಿಜಸ್ಥಿತಿ ಬೇರೆಯೇ ಆಗಿತ್ತು. ಚನ್ನಮ್ಮನ ಹಾಗೂ ರಾಯಣ್ಣನ ಭಾವನೆಗಳು, ಸ್ವಾತಂತ್ರ್ಯದ ಬಗೆಗಿನ ಕಳಕಳಿ, ಅವರ ವೀರ ಹೋರಾಟ, ಎಲ್ಲವೂ ಮುಂದಿನವರೆಗೆ ಪ್ರೇರಕವೂ ಸ್ಫೂರ್ತಿದಾಯಕವೂ ಆಗಿದ್ದವು. ಆ ಧೈರ್ಯ ಶೌರ್ಯ ಭಾರತೀಯರನೇಕರ ಕೃತಿಗಳಲ್ಲಿ ಜನ್ಮ ತಾಳಿ ಘನಘೋರವಾದ ಸಿಪಾಯಿ ದಂಗೆಗೆ ಕಾರಣವಾದವು.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು ಪರಿಶೀಲಿಸಿದರೆ ಬ್ರಿಟೀಷರು ಕೆಲವೊಂದು ಹಂತದಲ್ಲಿ ತಪ್ಪು ಮಾಡಿದರೆಂದು ಹೇಳಬಹುದು. ನಮಗೆ ಗೊತ್ತಿರುವಂತೆ ೧೯ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟೀಷರು ಕೆಲವು "ಪ್ರಿನ್ಸ್‌ಲಿ" ರಾಜಮನೆತನಗಳಿಗೆ ಸ್ವಾಯತ್ತತೆಯನ್ನು ನೀಡಿದರು. ಅಂದು ಈ ದೇಶದ ಹಲವಾರು ರಾಜ ಸಂಸ್ಥಾನಿಕರು ವ್ಯಕ್ತಪಡಿಸಿದ ಪ್ರತಿಭಟನೆ ಬ್ರಿಟೀಷರು ಹಲವಾರು ರಾಜ್ಯಗಳನ್ನು ಅವರ ಪಾಡಿಗೆ

ಬಿಡುವಂತಾಯಿತು. ಈ ಸ್ಥಿತಿ ಅಲ್ಲಿಂದ ೧೮೫೭ರ ವರೆಗೆ ಮುಂದುವರೆಯಿತೆನ್ನಬೇಕು. ಆದರೆ ಬ್ರಿಟೀಷ ಸಾಮ್ರಾಜ್ಯ ಶಾಹಿಯ ದುಷ್ಪರಿಣಾಮಗಳು ೧೮೫೭ರ ದಂಗೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಅಭಿವ್ಯಕ್ತಗೊಂಡವು. ಆ ದಂಗೆಯಲ್ಲಿ ಚನ್ನಮ್ಮನ ಪ್ರತಿರೂಪವೇ ಎನ್ನುವಂತೆ ಝಾನ್ಸಿರಾಣಿ ಲಕ್ಷ್ಮೀಬಾಯಿಯು ಬ್ರಿಟೀಷರ ವಿರುದ್ಧ ಹೋರಾಡಿದ್ದು ಇಂದು ಇತಿಹಾಸವಾಗಿದೆ.

ಕಿತ್ತೂರಿನ ಕಲ್ಮಠದ ಸ್ವಾಮಿಗಳು ಕಿತ್ತೂರ ಅರಸು ಮನೆತನದ ಕುಲಪುರೋಹಿತರಾಗಿದ್ದರು. ಧಾರ್ಮಿಕರು, ತಾತ್ವಿಕರು, ಲೋಕವಾಙ್ಮಯಿಗಳು ಆದ ಅವರು ರಾಜ್ಯ ಸುಧಾರಿಸುವಲ್ಲಿ ಮಹತ್ವದ ಕಾರ್ಯನಿರ್ವಹಿಸಿದರು. ಅವರು ಕಿತ್ತೂರ ಅರಮನೆಯ ಸಭೆಗಳ ಅಧ್ಯಕ್ಷತೆಯನ್ನು ವಹಿಸುತ್ತಿದ್ದರು. ಅವರ ಸಲಹೆಗಳು ರಾಜ್ಯಾಡಳಿತದಲ್ಲಿ ಮಹತ್ವದ ಪಾತ್ರವಹಿಸಿದ್ದವು. ಕಿತ್ತೂರ ಅರಸರು ಸಹ ಈ ಮಠಕ್ಕೆ ಸಲಹೆಗಳಿಗಾಗಿ ಹೋಗುತ್ತಿದ್ದರು. ಅವರ ಬಾಂಧವ್ಯ ಸದಾ ಚೆನ್ನಾಗಿತ್ತು. ರಾಜರ ಸಮಾಧಿಗಳು ಮಠದ ಆವರಣದಲ್ಲಿಯೇ ನಿರ್ಮಿತವಾದವು. ಇದರಿಂದಾಗಿ ಆ ಮಠದ ಮಹತ್ವ ಇಂದಿಗೂ ಉಳಿದುಕೊಂಡು ಬಂದಿದೆ. ಅಂತಹ ಕಿತ್ತೂರಿನ ಗತ ವೈಭವವನ್ನು ಉಳಿಸಿಕೊಂಡು ಬರುವ ಪ್ರಯತ್ನಗಳು ಇಂದಿಗೂ ನಡೆದಿವೆ. ಇಂದು ಕರ್ನಾಟಕ ಮತ್ತು ಭಾರತ ಸರಕಾರಗಳು ಕಿತ್ತೂರ ರಾಣಿಯ ಚಿತ್ರದ ಅಂಚೆ ಚೀಟಿ ಹೊರಡಿಸಿವೆ. ಅವಳ ಹೆಸರಿನಲ್ಲಿ ಐವತ್ತುಸಾವಿರ ರೂಪಾಯಿಯ ನಗದು ಬಹುಮಾನವನ್ನು ಕೊಡುತ್ತಿದೆ. ಕರ್ನಾಟಕ ಸರಕಾರವು ಕಿತ್ತೂರಿನಲ್ಲಿ ಕಿತ್ತೂರ ಉತ್ಸವವನ್ನು ಆರಂಭಿಸಿದೆ. ಈ ಉತ್ಸವ ಪ್ರತಿ ವರ್ಷವು ನಿಯಮಿತವಾಗಿ ನಡೆಯುತ್ತಿರುವುದು ಸಂತಸದ ಸಂಗತಿಯಾಗಿದೆ.

ದಿವಂಗತ ದೊರೆ ಮಲ್ಲಸರ್ಜನ ವಿಧವೆ ರಾಣಿ ಚನ್ನಮ್ಮ ಮತ್ತು ವೀರಮ್ಮರನ್ನು ಹಾಗೂ ವಿಧವೆ ಜಾನಕಿಬಾಯಿಯನ್ನು ಒಂದು ವಾರದ ಕಾಲ ಅರಮನೆಯಲ್ಲಿಯೇ ಬಂಧಿಸಿಡಲಾಯಿತು. ಆಗ ಅವರು ಕಿತ್ತೂರನ್ನು ಬ್ರಿಟೀಷ ಆಡಳಿತಕ್ಕೆ ಒಪ್ಪಿಸುವ ದಾಖಲೆಯೊಂದಕ್ಕೆ ಸಹಿ ಹಾಕುವಂತೆ ಬಲವಂತ ಮಾಡಲಾಯಿತು. ಅವರೆಲ್ಲರಿಗೆ ವರ್ಷಕ್ಕೆ ನಲವತ್ತು ಸಾವಿರ ರೂಪಾಯಿಯ ಮಾಸಾಶನವನ್ನು ನಿಗದಿಪಡಸಲಾಯಿತು.

ಕಿತ್ತೂರಿನ ನಿರ್ಣಾಯಕ ಯುದ್ಧದ ನಂತರ ಕೆಲವು ಕಾಲ ಕಿತ್ತೂರಿನಲ್ಲಿ ಸ್ಮಶಾನ ಮೌನ ಆವರಿಸಿತ್ತು. ಕೆಲವರು ಕಿತ್ತೂರ ಸಂಸ್ಥಾನವು ಮತ್ತೆ ಮುಂದುವರೆಯಬಹುದೆಂಬ ಕನಸನ್ನು ಕಂಡರು. ಆ ಸಂಸ್ಥಾನದ ಆಕರ್ಷಕವಾದ ಕೋಟೆ ಹಾಗೂ ಸುಂದರವಾದ ಗೋಪುರವೂ ಅವರ ಈ ಕನಸಿಗೆ ಕಾರಣವಾಗಿರಬಹುದು. ಚಾಪ್ಲೆನನು ಆ ಗೋಪುರ ಮತ್ತು ಕೋಟೆಗಳು ಕಿತ್ತೂರಿನ ಗತ ವೈಭವವನ್ನು ಜನರು ಸ್ಮರಿಸಿಕೊಂಡು ಮುಂದೊಂದು ದಿನ ಅನಾಹುತಕ್ಕೆ ಕಾರಣವಾಗಬಹುದೆಂದು ಆ ಕಟ್ಟಡಗಳನ್ನೆಲ್ಲವನ್ನು ಕೆಡವಿ ಹಾಕಲು ಬಯಸಿದ. ಆದ್ದರಿಂದ ಕೋಟೆಯ ಮುಂಭಾಗವನ್ನು ಹಾಳುಗೆಡವಲು ಆಜ್ಞೆ ನೀಡಲಾಯಿತು. ಪೋರ್ಚದಲ್ಲಿರುವ ವೈಭವಯುತವಾದ ಸಾಗವಾನಿ ಕಂಬಗಳನ್ನು ಸಣ್ಣ ಮೊತ್ತಕ್ಕಾಗಿ ಹರಾಜು ಹಾಕಿಸಿದ. ಇನ್ನು ಕೆಲವು ಸುಂದರವಾದ ಗ್ರಿಲ್‌ಗಳಿವೆ. ಚಿತ್ರಗಳಿರುವ ಕಟ್ಟಿಗೆಯ ಕಿಟಕಿ ಬಾಗಿಲುಗಳನ್ನು ಮಾರಿದನೆಂದು ಹೇಳಬೇಕು. ಆ ಅರಮನೆಯ ವಸ್ತುಗಳನ್ನು ಬೇಕಾದವರು ಒಯ್ಯಲು ಅನುಮತಿ ನೀಡಲಾಯಿತು.

ಇನ್ನೊಂದೆಡೆ ರಾಣಿ ಚನ್ನಮ್ಮ ಮತ್ತು ವೀರವ್ವ ಬೈಲಹೊಂಗಲದ ಜೈಲಿನಲ್ಲಿ ಬಂಧನಕ್ಕೊಳಗಾಗಿ ಅವರು ತಮ್ಮ ಸಂಸ್ಥಾನದ ಸರ್ದಾರರು ಬ್ರಿಟೀಷರ ವಿರುದ್ಧ ಬಂಡಾಯ ಏಳುವರೆಂದುಕೊಂಡಳು. ಸಂಗೊಳ್ಳಿರಾಯಣ್ಣನಂತಹ ಕೆಲವು ಕಿತ್ತೂರ ಯೋಧರು ಅವಳನ್ನು ಗುಪ್ತವಾಗಿ ಸಂಧಿಸಿ ಕಿತ್ತೂರಿನ ಸ್ಥಿತಿಗತಿಯ ಬಗ್ಗೆ ಹೇಳುತ್ತಿದ್ದರು. ರಾಣಿಯು ಅವರಿಗೆ ಬ್ರಿಟೀಷರ ವಿರುದ್ಧ ಬಂಡಾಯವೇಳಲು ಪ್ರೋತ್ಸಾಹಿಸುತ್ತಿದ್ದಳು.

ಬಂಧನದಲ್ಲಿದ್ದ ರಾಣಿ ಚನ್ನಮ್ಮ ಪೂಜೆ ಪುನಸ್ಕಾರಗಳಲ್ಲಿ ತನ್ನ ವೇಳೆಯನ್ನು ಕಳೆಯತೊಡಗಿದಳು. ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಅವಳು ಸದಾ ಚಿಂತಿಸುತ್ತಿದ್ದಳು. ಅದರಿಂದ ಪ್ರಯೋಜನವೇನೂ ಆಗಲಿಲ್ಲ. ಕತ್ತಲು ಹಾಗೂ ಧೂಳಿನಿಂದ ಆವೃತವಾದ ಸೆರೆಮನೆಯಲ್ಲಿ ರಾಣಿ ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿಯು ಹಾಗೂ ಬ್ರಿಟೀಷರ ವಿರುದ್ಧ ಇನ್ನೊಮ್ಮೆ ಯುದ್ಧ ಮಾಡಿ ಗೆಲುವ ಆಶಾಭಾವನೆಯಿಂದ ಬದುಕಿದ್ದಳು. ಹೀಗೆ ಸುಮಾರು ಐದು ವರ್ಷ ಗತಿಸಿದ ನಂತರ ೧೮೨೯ರ ಫೆಬ್ರುವರಿ ೨ ರಂದು ಚನ್ನಮ್ಮ ರಾಣಿಯು ತನ್ನ ಕೊನೆಯುಸಿರೆಳೆದಳು.

ರಾಣಿ ಚನ್ನಮ್ಮನ ಮೃತದೇಹವನ್ನು ಸಕಲ ಸೈನಿಕ ಗೌರವದೊಂದಿಗೆ ಬೈಲಹೊಂಗಲದಲ್ಲಿ ದಪನ ಮಾಡಲಾಯಿತು. ಅವಳ ಸಮಾಧಿಯನ್ನು ಸ್ಥಾಪಿಸಲಾಯಿತು. ರಾಣಿಯ ಸೊಸೆ ಜಾನಕಿಬಾಯಿಯೂ ಸೆರೆಮನೆಯಲ್ಲಿ ತೀರಿಕೊಂಡಳು.

ಕಿತ್ತೂರಿನ ರಾಣಿ ಚನ್ನಮ್ಮ ತೀರಿಕೊಂಡಳು. ಬ್ರಿಟೀಷರು ಕಿತ್ತೂರನ್ನು ವಶಪಡಿಸಿಕೊಂಡರು. ಹಾಗೂ ಆ ರಾಜಮನೆತನ ನಿರ್ನಾಮವಾದರೂ, ಕಿತ್ತೂರ ರಾಣಿಯ ಮತ್ತು ಕಿತ್ತೂರ ರಾಜನ ಬಗ್ಗೆ ಕಿತ್ತೂರ ಜನತೆ ಹೊಂದಿದ ಪ್ರೇಮವಾಗಲಿ, ಅಭಿಮಾನವಾಗಲೀ ಕಡಿಮೆಯಾಗಲಿಲ್ಲ. ಅವರೆಲ್ಲ ಬ್ರಿಟೀಷರ ವಿರುದ್ಧ ಕತ್ತಿ ಮಸೆಯ ತೊಡಗಿದರು.

ಆನಂತರದಲ್ಲಿಯೂ ಕಿತ್ತೂರಿನಲ್ಲಿ ಸಾಕಷ್ಟು ಹಿಂಸಾತ್ಮಕ ಘಟನೆಗಳು ನಡೆದದ್ದು ಕಂಡು ಬರುತ್ತದೆ. ೧೮೨೯-೩೦ರಲ್ಲಿ ಸಂಗೊಳ್ಳಿ ರಾಯಣ್ಣಾ ನಡೆಸಿದ ಬಂಡಾಯ ಅವುಗಳಲ್ಲಿ ಬಹು ಮುಖ್ಯವಾಗಿತ್ತು. ಆತ ರಾಣಿ ಚನ್ನಮ್ಮನ ಬಹು ನಿಷ್ಠಾವಂತ ಹಾಗೂ ಸಾಹಸಿಯಾದ ಸೇನಾನಿಯಾಗಿದ್ದ. ಆತ ರಾಣಿಗೆ, ಅವಳು ಕಾಲವಾದರೂ ತನ್ನ ಹೋರಾಟವನ್ನು ಮುಂದುವರೆಸುತ್ತೇನೆಂದು ವಚನ ನೀಡಿದ್ದನು.

ರಾಯಣ್ಣನಿಗೆ ರಾಣಿ ಚನ್ನಮ್ಮನ ಹೋರಾಟವೇ ಮಾದರಿಯಾಗಿತ್ತು. ಕಿತ್ತೂರ ಸಂಸ್ಥಾನದ ಹಳ್ಳಿಯಾದ ಸಂಗೊಳ್ಳಿಯ ನಾಯಕನೇ ರಾಯಣ್ಣಾ. ಆತ ೧೮೨೪ರ ಕಿತ್ತೂರ ಯುದ್ಧದಲ್ಲಿ ಭಾಗಿಯಾಗಿದ್ದರೂ ಬ್ರಿಟೀಷರು ಆತನನ್ನು ಆಗ ಕ್ಷಮಿಸಿದ್ದರೆಂದು ತಿಳಿದುಬರುತ್ತದೆ. ಕಿತ್ತೂರ "ದೇಶಗತ"ದ ಉತ್ತರಾಧಿಕಾರಿಯಾಗಬೇಕಾದ ದತ್ತು ಬಾಲಕ ಶಿವಲಿಂಗಪ್ಪನಿಗೆ ಆ ಸಂಸ್ಥಾನವನ್ನು ರಚಿಸಿ ಬ್ರಿಟೀಷರ ವಿರುದ್ಧ ಸುಮಾರು ಎರಡು ವರ್ಷಗಳ ಕಾಲ ಹೋರಾಡಿದನು. ತನ್ನ ಗೆರಿಲ್ಲಾ ಯುದ್ಧ ತಂತ್ರದಿಂದ ಬ್ರಿಟೀಷ ಕಚೇರಿಗಳನ್ನು ಆಕ್ರಮಿಸಿದನು. ಆತ ತನ್ನ ಅಡಗುದಾಣಗಳಾದ ಬಲಗುಂದ ಹಾಗೂ

ಹಂದಿ ಬಡಿಗನಾಥ ಗುಡ್ಡಗಳಲ್ಲಿದ್ದು ಈ ಕೆಲಸ ಮಾಡುತ್ತಿದ್ದ. ೧೮೩೦ರಲ್ಲಿ ಆತ ಬ್ರಿಟೀಷರ ಕಚೇರಿಗಳ ಮೇಲೆಲ್ಲ ದಾಳಿ ನಡೆಸಿದ ನಂದಗಡ, ಬೀಡಿ, ಸಂಪಗಾಂವ ಮತ್ತು ಖಾನಾಪುರಗಳ ರಾಯಣ್ಣನ ದಾಳಿಗೊಳಗಾದ ಪ್ರದೇಶಗಳು ಇಂತಹ ದಾಳಿಗಳ ಮೂಲಕ ಆತ ಬ್ರಿಟೀಷರಿಗೆ ನಡುಕವನ್ನು ಹುಟ್ಟಿಸಿದ.

ಕಿತ್ತೂರಿನ ಜನತೆ ರಾಯಣ್ಣನ ಚಟುವಟಿಕೆಗಳನ್ನು ಸಹಜವಾಗಿಯೇ ಮೆಚ್ಚಿದರು. ಆತನಿಂದ ಬೇಸತ್ತ ಬ್ರಿಟೀಷರು ಆತನನ್ನು ಹಿಡಿದು ಕೊಟ್ಟವರಿಗೆ ನಗದು ಬಹುಮಾನವನ್ನು ಘೋಷಿಸಿದರು. ಆದರೆ ಇದರಿಂದ ಪ್ರಯೋಜನವಾಗಲಿಲ್ಲ ಎನ್ನಲಾಗುತ್ತದೆ. ಅನಂತರ ಅವರು ಆತನ ಕೆಲವು ವೈರಿಗಳ ಮೂಲಕ ಪಿತೂರಿ ನಡೆಸಿದರು. ಕೋದಾನಪುರದ ಲಿಂಗನಗೌಡರು ಕಿತ್ತೂರ ಸಂಸ್ಥಾನಕ್ಕೆ ತನ್ನ ಮಗನನ್ನು ದತ್ತು ನೀಡಲು ತಯಾರಿದ್ದಾಗ, ಕಿತ್ತೂರ ಜನ ಅವನು ಆ ಸಂಸ್ಥೆಯ ದೂರದ ಸಂಬಂಧಿಯಾಗಿದ್ದರಿಂದ ಅದನ್ನು ತಿರಸ್ಕರಿಸಿದ್ದರು. ಇದರಿಂದಾಗಿ ಆತ ಕಿತೂರಿನ ವೈರಿಯಾಗಿದ್ದನು. ಬ್ರಿಟೀಷರು ರಾಯಣ್ಣನನ್ನು ಹಿಡಿದುಕೊಡುವಂತೆ ಆತನಿಗೆ ಹುರಿದುಂಬಿಸಿದರು. ಮುಂದೆ ಈ ಲಿಂಗನಗೌಡ ಹಾಗೂ ನೇಗಿನಹಾಳದ ಯಂಕನಗೌಡರು ರಾಯಣ್ಣನ ಗೆಳೆತನ ಸಾಧಿಸಿ ಒಂದು ವಾರದ ಕಾಲ ಸುಲಿಗೆಯಲ್ಲಿ ನಿರತರಾದರು. ದೈಹಿಕವಾಗಿ ಬಲಿಷ್ಠನಾಗಿದ್ದ ಯಂಕನಗೌಡನು ಲಿಂಗನಗೌಡನೊಂದಿಗೆ ಹೊಂಚು ಹಾಕಿ ರಾಯಣ್ಣನನ್ನು ಎಲ್ಲ ಕಡೆಯಿಂದಲೂ ನಿರ್ಬಂಧಿಸಿದನು. ಜನರನ್ನು ಹೆದರಿಸುವ ಸಂಹಿತೆಯನ್ನು ಹೊಂದಿರುವ ಬ್ರಿಟೀಷರು ರಾಯಣ್ಣನಿಗೆ ಹತ್ತಿರವಾದ ನಂದಗಡದಲ್ಲಿ ಆತನನ್ನು ೧೮೩೦ರ ಡಿಸೆಂಬರ ೨೮ರಂದು ಗಲ್ಲಿಗೇರಿಸಿದರು. ಆದರೆ ರಾಯಣ್ಣ ತನ್ನ ಸಾವನ್ನು ನಗುನಗುತ್ತಾ ಸ್ವಾಗತಿಸಿದನು. "ನಿನ್ನ ಕೊನೆಯ ಆಸೆ ಏನು? ಎಂದು ಬ್ರಿಟೀಷರು ರಾಯಣ್ಣನನ್ನು ಕೇಳಿದಾಗ ಆತನ ಉತ್ತರ ಹೀಗಿತ್ತು. "ಈ ಪುಣ್ಯ ಭೂಮಿಯಲ್ಲಿ ಮತ್ತೊಮ್ಮೆ ಜನಿಸಿ ನಿಮ್ಮನ್ನು ಈ ನಾಡಿನಿಂದ ಹೊರಹಾಕುವುದೇ ನನ್ನ ಕೊನೆಯ ಆಸೆ' ಎಂದನು. ನಂತರ ಅವನ ಹತ್ತಿರ ಒಂದು ಕುರ್ಚಿಯನ್ನಿರಿಸಿ ಆಲದಮರಕ್ಕೆ ಆತನಿಗೆ ನೇಣನ್ನು ಹಾಕಲಾಯಿತು. ತಕ್ಷಣ ಆ ಹಗ್ಗವನ್ನು ಕುತ್ತಿಗೆಗೆ ಸರಿಪಡಿಸಿಕೊಂಡವನೇ ಆತ ಕುರ್ಚಿಯನ್ನು ಒದೆದು ಅಧಿಕಾರಿಗಳಿಗೆ ಹಗ್ಗ ಜಗ್ಗಲು ಹೇಳಿ ನಿಂತ. ಜನ ಇದರಿಂದ ಮೂಕವಿಸ್ಮಿತರಾದರು ಮತ್ತು ರಾಯಣ್ಣನಿಗೆ ತಮ್ಮ ಗೌರವವನ್ನು ಸಮರ್ಪಿಸಿದರು.

ಇತ್ತ ರಾಣಿ ಚನ್ನಮ್ಮ ಮತ್ತು ಜಾನಕಿಬಾಯಿಯವರ ಸಾವನ್ನು ಕಣ್ಣಾರೆ ಕಂಡ ವೀರಮ್ಮ ಇನ್ನೂ ಬೈಲಹೊಂಗಲ ಜೈಲಿನಲ್ಲಿಯೇ ಇದ್ದಳು. ಅವಳಿಗೂ ಸಹ ಕಿತ್ತೂರಿನ ಸ್ವಾತಂತ್ರ್ಯದ ಬಗ್ಗೆ ಆಸೆಯಿತ್ತು. ಕಿತ್ತೂರಿನಲ್ಲಿ ಬಂಡಾಯ ಏಳಬೇಕೆನ್ನುವ ಸರ್ದಾರರಿಗೆ ತನ್ನಲ್ಲಿದ್ದ ಹಣವನ್ನು ಆ ವೀರಮಾತೆ ಕಳಿಸಿದಳು. ಇದನ್ನು ಗಮನಿಸಿದ ಬ್ರಿಟೀಷರು ಆಕೆಯನ್ನು ಮೊದಲು ಕುಸಗಲ್ಲಿಗೆ, ಅನಂತರ ಖಾನದೇಶದ ಮಲೆಗಾಂವಿಗೆ ಕಳುಹಿಸಲು ಚಿಂತಿಸಿದರು. ಜನತೆ ಇದನ್ನು ವಿರೋಧಿಸಿದರು.

ವೀರಮ್ಮನ ಕೊನೆಯ ದಿನಗಳು ದುಃಖದಾಯಕವಾಗಿದ್ದವು. ಕಿತ್ತೂರಿನ ಈ ವೀರ ಮಹಿಳೆಯ ಅಸಹಾಯಕ ಸ್ಥಿತಿಯನ್ನು ಬ್ರಿಟೀಷರು ದುರುಪಯೋಗ ಪಡಿಸಿಕೊಂಡರು.

ಅವರು ಆಕೆಯನ್ನು ಕುಸಗಲ್ ಜೈಲಿಗೆ ಕಳಿಸಿದ್ದರಿಂದ ಆಕೆಯ ಆರೋಗ್ಯ ಮತ್ತಷ್ಟು ಕ್ಷೀಣಿಸಿತು. ಇದನ್ನರಿತ ಬ್ರಿಟೀಷರು ಆಕೆಯನ್ನು ಧಾರವಾಡದ ಅವಳ ಸಂಬಂಧಿಕರ ಮನೆಯಲ್ಲಿಟ್ಟರು. ಆಕೆಗೆ ಸ್ವಲ್ಪ ಗುಣವಾದ ನಂತರ ಆಕೆಯನ್ನು ಉಳಿವಿಯ ಚನ್ನಬಸವೇಶ್ವರ ದೇವಸ್ಥಾನಕ್ಕೆ ಕರೆಸಿ ಅಲ್ಲಿ ಆಕೆಗೆ ಹಿಂದಿನ ಧಾರವಾಡದ ಕಲೆಕ್ಟರ ಆಗಿದ್ದ "ಬಾಬರನು" ವಿಷ ಹಾಕಿದನೆನ್ನುತ್ತಾರೆ. ಇಂತಹ ಅವಳ ಶೋಚನೀಯ ಕೊನೆಯ ದಿನಗಳ ಬಗ್ಗೆ ಜಾನಪದ ಹಾಡುಗಳಲ್ಲಿ ವಿವರಗಳಿವೆ. ಸಾಯುವ ಪೂರ್ವದಲ್ಲಿ ಆಕೆ ಬಾಬಾ ಸಾಹೇಬನಿಗೆ ತನ್ನನ್ನು ಕಿತ್ತೂರ ನೋಡಲು ಒಂದು ಕ್ಷಣ ಬಿಡಲು ಕೇಳಿದ್ದು ವ್ಯರ್ಥವಾಯಿತು. ಆ ನಂತರ ಆ ದೇವಸ್ಥಾನದ ಮೇಲೆ ನಿಂತು ಕಿತ್ತೂರ ಕಡೆಗೆ ದೃಷ್ಟಿಹಾಯಿಸಿ ಕೆಳಗಿಳಿದು ಬರುವಾಗ ಆಕೆಗೆ ನೀಡಲಾಗಿದ್ದ ವಿಷದಿಂದ ಅವಳು ತೀರಿಕೊಂಡಳು.

ಕಿತ್ತೂರ ಸಂಸ್ಥಾನದ ಅವನತಿಯ ನಂತರವೂ ಕಿತ್ತೂರಿನ ಉತ್ತರಾಧಿಕಾರಿಯನ್ನು ಗದ್ದಿಗೆಗೆ ಏರಿಸಲು ಹಲವಾರು ಹೋರಾಟಗಳು ನಡೆದವು. ಅವುಗಳಲ್ಲಿ ೧೮೩೩ರ ಶಂಕರಣ್ಣನ ಪ್ರತಿಭಟನೆ ಅನಂತರ ೧೮೩೬ರಲ್ಲಾದ ಪೋರ್ಚುಗೀಸರ ಸಹಕಾರದಿಂದ ನಾಗಪ್ಪ ಗಜಪತಿ ಹಾಗೂ ರುದ್ರಪ್ಪನವರ ಬ್ರಿಟೀಷರ ಕಚೇರಿಗಳ ಮೇಲಿನ ದಾಳಿಗಳು ಪ್ರಮುಖವಾಗಿವೆ. ಕಿತ್ತೂರ ಸಂಸ್ಥಾನಕ್ಕೆ ದತ್ತಕ ಆಗಿದ್ದ ಸವಾಯಿ ಮಲ್ಲಸರ್ಜನೆಂದು ಹೆಸರಾದ ಶಿವಲಿಂಗಪ್ಪನು ೧೮೩೭ರಲ್ಲಿ ಬಂಡಾಯವೆದ್ದನಾದರೂ ಬ್ರಿಟೀಷರು ಆತನನ್ನು ಬಂಧಿಸಿ ಆತನನ್ನು ದೊಡ್ಡದಾದ ಕೋಟೆಯಲ್ಲಿಟ್ಟರು. ಅನಂತರ ೧೮೪೫ರಲ್ಲಿ ಈತ ಬೀಡಿ ಮತ್ತು ಸಂಪಗಾಂವದಲ್ಲಿ ಮತ್ತೊಮ್ಮೆ ದಂಗೆ ಎದ್ದನು. ಆಗ ಆತನ ಮಾವನೇ ಆದ ವಂಟಮೂರಿ ದೇಸಾಯಿಯು ಆತನ ಬಗ್ಗೆ ಬ್ರಿಟೀಷರಿಗೆ ಸುಳಿವು ನೀಡಿದ. ಇದರಿಂದಾಗಿ ಶಿವಲಿಂಗಪ್ಪನನ್ನು ಮತ್ತೆ ಕೆಲ ಕಾಲ ಸೆರೆಯಲ್ಲಿಡಲಾಯಿತು.

ಆರ್ಥಿಕವಾಗಿ ನಿಶ್ಯಕ್ತನಾದ ಶಿವಲಿಂಗಪ್ಪನು ವಂಟಮೂರಿ ದೇಸಾಯಿಯ ಆಶ್ರಯದಲ್ಲಿರಬೇಕಾಯಿತು. ಅನಂತರದ ದಶಕಗಳಲ್ಲಿ ಆತನ ಮಗನನ್ನು ಅಲ್ಲಿಯ ಜನತೆ ಕಿತ್ತೂರ ಸಂಸ್ಥಾನದ ನ್ಯಾಯಯುತ ಉತ್ತರಾಧಿಕಾರಿ ಎಂದು ಕರೆದರು. ೧೮೫೭ರಲ್ಲೊಮ್ಮೆ ಶಿವಲಿಂಗಪ್ಪನು ತನ್ನ ಕೊನೆಯ ಬಂಡಾಯ ಮಾಡಿದನು. ರಾಣಿ ಚನ್ನಮ್ಮ ಹೊತ್ತಿಸಿದ ಸ್ವಾತಂತ್ರ್ಯದ ಕಿಡಿ ಆಕೆ ಸತ್ತ ಮೂರು ದಶಕಗಳವರೆಗೆ ಹೊತ್ತಿ ಉರಿಯಿತಲ್ಲದೆ, ಅದು ದೇಶದ ಬೇರೆಡೆಗೂ ಹಬ್ಬಿತೆಂಬುದು ಗಮನಾರ್ಹ. ಅವಳ ಸ್ಫೂರ್ತಿಯ ಕಿಡಿಯಿಂದಾಗಿ ೧೮೫೭ರಲ್ಲಿ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಆರಂಭವಾಯಿತು. ಈ ಕಾರಣದಿಂದಾಗಿ ಕೆಲವು ಇತಿಹಾಸಕಾರರು ಅವಳನ್ನು ಭಾರತದ ಸ್ವಾಂತತ್ರ್ಯ ಚಳುವಳಿಯ ಮೊದಲನೆಯ ಕಿಡಿ (ನಕ್ಷತ್ರ) ಎಂದು ಕರೆದರು.

ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಗಳು ಅಲ್ಲಿಯ ಅರಸರು ತಮ್ಮ ಕಳೆದು ಹೋದ ರಾಜ್ಯಗಳನ್ನು ಮರಳಿ ಪಡೆಯುವ ಸಲುವಾಗಿ ಮಾಡಿದ ಹೋರಾಟಗಳೆನಿಸಿದವು. ಈ ಹಿನ್ನೆಲೆಯಲ್ಲಿ ಚಾಂದಬೀಬಿಯಂತವರು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿದರೆಹೊರತು, ದೇಶದ ಸ್ವಾತಂತ್ರ್ಯಕ್ಕಾಗಿ ಅಲ್ಲ. ಚನ್ನಮ್ಮ ಹೋರಾಡಿದ್ದು ತನ್ನ ಸಂಸ್ಥಾನದ ಸ್ವಾತಂತ್ರ್ಯಕ್ಕಾಗಿ. ಅವಳು ಕಿತ್ತೂರ ಸಂಸ್ಥಾನದ ಅಗ್ರಗಣ್ಯ ಒಡೆಯಳಾಗಿದ್ದಳು.

ಅವಳು ಧೀರಳೂ ಯುದ್ಧಕಲೆಯಲ್ಲಿ ಪಾರಂಗತಳೂ ಆಗಿದ್ದಳು. ತನ್ನ ಮನೆತನದ ವಿಷಯದಲ್ಲಾಗಲೀ, ವೈಯಕ್ತಿಕ ಜೀವನದಲ್ಲಾಗಲೀ ಆಕೆ ದೇವತಾ ಸ್ತ್ರೀಯಾಗಿ ಕಾಣುತ್ತಾಳೆ. ಅವಳು ತನ್ನ ಸವತಿಯ ಮಕ್ಕಳಾದ ಶಿವಲಿಂಗರುದ್ರ ಸರ್ಜ ಹಾಗೂ ವೀರ ರುದ್ರಸರ್ಜರನ್ನು ರಾಜರನ್ನಾಗಿ ಮಾಡ ಬಯಸಿದಳೇ ಹೊರತು ತನ್ನ ಮಗನಾದ ಶಿವಬಸವರಾಜನನ್ನು ಅಲ್ಲ. ದುರ್ದೈವವೆಂದರೆ ಈ ವೀರರುದ್ರಸರ್ಜ ಮತ್ತು ಶಿವಬಸವರಾಜರು ಅಕಾಲ ಮರಣವನ್ನಪ್ಪಿದರು. ಹೀಗಾಗಿ ಅನಂತರ ಪಟ್ಟಕ್ಕೆ ಬಂದವ ಶಿವಲಿಂಗರುದ್ರಸರ್ಜನೆಂದು ಹೇಳಬೇಕು.

ಇನ್ನು ಚನ್ನಮ್ಮನ ಸವತಿ ರುದ್ರಮ್ಮ ಓರ್ವ ಶಿವಭಕ್ತೆ. ಅವಳಿಗಾಗಿ ದೊರೆ ಸಂಗೊಳ್ಳಿಯಲ್ಲೊಂದು ಚಿಕ್ಕದಾದ, ಸುಂದರವಾದ ದೇವಸ್ಥಾನವನ್ನು ನಿರ್ಮಿಸಿದ್ದ. ಅವಳು ದಾಂಪತ್ಯ ಜೀವನದ ಆರಂಭದಲ್ಲಿ ಮಲ್ಲಸರ್ಜನಿಗೆ ಆಡಳಿತದಲ್ಲಿ ನೆರವಾಗಿದ್ದು, ಆತನಿಗೆ ಗೆಳತಿ, ತತ್ವಜ್ಞಾನಿ, ಮಾರ್ಗದರ್ಶಕಿಯೂ ಆಗಿದ್ದಳು. ಬಡಜನರ ಸಹಾಯಕಳು, ಆಡಳಿತದಲ್ಲಿ ಕಾರ್ಯದಕ್ಷಳೂ, ಸೇನಾದಳಕ್ಕೆ ಸ್ಫೂರ್ತಿದಾಯಕಳಾಗಿದ್ದಳು. ಇಂದು ನಮಗೆ ತಿಳಿದಿರುವಂತೆ ರಾಣಿ ಚನ್ನಮ್ಮ ಕಿತ್ತೂರ ಸಂಸ್ಥಾನದ ಶ್ರೇಷ್ಠರಾಣಿಯಾಗಿದ್ದಳು. ಅವಳಲ್ಲಿ ನಾಯಕತ್ವದ ದಕ್ಷ ಆಡಳಿತಗಾರ್ತಿಯ ಲಕ್ಷಣಗಳಿದ್ದವು. ಯುದ್ಧ ಕೌಶಲವನ್ನೂ ಪಡೆದಿದ್ದಳು. ಜನರ ಒಲುಮೆಯನ್ನು ಗಳಿಸಿಕೊಳ್ಳುವ ಗುಣಗಳಿದ್ದವು. ತನ್ನ ಕಾರ್ಯದಕ್ಷತೆ ಮೆರೆದ ರಾಣಿ ಸತ್ಯಸಂಧಳೂ, ಪತಿಭಕ್ತಿ ಪಾರಾಯಣಳೂ, ರಾಜಧರ್ಮಪಾಲಕಳೂ, ದಯಾಳುವೂ ಆಗಿದ್ದಳು. ಅವಳ ಈ ಗುಣಗಳು ಅವಳನ್ನು ದೇವಸಮಾನ ಸ್ಥಾನಕ್ಕೆ ಒಯ್ದವು. ಬ್ರಿಟೀಷರೊಂದಿಗೆ ಕಿತ್ತೂರ ಯುದ್ಧದಂತಹ ಸಂದಿಗ್ಧ ಸ್ಥಿತಿಯನ್ನು ತಪ್ಪಿಸಲು ಅವಳು ಮಾಡಿದ ಪ್ರಯತ್ನ ವ್ಯರ್ಥವಾದದ್ದು ದುರ್ದೈವ. ತನ್ನ ಸಂಸ್ಥಾನದ ಸ್ವಾಯತ್ತತೆಗೆ ಅವಳು ಮಾಡಿದ ಪ್ರಾಮಾಣಿಕ ಪ್ರಯತ್ನ ಬ್ರಿಟೀಷರಿಂದಾಗಿ ವ್ಯರ್ಥವಾಯಿತು. ಆದರೆ ಯುದ್ಧ ಅನಿವಾರ್ಯವಾದಾಗ ಆಕೆ ಅದಕ್ಕೂ ಸನ್ನದ್ಧಳಾದಳು. ಜನರನ್ನು ಹುರಿದುಂಬಿಸಿದ್ದರಿಂದ ಜನ ಯುದ್ಧ ಆರಂಭದಲ್ಲಿ ಆಕೆಗೆ ಜಯ ತಂದು ಕೊಟ್ಟರು. ಅಂಥ ವಿಜಯದ ಸನ್ನಿವೇಶದಲ್ಲಿಯೂ ರಾಣಿ ದಯಾಪರಳಾಗಿ ಬ್ರಿಟೀಷ ಕೈದಿಗಳನ್ನು ಪ್ರೀತಿಯಿಂದ ಕಂಡಳು.

ಒಂದು ಚಿಕ್ಕದಾದ ಕಿತ್ತೂರ ಸೈನ್ಯ ಬಹು ದೊಡ್ಡ ಹಾಗೂ ಶಕ್ತಿಶಾಲಿಯಾದ ಬ್ರಿಟೀಷರ ಸೈನ್ಯದೊಡನೆ ಕಾದಾಡಿದ್ದು ಶ್ಲಾಘನೀಯವೇ. ಕಿತ್ತೂರಿನ ವೀರ ಸೈನಿಕರು ದೇಶಾಭಿಮಾನದಿಂದ ಹೋರಾಡಿದರು. ಪುಣೆಯ ಬ್ರಿಟೀಷ ಅಧಿಕಾರಿ ಚಾಪ್ಲೆನನು ಹೇಳುವಂತೆ "ಕಿತ್ತೂರ ಜನತೆ ನಿಷ್ಠಾವಂತರೂ, ಧೀರರೂ, ವೀರಯೋಧರೂ ಆಗಿದ್ದರು'. ಚಾಪ್ಲೆನನಿಗೆ ಬರೆದ ಒಂದು ಪತ್ರದಲ್ಲಿ ಸ್ಟೆವನಸನ್ ಹೇಳುತ್ತಾನೆ "ಕಿತ್ತೂರ ಜನತೆ ಬೆಂಕಿಯ ಕಿಡಿಗಳಂತಿದ್ದಾರೆ". ಚಾಪ್ಲೇನನೇ ಹೇಳುವಂತೆ ಕಿತ್ತೂರ ಸೈನ್ಯ ಕೋಟೆಯನ್ನು ಬಹು ಧೈರ್ಯದಿಂದ ಕಾಪಾಡಿಕೊಳ್ಳಲು ಪ್ರಯತ್ನಿಸಿತು.

ಕಿತ್ತೂರ ಜನತೆ ತಮ್ಮ ಕಳೆದು ಹೋದ ಸಂಸ್ಥಾನವನ್ನು ವಶಪಡಿಸಿಕೊಳ್ಳಲು ಮಾಡಿದ ಬಂಡಾಯ ಅಂತಿಂತಹುದಲ್ಲ. ಅವರ ಪ್ರಯತ್ನ, ವೀರಾವೇಶ, ವೈಚಾರಿಕತೆ

ಹಾಗೂ ದಕ್ಷತೆಯಿಂದ ಕೂಡಿತ್ತು. ೧೮೩೧ರ ವೇಳೆಗೆ ಧಾರವಾಡದ ಜಿಲ್ಲಾಧಿಕಾರಿ ಬರೆದ ಒಂದು ಪತ್ರದಲ್ಲಿ ಕೆಳಗಿನ ವಿಷಯ ದಾಖಲಾಗಿದೆ.

"ನಾನು ಪ್ರತಿದಿನ ಹಲವಾರು ಮೂಲಗಳಿಂದ ಕಿತ್ತೂರ ಜನರು ತಮ್ಮದೇಯಾದ ಸಂಪನ್ಮೂಲಗಳ ಸಹಾಯದಿಂದ ತಮ್ಮ ಕಳೆದು ಹೋದ ಸಂಸ್ಥಾನವನ್ನು ವಶಪಡಿಸಿಕೊಳ್ಳುವ ಸಲುವಾಗಿ ಆಗಿಂದಾಗ್ಗೆ ನಮ್ಮ ಮೇಲೆ ದಾಳಿ, ಬಂಡಾಯ ಮಾಡುವ ಮೂಲಕ ಯಶಸ್ವಿಯಾಗಲು ಪ್ರಯತ್ನಿಸುತ್ತಿರುವುದನ್ನು ತಿಳಿದುಕೊಳ್ಳುತ್ತಿದೇನೆ".

ಕಿತ್ತೂರ ಜನತೆ ತಮ್ಮ ದೇಸಾಯಿ ಮನೆತನದ ಸ್ವರಾಜ್ಯದ ಕನಸನ್ನು ಕಾಣುತ್ತ ಅದನ್ನು ಅನುಭವಿಸುವುದಕ್ಕಾಗಿ ಕಾತರರಾಗಿದ್ದರು. ಈ ವಿಷಯವಾಗಿ ನಿಷ್ಬೆತ್ತನು ಒಂದು ಉದಾಹರಣೆ ಕೊಡುತ್ತಾನೆ. ಆತ ಒಮ್ಮೆ ಕಿತ್ತೂರ ಸಂಸ್ಥಾನದ ೩೪೯೪ ಜನ ಸೆಟ-ಸನದಿಗಳನ್ನು ತನ್ನ ಸರಕಾರಕ್ಕೆ ನಿಷ್ಠೆ ತೋರಿಸಲು ಕರೆದರೆ ಕೇವಲ ೪೯೯ ಜನ ಬಂದು ಅಗೌರವ ಸೂಚಿಸಿದರು. ಉಳಿದವರೆಲ್ಲ ತಮ್ಮ ಹಿಂದಿನ ಕಿತ್ತೂರ ಸಂಸ್ಥಾನಕ್ಕೆ ನಿಷ್ಠೆಯನ್ನು ತೋರಿಸಿದರು. ಆ ಘಟನೆ ಕಿತ್ತೂರ ಜನತೆ ತಮ್ಮ ಸಂಸ್ಥಾನದ ಬಗ್ಗೆ ಹೊಂದಿದ್ದ ಗೌರವ, ಅಭಿಮಾನ ಅಪಾರವೆಂಬುದು ಎತ್ತಿ ತೋರುತ್ತದೆ.

ಬ್ರಿಟೀಷರ ವಿರುದ್ಧ ಕಿತ್ತೂರ ಸಂಸ್ಥಾನ ಮಾಡಿದ ಯುದ್ಧ ಭಾರತದಲ್ಲಿಯೇ ಸ್ವಾತಂತ್ರ್ಯಕ್ಕಾಗಿ ಮಾಡಿದ ಮೊಟ್ಟ ಮೊದಲ ಯುದ್ಧವಾಗಿತ್ತು. ಅವರು ಅಂದು ಮಾಡಿದ ವೀರ ಯುದ್ಧವು ನಂತರದ ಸ್ವಾತಂತ್ರ್ಯ ಹೋರಾಟಕ್ಕೆ ನಾಂದಿಯಾಯಿತು. ನಂತರ ಜರುಗಿದ ಪ್ರಮುಖ ಘಟನೆಗಳಲ್ಲಿ ಕಿತ್ತೂರಿನ ದತ್ತು ಪುತ್ರನನ್ನು ಕರೆದುಕೊಂಡು ಚನ್ನಮ್ಮನ ವೀರ ಸೇನಾನಿ ರಾಯಣ್ಣನು ಬ್ರಿಟೀಷರ ವಿರುದ್ಧ ಮಾಡಿದ ಸೆಣಸಾಟವೂ ಅಷ್ಟೆ ಕುತೂಹಲಕಾರಿಯೂ, ಸ್ಫೂರ್ತಿದಾಯಕವೂ ಆಗಿತ್ತು ಎಂಬುದನ್ನು ಮರೆಯುವಂತಿಲ್ಲ.

ಕಿತ್ತೂರಿನ ದೊರೆಗಳು ತಮ್ಮ ಜನತೆಯನ್ನು ಸದಾ ಪ್ರೀತಿಸಿದವರು. ಆ ಸಂಸ್ಥಾನದಲ್ಲಿ ಬಡವರ ಮೇಲಿನ ಶ್ರೀಮಂತರ ಶೋಷಣೆಯನ್ನು ದೊರೆಗಳು ತಡೆದಿದ್ದರು. ಇದಕ್ಕೆ ಒಂದು ಉದಾಹರಣೆ ಎಂದರೆ ಈ ಸಂಸ್ಥಾನದ ಕೊನೆಯ ಶ್ರೇಷ್ಠ ದೊರೆ ಮಲ್ಲಸರ್ಜನು ಶ್ರೀಮಂತರು ಹೊಂದಿದ್ದ ಎಲ್ಲ ಇನಾಮುಗಳನ್ನು ರದ್ದುಗೊಳಿಸಿ ಆ ಭೂಮಿಗಳನ್ನು ತನ್ನ ಗುಮಾಸ್ತರಿಗೆ ಕೊಡಿಸಿಕೊಟ್ಟನು. ಇಂತಹ ಜನಪರ ಕೆಲಸಗಳು ಆತನಿಗೆ ಜನಪ್ರೀಯತೆಯನ್ನು ತಂದು ಕೊಟ್ಟವು.

ಏನೇ ಆದರೂ ಬ್ರಿಟೀಷರು ದಯಾಪರತೆಯಿಂದ ಜನತೆಯ ಭಾವನೆಗಳನ್ನು ಗೌರವಿಸಲಾಗದಿದ್ದರೂ, ಕಿತ್ತೂರಿನಂತಹ ಸಂಸ್ಥಾನಗಳನ್ನು ಅಂತ್ಯಗೊಳಿಸಬಾರದಿತ್ತು. ಕಿತ್ತೂರ ಜನತೆ ಬ್ರಿಟೀಷ ಅಧಿಪತ್ಯವನ್ನು ಗೌರವಿಸಿದ್ದರಿಂದ ಅವರಿಂದ ಅನುಕಂಪವನ್ನು ಅಪೇಕ್ಷಿಸಿದ್ದಾರೆ. ಆದರೆ ತೀವ್ರತರವಾದ ಅವಸರದಲ್ಲಿದ್ದ ಬ್ರಿಟೀಷರು ಹೊಂದಾಣಿಕೆಯ ಮನೋಭಾವವನ್ನು ತೊರೆದಿದ್ದಾರೆ. ಅವರು ಕಿತ್ತೂರದಂತಹ ಸಂಸ್ಥಾನಗಳನ್ನು ಕಬಳಿಸಲು ಅವರಿಂದ ಸಾಕಷ್ಟು ಗಲಭೆ, ಗಲಾಟೆಗಳನ್ನು ಸೃಷ್ಟಿಸಲು ತಯಾರಾಗಿದ್ದರು. ಇಂತಹವುದಕ್ಕೆ ಸೂಕ್ತ ಉದಾಹರಣೆ ಥ್ಯಾಕರೆ ಎನ್ನಬೇಕು. ಆತ ಎಷ್ಟು ಅವಸರದಿಂದ ನಿರ್ಣಯ

ಕೈಗೊಳ್ಳುತ್ತಿದ್ದನೆಂದರೆ, ರಾಣಿ ಚನ್ನಮ್ಮ ತನ್ನನ್ನು ಸಂದರ್ಶಿಸಲು ಒಪ್ಪದೇ ಹೋದ ಕೂಡಲೇ ಅವಳ ಮೇಲೆ ಆಕ್ರಮಣ ಎಸಗಿದ ಇದರಿಂದಾಗಿ ತನ್ನ ಜೀವನವನ್ನೇ ಕಳೆದುಕೊಂಡ. ನಂತರ ರಾಣಿಯು ಚಾಪ್ಲೆನ ಹಾಗೂ ಎಲ್ಫಿನ್ಸ್ಟನ್‌ನರಿಗೆ ಮಾಡಿದ ಮನವಿಗಳು ವ್ಯರ್ಥವಾದವು. ಥ್ಯಾಕರೆಯ ಸಾವಿನಿಂದಾಗಿ ತತ್ತರಿಸಿದ ಬ್ರಿಟೀಷ ಅಧಿಕಾರಿಗಳು ಕಿತ್ತೂರನ್ನು ವಶಪಡಿಸಿಕೊಳ್ಳುವಲ್ಲಿ ಅವಿರತವಾಗಿ ಶ್ರಮಿಸಬೇಕಾಯಿತು. ಅದರಂತೆ ಅವರು ಕಿತ್ತೂರ ಸಂಸ್ಥಾನವನ್ನು ವಶಪಡಿಸಿಕೊಂಡರು. ಮುಂದೆ ಆ ರಾಜ್ಯದ ವೈಭವೋಪೇತವಾದ ಅರಮನೆಯನ್ನು ಹಾಳುಗೆಡವಿದರು. ಅಲ್ಲಿಂದ ಅವರು ಸಂತೋಷದಿಂದ ರಾಜ್ಯವಾಳಲಿಲ್ಲ. ಮುಂದೆ ಚನ್ನಮ್ಮನ ವೀರ ಸೇನಾನಿ ಸಂಗೊಳ್ಳಿ ರಾಯಣ್ಣ ಅವರಿಗೆ ಕೆಲವು ಕಾಲ ದುಃಸ್ವಪ್ನದಂತೆ ಕಾಡಿದುದು ಎಲ್ಲರಿಗೂ ತಿಳಿದ ವಿಷಯ.

ಕಿತ್ತೂರ ಸಂಸ್ಥಾನದ ಕೊನೆಯ ಹಂತದಲ್ಲಿ ರಾಯಣ್ಣನು ಬಹು ಚಾಕ ಚಕ್ಯತೆಯಿಂದ ಹಾಗೂ ಶೌರ್ಯದಿಂದ ಹೋರಾಡಿದ. ಅವನ ಬಗ್ಗೆ ಮಾತನಾಡುವಾಗ ನಮ್ಮನ್ನು ದುಃಖಕ್ಕೀಡು ಮಾಡುವ ಅಂಶವೆಂದರೆ, ನಮ್ಮ ಜನರೇ ಎಸಗಿದ ಮೋಸ. ರಾಯಣ್ಣ ಸಂಗೊಳ್ಳಿಯ ಸಿಪಾಯಿಯಾಗಿದ್ದ, ಆತ ೧೮೨೪ರ ರಾಣಿ ಚನ್ನಮ್ಮ ಮತ್ತು ಬ್ರಿಟೀಷರ ಯುದ್ಧದಲ್ಲಿ ಭಾಗಿಯಾದವನು. ಆದರೆ ರಾಯಣ್ಣನ ಶೌರ್ಯ, ಸಾಹಸ, ಸ್ವಾಭಿಮಾನದ ಅರಿವಿಲ್ಲದ ಬ್ರಿಟೀಷರು ಆತನನ್ನು ಕ್ಷಮಿಸಿದರು. ನಂತರ ರಾಯಣ್ಣನು ಸಂಗೊಳ್ಳಿಯ ಕುಲಕರ್ಣಿಯಿಂದ ಅವಮರ್ಯಾದೆಗೆ ಗುರಿಯಾದ.

ಅಂದರೆ, ಕೆಲವರ ಧೂರ್ತತನದಿಂದ, ಇಲ್ಲವೆ ಬ್ರಿಟೀಷರ ಮಧ್ಯ ಪ್ರವೇಶಿಸುವಿಕೆ ಯಿಂದಲೂ ಅಲ್ಲಿಯ ಕುಲಕರ್ಣಿ ರಾಯಣ್ಣನಿಗೆ ಮೊದಲಿನ ಗೌರವ ಸ್ಥಾನ – ಮಾನ ನೀಡಲಿಲ್ಲ. ಎರಡನೆಯದಾಗಿ ರಾಯಣ್ಣ ಕುರುಬ ಸಮಾಜದವನಾಗಿದ್ದರಿಂದ ಅಲ್ಲಿಯ ಬಹುಮತೀಯರಾದ ಜನ ಆತನೊಡನೆ ಹೆಚ್ಚು ಸಹಕರಿಸಲಿಲ್ಲ. ಅಂದರೆ, ಅಲ್ಲಿ ಜಾತಿ ರಾಜಕೀಯವಿತ್ತು. ಮೂರನೆಯದಾಗಿ ರಾಯಣ್ಣನೇ ಹೇಳುವಂತೆ, ನಮ್ಮ ಜನಗಳೇ ಬ್ರಿಟೀಷರೊಂದಿಗೆ ಸಂಪರ್ಕ ಬೆಳೆಸಿಕೊಂಡಿದ್ದರು. ಇದರಿಂದಾಗಿ ಕುಪಿತನಾದ ರಾಯಣ್ಣನು ಸ್ಥಳೀಯ ಹವಾಲ್ದಾರರನ್ನು, ಅಂಚೆಯಾಳುಗಳನ್ನು ಕೆಲವು ಸಲ ಬ್ರಿಟೀಷ ಸೇವೆಯ ವಿರುದ್ಧ ಪ್ರಚೋದಿಸುತ್ತಿದ್ದ. ಆದರೆ ಆತ ಜನಪರವಾಗಿದ್ದು ಜನರಿಗೆ ಸಹಾಯ ಮಾಡುತ್ತಿದ್ದ. ಜನರಿಗೆ ತೊಂದರೆ ನೀಡಿದವರನ್ನು ಶಿಕ್ಷಿಸುತ್ತಿದ್ದ. ಬಡವರಿಗೆ ಆರ್ಥಿಕವಾಗಿ ಸಹಾಯ ಮಾಡಿದ್ದ. ಆತನಿಗೆ ಪ್ರಗತಿಪರ ಕಾಳಜಿ ಇತ್ತು. ಅತ್ಯಂತ ಸಣ್ಣ ವಯಸ್ಸಿನಲ್ಲಿಯೇ ರಾಯಣ್ಣ ನ್ಯಾಯಪರನಾಗಿದ್ದು, ಸ್ವಾತಂತ್ರ್ಯ ಪ್ರೇಮಿಯೂ ಆಗಿದ್ದನು. ತನ್ನ ಕೈಲಾದ ಮಟ್ಟಿಗೆ ಜನ ಸೇವೆಯನ್ನೂ ಕೈಗೊಂಡನು. ಕೊನೆಯಲ್ಲಿ ಕಿತ್ತೂರ ಜನತೆಗಾಗಿ ತನ್ನ ಪ್ರಾಣವನ್ನೇ ತ್ಯಜಿಸಿದ ಮಹಾನ್ ಯೋಧ ಸಂಗೊಳ್ಳಿರಾಯಣ್ಣ.

* * *

ಆಯ್ದ ಗ್ರಂಥ ಸೂಚಿ

೧. ಆಚಾರ್ಯ, ಜಿ.ಎಸ್."ಫ್ರೀಡಂ ಫೈಟ್" ಮುಂಬೈ ಪದ್ಮಾ ಮುದ್ರಕರು, ೧೯೭೫.

೨. ಆಗ್ನೆಯ ವಿಜಯ, "ದಿ ಎಲ್ಕೈಟ್‌ವುಮನೆ ಇನ ಇಂಡಿಯನ ಪೊಲಿಟಿಕ್ಸ", ವಿಕಾಸ ಮುದ್ರಣ ಸಂಸ್ಥೆ, ನವದೆಹಲಿ, ೧೯೭೯.

೩. ಅಹ್ಲುವಾಲಿಯು, ಎಂ.ಎಂ., "ಫ್ರಿಡಂ ಸ್ಟ್ರಗಲ್ ಇನ್ ಇಂಡಿಯಾ" ೧೮೫೮-೧೯೦೯ ರಣಜಿತ ಮುದ್ರಕರು, ನವದೆಹಲಿ, ೧೯೬೫.

೪. "ಎ ಹಿಸ್ಟರಿ ಆಫ್ ಫ್ರೀಡಂ ಮೂವಮೆಂಟ್ ಇನ್ ಇಂಡಿಯಾ" ೧೮೧೬-೧೯೦೯, (ಮುಂಬೈ ಸರಕಾರ ದಾಖಲೆಗಳು) ನಂ.೧ ಮುಂಬೈ, ಸರಕಾರದ ಕೇಂದ್ರಿಯ ಮುದ್ರಣ, ಮುಂಬೈ, ೧೯೫೭.

೫. ಎನ್‌ಸೈಕ್ಲೋಪೆಡಿಯಾ ಆಫ್ ಎಸಿಯನ್ ಹಿಸ್ಟರಿ, ನಂ.೨, ಚಾರ್ಲ್‌ಸ್ ಸ್ಕ್ರಿಬ್‌ನರ್ಸ್‌ಸನ್ಸ್, ನ್ಯೂಯಾರ್ಕ ಕೊಲಿಯರ ಮ್ಯಾಕಮಿಲನ ಮುದ್ರಕರು, ಲಂಡನ್, ೧೯೮೮.

೬. ಅಲ್ಟೆಕರ್, ಎ.ಎಸ್."ಸ್ಟೇಟಟ್ ಆ್ಯಂಡ್ ಗವರ್ನಮೆಂಟ ಇನ್ ಎನ್ಸಿಯಂಟ್ ಇಂಡಿಯಾ" ನಾಲ್ಕನೆಯ ಮುದ್ರಣ ದೆಹಲಿ, ೧೯೬೨.

೭. ಅಪ್ಪಾದೊರೈ. ಎ. "ಎಕಾನೊಮಿಕ್ ಕಂಡಿಶನ್ ಇನ್ ಸದರ್ನ ಇಂಡಿಯಾ", ೧೦೦೦/೧೫೦೦ ಕ್ರಿ.ಶ.ನಂ.೧,೨ ಮದ್ರಾಸ, ೧೯೩೬.

೮. ಆಶಾರಾಣಿ, "ಗಾಂಧಿಯನ್ ನಾನ್ ವಯಲೆನ್ಸ್ ಆ್ಯಂಡ್ ಇಂಡಿಯಾನ ಫ್ರೀಡಂ ಸ್ಟ್ರಗಲ್" ಶ್ರೀ ಮುದ್ರಣ ಸಂಸ್ಥೆ, ನವದೆಹಲಿ, ೧೯೮೧.

೯. ಅಜಾದ್, ಮೌಲಾನಾ ಅಬ್ದುಲ್ ಕಲಾಂ, "ಇಂಡಿಯಾ ವಿನ್ಸ್ ಫ್ರಿಡಂ" ಓರಿಯಂಟ್ ಲಂಗಮನ್, ೧೯೫೯.

೧೦. ಬಾಡನ್ಪೊವಲ್. ಬಿ.ಪಿ."ದ ಇಂಡಿಯಾನ್ ವಿಲೇಜ ಕಮುನಿಟಿ", ಲಂಡನ್, ೧೯೮೬

೧೧. ಬಕ್ಷಿ, ಎಸ್. ಆರ್, "ಕಾಂಗ್ರೆಸ್ ಆ್ಯಂಡ್ ಕ್ವಿಟ್ ಇಂಡಿಯಾ ಮೂಮೆಂಟ್" ಕ್ರೈಟೆರಿಯನ್ ಮುದ್ರಣಾಲಯ, ಧಾರವಾಡ, ೧೯೮೬.

೧೨. ಬಸವರಾಜ್, ಕೆ.ಆರ್."ಹಿಸ್ಟರಿ ಆ್ಯಂಡ್ ಕಲ್ಚರ ಆಫ್ ಕರ್ನಾಟಕ" ಚಾಲುಕ್ಯ ಮುದ್ರಣಾಲಯ, ಧಾರವಾಡ, ೧೯೮೫.

೧೩. ಬೇವರಿಜಿ ಹನ್ರಿ "ಏ ಕಂಪ್ಯಾರೇಟಿವ ಹಿಸ್ಟರಿ ಆಫ್ ಇಂಡಿಯಾ (ಸಿವಿಲ್-ಮಿಲಿಟರಿ ಮತ್ತು ಸೊಸಿಯಲ್) ನಂ.೩, ಲಂಡನ್, ೧೮೭೨.

೧೪. ಭಟ್ಟ ಎಚ್.ಸಿ."ದಿ ಎನಸೈಕ್ಲೋಪಿಡಿಯಾಕ್ ಡಿಸ್ಟ್ರಿಕ್ಟ ಗೆಜೆಟಿಯರ ಆಫ್ ಇಂಡಿಯಾ" ಸದರ್ನ ಜೋನ್ ಕರ್ನಾಟಕ ಬೆಳಗಾವಿ ಜ್ಞಾನ ಮುದ್ರಣಾಲಯ, ನವದೆಹಲಿ, ೧೯೯೭.

೧೫. ಬಿಮಲ್ ಪ್ರಸಾದ ಸಂ.೧, "ಎ ರೆವ್ಪುಲುಶನರಿ ಕ್ರೈಸ್ಟ, ಸಿಲೆಕ್ಟೆಡ್ ರೈಟಿಂಗ್ಸ್ ಆಫ್ ಜಯಪ್ರಕಾಶ ನಾರಾಯಣ", ಆಕ್ಸಫರ್ಡ ಮುದ್ರಣಾಲಯ, ನವದೆಹಲಿ, ೧೯೮೦.

೧೬. ಬಿಪಿನ್ ಚಂದ್ರ, ಅಮಲಾ ತ್ರಿಪಾಠಿ ಆ್ಯಂಡ್ ಬರುನ ಡೆ, "ಫ್ರೀಡಂ ಸ್ಟ್ರಗಲ್" ನ್ಯಾಷನಲ್ ಬುಕ್ ಟ್ರಸ್ಟ್, ಹೊಸದೆಹಲಿ, ೧೯೭೨.

೧೭. ಭೋಸ್ ಸುಭಾಶಚಂದ್ರ "ದಿ ಇಂಡಿಯನ್ ಸ್ಟ್ರಗಲ್ ೧೯೨೦-೧೯೪೨, ಎಸಿಯಾ ಪಬ್ಲಿಸಿಂಗ್ ಹೌಸ್, ನವದೆಹಲಿ, ೧೯೬೭.

೧೮. ಚೈತನ್ಯ ಕೃಷ್ಣ "ಹೌ ಇಂಡಿಯಾ ವನ್ ಹರ್ ಫ್ರೀಡಂ" ನ್ಯಾಶನಲ್ ಬುಕ್ ಟ್ರಸ್ಟ, ನವದೆಹಲಿ, ೧೯೭೩.

೧೯. ಚಿಂತಾಮಣಿ ಸಿ. ವಾಯ್. "ಇಂಡಿಯನ್ ಪೊಲಿಟಿಕ್ಸ್ ಸಿನ್ಸ ಮುಟಿನಿ" ಅಲಹಾಬಾದ್, ೧೯೪೭.

೨೦. ಚೌಧರಿ ಶಶಿ ಭೂಷಣ, "ಸಿವಿಲ್ ಡಿಸ್ಟರ್ಬನ್ಸ್ ಸ ಡ್ಯೂರಿಂಗ್ ದಿ ಬ್ರಿಟೀಷ ರೂಲ್ ಇನ್ ಇಂಡಿಯಾ" (೧೭೬೫-೧೮೫೭) ದ ವರ್ಲ್ಡ ಪ್ರೆಸ್ ಲಿಮಿಟೆಡ್ ಕೊಲ್ಕತ್ತಾ ೧೯೫೫.

೨೧. ಚೌಧುರಿ ಸುಖಬೀರ "ಇಂಡಿಯನ್ ಪೀಪಲ್ ಫೈಟ್ ಫಾರ ನ್ಯಾಶನಲ್ ಲಿಬರೇಶನ್" (೧೯೨೦-೨೨), ಶ್ರೀಜಾತಿ ಪ್ರಕಾಶನ, ನವದೆಹಲಿ, ೧೯೭೨.

೨೨. ದೇಸಾಯಿ ಪಿ.ಬಿ."ಎ ಹಿಸ್ಟರಿ ಆಫ್ ಕರ್ನಾಟಕ" ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೧.

೨೩. ದೀಕ್ಷಿತ್ ಜಿ. ಎಸ್. "ಲೋಕ್ಲ ಸೆಲ್ಫ್ ಗವರ್ನಮೆಂಟ ಇನ್ ಮೆಡಿವೆಲ್ ಕರ್ನಾಟಕ", ಧಾರವಾಡ, ೧೯೬೪.

೨೪. ದಿವಾಕರ ಆರ್.ಆರ್. "ಕರ್ನಾಟಕ ಥ್ರೂ ದಿ ಎಜೆಸ್", ಮೈಸೂರ ಸಕರಕಾರ, ಬೆಂಗಳೂರು, ೧೯೬೬.

೨೫. ಡೊನ್ನೆಲೆ ಜಿ.ಜೆ. "ಇಂಡಿಯನ್ ಫ್ರೀಡಂ ಮೂವ್ಮೆಂಟ ದಿ ಕಾಜಸ್ ಆಫ್ ಡಿಸಕಾಂಟೆಂಟ್"ತುಲಸಿ ಪಬ್ಲಿಸಿಂಗ್ ಹೌಸ್, ನವದೆಹಲಿ, ೧೯೭೯.

೨೬. ಎಲಿಯಟ್ ಆ್ಯಂಡ್ ಡವಸನ್ ಹಿಸ್ಟರಿ ಆಫ್ ಇಂಡಿಯಾ, "ಎ ಟೋಲ್ಡ ಬೈ ಇಟ್ಸ್ ಒನ್ ಹಿಸ್ಟೋರಿಯನ್ಸ್" ಸ.೧, ಲಂಡನ್, ೧೮೬೭.

೨೭. ಫರ್ನಾಂಡಿಸ್ ಪ್ರಿಕ್ಸ್, "ಸ್ಟಾರ್ಮಓವರ್ ಶೇರಿಂಗ್ ...... ದಿ ಇನ್‌ಕ್ರೆಡಿಬಲ್ ಸ್ಟೋರಿ ಆಫ್ ಹೈದರ ಆ್ಯಡಂ ಟಿಪ್ಪು ಸುಲ್ತಾನ" ದಿನಕರ ಸಕ್ರಿಕರ್ ಘಾರ ಥ್ಯಾಕರೆ ಆ್ಯಂಡ ಕಂ. ಲಿಮಿಟೆಡ್, ಮುಂಬೈ, ೧೮೨೦.

೨೮. "ಗೆಜೆಟಿಯರ್ ಆಫ್ ಮುಂಬೈ ಪ್ರಸಿಡೆನ್ಸಿ" ನಂಬರ ೨೧, ಡಿಸ್ಟ್ರಿಕ್ಟ್, ಸರಕಾರದ ಕೇಂದ್ರೀಯ ಮುದ್ರಣಾಲಯ, ಮುಂಬೈ, ೧೮೮೪.

೨೯. "ಗೆಜೆಟಿಯರ್ ಆಫ್ ಮುಂಬೈ ಪ್ರಸಿಡೆನ್ಸಿ" ನಂಬರ ೨೧, ಡಿಸ್ಟ್ರಿಕ್ಟ್, ಸರಕಾರದ ಕೇಂದ್ರೀಯ ಮುದ್ರಣಾಲಯ, ಮುಂಬೈ, ೧೮೯೫.

೩೦. ಗ್ಲೆಗ್ ಜಿ. ಆರ್. "ದ ಲೈಫ್ ಮೇಜರ್ ಜನರಲ್ ಸರ್ ಥಾಮಸ್ ಮನ್ರೊ" ಓರಿಯಂಡ್ ಕೆ.ಸಿ.ಬಿ.(ಸಂ.೧) ಲಂಡನ್ ಹೆನ್ರಿ ಕೊಬರ್ನ್ ಮತ್ತ ರಿಚರ್ಡ ಬೆನಿಲಿನ್ ಎಸ್, ನ್ಯೂ ಬಿಲ್ಲಿಂಗ್ಟನ್ ಸ್ಟ್ರೀಟ್, ೧೮೩೦.

೩೧. ಗುಹಾ ಎ.ಸಿ."ಇಂಡಿಯಾಸ್ ಸ್ಟ್ರಗಲ್ ಕ್ವಾಟರ್ ಆಫ್ ಎ ಸೆಂಚುರಿ", (೧೯೨೧–೧೯೪೬) ಭಾಗ–೨ ಮುದ್ರಣಾ ವಿಭಾಗ,ಭಾರತ ಸರಕಾರ,೧೯೮೨.

೩೨. ಗುಪ್ತಾ ಡಿ.ಸಿ. "ಇಂಡಿಯನ್ ನ್ಯಾಶನಲ್ ಮೂವಮೆಂಟ್, ದೆಹಲಿ, ವಿಕಾಸ ಪಬ್ಲಿಕೇಶನ್.

೩೩. ಗುರುದತ್ತ ಇಂಡಿಯಾ ಇನ್ ದ ಶೆಡ್ ಆಫ್ ಗಾಂಧಿ ಆ್ಯಂಡ್ ನೆಹರು, ಭಾರತಿ ಸಾಹಿತ್ಯ ಸದನ, ಹೊಸ ದೆಹಲಿ, ೧೯೭೫.

೩೪. ಹಾಲಪ್ಪ ಜಿ. ಎಸ್. ಸ್ಟಡೀಸ್ ಇನ್ ಸ್ಟೇಟ್ ಆಡ್ಮಿನಿಸ್ಟ್ರೇಶನ್, ಏವಲೂಶನ್ ಇನ್ ಎಡ್ಮಿನಿಸ್ಟ್ರೇಶನ್ ಇನ್ ಕರ್ನಾಟಕ", ಕರ್ನಾಟಕ ವಿಶ್ವವಿದ್ಯಾಲಯದ ಮುದ್ರಣಾಲಯ, ಧಾರವಾಡ, ೧೯೭೦.

೩೫. ಹಾಲಪ್ಪ ಜಿ. ಎಸ್., ಆ್ಯಂಡ್ ಎಂ.ವಿ.ಕೃಷ್ಣರಾವ "ಹಿಸ್ಟರಿ ಆಫ್ ಫ್ರೀಡಂ ಮೂವಮೆಂಟ್ ಇನ್ ಕರ್ನಾಟಕ", ಮೈಸೂರ ಸರಕಾರ, ಬೆಂಗಳೂರು, ೧೯೬೨.

೩೬. ಹ್ಯಾಪ್‌ಸನ್ ಎಡ್ವರ್ಡ, "ಇಂಡಿಯನ್ ಫ್ರೀಡಂ ಮೂವಮೆಂಟ್", ಆಕಾಶ ಮುದ್ರಣಾಲಯ, ದೆಹಲಿ, ೧೯೬೮.

೩೭. ಅಯ್ಯಂಗಾರ ಕೃಷ್ಣಸ್ವಾಮಿ, ಎಚ್.ಎಸ್."ಅವಲೊಕನ್ ಎ ಕಂಪೆಂಡಿಯಂ ಆಫ್ ಕರ್ನಾಟಕ" ಹೆರಿಟೇಜ ಇನ್ ವರ್ಲ್ಡ ಕನ್ನಡ ಕಾನ್ಸರೆನ್ಸ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೩೮. ಜೈನ ಡಿ. "ಇಂಡಿಯನ್ ವುಮೆನ್" ಮುದ್ರಣಾ ವಿಭಾಗ ಮಾಹಿತಿ ಮತ್ತು ಪ್ರಚಾರ ಖಾತೆ, ಭಾರತ ಸರಕಾರ, ೧೯೭೬.

೩೯. ಜಾತರ ಅಶೋಕ "ಚನ್ನಮ್ಮ ಆಫ್ ಕಿತ್ತೂರ" ಲಾಯನ್ಸ್ ಕ್ಲಬ್, ಧಾರವಾಡ, ೧೯೭೫.

೪೦. ಜೂಹಾರಿ ಜೆ.ಸಿ.(ಸಂ) "ಇಂಡಿಯನ್ ಫ್ರೀಡಂ ಮೂವಮೆಂಟ್ ಆ್ಯಂಡ್ ಥಾಟ್ ಪೊಲಿಟಿಕ್ಸಂ ಆಫ್ ಪ್ರೊಚೆಂಜ್ ವರ್ಸಸ್ ನ್ಯೂಚೇಂಜ್" (೧೯೧೯-೧೯೨೯) ಸ್ಟರ್ಲಿಂಗ ಮುದ್ರಣಾಲಯ, ನವದೆಹಲಿ, ೧೯೮೩.

೪೧. ಜೋಹಾರಿ ಜೆ.ಸಿ.(ಸಂ) "ಇಂಡಿಯನ್ ಫ್ರೀಡಂ ಮೂವಮೆಂಟ ಆ್ಯಂಡ್ ಥಾಟ್ ನೆಹರು ಆ್ಯಂಡ ದಿ ಪೊಲಿಟಿಕ್ಸ ಆಫ್ ರೈಟ್ ವರ್ಸಸ್ ಲೆಫ್ಟ್ (೧೯೩೦-೪೭) ಸ್ಟರ್ಲಿಂಗ್ ಮುದ್ರಣಾಲಯ, ನವದೆಹಲಿ, ೧೯೮೩.

೪೨. ಕಾಮತ್ ಸೂರ್ಯನಾಥ "ಕರ್ನಾಟಕ ಸ್ಟೇಟ್ ಗೆಜೆಟಿಯರ್ ಬೆಳಗಾಂ ಡಿಸ್ಟ್ರಿಕ್ಸ್" ಸರಕಾರಿ ಮುದ್ರಣಾಲಯ, ಬೆಂಗಳೂರು, ೧೯೮೨.

೪೩. ಕಟ್ಟಿ ವೆಂಕಟ್ ರಂಗೊ "ಗೆಜಿಟಿಯರ್ ಆಫ್ ಬಾಂಬೆ ಪ್ರೆಸಿಡಂನ್ಸಿ ಇನ್‌ಕ್ಲೂಡಿಂಗ್, ಧಾರವಾಡ" ಬೆಂಗಾಂ, ಬಿಜಾಪುರ ಉತ್ತರ ಕನ್ನಡ, ಏಸಿಯಾ ಎಜುಕೇಶನಲ್ ಸರ್ವೀಸ್, ನವದೆಹಲಿ, ೧೮೯೩.

೪೪. ಕರ್ಮರ್ಕರ ಡಿ.ಪಿ. ನ್ಯಾಶನಾಲಿಸಂ ಇನ್ ಕರ್ನಾಟಕ "ಕರ್ನಾಟಕ ದರ್ಶನ್, ಮುಂಬೈ", ೧೯೫೫.

೪೫. ಖರೆ ವಿ. ವಿ. (ಸಂ.) "ಹಿಸ್ಟೋರಿಕಲ್ ಮರಾಠಾ ರೆಕಾರ್ಡ್ಸ" ಸಂ.೧೫, ಭಾರತ ಇತಿಹಾಸ ಮಂಡಲ್, ಪೂಣೆ, ೧೯೬೫.

೪೬. ಲುನಿಯ್ ಬಿ. ಎಸ್. "ಎವುಲ್‌ಶನ್ ಆಫ್ ಇಂಡಿಯನ್ ಕಲ್ಚರ್" ಎಜುಕೇಶನಲ್ ಮುದ್ರಣಾಲಯ, ಆಗ್ರಾ, ೧೯೭೫.

೪೭. "ಮಹಾರಾಷ್ಟ್ರ ಸ್ಟೇಟ್ ಗೆಜೆಟಿಯರ್" ಕೊಲ್ಲಾಪೂರ ಡಿಸ್ಟ್ರಿಕ್ಟ್, ಸಂ.೨೪, ಮುಂಬೈ ಪ್ರೆಸಿಡೆನ್ಸಿ, ೧೯೪೫.

೪೮. ಮಜುಮದಾರ ಆರ್.ಸಿ."ಹಿಸ್ಟರಿ ಆ್ಯಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್, ಸಂ.೫, ದ ಸ್ಟ್ರಗಲ್ ಫಾರ್ ಎಂಪೈರ್, ಮುಂಬೈ, ೧೯೫೭.

೪೯. ಮಜುಮದಾರ ಆರ್.ಸಿ. "ಹಿಸ್ಟರಿ ಆಫ್ ಫ್ರೀಡಂ ಮೂವಮೆಂಟ್ ಇನ್ ಇಂಡಿಯಾ ಸಂ.ಕಲಕತ್ತಾ, ೧೯೬೩.

೫೦. ಮುಜುಮದಾರ ಆರ್.ಸಿ. "ದ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಆ್ಯಂಡ ದಿ ಗ್ರೊಥ್ ಆಫ್ ಇಂಡಿಯನ್ ನ್ಯಾಶನಲಿಸಂ, ದಯಾ ಪಬ್ಲಿಶಿಂಗ್ ಹೌಸ್, ನವದೆಹಲಿ, ೧೯೮೫.

೫೧. ಮಜುಮದಾರ್. ಆ.ಸಿ.ತ್ರೀ ಫೇಸಸ್, ಆಫ್ ಇಂಡಿಯನ್ ಸ್ಟ್ರಗಲ್ ಫಾರ್ ಫ್ರೀಡಂ" ಭಾರತೀಯ ವಿದ್ಯಾ ಭವನ, ಮುಂಬೈ, ೧೯೬೧.

೫೨. ಮುಲ್ಲಾಂಪಕರೆ ಮನೋಹರ, ಛತ್ರಪತೀಸ್ ಆಫ್ ಕೊಲಾಪೂರ, ಪಾಪ್ಯೂಲರ ಪ್ರಕಾಶನ, ಮುಂಬೈ, ೧೯೭೭.

೫೩. ಮಾಲವಿಯಾ, ಓ.ಪಿ. "ದರೋಲ್ ಆಫ್ ವುಮೆನ್ ಇನ್ ಇಂಡಿಯಾ ಸೊಸೊಯಲ್ ಆ್ಯಂಗ್ ಪೊಲಿಟಿಕಲ್ ಲೈಫ್, ಮಾಲವಿಯಾ ಪ್ರಕಾಶನ, ಲಕ್ನೊ, ೧೯೬೧.

೫೪. ಮಲ್ಲೇಶನ್ "ಇಂಡಿಯನ್ ಮುಟನಿ ಆಫ್ ೧೮೫೭–೫೮, ಸಂ.೩, ಲಾಂಗಮನ್ ಗ್ರೀನ್ ಆ್ಯಂಡ ಕಂ., ಮುಂಬೈ, ೧೯೦೬.

೫೫. ಮಾಥರ ವಾಯ್ ಬಿ. "ಕ್ವಿಟ್ ಇಂಡಿಯಾ ಮೂವಮೆಮಟ್ ಪ್ರಗತಿ ಮುದ್ರಣಾಲಯ, ನವದೆಹಲಿ, ೧೯೭೯.

೫೬. ಮಸನಿ ಮೀವನಾ "೧೯೦೫ ಪೊಲಿಟಿಕಲ್ ಮೆಮರೀಸ್ ಅಪ್‌ಟು ಇಂಡಿಪೆಂಡೆನ್ಸ ಅರ್ನಾಲ್ಡ್ ಹೈನಮನ್, ನವದೆಹಲಿ, ೧೯೭೭.

೫೭. ಮಾರ್ಯ್ರ ಸಾಹೇಬ ದೀನ ವುಮೆನ ಇನ್ ಇಂಡಿಯಾ ಅಲಾಹಾಬಾದ, ಚಗೆ ಮುದ್ರಣಾಲಯ, ೧೯೭೫.

೫೮. ಮಿನರಾಲಿ ಯುಸೂಫ್ (ಸಂ) "ಡುವರ್ಡ್ಸ ಸ್ಟ್ರಗಲ್ ಸೆಟ್ಲಡ್ ಮೆನಿಫಸ್ಟೋಸ್ ಸ್ಪೀಚಿಸ್ ಆ್ಯಂಡ್ ರೈಟಿಂಗ್ಸ್", ಪದ್ಮ ಮುದ್ರಣಾಲಯ, ಮುಂಬೈ, ೧೯೪೬.

೫೯. ಮೇನೆನ್ ಎಲ್.ಎನ್.ವುಮನ್ ಆ್ಯಂಗ ದ ನ್ಯಾಶನಲ್ ಮಾನ್ಯುಮೆಂಟ್ ವಾರ್ತಾ ಇಲಾಖೆ ವಿಭಾಗದ ಮುದ್ರಣ, ಭಾರತ ಸರಕಾರ, ೧೯೭೯.

೬೦. ಮೊಯಿಂಜಾತಿ ಎ. "ದಿ ವೇವಲೆಟ್ ಟ್ರು ಫ್ರೀಡಂ" ಓರಯಂಟಾಲಿಯನ್, ನವದೆಹಲಿ, ೧೯೭೩.

೬೧. ಮುಡಬಿದರಿ, ಅನಿಲ "ರಾಣಿ ಚನ್ನಮ್ಮ ವ್ಯಾಲಿಯಂಟ್ ಕ್ವೀನ್ ಆಫ್ ಕಿತ್ತೂರ" ದ ಮಿರರ್, ೧೯೫೭.

೬೨. ಮುದ್ದಾಚಾರಿ ಬಿ."ರೆಸಿಸ್ಟೆನ್ಸ್ ಆಫ್ ಮೈಸೂರು ಟು ದ ಮರಾಠಾ ಎಕ್ಸ್‌ಪಾನ್ಸ್‌ಶನ್ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೦.

೬೩. ಮುಗಳಿ ಆರ್.ಎಸ್."ದ ಹೆರಟೇಜ ಆಫ್ ಕರ್ನಾಟಕ,ಬೆಂಗಳೂರು,೧೯೪೬.

೬೪. ಮುತ್ತಣ್ಣ ಆಯ್. ಎಂ. "ಹಿಸ್ಟರಿ ಆಫ್ ಮಾಡರ್ನ ಕರ್ನಾಟಕ" ಸ್ಟರ್ಲಿಂಗ್ ಮುದ್ರಣಾಲಯ, ನವದೆಹಲಿ, ೧೯೮೦.

೬೫. ನೀಲಕಂಠ ಶಾಸ್ತ್ರಿ ಕೆ.ಎ. "ಕರ್ನಾಟಕ ಸ್ಟಡೀಜ ಇನ್ ಚೋಳ ಹಿಸ್ಟರಿ ಆ್ಯಂಡ್ ಅಡ್ಮಿನಿ ಸ್ಟ್ರೇಶನ್", ಮದ್ರಾಸ, ೧೯೩೨.

೬೬. ನೀಲಕಂಠ ಶಾಸ್ತ್ರಿ ಕೆ.ಎ."ಹಿಸ್ಟರಿ ಆಫ್ ಸೌಥ ಇಂಡಿಯಾ" ಎರಡನೆಯ ಮುದ್ರಣ, ೧೯೫೮.

೬೭. ಪಂಚಮುಖಿ ಆರ್. ಎಸ್. "ಹಿಸ್ಟರಿ ಆಫ್ ಕರ್ನಾಟಕ", ಕರ್ನಾಟಕದ ದರ್ಶನ್ ಆರ್. ಎಸ್. ಹುಕ್ಕೇರಿಕರ, ಮುಂಬೈ, ೧೯೮೫.

೬೮. ಪಾಣಿಗ್ರಹಿ ಬಿ.ಎಸ್. "ಕ್ವಿಟ ಇಂಡಿಯಾ ಆ್ಯಂಡ ದಿ ಸ್ಟ್ರಗಲ್ ಫಾರ್ ಫ್ರೀಡಂ" ವಿಕಾಸ ಮುದ್ರಣಾಲಯ, ನವದೆಹಲಿ, ೧೯೮೨.

೬೯. ಪಂಡಿತ ಎಚ್. ಎನ್. "ಫ್ರಾಗ್‌ಮೆಂಟ್ಸ ಆಫ್ ಹಿಸ್ಟರಿ" ಇಂಡಿಯಾಸ್ ಫ್ರೀಡಂ ಮೂವಮೆಂಟ್ ಆ್ಯಂಡ್ ಆಫ್ಟರ್" ಸ್ಟರ್ಲಿಂಗ್ ಮುದ್ರಣಾಲಯ, ಹೊಸ ದೆಹಲಿ, ೧೯೮೨.

೭೦. ಪಾಟೀಲ ವ್ಹಿ.ಟಿ. "ಗಾಂಧಿ ನೆಹರು ಆ್ಯಂಡ ದಿ ಕ್ವಿಟ್ ಇಂಡಿಯಾ ಮೂವ್‌ಮೆಂಟ್" ಬಿ. ಆರ್. ಮುದ್ರಣಾಲಯ, ನವದೆಹಲಿ, ೧೯೮೪.

೭೧. ಪಾಟೀಲ್ ವ್ಹಿ.ಟಿ. "ನೆಹರು ಆ್ಯಂಡದ ಫ್ರೀಡಂ ಮೂವಮೆಂಟ್" ಸ್ಟರ್ಲಿಂಗ್ ಮುದ್ರಣಾಲಯ, ಹೊಸ ದೆಹಲಿ, ೧೯೭೭.

೭೨. ಪ್ರಧಾನ ಜಿ.ಪಿ., ಇಂಡಿಯಾಸ್ ಫ್ರೀಡಂ ಸ್ಟ್ರಗಲ್ "ಆ್ಯನ್ ಎಪಿಕ್ ಆಫ್ ಸ್ಯಾಕ್ರಿಫೈಸ್ ಆ್ಯಂಡ್ ಸಫರಿಂಗ್" ಪಾಪ್ಯುಲರ್ ಪ್ರಕಾಶನ್, ಮುಂಬೈ, ೧೯೯೦.

೭೩. ರಾಮಗೋಪಾಲ "ಹೌ ಇಂಡಿಯಾ ಸ್ಟ್ರಗಲ್ಡ್ ಫಾರ್ ಫ್ರೀಡಂ" ಬುಕ್ ಕೇಂದ್ರ, ಮುಂಬೈ, ೧೯೬೭.

೭೪. ರಾವ್. ಆರ್. "ಪೂರ್ತುಗೀಜ ರೂಲ್ ಇನ್ ಗೋವಾ" ಏಶಿಯಾ ಮುದ್ರಣಾಲಯ, ೧೯೬೧.

೭೫. ರೇ. ಚೌಧುರಿ "ಗಾಂಧಿಜೀಸ್ ಫಸ್ಟ ಸ್ಟ್ರಗಲ್ ಇನ್ ಇಂಡಿಯಾ" ನವಜೀವನ, ಆಲಾಹಾಬಾದ್, ೧೯೬೩.

೭೬. ರೇ. ಸ್ಟೇತ್‌ಮನ್, "ಗಾಂಧಿಜಿಈಜ್ ಫಸ್ಟ್ ಸ್ಟ್ರಗಲ್ ಇನ್ ಇಂಡಿಯಾ", ನವಜೀವನ, ಅಹಮದಾಬಾದ್, ೧೯೭೯.

೭೭. ರಾಬರ್ಟ "ಆಯ್ ವಿಟ್ನೆಸ್ ಆಫ್‌ದ ಇಂಡಿಯನ್ ಮ್ಯುಟಿನಿ" ಮಿತ್ತಲ ಪ್ರಕಾಶನ್, ನವದೆಹಲಿ, ೧೯೮೪.

೭೮. ಸರದೇಸಾಯಿ ಜಿ. ಎಸ್. (ಸಂ.) ಪೂಣಾ ಪ್ರಸಿಡೆನ್ಸಿ ಕರೆಸ್ಪಾಂಡನ್ಸ್, ಭಾರತ ಸರಕಾರ, ಮುಂಬೈ, ೧೯೫೮.

೭೯. ಸಾವರ್ಕರ್ ವ್ಹಿ. ಡಿ. "ದ ಇಂಡಿಯನ್ ವಾರ್ ಆಫ್ ಇಂಡಿಪೆಂಡನ್ಸ್" ೧೯೫೭, ರಾಜಧಾನಿ ಪ್ರಕಾಶನ, ನವದೆಹಲಿ, ೧೯೭೦.

೮೦. ಶೇಕ್ ಅಲಿ ಬಿ. ಆ್ಯಂಡ್ ರಂಗಸ್ವಾಮಯ್ಯ, ಜಿ. "ಸೌಥ ಇಮಡಿಯನ್ ಹಿಸ್ಟರಿ" ವಿತ್ ಸ್ಪೇಶಿಯಲ್ ರೆಫರೆನ್ಸ ಟು ಕರ್ನಾಟಕ" ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೭.

೮೧. ಶರ್ಮಾ ಜಿ. ಎಸ್., "ಇಂಡಿಯಾಜ ಸ್ಟ್ರಗಲ್ ಫಾರ ಫ್ರೀಡಂ" ೧೯೨೪ ಸಂ.೨, ಎಸ್.ಚಂದ್ರ ಆ್ಯಂಡ್ ಕಂ., ನವದೆಹಲಿ, ೧೯೬೫.

೮೨. ಸಿಂಗ್ ಮುಕುಟಧಾರಿ, ಸ್ವತಂತ್ರ ಸಂಗ್ರಾಮ, ಸಮತಾ, ಪಾಟ್ನಾ, ೧೯೭೭.

೮೩. ಸಿನ್ಹಾ ಪಸಧರ್ "ಇಂಡಿಯನ್ ಇಂಡಿಪೆಂಡನ್ಸ್ ಇನ್ ಪರ್ಸ್ಪೆಕ್ಟಿವ್", ಏಸಿಯಾ ಮುದ್ರಣಾಲಯ, ಹೊಸದೆಹಲಿ, ೧೯೬೪.

೮೪. ಸ್ಟಾಕ್ಸ್, ಎಚ್.ಜೆ. "ಆ್ಯನ್ ಹಿಸ್ಟಾರಿಕಲ್ ಅಕೌಂಟ್ ಆಫ್ ದ ಬೆಳಗಾಂ ಡಿಸ್ಟ್ರಿಕ್ಟ್, ಭಾರತ ಸರಕಾರದ ಮುಂಬೈ, ೧೮೭೦.

೮೫. ತಾರಾ ಚಂದ, "ಹಿಸ್ಟರಿ ಆಫ್ ಫ್ರೀಡಂ ಮೂವಮೆಂಟ್ ಇನ್ ಇಂಡಿಯಾ" ಸಂ.೨, ದೆಹಲಿ ಮುದ್ರಣ ವಿಭಾಗ, ದೆಹಲಿ, ೧೯೬೨.

೮೬. ತೆಲ್ಕರ್ ಶ್ರೀಧರ "ಕಿತ್ತೂರ ಚನ್ನಮ್ಮ ರಾಣಿ" ಚನ್ನಮ್ಮ ರಾಣಿ ಇತಿಹಾಸ ಮಮಡಲ, ಬೈಲಹೊಂಗಲ, ೧೯೫೭.

೮೭. ವಡೆಯರ್, ಸದಾಶಿವ, "ರಾಣಿ ಚನ್ನಮ್ಮ" ನೇಶನಲ್ ಬುಕ್ ಟ್ರಸ್ಟ್ ಇಂಡಿಯಾ, ೧೯೮೯.

೮೮. ಯುಜ್ದಾನಿ.ಜಿ "ದ ಅರ್ಲಿ ಹಿಸ್ಟರಿ ಆಫ್ ದ ಡೆಕ್ಕನ್" ಸಂ.೧-೨, ಮುಂಬೈ, ೧೯೬೦.

ಕನ್ನಡ ಗ್ರಂಥ ಸೂಚಿ

೮೯. ಆಲೂರು ವೆಂಕಟರಾವ್, "ಕರ್ನಾಟಕತ್ವದ ವಿಕಾಸ", ನವಜೀವನ ಗ್ರಂಥ ಬಂಢಾರ, ಧಾರವಾಡ, ೧೯೫೭.

೯೦. ಆಲೂರು ವೆಂಕಟರಾವ್, "ನನ್ನ ಜೀವನ ಸ್ಮೃತಿಗಳು" ಬೆಳಗಾಂವ ರಾಮಚಂದ್ರರಾಯರು, ಧಾರವಾಡ, ೧೯೪೧.

೯೧. ಬೆಟಗೇರಿ ಕೃಷ್ಣ ಶರ್ಮಾ, "ಕರ್ನಾಟಕ ಜನಜೀವನ" ಸಮಾಜ ಪುಸ್ತಕಾಲಯ, ಧಾರವಾಡ, ೧೯೭೧.

೯೨. ಭಾರ್ರತದ ಹುತಾತ್ಮರು "ಹೂ ಈಸ್ ಹೂ ಆಫ್ ಇಂಡಿಯಾಸ್ ಮಾರ್ಟಿರ್ಸ" ಸಂ.೧ ಕರ್ನಾಟಕ ಸರಕಾರ, ಬೆಂಗಳೂರು, ೧೯೭೩.

೯೩. ಭವಿ (ಸೂರ್ಯಕಾಂತ) "ಕರ್ನಾಟಕ ಇತಿಹಾಸ", ನವಲಕಟ್ಟಿ ರಾಜಾ ಶಿವೇರಿ, ೧೯೭೭.

೯೪. ಬುರ್ಲಿ ಬಿಂದು ಮಾಧವ, "೧೮೫೭ ಅರ್ಥಾತ್ ಬಂಡಾಯದ ಇತಿಹಾಸ" ಮಿಂಚಿನ ಬಳ್ಳಿ, ಧಾರವಾಡ, ೧೯೪೮.

೯೫. ದಿವಾಕರ್ ರಂಗನಾಥ "ಸ್ವಾತಂತ್ರ್ಯ ಯುದ್ಧ" ಸ್ಟ್ಯಾಂಡರ್ಡ ಬುಕ್ ವಿಭಾಗ, ಬೆಂಗಳೂರು, ೧೯೪೮.

೯೬. ಹಾಲಪ್ಪಾ ಜಿ. ಎಸ್. "ಭಾರತ ಸ್ವಾತಂತ್ರ್ಯದ ಬೆಳ್ಳಿ ಚುಕ್ಕಿ", ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ, ಧಾರವಾಡ, ೧೯೬೭.

೯೭. ಇಮ್ರಾಪೂರ ಸೋಮಶೇಖರ, "ಜನಪದ ಕಿತ್ತೂರಿನ ಕಿಡಿಗಳು" ಚೇತನ ಪ್ರಕಾಶನ, ಧಾರವಾಡ, ೧೯೭೯.

೯೮. ಜಕಾತಿ ಹಾಗೂ ಹಿರೇಮಠ, "ಕಿತ್ತೂರು ನಾಡಿನಲ್ಲಿ ಸ್ವಾತಂತ್ರ್ಯ ಸಮರ" ಶಂಕರ ವಿಲಾಸ ಮುದ್ರಣಾಲಯ, ಬೈಲಹೊಂಗಲ, ೧೯೭೫.

೯೯. ಕಾಮತ ಸೂರ್ಯನಾಥ, "ಕರ್ನಾಟಕ ವೀರ ರಾಣಿಯರು", ಹಂಸಧ್ವನಿ, ಬೆಂಗಳೂರು, ೧೯೭೩.

೧೦೦. ಕಾಮತ ಸೂರ್ಯನಾಥ, "ಕರ್ನಾಟಕದ ಸಂಕ್ಷಿಪ್ತ ಇತಿಹಾಸ", ಹಂಸಧ್ವನಿ, ಬೆಂಗಳೂರು, ೧೯೭೩.

೧೦೧. ಕನ್ನಡ ವಿಶ್ವಕೋಶ, ಸಂ.೧೨, "ಕಿತ್ತೂರು" ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೧೦೨. ಕಟ್ಟಿಮನಿ ಬಸವರಾಜ, "ವರುಷ ಪರೀಕ್ಷೆ" ಶಾರದಾ ಪ್ರಕಾಶನಾಲಯ, ಬೆಂಗಳೂರು, ೧೯೬೧.

೧೦೩. ಕುಲಕರ್ಣಿ ಎ. ಎಸ್. "ಚಲೇಜಾವ ವೀರ ಕ್ರಾಂತಿ", ಸತ್ತಿ ವಿದ್ಯಾವರ್ಧಕ ಸಮಿತಿ, ೧೯೭೩.

೧೦೪. ಕುಲಕರ್ಣಿ ಆರ್. ಎಚ್., "ಬೆಳಗಾಂವ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ" ಶ್ರೀ ವೆಂಕಟೇಶ್ವರ ಪ್ರಕಾಶನ, ೧೯೯೨.

೧೦೫. ಕ್ಯಾತನಹಳ್ಳಿ ರಾಮಣ್ಣ, "ಐತಿಹಾಸಿಕ ಲಾವಣಿಗಳು", ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೨.

೧೦೬. ಮಾರಿಹಾಳ ವ್ಹಿ.ಜಿ., "ಕಿತ್ತೂರಿನ ಇತಿಹಾಸ", ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೭.

೧೦೭. ಮಾರಿಹಾಳ ವ್ಹಿ.ಜಿ., "ಮಹಾರಾಣಿ ಕಿತ್ತೂರ ಚೆನ್ನಮ್ಮನವರು", ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೬.

೧೦೮. ಮಾರಿಹಾಳ ವ್ಹಿ.ಜಿ., "ಶ್ರೀ ಮಡಿವಾಳ ಶಿವಯೋಗಿಗಳ ಸಮಕಾಲೀನರು", ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೭.

೧೦೯. ಮುಗಳಿ ಆರ್.ಎಸ್. "ಕನ್ನಡ ಸಾಹಿತ್ಯ ಚರಿತ್ರೆ", ಮೈಸೂರು, ೧೯೬೦.

೧೧೦. ಮೂಗೆ ದೊಡ್ಡ ಬಾವಪ್ಪ "ಕಿತ್ತೂರ ಕಾಳಗ" ರುದ್ರಗೌಡನ ಪ್ರಕಾಶನ, ಬೈಲಹೊಂಗಲ, ೧೯೫೯.

೧೧೧. ಮೂಗೆ ದೊಡ್ಡ ಬಾವಪ್ಪ "ಪರ್ಶಿಯನ್ ದಾಖಲೆಗಳು" ಚೆನ್ನಮ್ಮ ಇತಿಹಾಸ ಮಂಡಲ ಪ್ರಕಾಶನ, ಬೈಲಹೊಂಗಲ, ೧೯೪೮.

೧೧೨. ನಾಡಿಗ ಕೃಷ್ಣ ಶರ್ಮಾ "ಕರ್ನಾಟಕದ ಸ್ವಾತಂತ್ರ್ಯ ವೀರರು" ಉಪನ್ಯಾಸ ಮಾಲಿಕೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು,೧೯೬೮.

೧೧೩. ನಾಡಿಗ ಕೃಷ್ಣ ಮೂರ್ತಿ (ಸಂ.) "ಮಹಾತ್ಮಾ" ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೨.

೧೧೪. ನೀರಡಿ ಸರಸ್ವತಿ ಬಿ."ಕರ್ನಾಟಕ ರಾಣಿಯರು" ಜ್ಞಾನಗಂಗಾ,ಧಾರವಾಡ, ೧೯೮೭.

೧೧೫. ರಾಜಪ್ಪ ಬಿ.ಎಸ್. "ಬೆಳಗಾಂ ಜಿಲ್ಲೆಯ ಲಾವಣಿಗಳು" ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೩.

೧೧೬. ನಿಂಗಣ್ಣ ಸಣ್ಣಕ್ಕಿ ಹಾಗೂ ಶಿವಲಿಂಗಪ್ಪ ಭಾವಿಕಟ್ಟಿ "ಜಾನಪದಗಳಲ್ಲಿ ಕಿತ್ತೂರು", ಶ್ರೀಗಿರಿ ಪ್ರಕಾಶನ, ಬೆಳಗಾಂ, ೧೯೭೯.

೧೧೭. ಸಣ್ಣಕ್ಕಿ ನಿಂಗಣ್ಣ "ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ" ವಿದ್ಯಾ ಪ್ರಕಾಶನ, ಗದಗ, ೧೯೯೭.

೧೧೮. ಸೀತಾರಾಮಯ್ಯ ವ್ಹಿ. "ಭಾರತ ಬಿಡುಗಡೆ ಫಲಿಸಿತು" ಓರಯಂಟ್ ಲಂಗಮನ್, ನವದೆಹಲಿ, ೧೯೬೩.

೧೧೯. ಶಾಂತ ಕುಮಾರಿ ಎಸ್.ಎಲ್. "ಪ್ರಾಚೀನ ಕಿತ್ತೂರ ನಾಡು", ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೯.

೧೨೦. ಶರ್ಮಾ ನಾರಾಯಣ "ಕನ್ನಡ ನಾಡಿನ ಕಥೆಗಳು", ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ, ಧಾರವಾಡ, ೧೯೫೯.

೧೨೧. ಶರ್ಮಾ ತಿರುಮಲೆ ತಾತಾಚಾರ್ಯ "ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ ೧೮೦೦-೧೮೫೭" ಮೈಸೂರು ಸಂಸ್ಥಾನ, ಬೆಂಗಳೂರು, ೧೯೫೭.

೧೨೨. ಶಿತ್ರಿ ಸರೋಜಿನಿ ಹಾಗೂ ಕೆ. ರಾಘವೇಂದ್ರರಾವ್ "ಕನ್ನಡ ನಾಡಿನ ಸ್ತ್ರೀ ಸ್ವಾತಂತ್ರ್ಯ ಹೋರಾಟಗಾರರು", ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೩.

೧೨೩. ಶಿವರಾಮು "ಸಂಗೊಳ್ಳಿ ರಾಯಣ್ಣ" ಆಯ್.ಬಿ.ಎಚ್.ಪ್ರಕಾಶನ, ಬೆಂಗಳೂರು, ೧೯೭೩.

೧೨೪. ಶ್ರೀಕಂಠಯ್ಯ ಟಿ.ಎನ್. "ದಿ. ಕನ್ನಡ ಗ್ಲ್ಯಾಂಚಸ್ ಥ್ರೂ ದ ಏಜಸ್" ಕರ್ನಾಟಕ ದರ್ಶನ (ಸಂ) ಆರ್.ಎಸ್.ಹುಕ್ಕೇರಿಕರ, ಮುಂಬೈ, ೧೯೫೫.

೧೨೫. ಸ್ವಾಮಿ ಜಿ.ಟಿ. "ಕಿತ್ತೂರ ಚೆನ್ನಮ್ಮ" ಶಾಬಾದಿಮಠ ಬುಕ್ ಡಿಪೊ, ಗದಗ, ೧೯೭೧.

೧೨೬. ತಲ್ಲೂರು ರಾಯನಗೌಡ "ವಾಗೊಂಡಿ ಬಸವ ದೊರೆ ಮಲ್ಲಸರ್ಜ ಕಾವ್ಯ" ಚೆನ್ನಮ್ಮ ಇತಿಹಾಸ ಮಂಡಲ, ಬೈಲಹೊಂಗಲ, ೧೯೪೮.

೧೨೭. ತಲ್ಲೂರು ರಾಯನಗೌಡ "ಕಿತ್ತೂರ ಬಂಡಾಯ"ಬೈಲಹೊಂಗಲ, ೧೯೪೭.

೧೨೮. ಒಡೆಯರ್ ಸದಾಶಿವ "ರಾಣಿ ಚೆನ್ನಮ್ಮ" ನ್ಯಾಶನಲ್ ಬುಕ್ ಟ್ರಸ್ಟ, ನವದೆಹಲಿ, ೧೯೯೬.

* * *

ಅನುಬಂಧ-೧

ಸೂಚನೆ : ಕಿತ್ತೂರ ಸಂಸ್ಥಾನದ ಕೊನೆಯ ದೊರೆ ದೇಸಾಯಿಯ ಮರಣದ ಬಗೆಗಿನ ಪ್ರಸಂಗಗಳ ಪರೀಕ್ಷಣೆ ಕನ್ನೂರ ಮಲ್ಲಪ್ಪನು ಅನಾರೋಗ್ಯಕ್ಕೆ ತುತ್ತಾದ ದೊರೆ ಸಾಯುವಾಗ ಆತನ ಕೈಯಲ್ಲಿ ಲೆಕ್ಕಣಿಕೆಯನ್ನಿಟ್ಟು ದತ್ತು ಮಗನ ಪ್ರಕ್ರಿಯೆಯ ಸಹಿಯನ್ನು ಪಡೆದನೆಂಬುದರ ಕುರಿತು.

ಕಿತ್ತೂರ ಸಂಸ್ಥಾನದ ಕುರಿತು ಕನ್ನೂರ ಮಲ್ಲಪ್ಪನ ಹೇಳಿಕೆಗಳು

ಅಶ್ವಿಜ (ಸಪ್ಟಂಬರ / ಅಕ್ಟೋಬರ) ತಿಂಗಳಲ್ಲಿ ದೊರೆ ಸರ್‌ದೇಸಾಯಿಯವರು ಅಸ್ವಸ್ಥರಾದರು. ಒಂದು ದಿನ ಅವರು ತಾನಿನ್ನು ಬದುಕಲಾರೆನೆಂಬಂತೆ ಕಂಡರು. ಅಂತಹ ಕ್ಷಣದಲ್ಲಿ ನಾನು ಕನ್ನೂರ ವೀರಪ್ಪ ಹಾಗೂ ಸರ್ದಾರ ಮಲ್ಲಪ್ಪ ದುಃಖಿಸ ತೊಡಗಿದರು. ಆಗ ದೊರೆ ಸರ್ದಾರ ಗುರುಸಿದ್ದಪ್ಪನನ್ನು ಕರೆಸಿದನು. ಶಹಾಪೂರ ತಾಲೂಕಿನ ಸಿಂಧೋಳಿ ಹಾಗೂ ಮಸ್ತಮರಡಿಗೆ ಹಾಗೂ ಮುರಗೋಡ ತಾಲೂಕಿನ ಚಿಕ್ಕೊಪ್ಪ ಗ್ರಾಮಗಳಿಗೆ ತೆರಳಿ, ಅಲ್ಲಿಯ ಆತನ ಸಂಬಂಧಿಕರ ಉತ್ತಮ ಮಕ್ಕಳನ್ನು ದತ್ತು ಪುತ್ರನ ಆಯ್ಕೆಗಾಗಿ ತರಲು ಕೇಳಿಕೊಂಡನು. ಅಂತೆಯೇ ಗುರುಸಿದ್ದಪ್ಪ ನಾಲ್ಕಾರು ಮಕ್ಕಳನ್ನು ತಂದರೆ, ಸುಬೇದಾರ ಮಲ್ಲಪ್ಪ ತಾನು ನೋಡಿದ ಬಾಲಕರು ದೊಡ್ಡವರಿದ್ದಾರೆಂದು ಯಾರನ್ನು ಕರೆತರಲಿಲ್ಲ. ಆಗ ದೊರೆಯು ಗುರುಸಿದ್ದಪ್ಪ ತಂದ ನಾಲ್ಕು ಮಕ್ಕಳಲ್ಲಿ ಶಿವಲಿಂಗಪ್ಪನೆಂಬ ಬಾಲಕನನ್ನು ಆಯ್ಕೆ ಮಾಡಿ ಆತನನ್ನು ದತ್ತು ಮಾಡಿಕೊಳ್ಳುವೆನೆಂದು ಘೋಷಿಸಿದನು. ೨೪ರ ಸಪ್ಟೆಂಬರ ೧೧ರ ಮಧ್ಯಾಹ್ನ ನಾಲ್ಕು ಗಂಟೆಗೆ ಕಾಲವಾದನು. ಆದರೆ ದತ್ತು ಕೆಲಸಗಳನ್ನು ಆಗಲೇ ಪೂರೈಸಿದನು. ಅದಕ್ಕಿಂತಲೂ ಮುಂದೆ ದೊರೆಯು ಆ ಮಗುವಿಗೆ ಉತ್ತಮ ಪೋಷಾಕುಗಳನ್ನು ಮಾಡಿ ಆತನನ್ನು ಸ್ವಲ್ಪ ದಿನ ಆತನ ಊರಿಗೆ ಕಳಿಸಲು ತಿಳಿಸಿದ್ದನು. ಆನಂತರ ನಾನು, ವೀರಪ್ಪ, ಮಲ್ಲಪ್ಪ, ಸರ್ದಾರ ಗುರುಸಿದ್ದಪ್ಪ, ಹನುಮಂತಸಿಂಗ ಹಾಗೂ ನರ್ಸಿಂಗರಾವ ಗುರುಪುತ್ರರನ್ನು ಕರೆಸಿ ಇನ್ನು ಸಂಸ್ಥಾನವನ್ನು ಆಳುವ ಪರಿಯಾದರೂ ಏನು ಎಂದು ಚರ್ಚಿಸಿದೆವು. ಆಗ ಅವರು "ಈಗ ಆ ಬಾಲಕನನ್ನು ರಾಜ ಗಾಂಭೀರ್ಯದಲ್ಲಿ ಇರಿಸಿ ನಮ್ಮ ನಮ್ಮ ಅಂತಗಳನ್ನು ಮರೆದು, ಈ ಸಂಸ್ಥಾನವನು ಮುಂದುವರೆಸೋಣ" ಎಂದರು.

ಅದೇ ಸಮಯದಲ್ಲಿ ದೊರೆಯು ತನ್ನ ಪಟ್ಟದರಸಿಗೆ ಒಂದಿಷ್ಟು ವಜ್ರ ವೈಢೂರ್ಯಗಳನ್ನು ನೀಡಿ ತಾನು ಸತ್ತ ಮೇಲೆ ಅವಳಿಗೆ ಎರಡು ಲಕ್ಷ ರೂಪಾಯಿಯನ್ನು ಕೊಡಬೇಕೆಂದು ಹೇಳಿದನು. ಈ ವಿಷಯ ಅನೇಕರಿಗೆ ಗೊತ್ತಿರಲಿಲ್ಲ. ಆಗ ನಾವು ದೊರೆಯ ಮುದ್ರೆಯನ್ನು ದತ್ತು ಮಗನ ಸಮಾರಂಭಕ್ಕೆಂದು ತೆಗೆದುಕೊಂಡೆವು. ಖಜಾನೆಯ ಒಂದು ಪೆಟ್ಟಿಗೆಯನ್ನು ಪಡೆದುಕೊಳ್ಳಲು ಪ್ರಯತ್ನಿಸಿದೆವು. ಕನ್ನೂರ ಮಲ್ಲಪ್ಪನು ಖಜಾನೆಯನ್ನು ತೆರೆದು ಅಲ್ಲಿಂದ ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳನ್ನು

ಅಲ್ಲಿಯ ಕೊಟಗಿ ಬೈಲಪ್ಪ, ಸಿದ್ಧಲಿಂಗಪ್ಪ, ಡುಣ್ಣಗ ವೀರಪ್ಪ, ಕನ್ನೂರ ಶಂಕ್ರೆಪ್ಪ, ದೆಳುವರ ಹಾಗೂ ರಾಯಪ್ಪರು ರಾಣಿ ನಿವಾಸಕ್ಕೆ ಕೊಂಡೊಯ್ದರು. ಆ ಪೆಟ್ಟಿಗೆಯಲ್ಲಿಯ ಯಾದಿಯನ್ನು ಹರಿದು ಹಾಕಿದರು. ಅಲ್ಲಿದ್ದ ಆದರ್ಶಪ್ಪನನು ದೊರೆಯ ಒಂದು ಲಕ್ಷ ರೂಪಾಯಿ ಹಣವನ್ನು ತಾನು ಹೊಂದಿದ್ದಾನೆಂದು ತಿಳಿಸಿದ.

ಪ್ರಶ್ನೆ : ಒಂದು ವೇಳೆ ದೊರೆ ದೇಸಾಯಿಯು ಶನಿವಾರ ರಾತ್ರಿ ಸತ್ತರೆ, ಈ ಘಟನೆ ರವಿವಾರ ಮಧ್ಯಾಹ್ನ ಆಯಿತೆಂದು ಏಕೆ ಹೇಳಿದಿರಿ?

ಉತ್ತರ : ದೊರೆಯು ಜೀವಂತವಿರುವಾಗಲೇ ದತ್ತು ಪುತ್ರನನ್ನು ತೆಗೆದುಕೊಂಡೆವು ಎಂದು ಜನರನ್ನು ನಂಬಿಸುವುದಕ್ಕಾಗಿ.

ಪ್ರಶ್ನೆ : ದೇಸಾಯಿಯು ಒಂದು ತಿಂಗಳ ಹಿಂದೆ ಆ ಬಾಲಕನನ್ನು ದತ್ತು ತೆಗೆದುಕೊಂಡಿದ್ದ ಆತ ನಂತರವೇಕೆ ಪತ್ರ ಬರೆದ ?

ಉತ್ತರ : ನಿಜ ಹೇಳಬೇಕೆಂದರೆ, ದೊರೆಯು ಆ ಬಾಲಕನ ದತ್ತಿಗೆ ಬಗೆಗಿನ ಪತ್ರವನ್ನು ಎರಡು – ಮೂರು ತಿಂಗಳ ಹಿಂದೆಯೇ ಬರೆದಿದ್ದರು. ಅದನ್ನು ತಾನು ಸಾಯುವಾಗಲೇ ಕಳುಹಿಸಬೇಕೆಂದು ತಡವರಿಸಿದ. ಹಾಗಾಗಿ ಆ ಪತ್ರ ಅವನ ಹತ್ತಿರವೇ ಉಳಿಯಿತು. ಆತ ಅದಕ್ಕೆ ತನ್ನ ಸಹಿಯನ್ನೇ ಹಾಕಲಿಲ್ಲ. ನಂತರ ವೀರಪ್ಪ ಕನ್ನೂರ ಹಾಗೂ ನಾನು ಸತ್ತದೊರೆಯ ಕೈಯಲ್ಲಿ ಪೆನ್ನು ಇಟ್ಟು ನಾವೇ ಸಹಿ ಬರೆಸಿದೆವು. ಆ ಸಂದರ್ಭದಲ್ಲಿ ಸಾಧೋ ಬಸಪ್ಪ ಹಾಗೂ ಲಿಂಗಪ್ಪ ತಿಮ್ಮಾಪುರ ಉಪಸ್ಥಿತರಿದ್ದರು.

ಪ್ರಶ್ನೆ : ದೊರೆ ತನ್ನ ಹತ್ತಿರ ಸಾಕಷ್ಟು ಸಂಪತ್ತನ್ನು ಹೊಂದಿದ್ದರೂ, ಅದರ ಬಹಳಷ್ಟನ್ನು ತನ್ನ ರಾಣಿಗೆ ನೀಡಲಿಲ್ಲ. ಹಾಗಾದರೆ ನೀವು ಆತ ಅವಳಿಗೆ ಎರಡು ಲಕ್ಷ ರೂಪಾಯಿಯನ್ನು ಕೊಡಲು ತಿಳಿಸಿದ ಎಂದು ಹೇಗೆ ಹೇಳುತ್ತಿರಿ ?

ಉತ್ತರ : ಅವನು ಹೇಳುವಂತೆ ಆತನ ಹೆಂಡತಿ ಚಿಕ್ಕವಳಿದ್ದಳು. ಅವಳು ಮುಂದೆ ತನ್ನ ದತ್ತು ಮಗುವಿನೊಂದಿಗೆ ಸರಿಯಾಗಿ ನಡೆದುಕೊಳ್ಳದಿರಬಹುದೆಂಬ ಸಂಶಯದಿಂದ ಅವಳ ಸಹಾಯಕ್ಕೆ ಇರಲಿ ಎಂದು ದೊರೆಯ ಆಜ್ಞೆ ಮೇರೆಗೆ ನಾನು ಅವಳಿಗೆ ಈ ಹಣ ನೀಡಿದೆ. ಇದು ಬೇರೆಯವರಿಗೆ ಗೊತ್ತಿರಲಿಲ್ಲ.

ಪ್ರಶ್ನೆ : ನಂತರ ಗಮನಿಸಿದಂತೆ ನೀವು ಅಲ್ಲಿಯ ಕೆಲವು ಸಂಪತ್ತಿನ ಪೆಟ್ಟಿಗೆಗಳನ್ನು ತೆಗೆದುಕೊಂಡಿದ್ದಿರಂತೆ, ಅಂದರೆ ನೀವು ಎಷ್ಟು ಪೆಟ್ಟಿಗೆಗಳನ್ನು ಪಡೆದಿರಿ ಹಾಗೂ ಏಕೆ ? ಹೇಳುತ್ತೀರಾ ?

ಉತ್ತರ : ರಾಣಿಗೆ ಒಂದಿಷ್ಟು ಆಭರಣಗಳ ಅಗತ್ಯವಿದೆ ಎಂದು ಬಸಲಿಂಗಪ್ಪ ಯಕ್ಕಟೀಯ ಜಾರ್ಜದಲ್ಲಿರುವ ಮೂರು ಪೆಟ್ಟಿಗೆಗಳನ್ನು ಹಾಗೂ ಎರಡು ಕ್ಯಾಸ್ಕೆಟನ್ನು ತೆಗೆದುಕೊಂಡೆನು. ದೊರೆ ತೀರಿಕೊಂಡ ದಿನ ಮುಂಜಾನೆ ಈ ಘಟನೆ ಜರುಗಿತ್ತು. ಹಣವನ್ನು ಒಯ್ದವರೇ ಈ ಪೆಟ್ಟಿಗೆಗಳನ್ನು ರಾಣಿ ವಾಸಕ್ಕೆ ಒಯ್ದರು. ನಂತರ ಇಂಗ್ಲೀಷ ಸರಕಾರದ ಅಧಿಕಾರಿ ವೆಂಕಟರಾಯರು ನಮ್ಮ ಸಂಸ್ಥಾನಕ್ಕೆ ಬಂದಾಗ ಅಲ್ಲಿಯ ಆಭರಣಗಳ ಸಂಖ್ಯೆಯನ್ನು ದಾಖಲಿಸಿಕೊಂಡರು. ನಂತರ ನಾನು ತೆಗೆದುಕೊಂಡು ಹೋದ ಕೆಲವು ಪೆಟ್ಟಿಗೆಗಳನ್ನು ಸರಕಾರದ ಶಿಸ್ತಿನ ಕ್ರಮಕ್ಕೆ ವಾಪಸ್ಸು ತಂದೆನು.

ಪ್ರಶ್ನೆ : ಕೆಲವರು ಹೇಳುವಂತೆ ನೀವು ಕಿತ್ತೂರ ಗುರುಬಸಪ್ಪನವರ ಮನೆಯಿಂದ ಒಂದಿಷ್ಟು ಹಣವನ್ನು ಒಯ್ದಿರಿವಿರಂತೆ ಹೌದಾ ?

ಉತ್ತರ : ಒಂದಿಷ್ಟು ಹಣ ದೊರೆ ದೇಸಾಯಿಯ ಹತ್ತಿರ ಇತ್ತು. ತನಗೆ ಹಣದ ಕೊರತೆ ಕಂಡು ಬಂದಾಗ ದೊರೆಯು ಗುರುಪುತ್ರ ವೀರಪ್ಪ ಇಲ್ಲವೇ ನರಸಿಂಗರಾವರಿಂದ ತರಿಸಿಕೊಳ್ಳುತ್ತಿದ್ದರು. ನಂತರ ತಕೀಶ ಸಮಸ್ಯೆಯ ಪರಿಹಾರಕ್ಕಾಗಿ ತಮಗೆ ಬೇಕಾದಷ್ಟು ಹಣವನ್ನು ಕಿತ್ತೂರ ಶಿವಬಸಪ್ಪನಿಂದ ಪಡೆಯಬೇಕೆಂದು ದೊರೆ ಗುರುಪುತ್ರ ವೀರಪ್ಪನಿಗೆ ತಿಳಿಸಿದ್ದರು. ಅಲ್ಲಿದ್ದ ಬಂಗಾರ ಮತ್ತು ಹಣವನ್ನು ತರಬೇಕೆಂದು ನಾನು ತಿಳಿಸಿದೆ. ಆದರೆ ಅಲ್ಲಿ ಬೆಳ್ಳಿ ಇರದೆ ಒಂದಿಷ್ಟು ಬಂಗಾರ ಹಾಗೂ ಆರು ಸಾವಿರ ರೂಪಾಯಿಗಳು ಇದ್ದವು. ನಾನು ಅದನ್ನು ತಂದು ಜಮಾದಾರ ಖಾನೆಯಲ್ಲಿ ಇರಿಸಿದೆನು.

ದೊರೆಯ ಮರಣದ ನಂತರ ಪೂಣೆಯ ರಾಚಪ್ಪ ವಕೀಲರು ಆ ಹಣಕ್ಕಾಗಿ ತಮ್ಮ ಕಾರಕೂನನ್ನು ಕಳಿಸಿದಾಗ ನಾವು ಆ ಹಣವನ್ನು ಅವನಿಗೆ ನೀಡಿದೆವು. ಆದರೆ ಆತ ಕೇವಲ ಎರಡು ಸಾವಿರ ರೂಪಾಯಿ ಒಯ್ದನು. ಉಳಿದ ನಾಲ್ಕು ಸಾವಿರ ರೂಪಾಯಿಯನ್ನು ನಾನು ಕನ್ನೂರ ವೀರಪ್ಪನ ಮೂಲಕ ಆತನಿಗಾಗಿ ಪೂನಾಗೆ ಕಳಿಸಿದೆ.

ಪ್ರಶ್ನೆ : ಅಲ್ಲಿದ್ದ ದಫ್ತರಗಳಲಿ ಅದೇ ವೇಳೆಗೆ ಏಕೆ ದಾಖಲಿಸಿದಿರಿ ?

ಉತ್ತರ : ಅವುಗಳನ್ನು ನಾವು ಸಂರಕ್ಷಿಸಿ ಇಟ್ಟುಕೊಳ್ಳಬೇಕಾಗಿತ್ತು.

ಕಿತ್ತೂರ

೨೫ ಸೆಪ್ಟೆಂಬರ ೧೮೨೪

ಸಹಿ

ಮಲ್ಲಪ್ಪ ಕನ್ನೂರ

ಕಿತ್ತೂರಿನ ಬಗ್ಗೆ ಸರ್ದಾರ ಮಲ್ಲಪ್ಪನ ಹೇಳಿಕೆಗಳು

ಪ್ರಶ್ನೆ : **ಮಸ್ತ ಮರಡಿಯ ಬಾಲಕನನ್ನು ದತ್ತು ತೆಗೆದುಕೊಂಡ ವಿಷಯದ ಬಗ್ಗೆ ನಿಮಗೆ ಗೊತ್ತಿದ್ದದನ್ನು ಹೇಳಿರಿ.**

ಉತ್ತರ : ಕಿತ್ತೂರಿನ ದೊರೆ ರವಿವಾರ ಬೆಳಗಿನ ಜಾವ ನಾಲ್ಕು ಗಂಟೆಗೆ ಈ ಬಾಲಕನ ದತ್ತು ಕ್ರಿಯೆಯನ್ನು ಊರ್ಜಿತಗೊಳಿಸಿದೆವು. ದಿವಂಗತ ದೊರೆ ಈ ದತ್ತು ವಿಷಯದ ಬಗ್ಗೆ ಸರಕಾರಕ್ಕೆ ಒಂದು ಪತ್ರವನ್ನು ಬರೆದಿದ್ದನಾದರೂ ಅದಕ್ಕೆ ಆತ ಸಹಿ ಹಾಕಿರಲಿಲ್ಲ. ಅಂದರೆ ದೊರೆ ಸತ್ತ ನಂತರ ಕನ್ನೂರ ಮಲ್ಲಪ್ಪ ಆತನ ಕೈ ಹಿಡಿದು ಆ ಪತ್ರಕ್ಕೆ ಸಹಿ ಹಾಕಿದನು.

ಆಗ ಬರೆಯಲ್ಪಟ್ಟ ಪತ್ರಗಳು :

ಬಾಂಬೆಗೊಂದು ಪತ್ರ

ಪೂಣೆಗೊಂದು ಪತ್ರ

ಧಾರವಾಡಕ್ಕೊಂದು ಪತ್ರ

ಈ ಸಂದರ್ಭದಲ್ಲಿ ಹಾಜರಿದ್ದವರು :

ಮಲ್ಲಪ್ಪ ಕನ್ನೂರ

ವೀರಪ್ಪ ಕನ್ನೂರ

ಜಮಾದಾರ ಲಿಂಗಪ್ಪ

ಶಂಕ್ರಪ್ಪ ದಳವಾಯಿ

ಆ ಸಂದರ್ಭದಲ್ಲಿ ಇತರ ಇನ್ನು ಕೆಲವರೊಂದಿಗೆ ನಾನು ಅಲ್ಲಿದ್ದೆ. ನಮಗೆ ಗೊತ್ತಿರುವಂತೆ ದಿವಂಗತ ದೊರೆ ಆ ಬಾಲಕನನ್ನು ದತ್ತು ತೆಗೆದುಕೊಳ್ಳಲು ನಿರ್ಧರಿಸಿದ್ದನು. ಆದ್ದರಿಂದ ದತ್ತು ಕ್ರಿಯೆಯನ್ನು ಆ ಬಾಲಕನ ಕೊರಳಲ್ಲಿ ಮುದ್ರೆಯನ್ನು ಕಟ್ಟುವುದರ ಮೂಲಕ ಮುಗಿಸಿದೆವು. ಮಲ್ಲಪ್ಪ ಕನ್ನೂರ ಹಾಗೂ ಆದರ್ಶಪ್ಪನವರು ಆ ಮುದ್ರೆಯನ್ನು ಮತ್ತೆ ಒಳಗೆ ಇರಿಸಿದರು.

ಪ್ರಶ್ನೆ : **ದೊರೆ ಈ ಬಾಲಕನನ್ನು ದತ್ತು ತೆಗೆದುಕೊಳ್ಳಲು ನಿರ್ಧರಿಸಿದ್ದನೆಂದು ಹೇಳಿದಿರಿ, ಇದು ನಿಮಗೆ ಹೇಗೆ ಗೊತ್ತು ?**

ಉತ್ತರ : ಎರಡು ತಿಂಗಳ ಹಿಂದೆ ಕೆಲವು ಹಳ್ಳಿಗಳಿಂದ ತರಿಸಿದ ಮಕ್ಕಳಲ್ಲಿ ಮಾಸ್ತ ಮರ್ಡಿಯ ಪಟೇಲನ ಮಗನನ್ನು ಅವರು ಆಯ್ಕೆ

ಮಾಡಿದ್ದರು. ಆಗ ಅಲ್ಲಿ ಗುರುಸಿದ್ದಪ್ಪ, ಸರ್ದಾರ ವೀರಪ್ಪ ಕನ್ನೂರ ಹಾಗೂ ನಾನು ಅಲ್ಲೆ ಇದ್ದೆವು. ಆದರೆ ದೇಸಾಯಿಯ ಜೀವಿತ ಅವಧಿಯಲ್ಲಿ ದತ್ತು ಪ್ರಕ್ರಿಯೇ ನಡೆಯಲಿಲ್ಲ.

ಪ್ರಶ್ನೆ : ಮಲ್ಲಪ್ಪ ಕನ್ನೂರರು ಖಜಾನೆಯಿಂದ ಹಣ ಇಲ್ಲವೆ ಆಭರಣವನ್ನು ತೆಗೆದುಕೊಂಡರೆ ?

ಉತ್ತರ : ದಿವಂಗತ ದೊರೆ ಒಮ್ಮೆ ಮಲ್ಲಪ್ಪ ಕನ್ನೂರನಿಂದ ಆಭರಣಗಳನ್ನು ತರಿಸಿ ಅದನ್ನು ತನ್ನ ಪಟ್ಟದರಸಿ ವೀರವ್ವಗಳಿಗೆ ಕೊಡಲು ನಿರ್ಧರಿಸಿದ್ದ. ಆಗ ಅಲ್ಲಿ ನಾನು ಮತ್ತು ಕನ್ನೂರ ವೀರಪ್ಪ ಹಾಜರಿದ್ದೆವು. ದೊರೆಯು ನಂತರ ನಾನು ಮಲ್ಲಪ್ಪ ಕನ್ನೂರರನ್ನು ಪ್ರಶ್ನಿಸಿದರೆ, ಹೌದು ನಾನು ಒಂದಿಷ್ಟು ಆಭರಣ ತಂದಿದ್ದು ದೊರೆಯ ಹೇಳಿಕೆಯಂತೆ ಅವುಗಳನ್ನು ರಾಣಿಗೆ ತಲುಪಿಸುವೆ ಎಂದನು. ಈ ವಿಷಯ ಬೇರೆಯವರಿಗೆ ಗೊತ್ತಿರಲಿಲ್ಲ. ಮಲ್ಲಪ್ಪ ಇಟ್ಟಿದ ಆಭರಣಗಳು ಹಾಗೂ ಹಣ ಒಂದು ಕಡೆ ದೊರೆತವು. ಆದರೆ ಅಲ್ಲಿ ಹಣ ಇರದೆ ಇದ್ದುದು ಆ ನಂತರ ಬೆಳಕಿಗೆ ಬಂದಿತು.

ಪ್ರಶ್ನೆ : ಶಿವಬಸಪ್ಪನ ಹತ್ತಿರದ ಹಣ ಏನಾಯಿತು ?

ಉತ್ತರ : ನನಗೆ ಗೊತ್ತಿರುವಂತೆ ದಿವಂಗತ ದೊರೆಯು ಹಣ ಹಾಗೂ ಬಂಗಾರವು ಶಿವಬಸಪ್ಪನ ಹತ್ತಿರವೇ ಇತ್ತು. ಒಂದು ದಿನ ಆ ಹಣವನ್ನು ಮಲ್ಲಪ್ಪ ಕನ್ನೂರನಿಗೆ ಕೊಡಿಸಬೇಕೆಂದು ವೀರಪ್ಪನಿಗೆ ಕೇಳಿಕೊಳ್ಳಲಾಯಿತು. ಆದರೆ ಅದು ಏನಾಯಿತು ಎಂಬುದು ನನಗೆ ಗೊತ್ತಿಲ್ಲ.

ಕಿತ್ತೂರ
೨೫ ಸೆಪ್ಟೆಂಬರ ೧೮೨೪

ಸಹಿ
ಮಲ್ಲಪ್ಪ ಸರ್ದಾರ

* * *

ಅನುಬಂಧ-೨

ಮುಂಬೈ ಪುರಾತತ್ವ ಇಲಾಖೆಯಿಂದ ಸಂಗ್ರಹಿಸಿದ ಮೂಲ ಬ್ರಿಟೀಷ ಪತ್ರಗಳ ಝರಾಕ್ಷ ಪ್ರತಿಗಳ ಯಾದಿ

೧. ೧೦ ಜುಲೈ -೧೮೨೪, ೧೨ ಸಪ್ಟೆಂಬರ (ಓದಲಾಗಿದೆ)	ಥ್ಯಾಕರೆಗೆ ಶಿವಲಿಂಗ ರುದ್ರಸರ್ಜಾ ಬರೆದ ಪತ್ರ
೨. ೧೭ ಸಪ್ಟೆಂಬರ ೧೮೨೪	ವೈದ್ಯಾಧಿಕಾರಿ ಡಾ. ಬಿಲ್‌ರ್ ವರದಿ.
೩. ೧೪ ಸಪ್ಟೆಂಬರ ೧೮೨೪	ಆಯುಕ್ತ ಚಾಪ್ಲೇನರಿಗೆ ಥ್ಯಾಕರೆಯು ಬರೆದ ಪತ್ರ
೪. ೨೦ ಸಪ್ಟೆಂಬರ ೧೮೨೪	ಆತನ ಕೃತಿಯನ್ನು ಸಮ್ಮತಿಸಿ ಚಾಪ್ಲೇನನು ಥ್ಯಾಕರೆಗೆ ಬರೆದ ಪ್ರತ್ಯುತ್ತರ.
೫. ೨೫ ಸಪ್ಟೆಂಬರ ೧೮೨೪	ಬ್ರಿಟೀಷ ಮುಂಬೈ ಪ್ರಾಂತದ ಮುಖ್ಯ ಕಾರ್ಯದರ್ಶಿ ನಿವ್ನಹ್ಯಾಂನು ಥ್ಯಾಕರೆ ಕಿತ್ತೂರ ಮಾಡಿದ ವ್ಯವಸ್ಥೆಯ ಬಗ್ಗೆ ಬರೆದ ಸಮ್ಮತಿಯ ಪತ್ರ.
೬. ೧೧ ಅಕ್ಟೋಬರ ೧೮೨೪	ಕಿತ್ತೂರಿನ ರಾಣಿಯರಾದ ಚನ್ನಮ್ಮ ಮತ್ತು ವೀರಮ್ಮ ಥ್ಯಾಕರೆಯ ಕಿರುಕುಳದ ಬಗ್ಗೆ ಚಾಪ್ಲೇನನಿಗೆ ಬರೆದ ಜಂಟಿ ಪತ್ರ.

ಮೂಲ ಪತ್ರಗಳ ಪ್ರತಿಯನ್ನು ಬೆರಳಚ್ಚು ಮಾಡಿ ಸಂಗ್ರಹಿಸಿದ್ದು

೭. ೨೩ ಅಕ್ಟೋಬರ ೧೮೨೪	ಧಾರವಾಡ ಸೈನ್ಯದ ಕಮಾಂಡರ ಡಬ್ಲ್ಯು ದುರಂಧ‌ನಿಗೆ ಸಿವಿಲ್ ಸರ್ವಿಸ್ ಅಧಿಕಾರಿ ಲೆ.ಕ.ಮಸ್‌ಗ್ರೇವ್ ಹ್ಯಾರೀಸ್ ಬರೆದ ಪತ್ರ.
೮. ೨೩ ಅಕ್ಟೋಬರ ೧೮೨೪ (ರಾತ್ರಿ ೮ ಗಂಟೆಗೆ)	ಧಾರವಾಡದ ಕಲೆಕ್ಟರ ವಾಕರ್ ವೂಲರಟನ್‌ನಿಗೆ ಸುದ್ದಿ ತಲುಪಿಸಿದ ಪತ್ರ.
೯. ೨೪ ಅಕ್ಟೋಬರ ೧೮೨೪	ಡೆಕ್ಕನ್ ಆಯುಕ್ತ ಚಾಪ್ಲೇನನಿಗೆ ಜೆ.ಎ.ಆರ್.ಸ್ಟಿವನ್‌ಸನ್ ನೀಡಿದ ಪತ್ರ.

೧೦.೨೫ ಅಕ್ಟೋಬರ ೧೮೨೪	ದೊಅಬದ ಸೈನಾಧಿಕಾರಿ ಫ್ರೆಡ್ ಪಿಯರ್ಸನು ಕ್ವಾರ್ಟರ ಮಾಸ್ಟರ ಜನರಲ್‌ನಿಗೆ ಬರೆದ ಪತ್ರ.
೧೧.೨೭ ಅಕ್ಟೋಬರ ೧೮೨೪	ದೊಅಬಾದ ಕರ್ನ್‌ಲ್ ಕಮಾಂಡನು ಕ್ವಾರ್ಟರ್ ಮಾಸ್ಟರ್ ಜನರಲ್‌ನಿಗೆ ಬರೆದ ಪತ್ರ..
೧೨. ದೊಅಬ್‌ದ ಕರ್ನ್‌ಲ್ ಕಮಾಂಡರ	೨೮ ಅಕ್ಟೋಬರ ೧೮೨೪
	ಫೀಲ್ಡ್ ಪಿಯರ್ಸನಿಗೆ ರಾಬರ್ಟ ಎಡೆನ್‌ನನ್ ಪತ್ರ.
೧೩.೨೯ ಅಕ್ಟೋಬರ ೧೮೨೪	ಚಾಪ್ಲೇನನಿಗೆ ರಾಬರ್ಟ ಎಡೆನ್‌ನು ಬರೆದ ಪತ್ರ.
೧೪.೨೮ ಅಕ್ಟೋಬರ ೧೮೨೪	ಕಿತ್ತೂರಿನಲ್ಲಿ ಆಗುತ್ತಿದ್ದ ಬಂಡುಕೋರರ ಬಗ್ಗೆ ಬರೆದ ಪತ್ರ.

* * *

ಅನುಬಂಧ-೩

ಅನುಬಂಧ-ಎ

ಕಿತ್ತೂರಿನ ಆರಂಭದ ಬಂಡಾಯದ ಮೇಲೆ ಎಲಿನ್‌ಸ್ಟನನ ಮೊದಲನೆಯ ವರದಿ

ಈ ಹೇಳಿಕೆ ಅತಿಶಯೋಕ್ತಿ ಎನಿಸಬಹುದಾದರೂ ಥ್ಯಾಕರೆಯ ಹಣೆಬರಹ ಹಾಗೂ ಅವನ ಮರಣವು ಬಹಿರಂಗವಾದ ಹಾನಿಯೆನಿಸುತ್ತದ್ದೆ ಎಂಬುದನ್ನು ತಿಳಿಸುತ್ತದೆ.

ಈ ವ್ಯವಹಾರದ ಬಗ್ಗೆ ನಿನ್ನೆ ನಾನು ಖಾಸಗಿಯಾಗಿ (ಸ್ವಂತವಾಗಿ) ಮಾಹಿತಿ ಸ್ವೀಕರಿಸಿದ ನಂತರ ನಾನು ಸೊಲ್ಲಾಪುರದ ದಂಡಿನ ಮುಖ್ಯ ಸೇನಾಪತಿಗೆ ಸಲಹೆ ಮಾಡಿದ್ದೇನೆಂದರೆ, ಬೆಳಗಾಂ ಸೈನ್ಯದ ಹೊರತಾಗಿಯೂ ಈ ಬಂಡಾಯವನ್ನು ಹತ್ತಿಕ್ಕಲು ಕಳಿಸಿಕೊಡಬೇಕೆಂದು ಮತ್ತು ನಾನು ಕಮೀಷನರಿಗೆ ಸಲಹೆ ಮಾಡಿದ್ದೇನೆಂದರೆ ಶತಸುಂಡಿಗಳು (ಸೈನ್ಯದ ಸೇವೆಗಾಗಿ ಭೂಮಿ ಹೊಂದಿದ್ದವರು) ಅವರ ಭೂಮಿಯನ್ನು ಕಸಿದುಕೊಳ್ಳುವುದಿಲ್ಲ ಎಂಬ ಭರವಸೆಯನ್ನು ಕೊಡಬೇಕು. ಅವರ ಕೈಯೊಳಗಿನವರು ವ್ಯವಸ್ಥಾಪಕರು ಇದರ ಬಗ್ಗೆ ನಿಸ್ಸಂದೇಹವಾಗಿ ಜನರಿಂದ ಮಾಹಿತಿ ಪಡೆದುಕೊಂಡಿದ್ದಾರೆ. ಇದರ ಬಗ್ಗೆ ನಾವು ತೀವ್ರವಾಗಿ ಕ್ರಮ ತೆಗೆದುಕೊಳ್ಳದಿದ್ದರೆ ದಂಗೆಯನ್ನು ಹತ್ತಿಕ್ಕಲು ಹೆಚ್ಚಿನ ಸೈನ್ಯವನ್ನು ಈ ಉದ್ದೇಶಕ್ಕಾಗಿ ಕಳುಹಿಸಬೇಕಾಗುತ್ತದೆ. ಕಿತ್ತೂರು ಜಾಂಗೀರದಾರರ ಅಂಕಿತದಲ್ಲಿದೆ. ಕೊಲ್ಲಾಪುರ ವಾರ್ಸಾದಿಂದ ಬಹಳ ದೂರದಲ್ಲಿ ಮತ್ತು ಗುಡ್ಡಗಾಡು ಅರಣ್ಯಕ್ಕೆ ಸಮೀಪವಾಗಿದೆ. ಇದು ನಮ್ಮ ಹಾಗೂ ಪೋರ್ಚುಗೀಸರ ರಾಜ್ಯದ ಸೀಮೆಯ ಮಧ್ಯದಲ್ಲಿ ಹಬ್ಬಿದೆ. ಆದ್ದರಿಂದ ಅಡವಿಗಳಲ್ಲಿ ಯುದ್ಧ ಮಾಡುವ ಸ್ಥಿತಿ ಇರುವದು ಅದನ್ನು ಆದಷ್ಟು ಬೇಗನೆ ಹತೋಟಿಯಲ್ಲಿಡಬೇಕು. ಇಲ್ಲದಿದ್ದರೆ ಬೇಗನೆ ಯುದ್ಧವು ಹರಡುವುದು.

ನಾವು ಬೇಗನೆ ಪೂರ್ಣ ವರದಿಯನ್ನು ಪಡೆಯುವೆವು. ಇದರಿಂದ ನಮಗೆ ಬೆಂಬಲ ಸಿಗುವುದು. ನಾವು ಸಮಯಕ್ಕೆ ತಕ್ಕಂತೆ ದಕ್ಷಿಣದಿಂದ ಎರಡು ತುಕಡಿಗಳನ್ನು ವೆಂಗೊರ್ಲ್ಯಾ ಅಥವಾ ಮಾಳವಾನದಲ್ಲಿರುವವರನ್ನು ಕೂಡಿಸಿಕೊಂಡು ನಮ್ಮ ವಿರುದ್ಧ ಪ್ರತಿಭಟನೆ ದಂಗೆಯೇಳುವ ವಾರ್ಸನ್ ನೇತೃತ್ವದಲ್ಲಿ ತಡೆಗಟ್ಟಬೇಕು ಮತ್ತು ಅಲ್ಲಿರುವ ಪೂರ್ವ ಗುಡ್ಡಗಾಡಿನ ಮುಖಂಡರಲ್ಲಿ ಭಯವನ್ನು ಹುಟ್ಟಿಸಬೇಕು. ಮುಂಬಯಿನಿಂದ ಹೆಚ್ಚು ಅನುಕೂಲವಾದಷ್ಟು ಸೈನ್ಯವನ್ನು ಕಳುಹಿಸಿ ಕರ್ನಲ್ ಪೀಯರ್ಸನ ಸೈನ್ಯ ಬಲಪಡಿಸಬೇಕು. ಮತ್ತು ಅವನಿಗೆ ಗುಡ್ಡಗಾಡುಗಳಲ್ಲಿ ಹೋರಾಡಲು ಅನೇಕ ಸೈನ್ಯದ ತುಕಡಿಗಳನ್ನು ದಂಗೆಕೋರರನ್ನು ಹತ್ತಿಕ್ಕಲು ಬಲಿಷ್ಠವಾದವುಗಳನ್ನು ಕಳುಹಿಸಿ ಮತ್ತು ನಮಗೆ ಅನುಕೂಲಕರವಾದ ಯೋಜನೆಯನ್ನು ಕಾರ್ಯರೂಪದಲ್ಲಿ ತರಲು ಅವರಿಗೆ ಸದಾ ತಯಾರಿಯಲ್ಲಿರಬೇಕು. ಈ ಸಂದರ್ಭದಲ್ಲಿ ಸಮಂಜಸವಾದದ್ದೇನೆಂದರೆ ನಮ್ಮ ಸರ್ಕಾರವು ದೇಸಾಯಿಯವರ ಮನೆತನವನ್ನು ನಿರ್ನಾಮ ಮಾಡಿದ ನಂತರ ಉಂಟಾಗಬಹುದಾದ ಪರಿಣಾಮಗಳನ್ನು ಊಹಿಸಿ ಸಾಮಾನ್ಯರಿಗೆ ಸಮಾಧಾನ ನೀಡುವ ಬಗ್ಗೆ ಹಾಗೂ ಕೆಲವು ಹೋರಾಟಗಾರರನ್ನು ಬಿಟ್ಟು (ಮುಂದೆ ಅವರು ನಮಗೆ ಅನುಕೂಲವಾಗಬಹುದು) ಮತ್ತು ಶಸ್ತ್ರಾಸ್ತ್ರಗಳಿಗಾಗಿ ತಿರುಗಾಡಿದವರನ್ನು ಶಿಕ್ಷಿಸುವಂತೆ ಘೋಷಣೆ ಮಾಡಬೇಕು.

ಇಲ್ಲಿ ಸೈನ್ಯದ ಆಡಳಿತ ಹೇರಿದರೆ ಹೆಚ್ಚಿನ ಅನುಕೂಲವಾಗಬಹುದು. ಆದರೆ ಈಗ ಅದನ್ನು ಕೈಗೆತ್ತಿಕೊಳ್ಳಬಾರದು.

ಅನುಬಂಧ–ಬ

ಸಂಗೊಳ್ಳಿ ರಾಯಣ್ಣ, ಬಿನ್ನ ಬರಮಣ್ಣ, ದನಗರ ಸಂಪಗಾಂವ, ತಾಲೂಕ – ೩೫ ವರ್ಷ ಹೂಜರಟ್ಟಿಯ ಸೇವಕ ಅಮಲ್ದಾರನ ಮುಂದೆ ೨೮–೦೪–೧೮೩೦ ರಂದು ಮಾಡಿದ ಪ್ರಮಾಣ ಪ್ರಕಟಣೆ :–

ಪ್ರಶ್ನೆ : ನಿನ್ನನ್ನು ದಸ್ತಗಿರಿ ಮಾಡಿ ಇಲ್ಲಿ ತರಲು ಕಾರಣವೇನು ?

ಉತ್ತರ : ಹೋದ ವರ್ಷವೇ ಅವರು ಹೆಚ್ಚಿನ ಬಾಡಿಗೆಯನ್ನು ಹೂಜರಟ್ಟಿ ಹೊಲದ ಮೇಲೆ ಹೇರಿದ್ದಾರೆ. ಹೊಲವನ್ನು ನಾನು ಸಂಗೊಳ್ಳಿಯಲ್ಲಿ ಸಾಗುವಳಿ ಮಾಡುತ್ತಿದ್ದೆ. ಇದೇ ಕಾರಣಕ್ಕಾಗಿ ನಾನು ಮತ್ತು ಮುಂತಗಟ್ಟಿ ಶೆಟ್ಟಸುಂಡಿ ಅದೇ ಊರಿನವರು ಊರನ್ನು ಇಬ್ಬರು ಬಿಟ್ಟುಹೋದೆವು. ಕೆಲವು ದಿನಗಳ ನಂತರ ಜೋಳದ ಪೈರುಗಳನ್ನು ಸುಟ್ಟ ನಂತರ ನಾನು ಕೆಲವರನ್ನು ಗಾಯಗೊಳಿಸಿದೆನು. ನಂತರ ಸರ್ಕಾರಿ ಜನರು ನಮ್ಮನ್ನು ಹುಡುಕಲು ಪ್ರಾರಂಭಿಸಿದರು. ಆದ್ದರಿಂದ ನಾವು ಆ ಊರನ್ನು ಬಿಟ್ಟು ದೂರ ಹೋದೆವು. ಐದಾರು ತಿಂಗಳ ಹಿಂದೆ, ನಾನು ಬಸಣ್ಣನ ಮನೆಯಲ್ಲಿ ಇರುತ್ತಿರುವಾಗ, ಗೋಕಾಕದ ಇಲಾಖೆಯ ಊದಗಟ್ಟಿಯ ಸಾಗುವಳಿದಾರ "ಇನ್ನೂಲಜಿ ಸಿದ್ಧಕ್ಕಿ" ಬಂದು ಹೇಳಿದ್ದೇನೆಂದರೆ, "ಭಂಡಾರಿ ಬಾಪು" ಮತ್ತು "ದೇವಲಟ್ಟಿ ಗುಂಡಯ್ಯ" ಒಂದು ಯೋಜನೆ ತಯಾರಿಸಿ ಹೊಂದಾಣಿಕೆಯಿಂದ ಕೆಲಸ ಮಾಡುತ್ತ ದಂಗೆಯನ್ನು ಎಬ್ಬಿಸುವುದಾಗಿದೆ. ಮತ್ತು ಆದರಲ್ಲಿ ನಾನು ಸೇರುವಂತೆ ಹೇಳಿದರು. ನಾನು ಸಂಗಡಿಗರೊಂದಿಗೆ ಹಾಗೂ ಅವನೊಂದಿಗೆ ಅಂಕಲಗಿ ಹತ್ತಿರ ಇರುವ ಕೌಳಿಗುಡ್ಡಕ್ಕೆ ಹೋದೆನು. ದೇವಲಟ್ಟಿ ಗುಂಡಣ್ಣ ಭಂಡಾರಿ ಬಾಪು, ರಾಣಜಿದೇ ಗೋನಬಿ, ಭೀಮನಾಯಕ ಮತ್ತು ಮುಂಡಗಡದ ಸುಲೇಮಾನ ಒತ್ತಟ್ಟಿಗೆ ಇಲ್ಲಿಗೆ ಬಂದು ಹೇಳಿದ್ದೇನೆಂದರೆ, ಮಸ್ತಮರಡಿಯಲ್ಲಿರುವ ಹುಡುಗನನ್ನು ಹಿಡಿದು ಜನರನ್ನು ಕೂಡಿಹಾಕಿ ಗೊಂಡಲ ಎಬ್ಬಿಸಬೇಕೆಂದು ಅವರು ಹೇಳಿದರು. ಅವರು ಮತ್ತೆ ಹೇಳಿದ್ದೇನೆಂದರೆ ಸರ್ಕಾರದ ಜೊತೆಗೆ ಕೆಟ್ಟ ವಿಚಾರವನ್ನು ಹೊಂದುವದು ಮತ್ತು ನಮ್ಮ ಹೆಸರನ್ನು ಉಪಯೋಗಿಸಿ ಜನರನ್ನು ಕೂಡಿಹಾಕಿ ಗಲಭೆಯನ್ನು ಎಬ್ಬಿಸುವುದಾಗಿದೆ.

ನಾನು ಇದಕ್ಕೆ ಸಮ್ಮತಿಸಿದ್ದಕ್ಕೆ ಉಳಿದ ವಿಷಯವನ್ನು ಕೈಬಿಡಲಾಯಿತು. ಸಿದ್ಧಯ್ಯನು ಹೇಳಿದ್ದೇನೆಂದರೆ ಅವನು ಹುಡುಗನ ಜೊತೆಗೆ ಸಂಭಾಷಿಸಿದ್ದೇನೆ. ಅವನ ಬಲವು ಅನುಕೂಲವುಳ್ಳದ್ದಾಗಿದೆ. ಆ ಜನರು ಅಲ್ಲಿಂದ ಹೊರಟು ಹೋದರು. ಸಿದ್ದಯ್ಯನು ಅವರನ್ನು ಅನುಸರಿಸಿದನು. ನಾನು ಮತ್ತು ಚನ್ನಬಸಯ್ಯ ಕೌಳಿಗುಡ್ಡದ ಮೇಲೆ ಮೂರು ದಿನ ಇದ್ದೆವು. ಗುಂಡಣ್ಣನು ರೊಟ್ಟಿ ಕಳುಹಿಸುತ್ತಿದ್ದನು. ಮೂರು ದಿನಗಳ ನಂತರ ಮೇಲೆ ಹೇಳಿದ ಐದು ಜನರು ಕಿತ್ತೂರಿನ ಐವತ್ತು ಜನರೊಂದಿಗೆ ಗುಡ್ಡಕ್ಕೆ ಬಂದು ಅಲ್ಲಿಯೇ ರಾತ್ರಿಯಾಗುವವರೆಗೆ ಇದ್ದು ರಾತ್ರಿ ೧೨ ಅಥವಾ ಒಂದು ಗಂಟೆಗೆ ಅವರು ಮಸ್ತಮರಡಿಗೆ ಹೋದರು ಅಲ್ಲಿ ಪಟೇಲನ ಮನೆಯ ಕಟ್ಟಿಗೆಯ ಕೊಲಿಯನ್ನು ಸೇರಿಸಿ ಹೊರಕ್ಕೆ ಹೋದರು. ಹುಡುಗನು ಅಂಜಿದಕ್ಕೆ ಅವನ ಹೆಸರಿನಿಂದ ಸಿದ್ದಯ್ಯನು

ಒದರಿದನು. ಇದರಿಂದ ಹುಡುಗನ ತನ್ನ ಮನಬಂದಂತೆ ಮಾಡುವೆನೆಂದು ಹವಿಳಿ ಮತ್ತು ತನ್ನನ್ನು ಹಿಡಿಯಬೇಡಿರೆಂದು ಕೇಳಿಕೊಂಡನು. ಹುಡುಗನನ್ನು ಕರೆದುಕೊಂಡು ಹೆಮ್ಮಿಕೇರಿ ಗುಡ್ಡಕ್ಕೆ ಅವರು ಹೋದರು. ಚನ್ನಬಸಯ್ಯ ಸಿದ್ಧಯ್ಯ ಅಪ್ಪಾಜಿ ನಂದಗಡದ ಮರಾಠಾ ಒಬ್ಬನು (ಹೆಸರು ತಿಳಿದು ಬಂದಿಲ್ಲ) ಹುಡುಗನನ್ನು ತೆಗೆದುಕೊಂಡು ದೂರ ಎಳೆದುಕೊಂಡು ಎಲ್ಲಿಯಾದರೂ ಇಡಬೇಕೆಂದುಕೊಂಡರು. ನಾನು ಮತ್ತು ಗುಂಡಯ್ಯನು ಕೌಳಿಗುಡ್ಡಕ್ಕೆ ಹೋಗಿ ಅಲ್ಲಿ ಇದ್ದೇವು. ಮೂರು ದಿನಗಳ ನಂತರ ಚನ್ನಬಸಯ್ಯನು ಸಿದ್ಧಯ್ಯ ಮತ್ತು ಮರಾಠಾನೊಬ್ಬನು ಗುಡ್ಡಕ್ಕೆ ಬಂದು ಹೇಳಿದ್ದೇನೆಂದರೆ, ಹುಡುಗನನ್ನು ಅಪ್ಪಾಜಿ ಮತ್ತು ಇತರರ ರಕ್ಷಣೆಯಲ್ಲಿ ಗೋಕಾಕಕ್ಕೆ ಕಳಿಸಲಾಗಿದೆ. ನಾವು ಮತ್ತು ಅವರು ಆ ರಾತ್ರಿ ಅಲ್ಲಿಯೇ ಇದ್ದೆವು. ಮರು ದಿನ ಸುದ್ದಿ ಕಳಿಸಲ್ಪಟ್ಟಿತು. ಗುಂಡಣ್ಣ ಮತ್ತು ರಾವಜಿ ಅರವತ್ತು ಜನರನ್ನು ಕರೆದುಕೊಂಡು ಬಂದನು. ನಾವೆಲ್ಲರು ಕೂಡಿಕೊಂಡು ೦೬-೦೧-೧೮೩೦ ರಂದು ನಸುಕಿನಲ್ಲಿ ಐದು ಗಂಟೆಗೆ ಬೀಡಿಗೆ ಹೋದೆವು. ಮತ್ತು ಎರಡು ಅಥವಾ ಮೂರು ಜನರನ್ನು ಗಾಯಗೊಳಿಸಿದೆವು. ಅವರೆಲ್ಲರೂ ಕಚೇರಿಯ ಮುಂದೆ ಇದ್ದರು ಸಣ್ಣ ಬಾಗಿಲನ್ನು ಮುರಿದು ಜನರು ಒಳನುಗ್ಗಿದರು.

ನಾನು ಸಹಿತ ಅವರೊಂದಿಗೆ ಕಚೇರಿಯೊಳಗೆ ಹೋದೆನು. ಜನರು ಕಚೇರಿಯಲ್ಲಿಯ ಖಜಾನೆಯನ್ನು ಮುರಿದು ಹಣವನ್ನು ಲೂಟಿಮಾಡತೊಡಗಿದರು. ನಾನು ಹೊರಕ್ಕೆ ಬಂದು ಕಚೇರಿಗೆ ಬೆಂಕಿ ಹಚ್ಚಿ, ಜನರೊಂದಿಗೆ ಮುಂದೆ ನಂದಗಡಕ್ಕೆ ನಸುಕಿನಲ್ಲಿ ಹೊರಟೆವು. ಭಂಡಾರಿ ಬಾಪು ನನ್ನ ಹತ್ತಿರ ಬಂದು ಊರಿಗೆ ಹೋಗುವುದಕ್ಕಿಂತ ಮುಂಚೆ ಜಿಲ್ಲಾದಾರನ ಮನೆಯ ಮೇಲೆ ದಾಳಿ ಮಾಡಿ ಬೆಂಕಿ ಹಚ್ಚಬೇಕೆಂದು ತಿಳಿಸಿದನು. ನಾನು ಸಹಿತಿ ಹಳ್ಳಿಗೆ ಹೋದೆನು. ಇನ್ನೊಬ್ಬ ಬಾಪು ಮನೆಯ ಮೇಲೆ ದಾಳಿ ಮಾಡಿ ಜಿಲ್ಲಾದಾರನನ್ನು ಹಳ್ಳಿಗೆ ಕರೆದುಕೊಂಡು ಬಂದನು. ಬಾಪು ಹೇಳಿದ್ದೇನೆಂದರೆ ಜಿಲ್ಲಾದಾರನನ್ನು ಹಿಡಿದುಕೊಂಡು ಹೋಗಬೇಕು ಎಂದು ಹೇಳಿದನು. ನಾನು ಜಿಲ್ಲಾದಾರನ ಕೈಹಿಡಿದುಕೊಂಡು ನನ್ನೊಡನೆ ಬರಲು ತಿಳಿಸಿದೆನು. ನನಗೇನು ಮಾಡುವರೆಂದು ಅವನು ಹೇಳಿದನು. ಊರಲ್ಲಿರುವ ಸರ್ಕಾರದ ಹಣವನ್ನು ನಮಗೆ ಬಿಟ್ಟುಕೊಡಬೇಕೆಂದು ಹೇಳಿದೆನು. ಅದಕ್ಕೆ ಅವನು ಉತ್ತಿರಿಸಿದ್ದೇನೆಂದರೆ ಯಾವ ಹಣವೂ ಇಲ್ಲವೆಂದು ತಿಳಿಸಿದನು. ನಾನು ಕುದುರೆಯನ್ನೇರಿ ಬಜಾರದಲ್ಲಿ ಹೋಗುವಾಗ ಆ ಸಮಯದಲ್ಲಿ ಬಾಪು ಹೇಳಿದನು. "ಜಿಲ್ಲಾಧಾರನು ಕೊಂದರೆ ಅವನ ಸೇವಕರಿಗೆ ಒಳ್ಳೆಯದಾಗುವದೆಂದು ಹೇಳಿದನು" ನಾನು ಕೆಲವರನ್ನು ನನ್ನೊಡನೆ ಕರೆದುಕೊಂಡು ಹಟಗುವೆನು, ಆದರೆ ಅವನು ನಮಗೆ ಸಿಗಲಿಲ್ಲ. ನಾವು ಪವಿಟಬಜಾರದಿಂದ ವುಡವರ್ಜಿ ಸಿದ್ಧಲಿಂಗಪ್ಪನಿಂದ ಅಕ್ಕಿಯನ್ನು ತಂದೆವು. ನಾವು ೧೦೦೦ ರೂಪಾಯಿಗಳನ್ನು ಹಳ್ಳಿಯಿಂದ ತೆಗೆದುಕೊಂಡು ಮಲೆನಾಡಿನಿಂದ ೧೦೦೦ ಜನರನ್ನು ಕೂಡಿಸಿಕೊಂಡೆವು. ಅವರೊಂದಿಗೆ ಖಾನಾಪುರವನ್ನು ಸುಟ್ಟು ಲೂಟಿ ಮಾಡಿ ತಿರುಗಿ ಶಮ್‌ಶೇರಗುಡ್ಡಕ್ಕೆ ಬಂದೆವು. ಅಂದು ೩,೦೦೦ ಜನರನ್ನು ಕಲೆಹಾಕಲಾಯಿತು ಅವರೊಂದಿಗೆ ಇಟಗಿಗೆ ಹೋಗಿ ೫೦೦೦ ರೂಪಾಯಿ ರೀಯಾಯಿತಿಯಿಂದ ಪಡೆದುಕೊಂಡೆವು. ನಂತರ ಪರಸಗಡದ ಮುಖಾಂತರ ನಾವು ಉಕ್ಕಲಿಗೆ ಹೋದೆವು ಅಲ್ಲಿ ರಾಚೋತಪ್ಪ ಮತ್ತು ಗಣಪತಿ ಗುಣೀಕವಾಲರನ್ನು ಕರೆದುಕೊಂಡು

ಹಣ ಕೊಡಲು ಕೇಳಿಕೊಂಡೆವು. ಕೌಲಪ್ಪನು ೫೦೦ ರೂಪಾಯಿ ಕೊಟ್ಟನು. ಆಹಾರವನ್ನು ತೆಗೆದುಕೊಂಡು ನಾವು ಹಡಲಗಿಗೆ ಹೋದೆವು. ಬಾಪೂ ಭಂಡಾರಿಯು ಕೆಲವು ಜನರನ್ನು ಕರೆದುಕೊಂಡು ಹಳ್ಳಿಗೆ ಬೆಂಕಿ ಹಚ್ಚಿದರು. ಪರ್ಶಗಳು ಮಕ್ಕಳು ಅದರಲ್ಲಿ ಆಹುತಿಯಾದರು. ಒಬ್ಬ ಮುದುಕನು ಅಳುತ್ತ ನನ್ನ ಕಡೆ ಬಂದನು. ನಾನು ಅವನಿಗೆ ೩ ರೂ.ಗಳನ್ನು ಕೊಟ್ಟು ನಂದಗಡಕ್ಕೆ ಹೋದೆನು. ಅಲ್ಲಿ ಒಬ್ಬ ಬ್ರಾಹ್ಮಣ ಹೆಣ್ಣುಮಗಳೊಬ್ಬಳು ಬಂದು ಹೇಳಿದ್ದೇನೆಂದರೆ ಬಾಪೂ ಭಂಡಾರಿಯ ಜನರು ಅವಳ ಗಂಡನನ್ನು ಕರೆದುಕೊಂಡು ಹೋಗಿದ್ದಾರೆ ನಾನು ಅವರಿಗೆ ನಂದಗಡಕ್ಕೆ ಒಯ್ಯುವಂತೆ ಅಲ್ಲಿ ಸೆರೆಯಲ್ಲಿ ಇಡಬೇಕೆಂದು ಸೂಚಿಸಿದೆನು. ಬಾಪೂ ಭಂಡಾರಿ ಮೂರು ಅಥವಾ ನಾಲ್ಕು ವೈರಿ ಜನರನ್ನು ಕೊಲ್ಲುತ್ತೇನೆಂದು ಹೇಳುತ್ತಾ ಹೊರಟನು. ಹಾಗೆ ಮಾಡಬಾರದೆಂದು ನಾನು ಹೇಳಿದೆನು. ಅದರಿಂದ ಅವನ ಹಾಗೂ ನನ್ನ ನಡುವೆ ವೈರತ್ವ ಬೆಳೆಯಿತು. ಅದೇ ಸಂಜೆಗೆ ಮೇಲೆ ಹೇಳಿದ ಹೆಣ್ಣು ಮಗಳು ಬಂದು ತನ್ನ ಗಂಡನನ್ನು ಬಾಪೂ ಕೊಂದಿದ್ದಾನೆಂದು ತಿಳಿಸಿದಳು. ಇದರಿಂದ ನನ್ನ ಜನರನ್ನು ಬಾಪೂನನ್ನು ದಸ್ತಗಿರಿ ಮಾಡಲು ಕಳಿಸಿದೆನು. ಅವನ ಮಗ ಮತ್ತು ದೇರ ಅವರನ್ನು ಭೆಟ್ಟಿಯಾದರು ಅವರಿಬ್ಬರೂ ಕೊಲ್ಲಲ್ಪಟ್ಟರು ನಾನು ಹಿಂದೆ ಇದ್ದುಕೊಂಡು ಬಾಪೂನನ್ನು ಕಟ್ಟಿ ದಸ್ತಗಿರಿ ಮಾಡಲು ನನ್ನ ಜನರಿಗೆ ಹೇಳಿದೆನು. ಅವನು ನನ್ನ ಖಡ್ಗ ತೆಗೆದು ಕೈಯಲ್ಲಿ ಚೂರಿ ಹಿಡಿದವನನ್ನು ಗಾಯಗೊಳಿಸಿದನು. ನಾನು ಅವನನ್ನು ಬೈಯುತ್ತಾ ಅವನನ್ನು ಕೊಲ್ಲಿರಿ ಕೊಲ್ಲಿರಿ ಎಂದು ಹೇಳಿದೆನು. ಜನರು ಹಾಗೇ ಹೇಳಿದಂತೆ ಮಾಡಿದರು. ಅವರ ಹೆಸರು ನನಗೆ ತಿಳಿದಿದ್ದಿಲ್ಲ ದೇರದ ಮಸ್ಯಥೇರನು ದೊಡ್ಡ ದೊಣ್ಣೆಯಿಂದ ಹೊಡೆದು ಕೆಳಗೆ ಬೀಳಿಸಿದನು. ಜನರು ಅವನನ್ನು ಗಾಯಗೊಳಿಸಿದರು. ಅಲ್ಲಿಂದ ನನ್ನವರೊಡನೆ ಖಾನಾಪುರಕ್ಕೆ ಹೋದೆವು. ಮತ್ತೆ ಕೆಲವರು ನನ್ನ ಮೇಲೆ ಯುದ್ಧ ಮಾಡಲು ಬಂದರು ನಾನು ತಿರುಗಿ ಶೆಮ್‌ಶೆರ್‌ಗುಡ್ಡಕ್ಕೆ ಬಂದೆನು ಕೆಲವು ಜನರನ್ನು ಕೂಡಿಕೊಂಡು ಸಂಪಗಾಂವಕ್ಕೆ ನಸುಕಿನಲ್ಲಿ ಹೋಗಿ ಕಚೇರಿಗೆ ಬೆಂಕಿ ಹಚ್ಚಿ ದೇಶನೂರ ಗುಡ್ಡಕ್ಕೆ ಹೋದೆವು. ಅಮಲ್ದಾರನು ಬೆನ್ನ ಹತ್ತಿ ಕೆಲವು ಜನರಿಗೆ ಗಾಯಮಾಡಿದನು. ನಾವು ಆ ರಾತ್ರಿ ಅಲ್ಲಿದ್ದುಕೊಂಡು ಮರುದಿನ ರಾತ್ರಿ ಸಂಗೊಳ್ಳಿಗೆ ಬೆಂಕಿ ಹಚ್ಚಿ ಕಿತ್ತೂರಿನ ಗುಡ್ಡಕ್ಕೆ ಬಂದೆವು. ಮುಂದೆ ಬಾಲಗುಂದಗುಡ್ಡಕ್ಕೆ ಹೋದೆವು. ದಂಡಿನೊಡನೆ ಹೋರಾಟ ಮಾಡಿದೆವು. ಮಾಮದತ್ತಿ ಹುಲ್ಲಿಹಾಳದ ಹಶಬೀ ಪಟೇಲನು ಹೂಲಿಹಾಳ ಖಜಾನೆಯಲ್ಲಿ ಹಣ ಇದೆಯೆಂದು ಹೇಳಿದನು. ನಾವು ಅಲ್ಲಿಗೆ ಹೊರಟೆವು ಖಜಾನೆ ಲೂಟಿ ಮಾಡಿದೆವು. ಇಬ್ಬರು ನಮ್ಮವರು ಸತ್ತರು ನಂತರ ನಾಲ್ಕು ಮಂದಿ ಗಾಯಗೊಂಡರು ನನ್ನ ಕಾಲಿಗೆ (ರಾಯಣ್ಣನ ಕಾಲಿಗೆ) ಗಾಯವಾಯಿತು. ಬಳಗುಂಡದ ಗುಡ್ಡಕ್ಕೆ ಬಂದು ನನ್ನ ಗಾಯವನ್ನು ಉಪಚರಿಸಲಾಯಿತು. ನಾಲ್ಕು ದಿನದ ನಂತರ ದೇಗಮವೀ ಶೇಷನ ನಾಯಕನು ಕಿತ್ತೂರ ಬಜಾರನ್ನು ಲೂಟಿ ಮಾಡುತ್ತೇವೆಂದು ಹೇಳಿ ಹೋದನು. ಅಲ್ಲಿರುವ ಸೈನ್ಯದೊಡನೆಯ ಹೋರಾಟದಲ್ಲಿ ನನ್ನ ಜನರಿಗೆ ಹೆಚ್ಚಿನ ಹಾನಿ ಉಂಟಾಯಿತು. ನಾನು ಸಂಪಗಾಂವದಲ್ಲಿದ್ದಾಗ ೮೦ ಜನ ದೇಶನೂರ ಗುಡ್ಡದಲ್ಲಿದ್ದರು. ಕಲ್ಲೂರು ಕುರುಬಸಪ್ಪ ಜಡೆಮನಿ ಭೀಮನು ಗೋಜುನ ಹಾಳೆದ ಮೊಹರ್‍ವ ಮತ್ತು ಇತರರು ೧೦೦ ಜನರನ್ನು ಕರೆದುಕೊಂಡು ಬಂದರು

ಇದರೊಂದಿಗೆ ನಮ್ಮ ದಂಡು ೩೦೦ ಜನಕ್ಕೆ ಏರಿತು. ಕೆಲವರು ನಮ್ಮನ್ನು ಬಿಟ್ಟು ಹೋದರು (ಸ್ಕೀರಮಿಶ ಗೋಡೆಹಾಳ) ದೇಶನೂರಿನ ಜನರನ್ನು ಜಡಿಮನಿ ಭೀಮ ಹಾಗೂ ಕರುಬಸಪ್ಪನು ತೆಗೆದುಕೊಂಡು ಹೊದರು. ಚನ್ನಬಸವ ಜಂಗಮ ಸಿದ್ಧಯ್ಯ ಮತ್ತು ಅಪ್ಪಾಜಿ ಸೋತಗಟ್ಟಿ ೪೦೦ ರೂಪಾಯಿಗಳನ್ನು ಹುಡುಗನ ಸಲುವಾಗಿ ತೆಗೆದುಕೊಂಡು ಹೋಗಲು ತಿಳಿಸಿದೆನು. ಅವರು ತಿರುಗಿ ಬರಲಿಲ್ಲ ಎಲ್ಲಿಹೋದರು ತಿಳಿಯಲಿಲ್ಲ. ಕಿತ್ತೂರಿನಲ್ಲಿ ಜನರು ಕೊಲ್ಲಲ್ಪಟ್ಟಾಗ ೨೫ ಜನರು ನನ್ನೊಂದಿಗೆ ಹುಸಬೀ ದುಜಬಾ ಸಹಿತ ಇದ್ದರು. ನಾನು ಪಾರಾಗಿ ಸಿಗಲಾರದಂತೆ ಗುಡ್ಡದ ಮೇಲೆ ಇದ್ದುಕೊಂಡೆನು. ಸಂಗೊಳ್ಳಿ ಬಾಳಾನಾಯಕ ಮತ್ತು ಬೆಳವಡಿ ರುದ್ರನಾಯಕ ಮತ್ತು ಇತರರು ಸುಮಾರು ೬೦ ಜನರು ನನ್ನ ಕಡೆಗೆ ಬಂದರು. ಅವರಿಂದ ಪ್ರತಿಜ್ಞೆ ಮಾಡಿಸಿಕೊಂಡು ಅವರಿಗೆ ಹಣ ಕೊಟ್ಟು ನನ್ನ ಹತ್ತಿರ ಗುಡ್ಡದ ಮೇಲೆ ಅವರು ಇರಲಾರದೇ ಒಂದು ಕಾಳಗ (ಯುದ್ಧ) ಮಾಡಿ ಓಡಿ ಹೋದರು. ಬಳನಾಯಕ, ಎಲ್ಲನಾಯಕ ಮತ್ತು ಇತರರು ಉಳಿದರು. ನಾವೆಲ್ಲರೂ ಅಲ್ಲಿ ಸ್ವಲ್ಪ ದಿನಗಳು ಇದ್ದಾಗ ಖೋದಾನಪೂರದ ಲಿಂಗನಗೌಡ ನೇಗಿನಾಳದ ವೆಂಕನಗೌಡನು ಕೆಲವರು ಶೆಟ್ಟಿಶುಂಡಿಗಳು ನಮ್ಮನ್ನು ಸೇರಿದರು. ನಾವು ಹಾಗೂ ಅವರು ಗರ್ಲಹೋಬಳಿ ಧಾರವಾಡ ತಾಲೂಕಿನ ಊರನ್ನು ಸುಟ್ಟೆವು ೮ನೇ ಏಪ್ರೀಲ್ ಮಧ್ಯಾಹ್ನ ಗುಡ್ಡಕ್ಕೆ ತಿರುಗಿ ಬಂದೆವು, ನಾನು ಖಡ್ಗವನ್ನು ಒರೆಸುತ್ತ ನನ್ನ ಕೈ ತೊಳೆದುಕೊಳ್ಳುವಾಗ ಪುಟ್ಟದಮ್ಮನವರ ಲಿಂಗನಗೌಡರ ಪಾರ್ಟಿಯ ಲಖಾನ ಎಂಬವನು ಬಂದು ಲಿಂಗನಗೌಡನ ದಂಡು ಬಂದು ನಮ್ಮನ್ನು ಕೊಲ್ಲುವುದಾಗಿ ಹೇಳಿದನು. ಅದಕ್ಕಾಗಿ ನಾನು ಓಡಿ ಬಂದಿದ್ದೇನೆ ಎಂದು ಹೇಳಿದನು. ನಾವಿಬ್ಬರೂ ಪ್ರತಿಜ್ಞೆ ಮಾಡಿ ಸ್ನೇಹಿತರಾದೆವು. ನನ್ನ ಅರಿವೆಗಳನ್ನೆಲ್ಲ ಒದ್ದೆಯಾಗಿದ್ದವು. ಅವನ ಹತ್ತಿರ ಖಡ್ಗ ಇದ್ದಿರಲಿಲ್ಲ. ನನ್ನ ಖಡ್ಗವನ್ನು ಅವನು ಹಿಡಿದುಕೊಂಡನು ನಾನು ಅವನು ಕೂಡಿಕೊಂಡು ಮಾತನಾಡುತ್ತಾ ಸ್ವಲ್ಪ ಮುಂದೆ ಹೋದೆವು ಆಕಡೆಯಿಂದ ನಾಲ್ಕು ಅಥವಾ ಆರು ಮಂದಿ ಶಟಸುಂಡಿಗಳು ಖಡ್ಗವಿರಲಾರದೆ ನನ್ನ ಕಡೆಗೆ ಬಂದರು. ಅವನು ಲಕ್ಯಾ ನಮ್ಮ ಸಲುವಾಗಿ ಕಳಿಸಿದ್ದಾನೆ ಎಂದು ಹೇಳಿದನು. ಅವನು ಬಂದು ತಮ್ಮ ಕೈಯಿಂದ ಹಿಡಿದರು. ನಾನು ಲಕ್ಯಾನ ಕಡೆಗೆ ಹೋಗಿ ಖಡ್ಗ ಕೊಡೆಂದು ಕೇಳಿದೆನು. ಆದರೆ ಅವನು ಖಡ್ಗ ಕೊಡಲಿಲ್ಲ ಆರು ಜನರು ಬಂದು ನನ್ನನ್ನು ಚಚ್ಚಿದರು (ಗಾಯಗೊಳಿಸಿದರು) ಶಟಸುಂಡಿಗಳು ಹಾಗೂ ಲಿಂಗನಗೌಡ ಹೊರಗೆ ಬಂದು ನನ್ನನ್ನು ಹಿಡಿದುಕೊಂಡು ಹೋದರು. ನನ್ನ ಜೊತೆಗೆ ಇದ್ದ ಹಶಬೀಗಳೆಲ್ಲರೂ ಓಡಿಹೋದರು ನನ್ನೊಡನಿದ್ದ ಪ್ರಮುಖ ಹಶಬೀಗಳೆಂದರೆ, ಅಡೋಳಿಯ ಗುಬ್ಬಾ, ಹಶಬೀ, ದೇಗು, ಮೀವೀಯ, ಭೀಮನಾಯಕ, ಚೌರಿ, ಉಸ್ಮಾನ, ಮುತಗಟ್ಟೆಯ ಚನ್ನಬಸವ, ಬೆಳವಡಿಯ ರುದ್ರನಾಯಕ, ಕಿತ್ತೂರಿನ ಸಂಗಸಾನ, ಮುದ್ದೇಳದ ಗುಂಟಣ್ಣಾ, ಬಸ್ತವಾರದ ಬಾಳಾನಾಯಕ, ಬೆಳವಡಿಯ ಎಲ್ಲಾನಾಯಕ, ನಂದಗಡದ ಭಂಡಾರಿ ಬಾಪೂ, ಹೋಗುರಟ್ಟಿಯ ದಿಡ್ಡಿಮನಿ ಭೀಮ, ಗುಜಹಾಳದ ವಾಹವಾ, ಹೊಸಕೋಟೆಯ ಲುಗ್ಮಾ, ಮೊಹರೀಯಾ ಮುರ್ಯಾ, ಸುತಗಟ್ಟಿಯ ಅಪ್ಪಾಜಿ ಹಾಗೂ ಕಲ್ಲೂರು ಬಸಪ್ಪ, ಸಂಗೊಳ್ಳಿಯ ಬಾಳಾನಾಯಕ, ಎಲ್ಲಾನಾಯಕ, ತೆಗ್ಗಿ ಶಿವಲಿಂಗ ಇವರೆಲ್ಲರನ್ನೂ ನಾನು ಕೂಡಿ ಹಾಕಿದ್ದೆನು. ಇವರ ಹೊರತಾಗಿ ಕಿತ್ತೂರಿನ ಇಲಾಖೆ ಶಟಸುಂಡಿಗಳು

ಇತ್ಯಾದಿ ನನ್ನ ಕಡೆಗೆ ಬಂದು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅವರ ಹೆಸರು ನನಗೆ ತಿಳಿದಿಲ್ಲಾ ಭಂಡಾರಿ ಬಸಪ್ಪನು ಬೆಳಗಾಂವದ ಕೋಟೆ ವಶಪಡಿಸಿಕೊಳ್ಳಬೇಕೆಂದು ಹೊಂಚು ಹಾಕಿ ಕೊಂಡಿದ್ದರು. ನಾನು ಇದು ಅಸಾಧ್ಯವೆಂದು ಹೇಳಿದ್ದೆ ಆದ್ದರಿಂದ ಅವರಿಗೆ ನಿರಾಶೆಯಾಯಿತು. ೬೫೦೦ ರೂಪಾಯಿಗಳನ್ನು ಕೂಡಿಸಿದ್ದರು ೧೦ ರಿಂದ ಅಥವಾ ೧೫ ರೂಪಾಯಿಗಳು ಹಳ್ಳಿಯಿಂದ ಬರುತ್ತಿದ್ದವು. ಇದನ್ನು ಅಕ್ಕಿಗಾಗಿ ಖರ್ಚುಮಾಡುತ್ತಿದ್ದರು. ಖರ್ಚಿನ ಬಾಬುಗಳು ಕೆಳಗಿನಂತೆ ಇದ್ದವು.

ಜನರಿಗೆ ಕೊಟ್ಟ ಹಣ ಪರ ಊರಿನಿಂದ ಬಂದ ಗಣೇಶಪ್ಪ ಗಿರ್ಯಾಪುಟ್ಟಿ ಮತ್ತು ಉಂಕಲಜಿ ರಾಚೇಟಪ್ಪಗೆ ಆರು ರೂಪಾಯಿ ಕೊಡಲಾಗಿತ್ತು ಅದನ್ನು ಅವರು ಖರ್ಚು ಮಾಡಿದರು.

ದೇಶನೂರು ಗುಡ್ಡಕ್ಕೆ ಹೋದಾಗ ಗಜಮನಹಳ್ಳಿ ಹಾಗೂ ಹೊಸಪಟ್ಟಿ ಜನರಿಗೆ ಸ್ವಲ್ಪ ಹಣ ಕೊಟ್ಟಿದ್ದನು. ಹಣ ಎಷ್ಟಿತ್ತೆಂಬುದು ನನಗೆ ತಿಳಿದಿಲ್ಲ ನಾನು ಹುಡುಗನಿಗೆ ಈ ರೀತಿ ಹೇಳಿಕಳಿಸಿದೆನು. ಆಲೂರದ ಸೀಳಬಸಣ್ಣನಿಗೆ ೪೦೦ ರೂಪಾಯಿ ಕೊಟ್ಟಿದ್ದೆನು. ಅದರಲ್ಲಿ ಅವನು ೩೦೦ ರೂಪಾಯಿಗಳನ್ನು ಎಲ್ಲಿಯೋ ಅಡಗಿಸಿಟ್ಟಿದ್ದನು. ೧೦೦ ರೂಪಾಯಿ ಅವನ ಹತ್ತಿರ ಇದ್ದಾಗ ಹುಲ್ಲಿಹಾಳದಲ್ಲಿ ಅವನನ್ನು ಕೊಲ್ಲಲಾಯಿತು. ಹಣ ತಿರುಗಿಬರಲಿಲ್ಲ.

ಸುಮ್ಮಣಿ ಹತ್ತಿರ ಎಷ್ಟು ರೂಪಾಯಿ ಇತ್ತು ಎಂದು ನನಗೆ ಸರಿಯಾಗಿ ತಿಳಿದಿರಲಿಲ್ಲ.

ನನ್ನ ಹತ್ತಿರ ಹಣ ಎಷ್ಟಿತ್ತು ಎಂಬುದನ್ನು ಹೇಳಲಾರೆ ನಾನು ಸ್ವಲ್ಪ ಹಾಣ ಹಾಗೂ ಸಮ್ಮಣಿ ನನ್ನ ಮಾಮ ಮುದಿಯಣ್ಣನವರ ಅಣ್ಣನ ಹತ್ತಿರ ನಾನು ದಸ್ತಗಿರಿಯಾದಾಗ ಇಟ್ಟಿದ್ದೆನು. ಅವನನ್ನು ಹಣ ಸಹಿತ ಹಿಡಿಯಲಾಯಿತು. ಇದು ಅಲ್ಲದೇ ೬೦೦ ರೂಪಾಯಿಗಳನ್ನು ಸಂಗೊಳ್ಳಿಯ ರೋಗಣ್ಣವರ ಸಿದ್ಧ ಮತ್ತು ಇಟಗಿಯ ಬಳಗಣ್ಣವರ ಸಿದ್ಧನ ಹತ್ತಿರ ಕೊಟ್ಟಿದ್ದೆನು. ಅವರೆಲ್ಲರೂ ಗುಡ್ಡದ ಮೇಲೆ ಇದ್ದರು ಅವರು ಈಗ ಎಲ್ಲ ಅಡಗಿರುವರು ಎಂಬ ಬಗ್ಗೆ ನನಗೆ ತಿಳಿದಿರುವುದಿಲ್ಲ.

94073

ರೋಗಣ್ಣವರ ಗುರುತು

ಸಾಕ್ಷಿ : ಪಟ್ಟಣಶೆಟ್ಟಿ ಸುಂಕಾಪೂರ ಮೋಜಿನ ಶೆಟ್ಟಿ ಶಾಂತಪ್ಪಾ
(ಸಹಾಯಕ ನ್ಯಾಯಾಧೀಶನ ಮುಂದೆ ಪರೀಕ್ಷಿಸಲಾಗಿದೆ)

ಪ್ರಶ್ನೆ : ನಿನ್ನ ಹೇಳಿಕೆಯನ್ನು ಅಮಲ್ದಾರನು ಮುಂದೆ ಓದಿದ್ದು (ಹೇಳಿದ್ದು) ಸರಿಯಾಗಿ ಇದೆಯೇ ?

ಉತ್ತರ : ಸರಿ ಇರುತ್ತದೆ.

ರಾಯಣ್ಣನ (ಹೆಬ್ಬೆಟ್ಟಿನ) ಗುರುತು.

* * *

ಪ್ರಿಯ ಕನ್ನಡ ಬಂಧುಗಳೆ, ೧೯೧೫ರಲ್ಲಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ೯೬ನೆಯ ವರ್ಷದ ಹೊಸ್ತಿಲಲ್ಲಿದೆ. ಸ್ಥಾಪನೆಗೊಂಡಂದಿನಿಂದ ಇಂದಿನವರೆಗೂ ಕನ್ನಡ – ಕನ್ನಡಿಗ – ಕರ್ನಾಟಕದ ಒಳಿತಿಗೆ ಶ್ರಮಿಸುತ್ತಾ, ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಎಚ್ಚರ ಮೂಡಿಸುವಲ್ಲಿ ಪರಿಷತ್ತಿನ ಪ್ರಕಟಣೆಗಳು ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ನಮ್ಮ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ, ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ನನ್ನದು.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಹಾಗೂ ಹೊಸ ಪುಸ್ತಕಗಳನ್ನು ಕೊಪ್ಪಳ ಜಿಲ್ಲೆ, ಗಂಗಾವತಿಯಲ್ಲಿ ನಡೆಯುತ್ತಿರುವ ೭೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ.

ಡಾ. ನಲ್ಲೂರು ಪ್ರಸಾದ್ ಆರ್.ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ, ಬೆಂಗಳೂರು–೫೬೦೦೧೮